ಬುಧವಾರ, ಜುಲೈ 20, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೇಣದಲ್ಲಿ ಮಧುಬಾಲಾ

ಉತ್ತರಪ್ರದೇಶದ ನೋಯ್ಡಾದ ಮಾಲ್‌ವೊಂದರಲ್ಲಿರುವ ಮೇಡಂ ಟುಸ್ಸಾಡ್ಸ್ ವ್ಯಾಕ್ಸ್ ಮ್ಯೂಸಿಯಂನಲ್ಲಿ ಬಾಲಿವುಡ್ ನಟಿ ಮಧುಬಾಲಾ ಅವರ ಮೇಣದ ಪ್ರತಿಮೆಯನ್ನು ಮಂಗಳವಾರ ಅನಾವರಣ ಮಾಡಲಾಯಿತು



ಬೆಂಗಳೂರು ನಗರ

ಬುಧವಾರದ ಉಷ್ಣಾಂಶ 29° ಗರಿಷ್ಠ 20° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಮೋಡಕವಿದ ವಾತಾವರಣ. ಅಲ್ಲಲ್ಲಿ ಸಾಧಾರಣ ಅಥವಾ ತುಂತುರು ಮಳೆ ಬೀಳುವ ಸಾಧ್ಯತೆ ಇದೆ.

ಮುನ್ಸೂಚನೆ

ಗುರುವಾರ	ಶುಕ್ರವಾರ	ಶನಿವಾರ
29° 20°	29° 20°	28° 20°

ಸೂರ್ಯೋದಯ: 6:02 ಸೂರ್ಯಾಸ್ತ : 6:50 ಚಂದ್ರೋದಯ: ರಾ. 11:34 ಚಂದ್ರಾಸ್ತ: ಬೆ.11:15


ಮಂಗಳವಾರದ ಹವಾಮಾನ : ಗರಿಷ್ಠ 30° ಕನಿಷ್ಠ 20°

ಪ್ರಜಾವಾಣಿ

ಸಂಜಯ್ ಪಾಂಡೆ ಬಂಧನ

ಮುಂಬೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಮಾಜಿ ಡಿಜಿಪಿ ಮತ್ತು ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಸಂಜಯ್ ಪಾಂಡೆ ಅವರನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬಂಧಿಸಿದ್ದಾರೆ.

ರಾಷ್ಟ್ರೀಯ ಷೇರುಪೇಟೆಯ ನೌಕರರ ಫೋನ್ ಟ್ಯಾಂಪಿಂಗ್‌ಗೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣ ದಡಿ ಪಾಂಡೆ ಮತ್ತು ಎನ್‌ಎಸ್‌ಇಯ ಇಬ್ಬರು ಮಾಜಿ ಮುಖ್ಯಸ್ಥರಾದ ಚಿತ್ರಾ ರಾಮಕೃಷ್ಣ ಮತ್ತು ರವಿ ನರೈನ್ ವಿರುದ್ಧ ಇ.ಡಿ ಪ್ರಕರಣ ದಾಖಲಿಸಿಕೊಂಡಿತ್ತು.



farnazfever

ಬಿಬಿಎಂಪಿ ಚುನಾವಣೆ: 22ರಂದು ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ಜುಲೈ 22ರಂದು ವಿಚಾರಣೆ ನಡೆಯಲಿದ್ದು, ಸರ್ಕಾರ ಅಂತಿಮ ಅಧಿಸೂಚನೆಯ ಪ್ರತಿಯನ್ನು ಸಲ್ಲಿಸಿಲ್ಲ ಎಂದು ರಾಜ್ಯ ಚುನಾವಣಾ ಆಯೋಗ ಆಕ್ಷೇಪಿಸಲಿದೆ.



ಸುಪ್ರೀಂ ಕೋರ್ಟ್ ಎಂಟು ವಾರಗಳಲ್ಲಿ ವಾರ್ಡ್‌ಗಳ ಮರುವಿಂಗಡಣೆ ಮಾಡಿ, ಮೀಸಲಾತಿಯನ್ನು ನಿಗದಿಪಡಿಸಿ, ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಎಂಟು ವಾರಗಳು ಮುಗಿದಿದ್ದು, ಸುಪ್ರೀಂ ಕೋರ್ಟ್ ಹಿಂದಿನ ಆದೇಶದಲ್ಲಿ ತಿಳಿಸಿದಂತೆಯೇ 22ರಂದು ಇದರ ವಿಚಾರಣೆ ನಡೆಯಲಿದೆ.

'ಸುಪ್ರೀಂ ಕೋರ್ಟ್ ಆದೇಶದಂತೆ ನಾವು ಸರ್ಕಾರದ ಅಂತಿಮ ಅಧಿಸೂಚನೆಗೆ ಕಾಯುತ್ತಿದ್ದೇವೆ. ಸರ್ಕಾರ ಈವರೆಗೆ ಯಾವುದೇ ಮಾಹಿತಿ ಅಥವಾ ಅಧಿಸೂಚನೆಯ ಪ್ರತಿಯನ್ನು ನಮಗೆ ನೀಡಿಲ್ಲ. ಹೀಗಾಗಿ ನಮ್ಮ ಆಕ್ಷೇಪವನ್ನು ಸುಪ್ರೀಂ ಕೋರ್ಟ್‌ಗೆ ಶುಕ್ರವಾರ ಸಲ್ಲಿಸಲಿದ್ದೇವೆ' ಎಂದು ರಾಜ್ಯ ಚುನಾವಣೆ ಆಯೋಗದ ಆಯುಕ್ತ ಬಿ. ಬಸವರಾಜು ತಿಳಿಸಿದರು.

ಬಿಬಿಎಂಪಿಯ 198 ವಾರ್ಡ್‌ಗಳನ್ನು 243 ವಾರ್ಡ್‌ಗಳಾಗಿ ಪುನರ್ ವಿಂಗಡಣೆ ಮಾಡಿ, ರಾಜ್ಯ ಸರ್ಕಾರ ಜುಲೈ 14ರಂದು ಅಂತಿಮ ಅಧಿಸೂಚನೆ ಹೊರಡಿಸಿದೆ. ಆದರೆ, ವಾರ್ಡ್‌ಗಳ ಮೀಸಲಾತಿ ನಿಗದಿಗೆ ಸಂಬಂಧಿಸಿದಂತೆ ಈವರೆಗೆ ಯಾವುದೇ ಅಧಿಸೂಚನೆ ಹೊರಬಿದ್ದಿಲ್ಲ. ವಾರ್ಡ್ ಗಳ ಮೀಸಲಾತಿ ಬಗ್ಗೆ ವರದಿ ಸಲ್ಲಿಸಲು ನ್ಯಾಯಮೂರ್ತಿ ಭಕ್ತವತ್ಸಲಂ ನೇತೃತ್ವದ ಸಮಿತಿಯನ್ನು ಸರ್ಕಾರ ರಚಿಸಿದೆ.

ಈ ಬಾರಿ ಅದ್ದೂರಿಯಾಗಿ ಮೈಸೂರು ದಸರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸೋಂಕು ಬಹುತೇಕ ನಿಯಂತ್ರಣಕ್ಕೆ ಬಂದಿರುವುದರಿಂದ, ಹಿಂದಿನ ವರ್ಷಗಳಂತೆ ಈ ವರ್ಷ ನಾಡಹಬ್ಬ ಮೈಸೂರು ದಸರಾ ಉತ್ಸವನ್ನು ಅದ್ದೂರಿಯಾಗಿ ಆಚರಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಉನ್ನತಮಟ್ಟದ ಸಭೆಯಲ್ಲಿ ನಿರ್ಧರಿಸಲಾಗಿದೆ.

ದಸರಾ ಉತ್ಸವಕ್ಕೆ ಪ್ರವಾಸಿಗರನ್ನು ಆಕರ್ಷಿಸಲು ದೆಹಲಿ, ಮುಂಬೈ, ಚೆನ್ನೈ ಮತ್ತಿತರ ಮಹಾನಗರಗಳು ಹಾಗೂ ವಿದೇಶಗಳಲ್ಲಿ ಪ್ರಚಾರ ಅಭಿಯಾನ ನಡೆಸುವ ತೀರ್ಮಾನ ಕೈಗೊಳ್ಳಲಾಗಿದೆ. ಮೈಸೂರು ದಸರಾ ಜತೆಯಲ್ಲೇ ಶ್ರೀರಂಗಪಟ್ಟಣ ಮತ್ತು ಚಾಮರಾಜನಗರಗಳಲ್ಲೂ ದಸರಾ ಉತ್ಸವವನ್ನು ನಡೆಸಲು ತೀರ್ಮಾನಿಸಲಾಗಿದೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ದಸರಾ ಉತ್ಸವ ಕುರಿತು ವ್ಯಾಪಕ ಪ್ರಚಾರ ನೀಡುವಂತೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತರಿಗೆ ನಿರ್ದೇಶನ ನೀಡಲಾಗಿದೆ. ದಸರಾ ಆರಂಭಕ್ಕೂ 15 ದಿನಗಳ ಮೊದಲು ವಸ್ತುಪ್ರದರ್ಶನಕ್ಕೆ ಚಾಲನೆ ನೀಡಲಾಗುವುದು. ಗಜಪಯಣ ಸೇರಿದಂತೆ ಎಲ್ಲ ಸಾಂಪ್ರದಾಯಿಕ ಆಚರಣೆಗಳೂ ಈ ಬಾರಿ ನಡೆಯಲಿವೆ ಎಂದರು.

ಈ ಬಾರಿ ಸ್ಥಳೀಯ ಕಲಾವಿದರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಅವಕಾಶ ನೀಡಲಾಗುವುದು. ಪ್ರತಿದಿನ ಒಬ್ಬರು ರಾಷ್ಟ್ರೀಯ ಮಟ್ಟದ ಕಲಾವಿದರನ್ನು ಆಹ್ವಾನಿಸಲಾಗುವುದು ಎಂದು ತಿಳಿಸಿದರು.

ವಾರದೊಳಗೆ ಆದೇಶ: ಮೈಸೂರು ಮತ್ತು ಹಂಪಿ ಪ್ರವಾಸೋದ್ಯಮ ಸರ್ಕೀಟ್ ರಚನೆ ಕುರಿತು ಬಜೆಟ್‌ನಲ್ಲಿ ಪ್ರಕಟಿಸಲಾಗಿತ್ತು. ಮೈಸೂರು ಪ್ರವಾಸೋದ್ಯಮ ಸರ್ಕೀಟ್ ಆರಂಭಕ್ಕೆ ವಾರದೊಳಗೆ ಆದೇಶ ಹೊರಡಿಸಲಾಗುವುದು. ಪ್ರವಾಸಿಗರು ಒಂದೇ ಟಿಕೆಟ್ ಪಡೆದು ಮೈಸೂರು, ಬೇಲೂರು, ಹಳೆಬೀಡು ಮತ್ತಿತರ ಪ್ರವಾಸಿ ತಾಣಗಳಿಗೆ ಭೇಟಿನೀಡಲು ಅನುಕೂಲವಾಗಲಿದೆ ಎಂದರು.

2021ರಲ್ಲೇ ಉಳಿದ ಸರ್ಕಾರ: ಟೀಕೆ

ದಸರಾ ಸಿದ್ಧತೆ ಕುರಿತು ನಡೆದ ಸಭೆಯ ಕಾರ್ಯಸೂಚಿಯಲ್ಲಿ 'ದಿನಾಂಕ: 19-07-2021' ಎಂದು ಮುದ್ರಿಸಲಾಗಿತ್ತು. ವರ್ಷದ ಹಿಂದಿನ ದಿನಾಂಕ ಮುದ್ರಿಸಿರುವುದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಲವರು ಟೀಕಿಸಿದ್ದಾರೆ.

'ಕರ್ನಾಟಕದ ಬಿಜೆಪಿ ಸರ್ಕಾರ 2021ರಲ್ಲೇ ಉಳಿದುಬಿಟ್ಟಿದೆ. ಟೇಕ್ ಆಫ್ ಆಗಿಯೇ ಇಲ್ಲ ಎನ್ನುವುದಕ್ಕೆ ಇದಕ್ಕಿಂತ ಬೇರೆ ಸಾಕ್ಷಿ ಬೇಕೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

ಆ.7ರಿಂದ ಗಜಪಯಣ


ಆಗಸ್ಟ್ 7ರಿಂದ ವೀರನಹೊಸಹಳ್ಳಿಯಿಂದ ಗಜಪಯಣ ಆರಂಭವಾಗಲಿದೆ. ಆ.10ರಂದು ಮೈಸೂರು ಅರಮನೆ ಆವರಣದಲ್ಲಿ ಗಜಪಯಣ ನಡೆಯಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿ 2 ನಿಮಿಷ

ಕೋವಿಡ್:ಆಸ್ಪತ್ರೆ ದಾಖಲಾತಿ ಇಳಿಕೆ

ಬೆಂಗಳೂರು: ನಗರದಲ್ಲಿ ಕೋವಿಡ್ ಆಸ್ಪತ್ರೆ ದಾಖಲಾತಿ ಸಂಖ್ಯೆ ಇಳಿಮುಖವಾಗಿದ್ದು, ಸದ್ಯ 27 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

ಮಂಗಳವಾರ 1,013 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕಿತರಲ್ಲಿ ಹೊಸದಾಗಿ 1,104 ಮಂದಿ ಚೇತರಿಸಿಕೊಂಡಿದ್ದಾರೆ.ಸದ್ಯ ನಗರದಲ್ಲಿ 6,901 ಸಕ್ರಿಯ ಪ್ರಕರಣಗಳಿವೆ. ಸೋಂಕಿತರಲ್ಲಿ 21 ಮಂದಿ ಸಾಮಾನ್ಯ ಹಾಸಿಗೆಗಳಲ್ಲಿ ಚಿಕಿತ್ಸೆಗೆ ಒಳಗಾಗಿದ್ದಾರೆ. ಮೂವರು ಐಸಿಯು, ಇಬ್ಬರು ವೆಂಟಿಲೇಟರ್ ಸಹಿತ ಐಸಿಯು ಹಾಗೂ ಒಬ್ಬರು ಎಚ್‌ಡಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಉಳಿದವರು ಮನೆ ಆರೈಕೆಯಲ್ಲಿಯೇ ಚೇತರಿಸಿಕೊಳ್ಳುತ್ತಿದ್ದಾರೆ. ತಿಂಗಳ ಆರಂಭದಲ್ಲಿ ಆಸ್ಪತ್ರೆ ದಾಖಲಾತಿ ನೂರರ ಗಡಿ ಸಮೀಪಿಸಿತ್ತು.



ದೈನಂದಿನ ಕೋವಿಡ್ ಪರೀಕ್ಷೆಗಳ ಸಂಖ್ಯೆ 19 ಸಾವಿರದ ಗಡಿ ದಾಟಿದೆ. ಸೋಂಕು ದೃಢ ಪ್ರಮಾಣ ಶೇ 4.53ರಷ್ಟಿದೆ. ನಗರದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 18.21 ಲಕ್ಷಕ್ಕೆ ಏರಿಕೆಯಾಗಿದೆ. ಸೋಂಕಿತರಲ್ಲಿ 17.97 ಲಕ್ಷ ಮಂದಿ ಚೇತರಿಸಿಕೊಂಡಿದ್ದಾರೆ.

ಅಕ್ರಮ–ಸಕ್ರಮ: ಬಡವರಿಗೆ ಬೆಂಬಲ ನಮ್ಮ ಬೆಂಗಳೂರು ಪ್ರತಿಷ್ಠಾನ

ಬೆಂಗಳೂರು: 'ಬಡವರು ಮತ್ತು ಮಧ್ಯಮ ವರ್ಗದ ಮನೆ ಮಾಲೀಕರಿಗೆ ಅನುಕೂಲವಾಗುವಂತೆ ಅಕ್ರಮ–ಸಕ್ರಮ ಯೋಜನೆಗೆ ಸುಪ್ರೀಂ ಕೋರ್ಟ್‌ನಲ್ಲಿ ಸರ್ಕಾರ ವಿನಾಯಿತಿ ಕೋರಿದರೆ ನಮ್ಮ ಬೆಂಬಲ ಇರಲಿದೆ' ಎಂದು ನಮ್ಮ ಬೆಂಗಳೂರು ಪ್ರತಿಷ್ಠಾನದ ಪ್ರಧಾನ ವ್ಯವಸ್ಥಾಪಕ ವಿನೋದ್ ಜಾಕಬ್ ತಿಳಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿರುವ ಅವರು, 'ಸುಪ್ರೀಂ ಕೋರ್ಟ್‌ನಲ್ಲಿ ನಮ್ಮ ಬೆಂಗಳೂರು ಪ್ರತಿಷ್ಠಾನ ಅಕ್ರಮ–ಸಕ್ರಮದ ಬಗ್ಗೆ ಸಲ್ಲಿಸಿರುವ ಅರ್ಜಿಯ ಹಿನ್ನೆಲೆಯಲ್ಲಿ ಅದನ್ನು ತಡೆಹಿಡಿಯಲಾಗಿದೆ. ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ಬಡವರು ಮತ್ತು ಮಧ್ಯಮ ವರ್ಗದ ಕುಟುಂಬಗಳ ಬಗ್ಗೆ ನಿಲುವು ಸ್ಪಷ್ಟಪಡಿಸಲು ಕೇಳಿದ್ದರು. ಹೀಗಾಗಿ ನಾವು ನಮ್ಮ ನಿಲುವಲ್ಲಿ ತಿಳಿಸಿದ್ದೇವೆ' ಎಂದಿದ್ದಾರೆ. 'ಅಕ್ರಮ–ಸಕ್ರಮ ಯೋಜನೆಯಲ್ಲಿ ಬಿಲ್ಡರ್‌ಗಳು ತಮ್ಮ ಅಕ್ರಮಗಳಿಂದ ಲಾಭವನ್ನು ಪಡೆಯಬಾರದು ಎಂಬ ನಮ್ಮ ನಿಲುವಿಗೆ ನಾವು ಬದ್ಧರಾಗಿದ್ದೇವೆ' ಎಂದಿದ್ದಾರೆ.



ಜಾಮೀನು ಕೋರಿ ಹೈಕೋರ್ಟ್‌ಗೆ

ಬೆಂಗಳೂರು: 'ಕಂದಾಯ ವ್ಯಾಜ್ಯವೊಂದರಲ್ಲಿ ಪಕ್ಷಪಾತಿ ಆದೇಶ ನೀಡಲು ₹ 5 ಲಕ್ಷ ಲಂಚ ಪಡೆಯಲಾಗಿದೆ' ಎಂಬ ಆರೋಪ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಬೆಂಗಳೂರು ನಗರ ಜಿಲ್ಲೆಯ ಹಿಂದಿನ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಜಾಮೀನು ಕೋರಿ ಹೈಕೋರ್ಟ್ ಗೆ ಅರ್ಜಿ ಸಲ್ಲಿಸಿದ್ದಾರೆ. ಇನ್ನಷ್ಟೇ ಇದು ವಿಚಾರಣೆಗೆ ಬರಬೇಕಿದೆ.



ಬುಧವಾರ, ಜುಲೈ 20, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 200 | ಪುಟ 20

● www.prajavani.net


/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ

ಆಧುನಿಕ ತಂತ್ರಜ್ಞಾನದಲ್ಲಿ ಕೆಲಸಗಳನ್ನು ಸುಲಭವಾಗಿಸುವ ಮತ್ತು ವೇಗವಾಗಿಸುತ್ತಿರುವ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಥವಾ 'ಕೃತಕ ಬುದ್ಧಿಮತ್ತೆ' ತಂತ್ರಜ್ಞಾನವನ್ನು ನಮಗರಿವಿಲ್ಲದಂತೆಯೇ ನಾವು ಆನಂದಿಸುತ್ತಿದ್ದೇವೆ



ಆಳ-ಅಗಲ: ಮಂಕಿಪಾಕ್ಸ್ ಭೀತಿ ಬೇಡ, ಎಚ್ಚರ ಬೇಕು

ದೋಣಿಗಲ್ ಬಳಿ ಏಕಮುಖ ಸಂಚಾರ 5

ಸುಳ್ಯಪತ್ತೆ ಪರೀಕ್ಷೆಗೆ ಅಮ್ರಿತ್ ಪೌಲ್ ನಕಾರ 4

ಸೆನ್ಸೆಕ್ಸ್	ನಿಫ್ಟಿ	₹/$
54,767 ▲	16,340 ▲	79.92 ▲

ಜಿಎಸ್‌ಟಿ: ಐದು ವರ್ಷವಷ್ಟೇ ಪರಿಹಾರ ನೀಡಲು ಅವಕಾಶ – ಕೇಂದ್ರ ಸ್ಪಷ್ಟೋಕ್ತಿ

ರಾಜ್ಯಗಳ ಬೇಡಿಕೆಗಿಲ್ಲ ಕಿಮ್ಮತ್ತು

• ಮಂಜುನಾಥ ಹೆಬ್ಬಾರ್

ನವದೆಹಲಿ: ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯ ಕಾರಣದಿಂದ ಆಗುವ ವರಮಾನ ನಷ್ಟಕ್ಕೆ ಪರಿಹಾರ ನೀಡುವುದನ್ನು ಮುಂದುವರಿಸಬೇಕು ಎಂಬ ರಾಜ್ಯಗಳ ಬೇಡಿಕೆಗೆ ಮಣೆ ಹಾಕದ ಕೇಂದ್ರ ಸರ್ಕಾರ, 'ಜಿಎಸ್‌ಟಿ ವ್ಯವಸ್ಥೆ ಜಾರಿಯಾದ ಬಳಿಕ 5 ವರ್ಷಗಳ ಅವಧಿಗಷ್ಟೇ ಪರಿಹಾರ ಕೊಡಲು ಜಿಎಸ್‌ಟಿ ಮಂಡಳಿ ಶಿಫಾರಸು ಮಾಡಿತ್ತು' ಎಂದು ಸ್ಪಷ್ಟಪಡಿಸಿದೆ.

ಲೋಕಸಭೆ ಹಾಗೂ ರಾಜ್ಯಸಭೆಯಲ್ಲಿ ಸದಸ್ಯರು ಕೇಳಿರುವ ಏಳು ಪ್ರಶ್ನೆಗಳಿಗೆ ಲಿಖಿತ ಉತ್ತರ ನೀಡಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ರಾಜ್ಯ ಸಚಿವ ಪಂಕಜ್ ಚೌಧರಿ, 'ಸಂವಿಧಾನ ಕಾಯ್ದೆ 2016 (101ನೇ ತಿದ್ದುಪಡಿ) ಸೆಕ್ಷನ್ 18 ಹಾಗೂ ಜಿಎಸ್‌ಟಿ ಮಂಡಳಿ ಶಿಫಾರಸಿನ ಪ್ರಕಾರ, ಕಾಯ್ದೆ ಜಾರಿಯಾದ ಬಳಿಕ ಐದು ವರ್ಷವಷ್ಟೇ ರಾಜ್ಯಗಳಿಗೆ ಪರಿಹಾರ ನೀಡಲು ಅವಕಾಶ ಇದೆ' ಎಂದು ಹೇಳಿದ್ದಾರೆ.

ಚಂಡೀಗಡದಲ್ಲಿ ಜೂನ್ ತಿಂಗಳಲ್ಲಿ ನಡೆದಿದ್ದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಮಾತನಾಡಿದ್ದ ನಿರ್ಮಲಾ ಸೀತಾರಾಮನ್, 'ರಾಜ್ಯಗಳಿಗೆ ನೀಡುವ ಪರಿಹಾರದ ಬಗ್ಗೆ ಅಂತಿಮ ತೀರ್ಮಾನವನ್ನು ಆಗಸ್ಟ್ ಮೊದಲ ವಾರದಲ್ಲಿ ನಡೆಯುವ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಕೈಗೊಳ್ಳುವ ನಿರೀಕ್ಷೆ ಇದೆ' ಎಂದು ಹೇಳಿಕೆ ನೀಡಿದ್ದರು. ಆದರೆ, ಉಭಯ ಸದನಗಳಿಗೆ ಹಣಕಾಸು ಸಚಿವರು ನೀಡಿರುವ ಉತ್ತರದಲ್ಲಿ ಆಗಸ್ಟ್ ಸಭೆಯಲ್ಲಿ ತೀರ್ಮಾನ ಕೈಗೊಳ್ಳುವ ಬಗ್ಗೆ ಉಲ್ಲೇಖವೇ ಇಲ್ಲ.

'ರಾಜ್ಯಗಳಿಗೆ ಈ ವರ್ಷದ ಮೇ ಅಂತ್ಯದ ವರೆಗೆ ₹86,192 ಕೋಟಿ ಪರಿಹಾರ ನೀಡಲಾಗಿದೆ. ಜಿಎಸ್‌ಟಿ ಪರಿಹಾರ ನಿಧಿಯಲ್ಲಿ ₹25 ಸಾವಿರ ಕೋಟಿಯಷ್ಟೇ ಇತ್ತು. ಆದರೂ ಕೇಂದ್ರ ಸರ್ಕಾರವು ತನ್ನ ಸಂಪನ್ಮೂಲಗಳಿಂದ ರಾಜ್ಯಗಳಿಗೆ ₹62 ಸಾವಿರ ಕೋಟಿ ಬಿಡುಗಡೆ ಮಾಡಿದೆ. ಜೂನ್ ತಿಂಗಳ ಪರಿಹಾರವನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ಬದ್ಧ' ಎಂದೂ ಸಚಿವರು ಉತ್ತರದಲ್ಲಿ ಹೇಳಿದ್ದಾರೆ.

ರಾಜ್ಯಗಳಿಗೆ ಪರಿಹಾರದ ರೂಪದಲ್ಲಿ ನೀಡಲು ಅಗತ್ಯವಿರುವ ಹಣವನ್ನು ಆರೋಗ್ಯಕ್ಕೆ ಹಾನಿಕರವಾದ ವಸ್ತುಗಳು ಮತ್ತು ಐಷಾರಾಮಿ ಸರಕುಗಳ ಮೇಲೆ ಸೆಸ್ ವಿಧಿಸುವ ಮೂಲಕ ಸಂಗ್ರಹಿಸಲಾಗುತ್ತಿದೆ. 'ಈ ಸರಕುಗಳ ಮೇಲೆ ವಿಧಿಸುವ ಪರಿಹಾರ ಸೆಸ್ ಅನ್ನು 2026ರ ಮಾರ್ಚ್ 31ರವರೆಗೆ ವಿಸ್ತರಣೆ ಮಾಡಿ ಈ ವರ್ಷದ ಜೂನ್ 24ರಂದು ಅಧಿಸೂಚನೆ ಹೊರಡಿಸಲಾಗಿದೆ. ರಾಜ್ಯಗಳ ವರಮಾನ ಸಂಗ್ರಹದಲ್ಲಿ ಆಗಿರುವ ಕೊರತೆಯನ್ನು ಸರಿದೂಗಿಸಲು ಕಳೆದ ಎರಡು ಹಣಕಾಸು ವರ್ಷಗಳಲ್ಲಿ (2020–21ರಲ್ಲಿ ₹1.10 ಲಕ್ಷ ಕೋಟಿ ಹಾಗೂ 2021–22ರಲ್ಲಿ ₹1.59 ಲಕ್ಷ ಕೋಟಿ) ಮಾರುಕಟ್ಟೆಯಿಂದ ಸಾಲ ಪಡೆಯಲಾಗಿದೆ. ಅದನ್ನು ಮರುಪಾವತಿ ಮಾಡಲು ಸೆಸ್ ಸಂಗ್ರಹಿಸುವ ಅವಧಿಯನ್ನು 2026ರವರೆಗೆ ವಿಸ್ತರಿಸಲು 2021ರ ಜಿಎಸ್‌ಟಿ ಸಭೆಯಲ್ಲಿ ನಿರ್ಧರಿಸಲಾಗಿತ್ತು' ಎಂದೂ ನಿರ್ಮಲಾ ಸೀತಾರಾಮನ್ ಉತ್ತರದಲ್ಲಿ ಹೇಳಿದ್ದಾರೆ.

6ನೇ ಪುಟ ನೋಡಿ

ಆಹಾರ ಪದಾರ್ಥಕ್ಕೆ ತೆರಿಗೆ ಮೊದಲಲ್ಲ: ನಿರ್ಮಲಾ ತಿರುಗೇಟು

ನವದೆಹಲಿ (ಪಿಟಿಐ): ದಿನಬಳಕೆಯ ಆಹಾರ ಪದಾರ್ಥಗಳ ಮೇಲೆ ತೆರಿಗೆ ವಿಧಿಸಿರುವುದಕ್ಕೆ ವ್ಯಕ್ತವಾಗಿರುವ ವಿರೋಧಕ್ಕೆ ತಿರುಗೇಟು ನೀಡಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ಎಲ್ಲ ರಾಜ್ಯಗಳ ಸಹಮತ ಪಡೆದೇ ಇದನ್ನು ಜಾರಿಗೊಳಿಸಲಾಗಿದೆ ಎಂದಿದ್ದಾರೆ.

ಶೇಕಡ 5ರಷ್ಟು ತೆರಿಗೆ ವಿಧಿಸುವುದಕ್ಕೆ ಬಿಜೆಪಿಯೇತರ ಪಕ್ಷಗಳ ಆಡಳಿತ ಇರುವ ಪಂಜಾಬ್, ಛತ್ತೀಸಗಡ, ರಾಜಸ್ಥಾನ, ತಮಿಳುನಾಡು, ಪಶ್ಚಿಮ ಬಂಗಾಳ, ಆಂಧ್ರಪ್ರದೇಶ, ತೆಲಂಗಾಣ ಮತ್ತು ಕೇರಳ ಒಪ್ಪಿದ್ದವು ಎಂದಿದ್ದಾರೆ.

ಜಿಎಸ್‌ಟಿ ಜಾರಿಗೆ ಬರುವುದಕ್ಕೂ ಮೊದಲು ಕೆಲವು ರಾಜ್ಯಗಳು ಆಹಾರ ಧಾನ್ಯಗಳ ಮೇಲೆ ಮೌಲ್ಯವರ್ಧಿತ ತೆರಿಗೆ (ವ್ಯಾಟ್) ವಿಧಿಸುತ್ತಿದ್ದವು. ಈಗ ಮೊಸರು, ಧಾನ್ಯಗಳು, ಬೇಳೆಕಾಳು ಮೇಲೆ ತೆರಿಗೆ ವಿಧಿಸಿರುವುದು ತೆರಿಗೆ ಸೋರಿಕೆಯನ್ನು ತಡೆಗಟ್ಟುವ ಉದ್ದೇಶಕ್ಕೆ ಮಾತ್ರ ಎಂದು ಅವರು ವಿವರಿಸಿದ್ದಾರೆ.

6ನೇ ಪುಟ ನೋಡಿ

ಜಿಎಸ್‌ಟಿ ಸಂಗ್ರಹ

₹1.51 ಲಕ್ಷ ಕೋಟಿ
ದೇಶದಲ್ಲಿ 2022–23ರಲ್ಲಿ ಪ್ರತಿ ತಿಂಗಳು ಸರಾಸರಿ ಜಿಎಸ್‌ಟಿ ಸಂಗ್ರಹ

₹1.10 ಲಕ್ಷ ಕೋಟಿ
2021–22ರಲ್ಲಿ ಪ್ರತಿ ತಿಂಗಳು ಸರಾಸರಿ ಜಿಎಸ್‌ಟಿ ಸಂಗ್ರಹ

ಅಂಕಿ– ಅಂಶಗಳು

₹35,266 ಕೋಟಿ
ರಾಜ್ಯಗಳಿಗೆ ಬರಬೇಕಿರುವ ಜಿಎಸ್‌ಟಿ ಬಾಕಿ

3,849
ಕರ್ನಾಟಕಕ್ಕೆ ಬರಬೇಕಿರುವ ಬಾಕಿ
(*2022ರ ಜೂನ್ ಅಂತ್ಯದ ವರೆಗೆ ನೀಡಬೇಕಿರುವ ಪರಿಹಾರ)

ಸಂಸತ್ ಅಧಿವೇಶನ: ಎರಡನೇ ದಿನವೂ ಕಲಾಪ ಇಲ್ಲ

ಬೆಲೆ ಏರಿಕೆ, ಜಿಎಸ್‌ಟಿ ಹೇರಿಕೆ ಕುರಿತು ನಡೆಯದ ಚರ್ಚೆ

ನವದೆಹಲಿ (ಪಿಟಿಐ): ಮುಂಗಾರು ಅಧಿವೇಶನ ನಡೆಯುತ್ತಿರುವ ಲೋಕಸಭೆ ಮತ್ತು ರಾಜ್ಯಸಭೆಯು ಮಂಗಳವಾರವೂ ಗದ್ದಲಕ್ಕೆ ಸಾಕ್ಷಿಯಾಯಿತು. ಕಲಾಪ ನಡೆಯಲಿಲ್ಲ. ಬೆಲೆ ಏರಿಕೆ, ಜಿಎಸ್‌ಟಿ ಹೇರಿಕೆ, ಅಗ್ನಿಪಥ ಯೋಜನೆ ಬಗ್ಗೆ ಚರ್ಚೆಗೆ ಅವಕಾಶ ಕೊಡುವಂತೆ ವಿರೋಧ ಪಕ್ಷಗಳು ಪಟ್ಟು ಹಿಡಿದವು. ಸರ್ಕಾರ ಇದಕ್ಕೆ ಸಮ್ಮತಿಸಲಿಲ್ಲ.

ಕೆಲವು ವಸ್ತುಗಳ ಮೇಲೆ ಜಿಎಸ್‌ಟಿ ಹೇರಿಕೆ ಮತ್ತು ಬೆಲೆ ಏರಿಕೆಯ ವಿರುದ್ಧ ವಿರೋಧ ಪಕ್ಷಗಳ ಸಂಸದರು ಲೋಕಸಭೆಯಲ್ಲಿ ಪ್ರತಿಭಟನೆ ನಡೆಸಿದರು. ಸ್ಪೀಕರ್ ಓಂ ಬಿರ್ಲಾ ಅವರು ಬೆಳಿಗ್ಗೆ 11 ಗಂಟೆಗೆ ಕಲಾಪವನ್ನು ಮಧ್ಯಾಹ್ನ 2 ಗಂಟೆವರೆಗೆ ಮುಂದೂಡಿದರು.

ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳ ಸಂಸದರು ಘೋಷಣೆಗಳನ್ನು ಕೂಗಿದರು. 'ಮತ್ತೆ ಗಬ್ಬರ್ ಸಿಂಗ್ ಪ್ರಹಾರ' ಎಂಬ ಫಲಕಗಳನ್ನು ಅವರು ಹಿಡಿದಿದ್ದರು.

'ನೀವು ನಿಯಮ ಪುಸ್ತಕಗಳನ್ನು ಹಿಡಿದುಕೊಂಡು ಬರುತ್ತೀರಿ. ಆದರೆ, ನಿಯಮಗಳನ್ನು ಅನುಸರಿಸುವುದಿಲ್ಲ. ಸದನದೊಳಕ್ಕೆ ಫಲಕಗಳನ್ನು ತರುವುದನ್ನು ನಿಷೇಧಿಸಲಾಗಿದೆ. ಹಾಗಿದ್ದರೂ ಫಲಕಗಳನ್ನು ತಂದಿದ್ದೀರಿ. ರೈತರಿಗೆ ಸಂಬಂಧಿಸಿದ ವಿಷಯಗಳನ್ನು ಸದನದ ಹೊರಗೆ ಎತ್ತುತ್ತೀರಿ. ಆದರೆ, ಸದನದಲ್ಲಿ ಆ ಬಗ್ಗೆ ಚರ್ಚೆ ನಡೆದಾಗ ಭಾಗವಹಿಸುವುದಿಲ್ಲ' ಎಂದು ಓಂ ಬಿರ್ಲಾ ಅವರು ಹೇಳಿದರು. ಆದರೆ, ವಿರೋಧ ಪಕ್ಷಗಳ ಸಂಸದರು ಈ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ.

ಮಧ್ಯಾಹ್ನ 2 ಗಂಟೆಗೆ ಸದನ ಸೇರಿದಾಗ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಡಿಎಂಕೆ ಮತ್ತು ಇತರ ವಿರೋಧ ಪಕ್ಷಗಳ ಸದಸ್ಯರು ಫಲಕಗಳನ್ನು ಹಿಡಿದು ಸ್ಪೀಕರ್ ಪೀಠದ ಎದುರು ಜಮಾಯಿಸಿದರು. ಆಗ ಸ್ಪೀಕರ್ ಪೀಠದಲ್ಲಿದ್ದ ಕಿರೀಟ್ ಪ್ರೇಮ್‌ಜಿಭಾಯಿ ಸೋಲಂಕಿ ಅವರು ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು.

ರಾಜ್ಯಸಭೆಯಲ್ಲಿ ಗದ್ದಲ ತೀವ್ರವಾಗಿತ್ತು. ಗದ್ದಲ ಹೆಚ್ಚುತ್ತಿದ್ದಂತೆಯೇ ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಲಾಯಿತು.

ಮುಂಗಾರು ಅಧಿವೇಶನದ ಮೊದಲ ದಿನವಾದ ಸೋಮವಾರವೂ ಸಂಸತ್ತಿನಲ್ಲಿ ಇದೇ ಪರಿಸ್ಥಿತಿ ಇತ್ತು. ಬೆಲೆ ಏರಿಕೆ, ನಿರುದ್ಯೋಗ, ಅಗ್ನಿಪಥ ಯೋಜನೆ ಬಗ್ಗೆ ಚರ್ಚಿಸುವಂತೆ ವಿರೋಧ ಪಕ್ಷಗಳು ಪಟ್ಟು ಹಿಡಿದ ಕಾರಣ ಯಾವುದೇ ಕಲಾಪ ನಡೆದಿರಲಿಲ್ಲ.

ಅದಾನಿ ವಿಶ್ವದ 4ನೇ ಶ್ರೀಮಂತ

ಬೆಂಗಳೂರು: ಫೋರ್ಬ್ಸ್ ನಿಯತಕಾಲಿಕೆ ಸಿದ್ಧಪಡಿಸುವ, ವಿಶ್ವದ ಶತಕೋಟ್ಯಧೀಶರ ಪಟ್ಟಿಯಲ್ಲಿ ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರು ನಾಲ್ಕನೆಯ ಸ್ಥಾನಕ್ಕೆ ಏರಿದ್ದಾರೆ.

ಮೊದಲ ಮೂರು ಸ್ಥಾನಗಳಲ್ಲಿ ಕ್ರಮವಾಗಿ ಇಲಾನ್ ಮಸ್ಕ್ (ಟೆಸ್ಲಾ ಕಂಪನಿಯ ಸಿಇಒ), ಬರ್ನಾರ್ಡ್ ಅರ್ನಾಲ್ಟ್ ಕುಟುಂಬ ಮತ್ತು ಜೆಫ್ ಬೆಜಾಸ್ (ಅಮೆಜಾನ್ ಕಾರ್ಯನಿರ್ವಾಹಕ ಅಧ್ಯಕ್ಷ) ಇದ್ದಾರೆ. ನಾಲ್ಕನೆಯ ಸ್ಥಾನದಲ್ಲಿ ಇದ್ದ ಬಿಲ್ ಗೇಟ್ಸ್ ಅವರು ಐದನೆಯ ಸ್ಥಾನಕ್ಕೆ ಬಂದಿದ್ದಾರೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಗ್ರಾ.ಪಂ.ಗೊಂದು ಮಾದರಿ ಶಾಲೆ; ವಿಲೀನಕ್ಕೆ ಮುನ್ನುಡಿ: ಬಿ.ಸಿ.ನಾಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಂಚಾಯಿತಿಗೆ ಒಂದರಂತೆ ರಾಜ್ಯದ 709 ಗ್ರಾಮ ಪಂಚಾಯಿತಿಗಳಲ್ಲಿ (ಏಕ ಹಳ್ಳಿ ಹೊಂದಿರುವ ಪಂಚಾಯಿತಿಗಳು) ಮಾದರಿ ಶಾಲೆ ತೆರೆಯಲಾಗುವುದು. ಅಗತ್ಯವಿದ್ದರೆ ಕಡಿಮೆ ಮಕ್ಕಳಿರುವ ಇತರೆ ಪ್ರಾಥಮಿಕ ಶಾಲೆಗಳನ್ನು ಮಾದರಿ ಶಾಲೆಗಳಲ್ಲಿ ವಿಲೀನಗೊಳಿಸಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಹೇಳಿದರು.

ಬೆಂಗಳೂರು ಪ್ರೆಸ್‌ಕ್ಲಬ್ ಮಂಗಳವಾರ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡುತ್ತಾ, 'ರಾಜ್ಯದ ಶಾಲೆಗಳಲ್ಲಿ ಶಿಕ್ಷಕ, ವಿದ್ಯಾರ್ಥಿಗಳ ಅನುಪಾತ 1:23 ಇದೆ. ನಗರ ಹಾಗೂ ನಗರದ ಸುತ್ತಲ ಗ್ರಾಮಗಳಲ್ಲಿ ಶಿಕ್ಷಕರ ಕೊರತೆ ಇಲ್ಲ. ಹಲವು ಜಿಲ್ಲೆಗಳ ಗ್ರಾಮೀಣ ಶಾಲೆಗಳಲ್ಲಿ ಸಮಸ್ಯೆ ಹೆಚ್ಚಿದೆ. 10 ಮಕ್ಕಳ ಒಳಗಿರುವ 1,812 ಶಾಲೆಗಳಿಗೂ ತಲಾ ಒಬ್ಬರು ಶಿಕ್ಷಕರನ್ನು ನೀಡಿದ್ದು, 25ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ 13 ಸಾವಿರ ಶಾಲೆಗಳಿಗೂ ಸೌಲಭ್ಯ ಒದಗಿಸಲಾಗಿದೆ' ಎಂದು ಹೇಳಿದರು.

5ನೇ ಪುಟ ನೋಡಿ

'ಸಮಿತಿ ವರದಿಗಳೇ ಅಂತಿಮವಲ್ಲ'

ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಲು ರಚಿಸಿದ ಸಮಿತಿಗಳು ನೀಡಿದ ವರದಿಗಳು (ಪೊಸಿಷನ್ ಪೇಪರ್‌ಗಳು) ಆಯಾ ವಿಷಯ ತಜ್ಞರ ಅಭಿಪ್ರಾಯಗಳಷ್ಟೆ. ಸಾರ್ವಜನಿಕರು ಓದಲು, ಅಭಿಪ್ರಾಯ ವ್ಯಕ್ತಪಡಿಸಲು ಆಗುವಂತೆ ಎಲ್ಲವನ್ನೂ ಡಿಎಸ್‌ಇಆರ್‌ಟಿ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ಎಲ್ಲರ ಅಭಿಪ್ರಾಯ ಪಡೆದ ನಂತರ ಯಾವುದನ್ನು ಪರಿಗಣಿಸಬೇಕು. ಪರಿಗಣಿಸಬಾರದು ಎಂದು ಡಿಎಸ್‌ಇಆರ್‌ಟಿ ನಿರ್ಧರಿಸಲಿದೆ ಎಂದು ಬಿ.ಸಿ.ನಾಗೇಶ್ ಪ್ರತಿಕ್ರಿಯಿಸಿದರು.

ನಿರಂತರ ಮಳೆ: ಅಡಿಕೆ ಬೆಳೆಗಾರರ ಆತಂಕ, ಔಷಧಿ ಸಿಂಪಡಿಸಲೂ ದೊರೆಯದ ಅವಕಾಶ

ಮಲೆನಾಡಿನಲ್ಲಿ ಮತ್ತೆ ಕೊಳೆ ರೋಗದ ಭೀತಿ

• ವೆಂಕಟೇಶ ಜಿ.ಎಚ್.

ಶಿವಮೊಗ್ಗ: ವರುಣನ ಆರ್ಭಟಕ್ಕೆ ಮಲೆನಾಡು ಅಕ್ಷರಶಃ ನಲುಗಿದ್ದು, ಈ ಭಾಗದ ಪ್ರಮುಖ ವಾಣಿಜ್ಯ ಬೆಳೆಯಾದ ಅಡಿಕೆಗೆ ಕೊಳೆ ರೋಗದ ಬಾಧೆ ಮತ್ತೆ ಮುನ್ನೆಲೆಗೆ ಬಂದಿದೆ. ಇದು ಬೆಳೆಗಾರರಲ್ಲಿ ಆತಂಕ ಮೂಡಿಸಿದೆ.

ಮಲೆನಾಡಿನ ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಜೂನ್‌ನಲ್ಲಿ ಮಳೆ ಕೊರತೆ ಎದುರಾಗಿತ್ತು. ಆದರೆ ಜುಲೈ ತಿಂಗಳಲ್ಲಿ ವಿಪರೀತ ಮಳೆಯಾಗಿದೆ. ಎಡೆಬಿಡದೆ ಸುರಿದ ಆರಿದ್ರಾ, ಪುಷ್ಯ ಮಳೆಗಳಿಂದಾಗಿ ತೋಟ, ಗದ್ದೆಗಳಲ್ಲಿ ನೀರು ನಿಂತಿದೆ. ಪರಿಣಾಮ ತೇವಾಂಶ ಹೆಚ್ಚಾಗಿದ್ದು, ಕೊಳೆರೋಗಕ್ಕೆ ಹಾದಿಯಾಗಿದೆ.

ಅಡಿಕೆಗೆ ತಗಲುವ ಕೊಳೆ ರೋಗದ ಮೂಲ ಪೈಥೋಪೆರಾ ಮೆಡಿಯ (phytophthora meadii) ಹೆಸರಿನ ಶಿಲೀಂಧ್ರ. ಈ ರೋಗ ತಗುಲಿದ ಗಿಡಗಳಲ್ಲಿ ತೊಟ್ಟು ಕೊಳೆತು ಅಡಿಕೆಕಾಯಿಗಳು ಉದುರುತ್ತವೆ. ರೋಗ ತೀವ್ರವಾದರೆ ತೊಂಡೆ, ಸುಳಿ ಕೊಳೆತು ಗಿಡಗಳೇ ನಾಶವಾಗುತ್ತವೆ.



ಚಿಕ್ಕಮಗಳೂರು ಜಿಲ್ಲೆ ಶೃಂಗೇರಿ ತಾಲ್ಲೂಕಿನ ಕೆರೆಮನೆ ಭಾಗದ ತೋಟದಲ್ಲಿ ಅಡಿಕೆಗೆ ಕೊಳೆ ರೋಗ ಬಾಧಿಸಿರುವುದು

ಮಳೆ ಕಥೆ– ವ್ಯಥೆ

ಜೊತೆಗೆ ಮಳೆಗಾಲದಲ್ಲಿ ಮರಗಳಿಗೆ ಸರಿಯಾಗಿ ಪೋಷಕಾಂಶ ನಿರ್ವಹಣೆ ಮಾಡದಿದ್ದರೆ ರೋಗ ನಿರೋಧಕ ಶಕ್ತಿ ಕಡಿಮೆ ಆಗಿ ಎಲೆಚುಕ್ಕೆ ಶಿಲೀಂಧ್ರ ರೋಗ ಕಾಡುತ್ತದೆ.

ಶಿವಮೊಗ್ಗ ಜಿಲ್ಲೆಯಲ್ಲಿ ಪ್ರತಿ ವರ್ಷ ಮೊದಲು ಆಗುಂಬೆ ಭಾಗದಲ್ಲಿ ಕೊಳೆರೋಗ ಕಾಣಿಸಿಕೊಳ್ಳುತ್ತದೆ. ತೀರ್ಥಹಳ್ಳಿ, ಸಾಗರ, ಹೊಸನಗರ ತಾಲ್ಲೂಕುಗಳಲ್ಲಿ ಹೆಚ್ಚು ಬಾಧಿಸುತ್ತದೆ. ಈ ಬಾರಿಯೂ ರೋಗ ಲಕ್ಷಣಗಳು ಕಾಣಿಸಿಕೊಂಡು ರೈತರನ್ನು ಚಿಂತೆಗೆ ನೂಕಿವೆ.

ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಸಿದ್ದಾಪುರ ತಾಲ್ಲೂಕಿನ 50ಕ್ಕೂ ಹೆಚ್ಚು ಗ್ರಾಮಗಳಲ್ಲಿ ಈಗಾಗಲೇ ಅಡಿಕೆ ಮಿಳ್ಳೆಗಳು ಉದುರಲು ಆರಂಭಿಸಿವೆ. ಕರಾವಳಿ ಭಾಗದ ಕುಮಟಾ, ಹೊನ್ನಾವರದಲ್ಲೂ ರೋಗದ ಭೀತಿ ಎದುರಾಗಿದೆ. ಇಲ್ಲಿ ಕಳೆದ ವರ್ಷವೂ ಕೊಳೆರೋಗದಿಂದ ನೂರಾರು ಕ್ವಿಂಟಲ್ ಅಡಿಕೆ ಬೆಳೆ ಹಾನಿಗೊಳಗಾಗಿತ್ತು.

5ನೇ ಪುಟ ನೋಡಿ

ಸರ್ಕಾರ ನೆರವಿಗೆ ಬರಲಿ: ರಮೇಶ ಹೆಗಡೆ

'ಕೊಳೆ ರೋಗದಿಂದ ನಷ್ಟಕ್ಕೀಡಾದವರಿಗೆ ಈ ಹಿಂದೆ ಸಿದ್ದರಾಮಯ್ಯ ಸರ್ಕಾರ ₹ 32 ಕೋಟಿ ಪರಿಹಾರ ಕೊಟ್ಟದ್ದು ಬಿಟ್ಟರೆ ಯಾರೂ ನಮ್ಮ ನೆರವಿಗೆ ಬಂದಿಲ್ಲ' ಎಂದು ಶಿವಮೊಗ್ಗ ಜಿಲ್ಲಾ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷ ರಮೇಶ ಹೆಗಡೆ ಹೇಳುತ್ತಾರೆ. 'ತೋಟಗಾರಿಕೆ ಇಲಾಖೆ, ವಿಶ್ವವಿದ್ಯಾಲಯ, ಸಂಶೋಧನಾ ಕೇಂದ್ರಗಳು ಕೊಳೆರೋಗ ನಿಯಂತ್ರಣಕ್ಕೆ ಒತ್ತು ನೀಡುತ್ತಿವೆ. ಸರ್ಕಾರದ ಅನುದಾನವೂ ಅದಕ್ಕೆ ಖರ್ಚು ಆಗುತ್ತಿದೆ. ರೋಗ ಬಾರದಂತೆ ತಡೆಯಲು ಯಾವುದೇ ಸಂಶೋಧನೆ ಆಗುತ್ತಿಲ್ಲ. ಇಲ್ಲಿವರೆಗೆ ಬೋರ್ಡೊ ದ್ರಾವಣ ಆವಿಷ್ಕಾರ ಬಿಟ್ಟರೆ ಬೇರೆ ಏನೂ ಆಗಿಲ್ಲ' ಎಂದು ಅವರು ಬೇಸರ ವ್ಯಕ್ತಪಡಿಸುತ್ತಾರೆ.

ಕೊಳೆರೋಗಕ್ಕೀಡಾದ ಮರ ನಂತರದ ಮೂರು ವರ್ಷ ಫಸಲು ಕೊಡುವುದಿಲ್ಲ. ಕೆಲವೊಮ್ಮೆ ಬೇರೆ ಗಿಡಗಳನ್ನು ಬೆಳೆಸಬೇಕಾಗುತ್ತದೆ. ಇದರಿಂದ ರೈತರಿಗೆ ಆರ್ಥಿಕ ನಷ್ಟ. ಈ ಮೊದಲು ಔಷಧೋಪಚಾರಕ್ಕೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಅಡಿ ಸಹಾಯಧನ ಕೊಡಲಾಗುತ್ತಿತ್ತು. ಈಗ ಅದನ್ನು ನಿಲ್ಲಿಸಲಾಗಿದೆ. ಸರ್ಕಾರ ಬೆಳೆಗಾರರ ನೆರವಿಗೆ ಬರಬೇಕಿದೆ' ಎಂದು ಆಗ್ರಹಿಸುತ್ತಾರೆ.



ಲಾಲ್‌ಬಾಗ್‌ನಲ್ಲಿ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ವಿಷಯ ಆಧರಿತ ವಿಶೇಷ ಫಲಪುಷ್ಪ ಪ್ರದರ್ಶನ ಉದ್ಘಾಟನಾ ಕಾರ್ಯಕ್ರಮಕ್ಕೆ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರನ್ನು ಆಹ್ವಾನಿಸಲಾಯಿತು. ಮೈಸೂರು ಉದ್ಯಾನ ಕಲಾಸಂಘದ ಉಪಾಧ್ಯಕ್ಷ ವಾಸುದೇವ್, ತೋಟಗಾರಿಕೆ ಜಂಟಿ ನಿರ್ದೇಶಕ ಡಾ. ಎಂ. ಜಗದೀಶ್ ಹಾಗೂ ಲಾಲ್‌ಬಾಗ್ ತೋಟಗಾರಿಕೆ ಉಪನಿರ್ದೇಶಕಿ ಜಿ. ಕುಸುಮ ಇದ್ದರು

ಫಲಪುಷ್ಪ ಪ್ರದರ್ಶನ: ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿಗೆ ಆಹ್ವಾನ

ಬೆಂಗಳೂರು: ಲಾಲ್‌ಬಾಗ್‌ನಲ್ಲಿ ಆ.5ರಿಂದ ನಡೆಯಲಿರುವ ಫಲಪುಷ್ಪ ಪ್ರದರ್ಶನಕ್ಕೆ ನಟ ರಾಘವೇಂದ್ರ ರಾಜ್‌ಕುಮಾರ್ ಹಾಗೂ ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರನ್ನು ತೋಟಗಾರಿಕೆ ಇಲಾಖೆಯವರು ಆಹ್ವಾನಿಸಿದರು.

212ನೇ ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನದಲ್ಲಿ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರ ವಿಷಯ ಆಧರಿತ ವಿಶೇಷ ಫಲಪುಷ್ಪ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ. ಆ.5ರಂದು ಫಲಪುಷ್ಪ ಪ್ರದರ್ಶನವು ಉದ್ಘಾಟನೆಗೊಳ್ಳಲಿದೆ. ರಾಘವೇಂದ್ರ ರಾಜ್‌ಕುಮಾರ್ ಹಾಗೂ ಪುನೀತ್ ರಾಜ್‌ಕುಮಾರ್ ಅವರ ಪತ್ನಿ ಅಶ್ವಿನಿ ಪುನೀತ್ ಅವರನ್ನು ಭೇಟಿ ಮಾಡಿ ಸಲಹೆ ಹಾಗೂ ಮಾರ್ಗದರ್ಶನ ನೀಡಲು ವಿನಂತಿಸಲಾಯಿತು ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಡಾ.ಎಂ. ಜಗದೀಶ್ ಅವರು ತಿಳಿಸಿದರು.

ಲೋಕಾಯುಕ್ತ ನ್ಯಾಯಮೂರ್ತಿಗಳಿಂದ ಸ್ವಯಂ ಪ್ರೇರಿತ ಪ್ರಕರಣ ದಾಖಲು

ಉಪ ನೋಂದಣಿ ಕಚೇರಿಗಳಲ್ಲಿ ಅಕ್ರಮ: ಆರಂಭವಾದ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉಪ ನೋಂದಣಿ ಕಚೇರಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರ, ಮಧ್ಯವರ್ತಿಗಳ ಹಾವಳಿ, ಅಕ್ರಮವಾಗಿ ದಾಖಲೆಗಳ ನೋಂದಣಿ ಕುರಿತು ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ವಿಚಾರಣೆ ಆರಂಭಿಸಿದ್ದಾರೆ.

ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯಲ್ಲಿರುವ 43 ಉಪ ನೋಂದಣಿ ಕಚೇರಿಗಳಿಗೆ ದಿಢೀರ್ ಭೇಟಿನೀಡಿ ತಪಾಸಣೆ ನಡೆಸಿದ್ದ ಲೋಕಾಯುಕ್ತ ಪೊಲೀಸ್ ವಿಭಾಗದ ಅಧಿಕಾರಿಗಳು, ಅಲ್ಲಿ ಕಂಡುಬಂದ ಸಂಗತಿಗಳ ಕುರಿತು ಲೋಕಾಯುಕ್ತರಿಗೆ ವಿಸ್ತೃತವಾದ ವರದಿ ಸಲ್ಲಿಸಿದ್ದರು. ಈ ವರದಿಯನ್ನು ಆಧರಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಲಾಗಿದೆ.

ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ, ನೋಂದಣಿ ಮತ್ತು ಮುದ್ರಾಂಕ ಇಲಾಖೆ ಆಯುಕ್ತರು, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯ ಐದು ಜಿಲ್ಲಾ ನೋಂದಣಾಧಿಕಾರಿಗಳು, 43 ಉಪ ನೋಂದಣಾಧಿಕಾರಿಗಳು ಮತ್ತು ಕೆಲವು ನೋಂದಣಿ ಕಚೇರಿಗಳ ಸಿಬ್ಬಂದಿ ಸೇರಿದಂತೆ 51 ಮಂದಿಯನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಆರೋಪಗಳ ಕುರಿತು ಸೆಪ್ಟೆಂಬರ್ 6ರೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಎಲ್ಲ ಪ್ರತಿವಾದಿಗಳಿಗೂ ನೋಟಿಸ್ ಜಾರಿಗೊಳಿಸಲಾಗಿದೆ.

'ಬಹುತೇಕ ಉಪ ನೋಂದಣಿ ಕಚೇರಿಗಳಲ್ಲಿ ಮಧ್ಯವರ್ತಿಗಳು ಹಾಜರಿದ್ದರು. ಅವರು ಅಲ್ಲಿ ಏಕೆ ಇದ್ದರು ಎಂಬ ಪ್ರಶ್ನೆಗೆ ಅಧಿಕಾರಿಗಳಿಂದ ಸಮಂಜಸವಾದ ಉತ್ತರ ದೊರಕಿಲ್ಲ. ಹಲವು ಕಚೇರಿಗಳಲ್ಲಿ ಮಧ್ಯವರ್ತಿಗಳ ಬಳಿ ಹಲವು ದಸ್ತಾವೇಜುಗಳು ಪತ್ತೆಯಾಗಿವೆ. ಮಾದನಾಯಕನಹಳ್ಳಿ, ಶ್ರೀರಾಂಪುರ, ಲಗ್ಗೆರೆ ಸೇರಿದಂತೆ ಹಲವು ನೋಂದಣಿ ಕಚೇರಿಗಳಲ್ಲಿ ಸರಿಯಾದ ದಾಖಲೆಗಳಿಲ್ಲದೆ ಕಂದಾಯ ನಿವೇಶನಗಳನ್ನು ನೋಂದಣಿ ಮಾಡುತ್ತಿರುವುದು ಪತ್ತೆಯಾಗಿದೆ' ಎಂದು ಲೋಕಾಯುಕ್ತ ಪೊಲೀಸರು ವರದಿಯಲ್ಲಿ ತಿಳಿಸಿದ್ದರು.

'ಹೆಚ್ಚಿನ ಕಚೇರಿಗಳಲ್ಲಿ ಹಾಜರಾತಿ ವಹಿ ನಿರ್ವಹಿಸುತ್ತಿಲ್ಲ. ನಗದು ಘೋಷಣಾ ಕಡತದಲ್ಲಿ ಕಾಟಾಚಾರಕ್ಕೆ ದಾಖಲಿಸಲಾಗುತ್ತಿದೆ. ಅಧಿಕಾರಿಗಳು ಮತ್ತು ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗುವ ಮತ್ತು ನಿರ್ಗಮಿಸುವ ಕುರಿತು ನಿಗಾ ಇಡುವ ವ್ಯವಸ್ಥೆಯೇ ಇಲ್ಲ. ಸಿಸಿಟಿವಿ ಕ್ಯಾಮೆರಾಗಳು ಕಾರ್ಯನಿರ್ವಹಿಸುತ್ತಿಲ್ಲ. ದಲ್ಲಾಳಿಗಳು ಏಕಕಾಲಕ್ಕೆ ಹಲವು ಕಡತಗಳನ್ನು ತಂದು ನೋಂದಣಿ ಮಾಡಿಸುತ್ತಿರುವುದು ಕಂಡುಬಂದಿದೆ' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಅರ್ಜಿದಾರರ ಬದಲಿಗೆ ದಲ್ಲಾಳಿಗಳೇ ದಸ್ತಾವೇಜುಗಳನ್ನು ನೋಂದಣಿ ಮಾಡುತ್ತಿರುವ ಹಲವು ಪ್ರಕರಣಗಳು ಪತ್ತೆಯಾಗಿವೆ. ನೋಂದಣಿಗೆ ಸಂಬಂಧಿಸಿದ ದಾಖಲೆಗಳನ್ನು ಪಡೆಯುವ ಕೆಲಸವನ್ನೂ ದಲ್ಲಾಳಿಗಳ ಮೂಲಕವೇ ನಿರ್ವಹಿಸುತ್ತಿರುವುದು ಕಂಡುಬಂದಿದೆ. ಸಾಮಾನ್ಯ ಜನರಿಗೆ ಈ ಕಚೇರಿಗಳಲ್ಲಿ ಸುಲಭವಾಗಿ ಸರ್ಕಾರಿ ಸೇವೆ ದೊರಕುತ್ತಿಲ್ಲ ಎಂದು ಪೊಲೀಸ್ ಅಧಿಕಾರಿಗಳು ವರದಿ ನೀಡಿದ್ದರು.

'ಸ್ಥಿರಾಸ್ತಿ ನೋಂದಣಿಗೆ ₹1 ಲಕ್ಷ ಲಂಚ!'

'ಹೊರಲವಯದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿರುವ ಸ್ಥಿರಾಸ್ತಿಗಳ ನೋಂದಣಿಗೆ ₹ 1 ಲಕ್ಷದವರೆಗೂ ಲಂಚ ಪಡೆಯುತ್ತಿರುವುದು ತಪಾಸಣೆ ವೇಳೆ ಕಂಡುಬಂದಿದೆ. ನೋಂದಣಿ ಕೆಲಸಕ್ಕಾಗಿ ಕಚೇರಿಗೆ ಬಂದಿದ್ದ ಹಲವರು ನೇರವಾಗಿ ಈ ರೀತಿ ದೂರಿದ್ದಾರೆ' ಎಂದು ಲೋಕಾಯುಕ್ತ ಪೊಲೀಸರು ವರದಿಯಲ್ಲಿ ಉಲ್ಲೇಖಿಸಿದ್ದಾರೆ.



ಇಂದಿನಿಂದ ಕವಿ ಎಚ್.ಎಸ್. ಶಿವಪ್ರಕಾಶ್ ಉಪನ್ಯಾಸ



ಬೆಂಗಳೂರು: ದೊಮ್ಮಲೂರಿನಲ್ಲಿರುವ ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ (ಬಿಐಸಿ) ತನ್ನ ಕೇಂದ್ರದಲ್ಲಿ ಭಾರತೀಯ ಭಕ್ತಿ ಮತ್ತು ಸಿದ್ಧ ಸಂಪ್ರದಾಯಗಳ ಸಂದರ್ಭದಲ್ಲಿ ವಚನಗಳ ಪಾತ್ರದ ಬಗ್ಗೆ ಕವಿ ಎಚ್. ಎಸ್. ಶಿವಪ್ರಕಾಶ್ ಅವರಿಂದ ಸರಣಿ ಉಪನ್ಯಾಸ ಹಮ್ಮಿಕೊಂಡಿದೆ.

'ವಚನಗಳಲ್ಲಿ ಹಸ್ತ, ಹೃದಯ ಹಾಗೂ ಶೂನ್ಯ ಸಂಪಾದನೆಯ ಪಥಗಳು' ಶೀರ್ಷಿಕೆಯಡಿ ಹಮ್ಮಿಕೊಂಡಿರುವ ಈ ಉಪನ್ಯಾಸ ಸರಣಿಗೆ ಬುಧವಾರ ಸಂಜೆ 6.30ಕ್ಕೆ ಚಾಲನೆ ಸಿಗಲಿದೆ. ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ವಚನಗಳ ಪ್ರಸ್ತುತತೆ ಬಗ್ಗೆ ಪ್ರಥಮ ಉಪನ್ಯಾಸ ಕೇಂದ್ರೀಕೃತವಾಗಿದೆ.

ಇದೇ 25ಕ್ಕೆ ಎರಡನೇ ಉಪನ್ಯಾಸ ಹಮ್ಮಿಕೊಳ್ಳಲಾಗಿದ್ದು, ವಚನಕಾರರ ಕೊಡುಗೆಗಳ ಕಡೆಗಣನೆ ಹಾಗೂ ವಚನ ವೈವಿಧ್ಯದ ಬಗ್ಗೆ ಬೆಳಕು ಚೆಲ್ಲಲಾಗುತ್ತದೆ. ಆ.6ರಂದು ಮೂರನೇ ಉಪನ್ಯಾಸ ಏರ್ಪಡಿಸಲಾಗಿದೆ. ಭಕ್ತಿ ಚಳವಳಿ ಮತ್ತು ವಚನ ಚಳವಳಿ ನಡುವಿನ ಹೋಲಿಕೆ ಹಾಗೂ ಭಿನ್ನತೆ ಬಗ್ಗೆ ಅದರಲ್ಲಿ ತಿಳಿಸಲಾಗುತ್ತದೆ. ಆ.7ರಂದು ಕೊನೆಯ ಉಪನ್ಯಾಸ ನಡೆಯಲಿದ್ದು, ವಚನಕಾರರಲ್ಲಿನ ತತ್ವಶಾಸ್ತ್ರ, ಕಾವ್ಯದ ವಿಷಯದಲ್ಲಿ ಸಿದ್ಧ ಮತ್ತು ನಿರ್ಗುಣ ಕವಿಗಳನ್ನು ತೌಲನಿಕವಾಗಿ ಚರ್ಚಿಸಲಾಗುತ್ತದೆ.

ವಚನಗಳನ್ನು ಹೊಸ ಆಯಾಮದಿಂದ ನೋಡುವ ಪ್ರಯತ್ನ ಇದಾಗಿದೆ. ಎಲ್ಲ ಉಪನ್ಯಾಸಗಳು ಸಂಜೆ 6.30ರಿಂದ ಪ್ರಾರಂಭವಾಗಲಿವೆ ಎಂದು ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ನಿರ್ವಹಣೆ ಕಾರ್ಯ ಕೈಗೊಂಡಿರುವುದರಿಂದ ಜುಲೈ 20ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 4ರವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಥಳಗಳು: ಕೃಷ್ಣಾನಂದ ನಗರ, ಆರ್‌ಎಂಸಿ ಯಾರ್ಡ್, ಮಾರಪ್ಪನ ಪಾಳ್ಯ, ಯಶವಂತಪುರ ಕೈಗಾರಿಕೆ ಪ್ರದೇಶ, ಟೆಲಿಫೋನ್ ಎಕ್ಸ್‌ಚೇಂಜ್, ಶಂಕರ್ ನಗರ, ಸೋಮೇಶ್ವರ ನಗರ, ಮಹಾಲಕ್ಷ್ಮಿ ಲೇಔಟ್, ಗಣೇಶ್ ಬ್ಲಾಕ್, ಆಂಜನೇಯ ದೇವಸ್ಥಾನ ರಸ್ತೆ, ಸರಸ್ವತಿಪುರ, ಪರಿಮಳ ನಗರ, ಗೊರಗುಂಟೆ ಪಾಳ್ಯ, ಶ್ರೀನಿವಾಸ ನಗರ, ಜೈಮಾರುತಿ ನಗರ, ರವಿ ಬಡಾವಣೆ, ಸಾಕಮ್ಮ ಬಡಾವಣೆ, ಜೆ.ಸಿ. ನಗರ, ಕುರುಬರಹಳ್ಳಿ, ರಾಜಕುಮಾರ ಸಮಾಧಿ ರಸ್ತೆ ಸುತ್ತಮುತ್ತಲಿನ ಪ್ರದೇಶಗಳು.

ಕ್ಯಾನ್ಸರ್ ಗೆದ್ದ ಮಹಿಳೆಯಿಂದ ಚಾರಣ

ಎಂಟು ತಿಂಗಳ ಚಿಕಿತ್ಸೆಯಿಂದ ಸಹಜ ಜೀವನಕ್ಕೆ ಮರಳಿದ ಅರ್ಚನಾ ಹೊಸಂಗಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕ್ಯಾನ್ಸರ್ ಕಾಯಿಲೆ ಆತ್ಮವಿಶ್ವಾಸವನ್ನು ಕುಗ್ಗಿಸಿತ್ತು. ರೋಗದ ಕಣಗಳು ನಾಶವಾದ ಬಳಿಕ ನನ್ನಲ್ಲಿನ ಛಲ ಮತ್ತು ಆಶಾವಾದ ಹೊಸ ಸವಾಲುಗಳಿಗೆ ತೆರೆದುಕೊಳ್ಳುವಂತೆ ಪ್ರೇರೇಪಿಸಿ, ಸಹಜ ಜೀವನಕ್ಕೆ ಮರಳಿಸಿತು. ಇದರಿಂದಾಗಿ 11,830 ಅಡಿ ಎತ್ತರದ ದಯಾರಾ ಬುಗ್ಯಾಲ್ ಚಾರಣ ಸಾಧ್ಯವಾಯಿತು.'

ಬೆಂಗಳೂರಿನ ಮಲ್ಲೇಶ್ವರದ ಅರ್ಚನಾ ಹೊಸಂಗಡಿ ಅವರ ಮನದಾಳದ ಮಾತುಗಳಿವು. ಕಾನ್ಸರ್ ಜಯಿಸಿದ ಅವರಿಗೀಗ 51 ವರ್ಷ. 2019ರ ಮೇ ತಿಂಗಳಲ್ಲಿ ಸ್ತನ ಕ್ಯಾನ್ಸರ್‌ಗೆ ಒಳಗಾಗಿದ್ದ ಅರ್ಚನಾ, ಅಪೋಲೊ ಆಸ್ಪತ್ರೆಗೆ ದಾಖಲಾಗಿದ್ದರು. ಅವರಿಗೆ 2ನೇ ಹಂತದ 'ಟ್ರಿಪಲ್ ನೆಗೆಟಿವ್ ಸ್ತನ ಕ್ಯಾನ್ಸರ್' ಇರುವುದನ್ನು ದೃಢಪಡಿಸಿದ ವೈದ್ಯರು, ಕಿಮೋಥೆರಪಿ ನೀಡಿದ್ದರು. 8 ತಿಂಗಳ ಸುದೀರ್ಘ ಚಿಕಿತ್ಸೆಯಿಂದ ಅವರು ಕ್ಯಾನ್ಸರ್ ಜಯಿಸಿದ್ದಾರೆ. ಈ ರೋಗ ಬಂದಲ್ಲಿ ಜೀವನ ಅಂತ್ಯವಲ್ಲ ಎಂಬ ಸಂದೇಶ ಸಾರಲು ಉತ್ತರಾಖಂಡದಲ್ಲಿ 5 ದಿನಗಳ ಚಾರಣ ನಡೆಸಿ, ಮರಳಿದ್ದಾರೆ. ವೃತ್ತಿಯಲ್ಲಿ ಬ್ಯಾಂಕ್ ಉದ್ಯೋಗಿ ಆಗಿರುವ ಅವರು, ಈಗ ಕೆಲಸಕ್ಕೆ ಮರಳಿದ್ದಾರೆ.

'ಮೂರು ವರ್ಷಗಳ ಹಿಂದೆ ಸ್ತನದ ಭಾಗದಲ್ಲಿ ಗಡ್ಡೆ ಬೆಳೆದಿರುವುದು ಅನುಭವಕ್ಕೆ ಬಂದಿತು. ಕುಟುಂಬ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಂಡಾಗ, ಕ್ಯಾನ್ಸರ್ ಬಗ್ಗೆ ಸಂದೇಹ ವ್ಯಕ್ತಪಡಿಸಿ, ಹೆಚ್ಚಿನ ಪರೀಕ್ಷೆಗೆ ಶಿಫಾರಸು ಮಾಡಿದರು. ಅಪೋಲೊ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆದುಕೊಂಡೆ. ಮಾನಸಿಕವಾಗಿ ಸದೃಢಗೊಂಡಿದ್ದರಿಂದ ಚಿಕಿತ್ಸೆ ಪೂರ್ಣಗೊಂಡ ಎರಡು ತಿಂಗಳಲ್ಲಿ ಸಹಜ ಸ್ಥಿತಿಗೆ ಮರಳಿ, ಆರು ತಿಂಗಳ ಬಳಿಕ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯವಾಯಿತು' ಎಂದು ಅಪೋಲೊ ಆಸ್ಪತ್ರೆ ಮಂಗಳವಾರ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಅರ್ಚನಾ ವಿವರಿಸಿದರು.

'ಚಾರಣ ಮಾಡಬೇಕು ಎಂಬ ಕನಸು ಮೊದಲಿನಿಂದ ಇತ್ತು. ಕ್ಯಾನ್ಸರ್ ಜಯಿಸಿದ ಏಳು ಮಂದಿಯ ಜತೆಗೆ ಹೆಜ್ಜೆ ಹಾಕಿದೆ. ರೋಗ ಕಾಣಿಸಿಕೊಂಡಾಗ ಹಾಗೂ ಚಾರಣ ಕೈಗೊಂಡಾಗ ಕುಟುಂಬದಿಂದ ಉತ್ತಮ ಪ್ರೋತ್ಸಾಹ ಸಿಕ್ಕಿತು. ಕ್ಯಾನ್ಸರ್ ಪೀಡಿತರಾದರೆ ಜೀವನ ಅಂತ್ಯವಲ್ಲ. ರೋಗ ವಾಸಿಯಾದ ಬಳಿಕ ಮೊದಲಿನಂತೆ ಜೀವನ ನಡೆಸಲು ಸಾಧ್ಯ' ಎಂದು ತಿಳಿಸಿದರು.

'ಬಹುತೇಕ ಮಹಿಳೆಯರು ತಮ್ಮ ಆರೋಗ್ಯ ಕಡೆಗಣಿಸುತ್ತಾರೆ. ಇದರಿಂದ ಸಮಸ್ಯೆ ಉಲ್ಬಣವಾಗಿ, ಜೀವಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮಹಿಳೆಯರು ತಮ್ಮನ್ನು ತಾವೇ ಆಗಾಗ ಪರೀಕ್ಷೆಗೆ ಒಳಪಡಿಸಿಕೊಂಡು, ಸಮಸ್ಯೆ ಇದ್ದಲ್ಲಿ ಚಿಕಿತ್ಸೆ ಪಡೆದುಕೊಳ್ಳಬೇಕು' ಎಂದರು.



ಅರ್ಚನಾ ಹೊಸಂಗಡಿ (ಎಡದಿಂದ ಮೂರನೆಯವರು) ಜತೆಗೆ ಅಪೋಲೊ ಆಸ್ಪತ್ರೆ ವೈದ್ಯರಾದ ಡಾ. ರಾಣಿ ಅಖಿಲ್ ಭಟ್, ಡಾ. ಜಯಂತಿ ತುಮ್ಸಿ ಹಾಗೂ ಡಾ. ಮನೀಶ್ ಮಟ್ಟು ಇದ್ದಾರೆ

ಕ್ಯಾನ್ಸರ್ ಗುಣಪಡಿಸಬಹುದಾದ ಕಾಯಿಲೆಯಾಗಿದೆ. ಆರಂಭಿಕ ಹಂತದಲ್ಲಿಯೆ ರೋಗ ನಿರ್ಣಯಿಸಿ, ಚಿಕಿತ್ಸೆ ನೀಡಬೇಕು. ಕ್ಯಾನ್ಸರ್ ಬಗ್ಗೆ ಶಿಕ್ಷಣ, ಜಾಗೃತಿ ಅಗತ್ಯ

ಡಾ. ಜಯಂತಿ ತುಮ್ಸಿ, ಅಪೋಲೊ ಆಸ್ಪತ್ರೆ ಕ್ಯಾನ್ಸರ್ ತಜ್ಞೆ

ಎಂಟು ಮಂದಿ ಚಾರಣದಲ್ಲಿ ಭಾಗಿ

'ಅಪೋಲೊ ಕ್ಯಾನ್ಸರ್ ಕೇಂದ್ರವು 'ಕ್ಯಾನ್ಸರ್ ನಂತರದ ಜೀವನ' ಎಂಬ ಕಾರ್ಯಕ್ರಮದಡಿ 'ಉತ್ತುಂಗದ ಶಿಖರವೇರಿ ಕ್ಯಾನ್ಸರ್ ಜಯಿಸಿ' ಎಂಬ ಉಪಕ್ರಮ ರೂಪಿಸಿದೆ. ಕ್ಯಾನ್ಸರ್ ಚಿಕಿತ್ಸೆಯ ನಂತರ ಸಕಾರಾತ್ಮಕ ಜೀವನದ ಬಗ್ಗೆ ಜಾಗೃತಿ ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ. 2022ರ ಜೂನ್ ತಿಂಗಳಲ್ಲಿ ಚಾರಣ ನಡೆಸಲಾಗಿತ್ತು. ಅರ್ಚನಾ ಸೇರಿದಂತೆ ಕ್ಯಾನ್ಸರ್‌ನಿಂದ ಗುಣಮುಖರಾದ ದೇಶದ ವಿವಿಧ ಭಾಗಗಳ ಎಂಟು ಮಂದಿ ಚಾರಣದಲ್ಲಿ ಪಾಲ್ಗೊಂಡಿದ್ದರು' ಎಂದು ಅಪೋಲೊ ಆಸ್ಪತ್ರೆ ಕ್ಯಾನ್ಸರ್ ತಜ್ಞೆ ಡಾ. ರಾಣಿ ಅಖಿಲ್ ಭಟ್ ತಿಳಿಸಿದರು.

'ನಾನೂ ಸೇರಿ ಇಬ್ಬರು ವೈದ್ಯರು ಚಾರಣದ ಭಾಗವಾಗಿದ್ದೆವು. ಇಬ್ಬರು ಶುಶ್ರೂಷಕರನ್ನು ಕರೆದೊಯ್ಯಲಾಗಿತ್ತು. ಆಂಬುಲೆನ್ಸ್ ಕೂಡ ಇತ್ತು. ಕ್ಯಾನ್ಸರ್ ಗೆದ್ದವರ ಜತೆಗಿನ ಚಾರಣ ರೋಮಾಂಚನಕಾರಿಯಾಗಿತ್ತು' ಎಂದು ವಿವರಿಸಿದರು.

51 ವರ್ಷದ ವ್ಯಕ್ತಿಗೆ ಯುವಕನ ಹೃದಯ

ಬೆಂಗಳೂರು: ಮಿದುಳು ನಿಷ್ಕ್ರಿಯಗೊಂಡಿದ್ದ ಚಿಕ್ಕಬಳ್ಳಾಪುರದ 35 ವರ್ಷದ ಯುವಕ, ಹೃದಯ ದಾನ ಮಾಡುವ ಮೂಲಕ ಗಂಭೀರ ಹೃದ್ರೋಗ ಸಮಸ್ಯೆ ಎದುರಿಸುತ್ತಿದ್ದ ತುಮಕೂರಿನ 51 ವರ್ಷದ ವ್ಯಕ್ತಿಗೆ ನೆರವಾಗಿದ್ದಾರೆ.

ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದ ಯುವಕ, ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದರು. ಸೋಮವಾರ ಮಧ್ಯಾಹ್ನ 3 ಗಂಟೆ ವೇಳೆಗೆ ವೈದ್ಯರು ಮಿದುಳು ನಿಷ್ಕ್ರಿಯಗೊಂಡಿರುವುದಾಗಿ ಘೋಷಿಸಿದರು. ಕುಟುಂಬದವರು ಅಂಗಾಗ ದಾನಕ್ಕೆ ಸಮ್ಮತಿ ನೀಡಿದ್ದರಿಂದ ಹಸಿರು ಪಥದ ಮೂಲಕ ನ್ಯೂ ಬಿಇಎಲ್ ರಸ್ತೆಯಲ್ಲಿರುವ ರಾಮಯ್ಯ ನಾರಾಯಣ ಹೃದಯ ಕೇಂದ್ರಕ್ಕೆ ಹೃದಯ ಸಾಗಿಸಲಾಯಿತು. 13 ಕಿ.ಮೀ. ದೂರವನ್ನು 17 ನಿಮಿಷಗಳಲ್ಲಿ ಕ್ರಮಿಸಿ, ಹೃದ್ರೋಗಿಗೆ ಮಂಗಳವಾರ ಬೆಳಿಗ್ಗೆ ಕಸಿ ನಡೆಸಲಾಯಿತು.

51 ವರ್ಷದ ರೋಗಿಯು 10 ವರ್ಷಗಳಿಂದ ರಾಮಯ್ಯ ನಾರಾಯಣ ಹೃದಯ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆರೋಗ್ಯ ಸುಧಾರಿಸಲು ಕಸಿ ಕೊನೆಯ ಆಯ್ಕೆ ಎಂದು ವೈದ್ಯರು ಸೂಚಿಸಿದ್ದರು. ಹೃದಯಕ್ಕಾಗಿ ಜೀವಸಾರ್ಥಕತೆ ಯೋಜನೆಯಡಿ 2022ರ ಏಪ್ರಿಲ್‌ನಲ್ಲಿ ಹೆಸರು ನೋಂದಾಯಿಸಿಕೊಂಡಿದ್ದರು. ಮೂರು ತಿಂಗಳಲ್ಲಿ ಹೊಂದಿಕೆಯಾಗುವ ಹೃದಯ ದೊರೆತಿದೆ ಎಂದು ಪ್ರಕಟಣೆ ತಿಳಿಸಿದೆ.

22ರಂದು ಉದಯಭಾನು ಸುವರ್ಣ ಮಹೋತ್ಸವ ಸ್ಮಾರಕ ಭವನದ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 22ರಂದು ಉದಯಭಾನು ಸುವರ್ಣ ಮಹೋತ್ಸವದ ಸ್ಮಾರಕ ಭವನ ಉದ್ಘಾಟನೆಗೊಳ್ಳಲಿದ್ದು, ಅದೇ ದಿನ 'ಕರ್ನಾಟಕ ವಿಜ್ಞಾನ ತಂತ್ರಜ್ಞಾನ ದರ್ಶನ' ಎಂಬ ಎರಡು ಸಂಪುಟಗಳನ್ನು ಕೆಂಪೇಗೌಡನಗರದಲ್ಲಿರುವ ಉದಯಭಾನು ಸಾಂಸ್ಕೃತಿಕ ಭವನದಲ್ಲಿ ಬಿಡುಗಡೆ ಮಾಡಲಾಗುವುದು.


ಉದಯಭಾನು ಉನ್ನತ ಅಧ್ಯಯನ ಕೇಂದ್ರದ ವತಿಯಿಂದ 'ಕರ್ನಾಟಕ ವಿಜ್ಞಾನ ತಂತ್ರಜ್ಞಾನ ದರ್ಶನ' ಎಂಬ 1600 ಪುಟಗಳ ಎರಡು ಸಂಪುಟಗಳಲ್ಲಿ ಕರ್ನಾಟಕದ ವೈಜ್ಞಾನಿಕ ಮತ್ತು ತಾಂತ್ರಿಕ ಪರಂಪರೆಯ ಮಾಹಿತಿಯನ್ನು ಕನ್ನಡ ಭಾಷೆಯಲ್ಲಿ ಲಭ್ಯವಾಗುವಂತೆ ಮಾಡುವುದು ಉದ್ದೇಶ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮವನ್ನು ಉದ್ಘಾಟನೆ ಮಾಡಲಿದ್ದಾರೆ ಎಂದು ಸಂಘದ ಅಧ್ಯಕ್ಷ ಶ್ರೀರಾಮೇಗೌಡ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಪುಟಗಳು ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ, ಜೀವವಿಜ್ಞಾನ, ವೈದ್ಯಕೀಯ, ವೈಮಾನಿಕ ವಿಜ್ಞಾನ ಮತ್ತು ತಂತ್ರಜ್ಞಾನ, ಕಂಪ್ಯೂಟರ್, ಭೂವಿಜ್ಞಾನಕ್ಕೆ ಸಂಬಂಧಿಸಿದ ಮಹತ್ವದ ಮಾಹಿತಿಗಳನ್ನು ಒಳಗೊಂಡಿವೆ. 57 ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳು ಬರೆದಿರುವ ಲೇಖನಗಳಿವೆ ಎಂದು ಸಂಪುಟದ ಪ್ರಧಾನ ಸಂಪಾದಕ ಎಂ. ಎಸ್. ಸುರೇಶ್ ತಿಳಿಸಿದರು.



ನಿಧನ ವಾರ್ತೆ

ಎ.ಎನ್. ಮುಕುಂದ



ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ (ಕೆಪಿಟಿಸಿಎಲ್) ನಿವೃತ್ತ ಎಂಜಿನಿಯರ್ ಹಾಗೂ ಸಾಹಿತಿಗಳ ವಿಶಿಷ್ಟ ಫೋಟೊಗಳನ್ನು ತೆಗೆದು ಹೆಸರು ಮಾಡಿದ್ದ ಎ.ಎನ್. ಮುಕುಂದ (67) ಮಂಗಳವಾರ ನಿಧನರಾದರು.

ದಾವಣಗೆರೆ ಜಿಲ್ಲೆಯ ಹರಿಹರದಲ್ಲಿ ಜನಿಸಿದ್ದ ಮುಕುಂದ, ಕೆಪಿಟಿಸಿಎಲ್‌ನಲ್ಲಿ 30 ವರ್ಷ ಕೆಲಸ ಮಾಡಿದ್ದರು. 2008ರಲ್ಲಿ ಸ್ವಯಂ ನಿವೃತ್ತಿ ಪಡೆದು, ಬೆಂಗಳೂರಿನ ಹುಳಿಮಾವು ಪ್ರದೇಶದಲ್ಲಿ ನೆಲೆಸಿದ್ದರು. ಇವರಿಗೆ ಪತ್ನಿ ಹಾಗೂ ಮಗ ಇದ್ದಾರೆ.

ಮುಕುಂದ ಅವರು ಸಾಹಿತ್ಯ ಕ್ಷೇತ್ರದ 50 ಲೇಖಕರ ಭಾವಚಿತ್ರ ಹಾಗೂ ವಿವರವುಳ್ಳ 'ಮುಖಮುದ್ರೆ' ಕೃತಿ ಹೊರತಂದಿದ್ದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಐಸಿಎಸ್‌ಇ: ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ



ಅರುಣ್

ಬೆಂಗಳೂರು: ಐಸಿಎಸ್‌ಇ ಪರೀಕ್ಷೆಯಲ್ಲಿ ನಗರದ ಗೋಪಾಲನ್ ಇಂಟರ್‌ನ್ಯಾಷನಲ್ ಸ್ಕೂಲ್‌ನ 10ನೇ ತರಗತಿಯ ವಿದ್ಯಾರ್ಥಿ ಅರುಣ್ ರಾಧಾಕೃಷ್ಣನ್ ಶೇ 98.6 ಅಂಕ ಗಳಿಸಿದ್ದಾನೆ.

'ಅರುಣ್ ಅಧ್ಯಯನಶೀಲ ವಿದ್ಯಾರ್ಥಿಗಳಲ್ಲಿ ಒಬ್ಬ. ಕಳೆದ ವರ್ಷ ಮೈಕ್ರೋಸಾಫ್ಟ್ ಇನೋವೇಟರ್ಸ್ ಪರೀಕ್ಷೆಯಲ್ಲೂ ಮೊದಲ ರ್‍ಯಾಂಕ್ ಪಡೆದು ಉತ್ತಮ ಸಾಧನೆ ಮಾಡಿದ್ದ'ಎಂದು ಜಿಐಎಸ್ ಪ್ರಾಂಶುಪಾಲರಾದ ಸೀತಾ ಶಂಕರ್ ತಿಳಿಸಿದ್ದಾರೆ.



ನಾಗಳ್ಳಿ ಚೇತನ್

ನಾಗಳ್ಳಿ ಚೇತನ್‌ಗೆ ಶೇ 99.44ರಷ್ಟು ಅಂಕ: ಕ್ರೈಸ್ಟ್ ಶಾಲೆ ವಿದ್ಯಾರ್ಥಿ ನಾಗಳ್ಳಿ ಚೇತನ್ ಐಸಿಎಸ್‌ಇ ಪರೀಕ್ಷೆಯಲ್ಲಿ ಶೇ 99.40ರಷ್ಟು ಅಂಕ ಗಳಿಸಿದ್ದಾನೆ. ರಾಷ್ಟ್ರೀಯ ಮಟ್ಟದಲ್ಲಿ ತೃತೀಯ ಹಾಗೂ ರಾಜ್ಯಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾನೆಎಂದುಪ್ರಾಂಶುಪಾಲನೀಲ್ಸನ್‌ಡೇವಿಸ್‌ತಿಳಿಸಿದ್ದಾರೆ.

ನಗರದಲ್ಲಿ ಇಂದು

ಅಂತರ ಕಾಲೇಜು ಸಾಂಸ್ಕೃತಿಕ ಉತ್ಸವ: ಆಯೋಜನೆ ಮತ್ತು ಸ್ಥಳ: ಸಿಂಧಿ ಕಾಲೇಜು, ಹೆಬ್ಬಾಳ ಕೆಂಪಾಪುರ, ಬೆಳಿಗ್ಗೆ 10

ಅಂತರರಾಷ್ಟ್ರೀಯ ಚಂದ್ರ ದಿನಾಚರಣೆ: ಉದ್ಘಾಟನೆ: ಎ.ಎಸ್. ಕಿರಣ್ ಕುಮಾರ್, 'ಚಂದ್ರನ ಅಂಗಳದಲ್ಲಿ' ಉಪನ್ಯಾಸ: ಎಚ್.ಆರ್. ಮಧುಸೂದನ್, ಆಯೋಜನೆ ಮತ್ತು ಸ್ಥಳ: ಜವಾಹರ್ ಲಾಲ್ ನೆಹರೂ ತಾರಾಲಯ, ಬೆಳಿಗ್ಗೆ 10.30


ಬಿ.ಎಂ. ಶ್ರೀನಿವಾಸಯ್ಯ ಸ್ಮಾರಕ 7ನೇ ರಾಷ್ಟ್ರೀಯ ಅಣಕು ನ್ಯಾಯಾಲಯದ ಸ್ಪರ್ಧೆ: ಅತಿಥಿಗಳು: ಎ.ವಿ. ಚಂದ್ರಶೇಖರ, ಬಿ.ಎಸ್. ರಾಗಿಣಿ ನಾರಾಯಣ, ಪಿ.ದಯಾನಂದ್ ಪೈ, ಅಧ್ಯಕ್ಷತೆ: ಅವಿರಾಮ್ ಶರ್ಮಾ, ರವಿ ವೆಂಕಟೇಸಂ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಕಾನೂನು ಕಾಲೇಜ್, ಬಸವನಗುಡಿ, ಸಂಜೆ 5.30

53ನೇ ಸಂಸ್ಥಾಪನಾ ದಿನಾಚರಣೆ: ಅತಿಥಿಗಳು: ಬಸವರಾಜ ಬೊಮ್ಮಾಯಿ, ವಿ. ಸುನೀಲ್ ಕುಮಾರ್, ಜಿ. ಕುಮಾರ್ ನಾಯಕ, ಎಂ.ಎಸ್. ಶ್ರೀಕರ್, ಎನ್. ಮಂಜುಳಾ, ಆಯೋಜನೆ: ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಸ್ಥಳ: ಡಾ. ಬಿ. ಆರ್. ಅಂಬೇಡ್ಕರ್ ಭವನ, ಮಿಲ್ಲರ್ ರಸ್ತೆ, ವಸಂತನಗರ, ಸಂಜೆ 5.45

ಸಂಗ್ರಹ ರಾಮಾಯಣ ಪ್ರವಚನ: ಪ್ರಸ್ತುತಿ: ಅಬ್ಬೂರು ಬದರಿ ಆಚಾರ್, ಭಜನೆ: ನಾಗರಬಾವಿಯ ಭಾರತಿ ಭಜನಾ ಮಂಡಳಿ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಶ್ರೀರಾಮಚಂದ್ರ ಸ್ವಾಮಿ ದೇವಸ್ಥಾನ, 4ನೇ ಮುಖ್ಯರಸ್ತೆ, ಶ್ರೀರಾಮಪುರ, ಸಂಜೆ 6

ವನ್ಯಜೀವಿ ಹಾಗೂ ಮಣ್ಣು ಸಂರಕ್ಷಣೆ ಕುರಿತು ಮ್ಯಾರಥಾನ್: ಅತಿಥಿಗಳು: ಕೃಪಾಕರ–ಸೇನಾನಿ, ತಾರಕ ಪೊನ್ನಪ್ಪ, ಆಯೋಜನೆ ಮತ್ತು ಸ್ಥಳ: ಕ್ರೈಸ್ಟ್ ಜೂನಿಯರ್ ಕಾಲೇಜು, ಕ್ರೈಸ್ಟ್ ವಿಶ್ವವಿದ್ಯಾಲಯದ ಆವರಣ, ಕೆಂಗೇರಿ, ಬೆಳಿಗ್ಗೆ 6.15





ಉನ್ನತ ಶಿಕ್ಷಣ ಕ್ಷೇತ್ರದ ಪದವಿ • ಸ್ನಾತಕೋತ್ತರ ಪದವಿ

ಅಭಿವೃದ್ಧಿಯ ಪಥದಲ್ಲಿ ವಿ. ಸೋಮಣ್ಣ

ಸಚಿವ ವಿ.ಸೋಮಣ್ಣನವರ ಹೆಜ್ಜೆಗುರುತುಗಳು ಆಸಕ್ತಿಕರ. ಮೂಲಸೌಕರ್ಯ, ರೈಲ್ವೆ ಹಾಗೂ ವಸತಿ ಕ್ಷೇತ್ರಗಳಲ್ಲಿ ಅವರು ಮಾಡಿರುವ ಕೆಲಸಗಳು ಗಮನಾರ್ಹ. ಅವರು ಛಾಪು ಮೂಡಿಸಿರುವ ಬಗೆಗೆ ಕೆಲಸಗಳೇ ಕನ್ನಡಿ ಹಿಡಿಯುತ್ತವೆ.



ಪ್ರಧಾನಿ ಮೋದಿ ಜತೆ ವಿ. ಸೋಮಣ್ಣ

ಡಾ.ರಾಜ್‌ಕುಮಾರ್ ವಾರ್ಡ್‌ನಲ್ಲಿನ ನಿರ್ಮಾಣ ಕಾಮಗಾರಿಗಳು

ಕ್ರೀಡಾಂಗಣದಲ್ಲಿ ಅಂತರರಾಷ್ಟ್ರೀಯಮಟ್ಟದ ರನ್ನಿಂಗ್ ಟ್ರ್ಯಾಕ್, ಪ್ರೇಕ್ಷಕರ ಗ್ಯಾಲರಿ ಹಾಗೂ ಸಿಟ್ಟಿಂಗ್ ವ್ಯವಸ್ಥೆ ರೂಪಿಸಲಾಗಿದೆ. ವಸತಿ ಹಾಗೂ ಮೂಲಭೂತ ಸಚಿವರಾದ ವಿ.ಸೋಮಣ್ಣನವರ ಕಾಳಜಿ ಹಾಗೂ ದೂರದೃಷ್ಟಿಯ ಫಲವಾಗಿ ಇಡೀ ನಗರದಲ್ಲೇ ವಿಶ್ವ ದರ್ಜೆಯ ಸೌಲಭ್ಯಗಳನ್ನು ಹೊಂದಿದ ಕೇಂದ್ರವಾಗಿ, ಕೆಲವೇ ದಿನಗಳಲ್ಲಿ ಸಾರ್ವಜನಿಕರಿಗೆ ಸಮರ್ಪಣೆಗೊಳ್ಳಲಿದೆ.

ಪೊಲೀಸ್ ಕಾಲೊನಿಯ ಅಧುನಿಕ ಸರ್ಕಾರಿ ಸಂಯುಕ್ತ ಪ್ರೌಢ ಶಾಲೆ ವಿದ್ಯಾರ್ಥಿಗಳ ಕಲಿಕೆಗೆ ಬೇಕಾದ ಎಲ್ಲ ಹೈಟೆಕ್ ಸೌಲಭ್ಯಗಳನ್ನು ಒಳಗೊಂಡ ಈ ವಿದ್ಯಾಕೇಂದ್ರದಲ್ಲಿ ಅತ್ಯಾಧುನಿಕ ವಾಚನಾಲಯ, ಮಕ್ಕಳಿಗೆ ಕಂಪ್ಯೂಟರ್ ಲ್ಯಾಬೋರೇಟರಿ ಮತ್ತು ಇತ್ಯಾದಿ ಆಧುನಿಕ ವ್ಯವಸ್ಥೆಗಳಿವೆ.

ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನ, 5ನೇ ಬ್ಲಾಕ್.

- ಶ್ರೀ ಮುನೇಶ್ವರ ದೇವಸ್ಥಾನ, ಬಟನ್ ಫ್ಯಾಕ್ಟರಿ, ಈ ಸಾರ್ವಜನಿಕ ಶೌಚಾಲಯ, ಪೊಲೀಸ್ ಠಾಣೆ, ಮಾಗಡಿ ರಸ್ತೆ
- ಸಮುದಾಯ ಭವನ ಕಂಠೀರವ ಕಾಲೊನಿ
- ಸರ್ಕಾರಿ ಪ್ರಾಥಮಿಕ ಶಾಲೆ ಕಟ್ಟಡ - ಪೊಲೀಸ್ ಕ್ವಾರ್ಟರ್ಸ್
- ಅಂಗನವಾಡಿ

ಪ್ರಗತಿಯಲ್ಲಿರುವ ಕಾಮಗಾರಿಗಳು

- ಅಂಬೇಡ್ಕರ್ ಸ್ಟೇಡಿಯಂ ನವೀಕರಣ.
- ವೆಸ್ಟ್ ಆಫ್ ಕಾರ್ಡ್‌ರೋಡ್‌-ಫ್ಲೈಓವರ್ ನಿರ್ಮಾಣ
- ಎಸ್‌ಡಬ್ಲ್ಯೂಡಿ ಹೊಸ ನೀರಿನ ಪೈಪ್ ಅಳವಡಿಕೆ
- ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ 35 ಮನೆಗಳ ನಿರ್ಮಾಣ, ಉತ್ತಮವಾಗಿರುವ ಶಾಲೆ
- ಮಾಗಡಿ ರಸ್ತೆ ಪೊಲೀಸ್ ಠಾಣೆ ಕಟ್ಟಡ ನವೀಕರಣ
- ಪೊಲೀಸ್ ಕಾಲೊನಿಯ ಅದುನಿಕ ಸರ್ಕಾರಿ ಸಂಯುಕ್ತ ಪ್ರೌಢ ಶಾಲೆ
- ಶ್ರೀ ಮುನೇಶ್ವರ ದೇವಸ್ಥಾನ, ಕಂಠೀರವ ಕಾಲೊನಿ, ರಾಜಾಜಿನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿ ಫ್ಲೈ ಓವರ್ ನಿರ್ಮಾಣ. ನಗರದ ಅತ್ಯಂತ ಹೆಚ್ಚಿನ ಸಂಖ್ಯೆಯ ವಾಹನ ಸವಾರರು ಪ್ರಯಾಣಿಸುವ ರಸ್ತೆ ಇದಾಗಿದ್ದು, ಮೈಸೂರು ರಸ್ತೆಯಿಂದ ಯಶವಂತಪುರಕ್ಕೆ ಸಂಪರ್ಕ ಕಲ್ಪಿಸುತ್ತದೆ. ಪ್ರಯಾಣದ ಸಮಯವನ್ನುಉಳಿಸಲು ಮತ್ತು ಸವಾರರ ಸುರಕ್ಷತೆ - ಹಿತದೃಷ್ಟಿಯಿಂದ ಈ ಬೃಹತ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಅಗ್ರಹಾರ ದಾಸರಹಳ್ಳಿ ವಾರ್ಡ್ ನಿರ್ಮಾಣ ಕಾಮಗಾರಿಗಳು:

- ಶ್ರೀಬಸವೇಶ್ವರ ಪುರ ಮತ್ತು ಬಸವವನ
- ಉದ್ಯಾನವನದಲ್ಲಿ ಅನುಭವ ಮಂಟಪ
- ಶ್ರೀಮುನೇಶ್ವರ ದೇವಸ್ಥಾನ, ಸುಭಾಷ್ ಚಂದ್ರ ಬೋಸ್ ಉದ್ಯಾನವನ.
- ಅಗ್ರಹಾರ ದಾಸರಹಳ್ಳಿ ಕ್ರೀಡಾಸೌಧ
- ನಂದನವನ ಉದ್ಯಾನವನ
- ಹುತ್ತದ ಪಾರ್ಕ್
- ಜನೌಷಧಿ ಕೇಂದ್ರ
- ಬಸ್ ಅಲ್ಟರ್‌ಗಳು
- ಸುಭಾಷ್ ಚಂದ್ರ ಬೋಸ್ ಪ್ರತಿಮೆ
- ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆ ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜು,
- 'ಸ್ವಾಮಿ ವಿವೇಕಾನಂದ ಉದ್ಯಾನವನ

ಬೆಂಗಳೂರಿನ ಮೊಟ್ಟಮೊದಲ 300 ಹಾಸಿಗೆಗಳ ಆಸ್ಪತ್ರೆ

ಈ ಹಿಂದೆ, ಕ್ಷೇತ್ರದ ಜನರು ಗಂಭೀರ ಆರೋಗ್ಯ ಸಮಸ್ಯೆಗಳ ಚಿಕಿತ್ಸೆಗೆ ದೂರದ ವಿಕ್ಟೋರಿಯಾ, ಬೌರಿಂಗ್ ಆಸ್ಪತ್ರೆ ತೆರಳಬೇಕಿತ್ತು. ಇಲ್ಲವೇ ಖಾಸಗಿ ಆಸ್ಪತ್ರೆಗಳಿಗೆ ಲಕ್ಷಾಂತರ ರೂಪಾಯಿ ಪಾವತಿಸಿ ಚಿಕಿತ್ಸೆ ಪಡೆಯಬೇಕಿತ್ತು. ಕ್ಷೇತ್ರದ ಜನರಿಗೆ ತಮ್ಮ ಸಮೀಪವೇ ಅತ್ಯಾಧುನಿಕ ಸಕಲ ರೋಗಗಳ ಚಿಕಿತ್ಸೆಗೆ ಅನುವಾಗುವಂತೆ 4 ಅಂತಸ್ತಿನ ಕಟ್ಟಡದಲ್ಲಿ 300 ಹಾಸಿಗೆಗಳ ಸಾಮರ್ಥ್ಯದ ಬೃಹತ್ ಅತ್ಯಾಧುನಿಕ ಆಸ್ಪತ್ರೆ ಉದ್ಘಾಟನೆಗೆ ಸಜ್ಜಾಗಿ ನಿಂತಿದೆ.

ಎಲ್ಲಾ ವರ್ಗದ ಜನರ ಆರೋಗ್ಯ, ಕ್ರೀಡಾಸಕ್ತಿಗೆ ಅನುಕೂಲವಾಗುವಂತೆ 2 ಅಂತಸ್ತಿನ ಅತ್ಯಾಧುನಿಕ ಒಳಾಂಗಣ ಕ್ರೀಡಾಸೌಧವನ್ನು ಅಗ್ರಹಾರ ದಾಸರಹಳ್ಳಿಯಲ್ಲಿ ನಿರ್ಮಿಸಲಾಗಿದೆ. ಹಳ್ಳಿಕಟ್ಟೆ ಮಾದರಿಯಲ್ಲಿ ಹಿರಿಯ ನಾಗರಿಕರಿಗೆ ದಿನಪತ್ರಿಕೆ ಓದಲು ವಿಶೇಷ ಕೊಠಡಿ ಸೌಲಭ್ಯ ನೀಡಲಾಗಿದ್ದು, ಒಳಾಂಗಣ ಕ್ರೀಡೆಗಳಿಗೆ ಮತ್ತು ಯೋಗ, ಜಿಮ್ ಕೇಂದ್ರಗಳ ವ್ಯವಸ್ಥೆ ಕಲ್ಪಿಸಲಾಗಿದೆ.

ಅಗ್ರಹಾರ ದಾಸರಹಳ್ಳಿ ವಾರ್ಡ್

ಈ ವರ್ಷಗಳ ಹಿಂದಿನ ಶಾಲೆಗೆ ಕಾಯಕಲ್ಪ-ಪ್ರಾಥಮಿಕ ಪ್ರೌಢಶಾಲೆ ಜೊತೆಗೆ ಪದವಿ ಪೂರ್ವ ಕಾಲೇಜು ಸ್ಥಾಪನೆ.

ವಾರ್ಡಿನ ವ್ಯಾಪ್ತಿಯಲ್ಲಿ 2,000 ಚದರಡಿ ವಿಸ್ತಾರದಲ್ಲಿ 65 ವರ್ಷಗಳ ಹಿಂದಿನ ಕಟ್ಟಡ ನವೀಕರಣ ಕಾರ್ಯ ಪೂರೈಸಲಾಗಿದೆ.

ಪ್ರಗತಿಯಲ್ಲಿರುವ ಕಾಮಗಾರಿಗಳು:

- ಶ್ರೀ ಮುನೇಶ್ವರ ದೇವಸ್ಥಾನ ಕೆ.ಎಚ್.ಬಿ ಕಾಲೊನಿ ಗ್ರಾಮದೇವತೆ ಶ್ರೀ ಪಟಾಲಮ್ಮದೇವಸ್ಥಾನ ನವೀಕರಣ
- ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಾಣ - ಎಂ.ಸಿ.ಬಡಾವಣೆ,



- ಪ್ರಾಥಮಿಕ ಆರೋಗ್ಯ ಕೇಂದ್ರ - ಗುಂಡೂರಾವ್ ಕ್ವಾರ್ಟರ್ಸ್
- ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ 50 ಮನೆಗಳ ನಿರ್ಮಾಣ
- ಸ್ಕೈವಾಕ್ ಪಾದವಾರಿ ಮಾರ್ಗ, ರಹೇಜಾ ಪಾರ್ಕ್
- ಗ್ರಾಮದೇವತೆ ಶ್ರೀ ಪಟಾಲಮ್ಮ ದೇವಸ್ಥಾನ

ನಾಯಂಡಹಳ್ಳಿ ವಾರ್ಡ್‌ನಲ್ಲಿ ಅಂಗನವಾಡಿ ಕಟ್ಟಡ,ಸ್ಲಂ ಆವರಣ ಗೋಡೆ ನಿರ್ಮಾಣ ಸೇರಿ ಹಲವು ಕಾಮಗಾರಿಗಳು ನಡೆದಿವೆ.

ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ

ಕ್ಷೇತ್ರದಲ್ಲಿ ಅತ್ಯುತ್ತಮವಾದ ಸಕಲ ಸೌಲಭ್ಯಗಳ 200 ಹಾಸಿಗೆಗಳುಳ್ಳ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯನ್ನು ನಿರ್ಮಿಸಲಾಗುತ್ತಿದ್ದು, ಇಲ್ಲಿ ಎಲ್ಲಾ ವರ್ಗದ ಸಾರ್ವಜನಿಕರಿಗೆ ಗುಣಮಟ್ಟದ ಚಿಕಿತ್ಸೆ ನೀಡಲು ರೂಪುರೇಷೆ ಸಿದ್ಧಪಡಿಸಲಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ರೈಲ್ವೆ ಅಂಡರ್ ಪಾಸ್

ರೈಲ್ವೆ ಮಾರ್ಗಗಳ ಮೇಲೆ ಸಾರ್ವಜನಿಕರು ಎಚ್ಚರ ತಪ್ಪಿ ನಡೆದು ಆಗಿಂದಾಗ್ಗೆ ಸಾವು-ನೋವುಗಳು ಘಟಿಸುತ್ತಲೇ ಇದ್ದವು. ಇದನ್ನು ಮನಗಂಡು ರೈಲ್ವೆ ಹಳಿ ದಾಟಲು ಸಾರ್ವಜನಿಕರಿಗೆ ವಿಶೇಷ ಅನುಕೂಲ ಕಲ್ಪಿಸಿದ್ದು, ರೈಲ್ವೆ ಅಂಡರ್ ಪಾಸ್ ಕೂಡಿವೆ. ಸ್ವಚ್ಛತೆ ಮತ್ತು ಸುರಕ್ಷತೆಯಿಂದ

ನಾಯಂಡಹಳ್ಳಿ ವಾರ್ಡ್

ಪಂಡರಪಾಳ್ಯ ಕೊಳೆಗೇರಿ ಪ್ರದೇಶದ ಅಭಿವೃದ್ಧಿ

ಕೊಳೆಗೇರಿ ಪ್ರದೇಶಗಳಲ್ಲಿ ಉಂಟಾಗುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಕೊಳಗೇರಿಗಳಲ್ಲಿ ಸುಂದರ ವಾತವರಣ ನಿರ್ಮಾಣ ಮಾಡಲು ಕೊಳೆಗೇರಿ ಪ್ರದೇಶದ ಸುತ್ತಲೂ ರೀಟ್ರೈನಿಂಗ್ ವಾಲ್ ಪೂರ್ಣಪ್ರಮಾಣದ ಕಾಂಪೌಂಡ್ ಗೋಡೆ ನಿರ್ಮಿಸಲಾಗುತ್ತಿದೆ. ನಾಯಂಡಹಳ್ಳಿ ಕೆರೆ ನವೀಕರಣ ಕೂಡ ನಡೆಯುತ್ತಿದೆ.

ಸುವರ್ಣಭವನ: ಸುವರ್ಣ ಲೇಔಟ್‌ನಲ್ಲಿ ಬೃಹದಾಕಾರವಾಗಿ ನಿರ್ಮಾಣಗೊಡಿರುವ ವಿವಿಧೋದ್ದೇಶ ಕಟ್ಟಡದಲ್ಲಿ ವಾಹನ ನಿಲುಗಡೆ, ವಿಶಾಲವಾದ ಯೋಗ ತರಬೇತಿ ಕೇಂದ್ರ, ಸುಸಜ್ಜಿತ ಗ್ರಂಥಾಲಯ ಮತ್ತು ಸುವರ್ಣ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಕಚೇರಿಯನ್ನು ಒಳಗೊಂಡಿದೆ.

ಪ್ರಗತಿಯಲ್ಲಿರುವ ಕಾಮಗಾರಿಗಳು: ಶ್ರೀ ಆಂಜನೇಯ ದೇವಸ್ಥಾನ, ಶ್ರೀ ಕಾಳಿಕಾಂಬ ದೇವಾಲಯ ನವೀಕರಣ.

ಸುಸಜ್ಜಿತ ಆಸ್ಪತ್ರೆ

ಬೆಂಗಳೂರಿನ ಯಾವುದೇ ಪ್ರತಿಷ್ಠಿತ ಆಸ್ಪತ್ರೆಗೂ ಕಡಿಮೆ ಇಲ್ಲದಂತೆ ರೆಫರಲ್ ಆಸ್ಪತ್ರೆ ಸೌಲಭ್ಯ ಹಾಗೂ ಸಿಬ್ಬಂದಿಯನ್ನು ಹೊಂದಿದೆ. 30 ಬೆಡ್‌ಗಳ ಆಸ್ಪತ್ರೆಯಲ್ಲಿ ಅನುಭವಿ ವೈದ್ಯರು ರೋಗಿಗಳ ಆರೋಗ್ಯ ನೋಡಿಕೊಳ್ಳುತ್ತಿದ್ದಾರೆ. ಆಸ್ಪತ್ರೆಯು ಹೆರಿಗೆ ಹಾಗೂ ಗರ್ಭಕೋಶದ ರೋಗಗಳ ಚಿಕಿತ್ಸೆಗೆ ನಗರದಲ್ಲೇ ಹೆಸರುವಾಸಿಯಾಗಿದೆ. ಚಿಕಿತ್ಸೆಗೆ ಬರುವ ಜನರಿಗೆ, ಮಹಿಳೆಯರಿಗೆ ಇಲ್ಲಿ ಧೈರ್ಯ, ಆತ್ಮವಿಶ್ವಾಸ ತುಂಬಿ ಅರೈಕೆ ಮಾಡಲಾಗುತ್ತದೆ.

ಹೆರಿಗೆ, ಗರ್ಭಕೋಶದ ಚಿಕಿತ್ಸೆ ಸಂತಾನಹರಣ ಚಿಕಿತ್ಸೆಯನ್ನು ಇಲ್ಲಿ ಉಚಿತವಾಗಿ ನೀಡಲಾಗುತ್ತದೆ.

ನಿರ್ಮಾಣ ಕಾಮಗಾರಿಗಳು: ಶ್ರೀ ಗಣೇಶ ದೇವಾಲಯ, ಶ್ರೀ ರಾಮ ಮಂದಿರ, ಶ್ರೀ ಅಂಜನೇಯ ದೇವಾಲಯ, ಸಿಸಿಟಿವಿ ಕ್ಯಾಮೆರಾ ಅಳವಡಿಕೆ, ಸಾರ್ವಜನಿಕ ಶೌಚಾಲಯ, ಶ್ರೀ ಅಂಜನೇಯ ದೇವಾಲಯ, ಪೊಲೀಸ್ ಚೌಕಿ ಕಟ್ಟಡ, ಕನಕದಾಸರ ಪ್ರತಿಮೆ ಇತ್ಯಾದಿ.

ಗೋವಿಂದರಾಜನಗರ ವಾರ್ಡ್

ಗೋವಿಂದರಾಜನಗರ ಗ್ರಂಥಾಲಯದಲ್ಲಿ 95,000 ಹೆಚ್ಚು ಪುಸ್ತಕಗಳನ್ನು ಒದಗಿಸಲಾಗಿದೆ, ಈ ಗ್ರಂಥಾಲಯಕ್ಕೆ 2,500 ಜನರು ಸದಸ್ಯರಾಗಿದ್ದು, ಗ್ರಂಥಾಲಯದಲ್ಲಿ (PS/IAS ಸ್ಪರ್ಧಾತ್ಮಕ ಪರೀಕ್ಷೆಗಾಗಿ ಪುಸ್ತಕಗಳನ್ನು ಒದಗಿಸಲಾಗಿದೆ. ಗ್ರಂಥಾಲಯದಲ್ಲಿ ಅಭ್ಯಾಸ ಮಾಡಿದ ನೂರಾರು ಜನ ಇಂದು ಪ್ರತಿಷ್ಠಿತ ಹುದ್ದೆಗಳನ್ನು ಅಲಂಕರಿಸಿದ್ದಾರೆ.

ಶ್ರೀ ಶ್ರೀ ಪರಮಪೂಜ್ಯ ಬಾಲಗಂಗಾಧರನಾಥ ಸ್ವಾಮೀಜಿ ಆಟದ ಮೈದಾನವು ಬೆಂಗಳೂರು ನಗರದಲ್ಲೇ ಮಾದರಿಯಾದ ಆಕರ್ಷಣೀಯವಾದ ಆಟದ ಮೈದಾನ. ಪರಮಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ ಹೆಸರಿನಲ್ಲಿ ಗೋವಿಂದರಾಜನಗರ ವಾರ್ಡಿನಲ್ಲಿ ಎದ್ದು ನಿಂತಿದೆ. ಪರಮಪೂಜ್ಯ ಬಾಲಗಂಗಾಧರನಾಥ ಸ್ವಾಮೀಜಿಗಳ ಕಂಚಿನ ಪುತ್ಥಳಿಯನ್ನು ನೋಡುವುದೇ ಕಣ್ಣಿಗೆ ಹಬ್ಬವಾಗಿದೆ. 1500 ಜನ ಪ್ರೇಕ್ಷಕರು ಕೂರಬಹುದಾದ ಪ್ರೇಕ್ಷಕರ ಗ್ಯಾಲರಿ, ಒಳಾಂಗಣ ಸ್ಕೇಟಿಂಗ್ ಕ್ರೀಡಾಂಗಣ ಇಲ್ಲಿದೆ. ಅತ್ಯುನ್ನತ ಕಬಡ್ಡಿ ಗ್ರೌಂಡ್ ಇದ್ದು, ನೂರಾರು ಯುವಕ/ಯುವತಿಯರು ಇಲ್ಲಿ ತರಬೇತಿ ಪಡೆಯುತ್ತಾರೆ. ಸುಮಾರು 200 ಮಂದಿ ರಾಜ್ಯಮಟ್ಟಹಾಗೂ 15 ಮಂದಿ ಕ್ರೀಡಾಪಟುಗಳು ರಾಷ್ಟ್ರಮಟ್ಟದಲ್ಲಿ ಕಬಡ್ಡಿ ತಂಡದಲ್ಲಿ ಪ್ರತಿನಿಧಿಸಿದ್ದಾರೆ.

ಪ್ರಗತಿಯಲ್ಲಿರುವ ಕಾಮಗಾರಿಗಳು:

ಶ್ರೀ ಕನಕದಾಸರ ಹೆಸರಿನಲ್ಲಿ ಕುರುಬ ಜನಾಂಗದ ಶ್ರೇಯೋಭಿವೃದ್ಧಿಗಾಗಿ ಶ್ರೀ ಕನಕಭವನದ ಶಾಖಾ ಮಠ ಅದ್ಭುತವಾಗಿ ತಲೆ ಎತ್ತಿನಿಂತಿದೆ.

ಒಟ್ಟು 31,485 ಚ.ಅಡಿ ಪ್ರದೇಶದಲ್ಲಿ ಎರಡು ಅಂತಸ್ತುಗಳ ಕಟ್ಟಡವನ್ನು ಅತ್ಯಂತ ಆಕರ್ಷಣೀಯವಾಗಿ ನಿರ್ಮಿಸಲಾಗುತ್ತಿದ್ದು, ಇನ್ನೇನು ಕೆಲವೇ ದಿನಗಳಲ್ಲಿ ಲೋಕಾರ್ಪಣೆಯಾಗಲಿದೆ.

- ನಾಯಂಡಹಳ್ಳಿ ಸಿಗ್ನಲ್‌ನಿಂದ ನಾಗರಬಾವಿ ವೃತ್ತದವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಲಾಗಿದೆ. ಅಲ್ಲದೇ, ಜನತೆಯ ಸುರಕ್ಷತೆಗೆ ಎತ್ತರದ ಆರ್.ಸಿ.ಸಿ ವಾಲ್ ನಿರ್ಮಾಣ ಮಾಡಲಾಗಿದ್ದು, ಸಾರ್ವಜನಿಕರ ಮೆಚ್ಚುಗೆ ಪಡೆದಿದೆ.

ನಾಗರಬಾವಿಯಲ್ಲಿನ ಅಭಿನಯ ಬಾಲಕಿಯರ ಪದವಿ ಪೂರ್ವ ಕಾಲೇಜು ಕಟ್ಟಡ ಶಿಥಿಲಾವಸ್ಥೆಯಲ್ಲಿತ್ತು. ಸಚಿವರ ಕಾಳಜಿಯಿಂದಾಗಿ ಅದೀಗ ಬದಲಾಗಿದೆ. ಟಿ.ಟಿ. ಎಂ.ಪಿ.ಉರ್ದು ಶಾಲೆ ನವೀಕರಣ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನವೀಕರಣ, ಈ ಟೀಚರ್ಸ್ ಬಡಾವಣೆ ಗ್ರಂಥಾಲಯ ಕಟ್ಟಡ ನಿರ್ಮಾಣ, ಚಾಲುಕ್ಯ ನಗರ ಎಸ್‌ಡಬ್ಲೂಡಿ ತಡೆ ಗೋಡೆ ಬಿರ್ಮಾಣ, ಟೀಚರ್ಸ್ ಬಡಾವಣೆ ಉದ್ಯಾನ ನಿರ್ಮಾಣ ಇವೆಲ್ಲವೂ ಗಮನಾರ್ಹ ಕಾಮಗಾರಿಗಳು.

ಕಾವೇರಿಪುರ ವಾರ್ಡ್‌ನಲ್ಲಿ ನಾಡಪ್ರಭು ಕೆಂಪೇಗೌಡ ಬಹು ಉಪಯೋಗಿ ಕಟ್ಟಡದಲ್ಲಿ ಪಂಚಶೀಲನಗರ ಬಸ್ ನಿಲ್ದಾಣ, ಸಂಘ ಸಂಸ್ಥೆಗಳ ಕಚೇರಿಗಳು, ಬೆಸ್ಕಾಂ ಕಚೇರಿ ಹಾಗೂ ಶ್ರೀಮತಿ ಪ್ರಮೀಳಾಬಾಯಿ ಮಾನ ನಗರ ಪ್ರಾಥಮಿಕ ಅರೋಗ ಕೇಂದ್ರ, ಜಿಮ್ ಯೋಗ ಕೇಂದ್ರ ಹಾಗೂ ಟೈಲರಿಂಗ್ ಮತ್ತು ನಿಟ್ಟಿಂಗ್ ತರಬೇತಿ ಕೇಂದ್ರ, ಬ್ಯಾಡ್ಮಿಂಟನ್ ಕೋರ್ಟ್ ಇವೆ.

ಬಾಳಯ್ಯನ ಕೆರೆ ಪುನರುಜ್ಜೀವನಗೊಳಿಸಲು ವಿಶೇಷ ಯೋಜನೆ ರೂಪಿಸಲಾಗಿದೆ. ಉದ್ಯಾನದಲ್ಲಿ ನಿರ್ಮಿಸಲಾದ ಯೋಗ ಮಂದಿರ ಯೋಗಾಸಕ್ತರನ್ನು ಕೈಬೀಸಿ ಕರೆಯುತ್ತಿದೆ. ಉದ್ಯಾನದಲ್ಲಿ ರಾಜ್ಯದಲ್ಲೇ ಮೊದಲಬಾರಿಗೆ ಅತ್ಯಾಧುನಿಕ ಮೆಂಬ್ರೇನ್ ತಂತ್ರಜ್ಞಾನದ ಎಸ್.ಟಿ.ಪಿ ಘಟಕ ಸ್ಥಾಪಿಸಲಾಗಿದೆ.

ಕಾವೇರಿಪುರ ವಾರ್ಡ್‌ನಲ್ಲಿ ಡಾ. ವಿಷ್ಣುವರ್ಧನ್ ಉದ್ಯಾನ, ಶ್ರೀ ಕೃಷ್ಣ ಉದ್ಯಾನ, ಶ್ರೀ ಬಸವೇಶ್ವರ ದೇವಾಲಯ ಮೊದಲಾದ ಕಾಮಗಾರಿಗಳು ಪ್ರಗತಿಯಲ್ಲಿವೆ. ಪೇಜಾವರ ವಿಶ್ವೇಶ ತೀರ್ಥ ಸ್ವಾಮೀಜಿ ಗ್ರಂಥಾಲಯದ ಕಾಮಗಾರಿ ಗಮನಾರ್ಹ.

ಸ್ಟಾರ್ಮ್ ವಾಟರ್ ಡ್ರೈನೇಜ್: ಒಳಚರಂಡಿಯಿಂದ ಹರಿಯುತ್ತಿರುವ ಕೊಳಚೆನೀರು ಮಳೆಯ ನೀರು, ಮನೆಗಳಿಗೆ ನುಗ್ಗುವ ಪರಿಸ್ಥಿತಿ ತಪ್ಪಿಸಲು ಯೋಜನೆ ರೂಪುಗೊಳಿಸಿ ಅನುಷ್ಠಾನಗೊಳಿಸಲಾಗಿದೆ.

ಮಾರುತಿ ಮಂದಿರ ವಾರ್ಡ್‌ನಲ್ಲಿ ಒಂದು ಸಲಕ್ಕೆ 50 ಜನಗಳಿಗೆ ಡಯಾಲಿಸಿಸ್ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ. ವಿನಾಯಕ ಬಡಾವಣೆಯ ಶ್ರೀ ಶಿವಕುಮಾರ ಸ್ವಾಮೀಜಿ ವಾರ್ಡ್ ಕಚೇರಿ ಕೂಡ ಸುಸಜ್ಜಿತವಾಗಿದೆ.

ಮೂಡಲಪಾಳ್ಯದಲ್ಲಿ ನವೀಕೃತ ಬಿಬಿಎಂಪಿ ಶಾಲೆ ಮತ್ತು ಕಾಲೇಜು ಮೂಲಸೌಕರ್ಯಗಳ ಸುಧಾರಣೆಯಿಂದ ನಳನಳಿಸುವಂತಾಗಿದೆ.

ಶ್ರೀ ವಿ.ಸೋಮಣ್ಣ ಅವರು ಯಾವುದೇ ಅಭಿಯಂತರರಿಗೂ ಕಡಿಮೆಯಿಲ್ಲ. ತಮ್ಮ ಕ್ಷೇತ್ರದಲ್ಲಿ ಮುತುವರ್ಜಿಯಿಂದ ನಿರ್ಮಿಸಲಾದ ಕಟ್ಟಡಗಳೇ ಇದಕ್ಕೆ ಸಾಕ್ಷಿ ಇಕ್ಕಟ್ಟಿನ ಸ್ಥಳದಲ್ಲಿ ಸುಂದರವಾಗಿ ನಿರ್ಮಿಸಲಾದ ಪಂಚಶೀಲನಗರ ಬಸ್ ನಿಲ್ದಾಣ ಅವರ ಕಾರ್ಯವೈಖರಿಯನ್ನು ತೋರಿಸುತ್ತದೆ.

–ಶ್ರೀ ಬಸವರಾಜ ಬೊಮ್ಮಾಯಿ

'ಚಂದ್ರಲೋಕದಲ್ಲಿ ಮನೆ ಬೇಕು ಎಂದರೂ ಅದನ್ನು ಕಟ್ಟಿಕೊಡಲುಸೋಮಣ್ಣ ಸಿದ್ಧರಿದ್ದಾರೆ. ಈ ಮೂಲಕ ಅವರಿಗೆ ನೀಡಲಾದ ವಸತಿ ಮತ್ತು ಮೂಲಸೌಲಭ್ಯ ಇಲಾಖೆಯ ಕರ್ತವ್ಯವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ.

–ಶ್ರೀ ಪ್ರಲ್ಹಾದ ಜೋಶಿ, ಕೇಂದ್ರ ಸಂಸದೀಯ ವ್ಯವಹಾರಗಳ, ಕಲ್ಲಿದ್ದಲು ಮತ್ತು ಗಣಿ ಸಚಿವರು

ನಿಮ್ಮ ಒಂದು ಮತದಿಂದ...

ಬಂಧುಗಳೇ,

ಸಮಗ್ರತೆಗೆ ಮತ್ತೊಂದು ಹೆಸರು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರ. ಕ್ಷೇತ್ರದ ಜನರ ಆಶೀರ್ವಾದದೊಂದಿಗೆ ಶಾಸಕನಾಗಿ ಆಯ್ಕೆಯಾದ ನನಗೆ ನಿಮ್ಮ ಒಂದೊಂದು ಮತವೂ ಬಹಳಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಪ್ರೇರೇಪಿಸಿದೆ. ಸಮಗ್ರ ವಿಕಾಸದ ಹಾದಿಯಲ್ಲಿ ಗೋವಿಂದರಾಜ ನಗರವನ್ನು ಮಾದರಿ ಕ್ಷೇತ್ರವನ್ನಾಗಿಸಲು ನಿಮ್ಮ ಒಂದೊಂದು ಮತದ ಆಶೀರ್ವಾದ ನನಗೆ ಭೀಮಬಲ ನೀಡಿದೆ.

ನಿಮ್ಮ ಅಮೂಲ್ಯ ಮತದ ಋಣ ತೀರಿಸಲು ವಾರ್ಡ್‌ಮಟ್ಟದಿಂದ ಅಭಿವೃದ್ಧಿ ಯೋಜನೆಗಳನ್ನು ಹಮ್ಮಿಕೊಂಡಿದ್ದು, ಈ ಮೂಲಕ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಹಗಲಿರುಳೆನ್ನದೆ ಶ್ರಮಿಸುತ್ತಿದ್ದೇನೆ. ನಿಮ್ಮ ಒಂದೊಂದು ಮತದ ಫಲವಾಗಿ ಶಾಸಕನಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಜಾತ್ಯತೀತ ಆಡಳಿತಕ್ಕೆ ಬದ್ಧನಾಗಿ, ನಿಮ್ಮ ಹಿತಚಿಂತಕನಾಗಿ, ಜನಾಭಿಪ್ರಾಯದ ಪ್ರತಿನಿಧಿಯಾಗಿ ಕ್ಷೇತ್ರದಾದ್ಯಂತ ಹಲವು ಪ್ರಗತಿ ಕಾರ್ಯಗಳನ್ನು ನೆರವೇರಿಸಿದ್ದು, ಪ್ರತಿಯೊಂದು ವಲಯಕ್ಕೂ ವಿಶೇಷ ಆದ್ಯತೆ ನೀಡಿದ್ದೇನೆ.

ನಿಮ್ಮ ಸಲಹೆ-ಸೂಚನೆಗಳ ನಿರೀಕ್ಷೆಯಲ್ಲಿ....

ವಿ.ಸೋಮಣ್ಣ



ವೀರೇಂದ್ರ ಹೆಗ್ಗಡೆ ಅವರೊಟ್ಟಿಗೆ....

ರೈಲ್ವೆ ಯೋಜನೆ...ಕನಸುಗಳಿಗೆ ರೆಕ್ಕೆಪುಕ್ಕ...

ಕಳೆದ 3 ವರ್ಷಗಳಲ್ಲಿ ಮಂಜೂರು ಮಾಡಿರುವ ನೂತನ ರೈಲು ಮಾರ್ಗದ ಯೋಜನೆಗಳು:

ಶಿವಮೊಗ್ಗ-ಶಿಕಾರಿಪುರ-ರಾಣಿಬೆನ್ನೂರು ನೂತನ ರೈಲು ಮಾರ್ಗ (103 ಕಿ.ಮೀ), ಧಾರವಾಡ-ಬೆಳಗಾವಿ ನೂತನ ರೈಲು ಮಾರ್ಗ (73 ಕಿ.ಮೀ) ಮುನಿರಾಬಾದ್-ಮಹಬೂಬ್ ನಗರ, ತುಮಕೂರು- ರಾಯದುರ್ಗ, ಚಿಕ್ಕಮಗಳೂರು-ಬೇಲೂರು, ಬಾಗಲಕೋಟೆ-ಕುಡುಬ, ತುಮಕೂರು-ದಾವಣಗೆರೆ,

ಬೇಲೂರು-ಹಾಸನ, ಧಾರವಾಡ-ಬೆಳಗಾವಿ ಮಾರ್ಗದ ರೈಲ್ವೆ ಯೋಜನೆಗಳ ಕೆಲಸಗಳು ನಡೆಯುತ್ತಿವೆ. ಒಂದು ಲಕ್ಷಕ್ಕೂ ಅಧಿಕ TVU (Train Vehicle Unit) ವಾಹನ ದಟ್ಟಣೆ ಇರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್‌ಗಳನ್ನು ತೆರವುಗೊಳಿಸಿ, ರಸ್ತೆ ಮೇಲ್ಸೇತುವೆ ನಿರ್ಮಿಸಲು ರಾಜ್ಯ ಸರ್ಕಾರವು ಉಚಿತವಾಗಿ ಭೂಮಿಯನ್ನು ನೀಡುವುದರ ಜೊತೆಗೆ ಕಾಮಗಾರಿಯ ವೆಚ್ಚದ ಶೇ 50ರಷ್ಟನ್ನು ಭರಿಸಲು ಒಪ್ಪಿಗೆ ನೀಡಲಾಗಿದೆ. 47 ರಸ್ತೆ ಮೇಲ್ಸೇತುವೆ/ಕೆಳ ಸೇತುವೆಗಳ ನಿರ್ಮಾಣ ಕಾಮಗಾರಿಯನ್ನು ರೈಲ್ವೆ ಇಲಾಖೆಯು ಕೈಗೆತ್ತಿಕೊಂಡಿದೆ.

ರೈಲ್ವೆ ದ್ವಿಪಥ ಯೋಜನೆಗಳು: ಬೈಯಪ್ಪನಹಳ್ಳಿ-ಹೊಸೂರು ದ್ವಿಪಥೀಕರಣ ಯೋಜನೆ (42 ಕಿ.ಮೀ.), ಯಶವಂತಪುರ-ಚನ್ನಸಂದ್ರ ದ್ವಿಪಥೀಕರಣ ಯೋಜನೆ (22 ಕಿ.ಮಿ), ಬೆಂಗಳೂರು ಉಪನಗರ ರೈಲು ಮಾರ್ಗ ಯೋಜನೆ

ಈ ಯೋಜನೆಯು ಕೆಳಗಿನ 1 ಕಾರಿಡಾರ್‌ಗಳಲ್ಲಿ ನಿರ್ಮಿತವಾಗಲಿದೆ:

1. ಕ್ರಾಂತಿವೀರ ಸಂಗೊಳ್ಳಿರಾಯಣ್ಣ (ಬೆಂಗಳೂರು - ನಗರ) ರೈಲ್ವೆ ನಿಲ್ದಾಣ-ದೇವನಹಳ್ಳಿ (ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ)-41.40 ಕಿ.ಮೀ.
2. ಬೈಯ್ಯಪ್ಪನಹಳ್ಳಿ-ಚಿಕ್ಕಬಾಣಾವಾರ-25 ಕಿ.ಮೀ.
3. ಕೆಂಗೇರಿ-ವೈಟ್ ಫೀಲ್ಡ್-35.52 ಕಿ.ಮೀ.
4. ಹೀಲಲಿಗೆ (ಚಂದಾಪುರ)-ರಾಜಾನುಕುಂಟೆ-46.24 ಕಿ.ಮೀ.

ಈ ಯೋಜನೆಗೆ ಅಗತ್ಯವಿರುವ ಖಾಸಗಿ ಜಮೀನಿನ ಭೂಸ್ವಾಧೀನದ ಪ್ರಕ್ರಿಯೆಯು ಆರಂಭಗೊಂಡಿದ್ದು, ನಿರ್ಮಾಣ ಕಾಮಗಾರಿಯ ಟೆಂಡರ್‌ಗಳನ್ನು ಅಂತಿಮಗೊಳಿಸುವ ಕಾರ್ಯ ಪ್ರಗತಿಯಲ್ಲಿದೆ.





ಬಿ.ಎಲ್ ಸಂತೋಷ್ ಜತೆಯಲ್ಲಿ

ಮೂಲಸೌಲಭ್ಯದ ಮರೆಯಲಾಗದ ಕೆಲಸಗಳು...

ಕಳೆದ ಮೂರು ವರ್ಷಗಳಲ್ಲಿ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ವತಿಯಿಂದ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ವಿವರ ಹೀಗಿದೆ...

ಕಲಬುರಗಿ ವಿಮಾನ ನಿಲ್ದಾಣ: ಕಲಬುರಗಿ ವಿಮಾನ ನಿಲ್ದಾಣವನ್ನು ಸುಮಾರು 742 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ₹208 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಈ ವಿಮಾನ ನಿಲ್ದಾಣದಲ್ಲಿ 2019ರ ನವೆಂಬ ೯22ರಿಂದ ನಾಗರಿಕ ವಾಯುಯಾನ ಕಾರ್ಯಾಚರಣೆ ಶುರುವಾಗಿದೆ.

ಬೀದರ್‌ನ ವಿಮಾನ ನಿಲ್ದಾಣ: ನಾಗರಿಕ ವಾಯುಯಾನಕ್ಕೆ ಅನುವಾಗುವಂತೆ ಪ್ರತ್ಯೇಕ ಟರ್ಮಿನಲ್ ಕಟ್ಟಡ ಮತ್ತು ಇತರೆ ಸೌಲಭ್ಯವನ್ನು ಸುಮಾರು 3 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ಹಾಗೂ ₹1227 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗಿದೆ. ಇದರ ಕಾರ್ಯಾಚರಣೆ 2020ರ ಫೆಬ್ರುವರಿ 17ರಂದು ಪ್ರಾರಂಭವಾಗಿದೆ.

ಶಿವಮೊಗ್ಗ ವಿಮಾನ ನಿಲ್ದಾಣ:

ಶಿವಮೊಗ್ಗ ವಿಮಾನ ನಿಲ್ದಾಣವನ್ನು 758 ಎಕರೆ ಭೂಮಿಯಲ್ಲಿ ಸುಮಾರು ₹384 ಕೋಟಿ ವೆಚ್ಚದಲ್ಲಿ ಎ-320 ಮಾದರಿಯ ವಿಮಾನಗಳ ಕಾರ್ಯಚರಣೆಗಾಗಿ ನಿರ್ಮಿಸಲು ಸರ್ಕಾರವು ಅನುಮೋದನೆಯನ್ನು 2020ಡಿಸೆಂಬ ೯15ರಂದು ನೀಡಿದೆ. ಡಿಸೆಂಬ ೯2022ರಿಂದ ವಿಮಾನಯಾನ ಪ್ರಾರಂಭಗೊಳ್ಳುವ ನಿರೀಕ್ಷೆಯಿದೆ.

ವಿಜಯಪುರ ವಿಮಾನ ನಿಲ್ದಾಣ: ವಿಜಯಪುರ ಜಿಲ್ಲೆಯಲ್ಲಿ ವಿಮಾನ ನಿಲ್ದಾಣಕ್ಕಾಗಿ ಸುಮಾರು 727 ಎಕರೆ ವಿಸ್ತೀರ್ಣದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದ್ದು, ಎರಡು ಹಂತಗಳಲ್ಲಿ ಅಭಿವೃದ್ಧಿಪಡಿಸಲು 2020ರ ಡಿಸೆಂಬ ೯15ರಂದು ₹ 220 ಕೋಟಿ ಅನುಮೋದನೆ ನೀಡಲಾಗಿದೆ.

ಹಾಸನ ವಿಮಾನ ನಿಲ್ದಾಣ: ಸುಮಾರು 536 ಎಕರೆ ವಿಸ್ತೀರ್ಣದ ಜಮೀನಿನಲ್ಲಿ ₹193.65 ಕೋಟಿ ವೆಚ್ಚದಲ್ಲಿ ಎಟಿಆರ್-72 ಮಾದರಿಯ ವಿಮಾನಗಳ ಕಾರ್ಯಾಚರಣೆಗಾಗಿ ಅಭಿವೃದ್ಧಿ ಪಡಿಸಲು ಸರ್ಕಾರವು 2021ರ ಜೂನ್ 25ರಂದು ಅನುಮೋದನೆ ನೀಡಿದೆ. ಅದರಂತೆ ಸುಮಾರು ಕಾಮಗಾರಿಗಳನ್ನು ಸೆಪ್ಟೆಂಬರ್-2021ರಿಂದ ಪ್ರಾರಂಭಿಸಿದ್ದು, ಸದರಿ ಕಾಮಗಾರಿಗಳು ಪ್ರಗತಿಯಲ್ಲಿವೆ.

ರಾಯಚೂರು ವಿಮಾನ ನಿಲ್ದಾಣ

ಸುಮಾರು 322 ಎಕರೆ ಸರ್ಕಾರಿ ಜಮೀನನ್ನು ಈ ವಿಮಾನ ನಿಲ್ದಾಣಕ್ಕಾಗಿ ಮೀಸಲಿಟ್ಟಿದ್ದು. ₹185.57 ಕೋಟಿ ಮೊತ್ತದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು 2022ರ ಏಪ್ರಿಲ್ 17ರಂದು ಅನುಮೋದನೆ ನೀಡಿದೆ. ಈ ವಿಮಾನ ನಿಲ್ದಾಣವು 2023-24 ಸಾಲಿನಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ಕಾರವಾರ ಸಿವಿಲ್ ಎನ್‌ಕ್ಲೇವ್: ಉತ್ತರ ಕನ್ನಡ ಜಿಲ್ಲೆಯಲ್ಲಿ ನೌಕಾಪಡೆಯ ಸೀಬರ್ಡ್ ಬೃಹತ್ ಯೋಜನೆಯ ಭಾಗವಾಗಿ ನೌಕಾಸೇನೆಯು ರಕ್ಷಣಾ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸುತ್ತಿದ್ದು, ನಾಗರಿಕ ವಾಯುಯಾನಕ್ಕಾಗಿ ನೌಕಾಪಡೆಯವರೊಂದಿಗೆ ಕೈ ಜೋಡಿಸಿ ಎನ್‌ಕ್ಲೇವ್ ಅನ್ನು ಅಭಿವೃದ್ಧಿಪಡಿಸಲು ಸರ್ಕಾರ ಉದ್ದೇಶಿದೆ.

ಕೊಪ್ಪಳ ಮತ್ತು ದಾವಣಗೆರೆ ವಿಮಾನ ನಿಲ್ದಾಣ: ಕೊಪ್ಪಳ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣದ ಪೂರ್ವ ಕಾರ್ಯಸಾಧ್ಯತಾ ವರದಿ ತಯಾರಿಸಲು 2002-23ರ ಆಯವ್ಯಯದಲ್ಲಿ ಘೋಷಿಸಿದೆ. ಅದರಂತೆ, ಪೂರ್ವ ಕಾರ್ಯಸಾಧ್ಯತಾ ವರದಿಯನ್ನು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಿಂದ ತಯಾರಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಹೆಲಿಪೋರ್ಟ್: ರಾಜ್ಯದಲ್ಲಿ ಚಿಕ್ಕಮಗಳೂರು, ಮಡಿಕೇರಿ ಮತ್ತು ಹಂಪಿಯಲ್ಲಿ ಹೆಲಿಪೋರ್ಟ್‌ಗಳನ್ನು ಅಭಿವೃದ್ಧಿಪಡಿಸಲು 2022-2023ರ ಆಯವ್ಯಯದಲ್ಲಿ ಘೋಷಿಸಿದೆ. ಆದರಂತೆ, ಕಾರ್ಯಸಾಧ್ಯತಾ ವರದಿಯನ್ನು ತಯಾರಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ೯(BSBP)

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಿರುವ 407 ಎಕರೆ ಸರ್ಕಾರಿ ಜಮೀನಿನಲ್ಲಿ ಬೆಂಗಳೂರು ಸಿಗ್ನೇಚರ್ ಬ್ಯುಸಿನೆಸ್ ಪಾರ್ಕ್ ೯(BSBP) ಯೋಜನೆಯನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಈಗಾಗಲೇ ಸಿದ್ಧಪಡಿಸಿರುವ ಮಾರುಕಟ್ಟೆ ಅಧ್ಯಯನದ ಆಧಾರದ ಮೇಲೆ ಸುಮಾರು ₹212 ಕೋಟಿಯಲ್ಲಿ ಮೊದಲ ಹಂತದ ಪ್ಯಾಕೇಜ್-1 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.

ತದಡಿ ಪರಿಸರ ಪ್ರವಾಸೋದ್ಯಮ ಯೋಜನೆ

ಕಾರವಾರದಿಂದ 50 ಕಿ.ಮೀ. ದೂರದಲ್ಲಿ ಕುಮಟಾ ತಾಲ್ಲೂಕಿನ ಸುಮಾರು 1419 ಎಕರೆ ಭೂಮಿಯಲ್ಲಿ ಪರಿಸರ ಪ್ರವಾಸೋದ್ಯಮ ಯೋಜನೆಯನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಗೆ Expression of Interest ನ್ನು ಆಹ್ವಾನಿಸಲು ಕ್ರಮ ಕೈಗೊಳ್ಳಲಾಗಿದೆ.

ವಾಟರ್ ಡ್ರೋಮ್‌ಗಳ ಅಭಿವೃದ್ಧಿ: ರಾಜ್ಯದ ಪ್ರವಾಸೋದ್ಯಮ, ವಾಣಿಜ್ಯೋದ್ಯಮ ವಲಯಗಳ ಕ್ಷಿಪ್ರ ಪ್ರಗತಿಗೆ ಮತ್ತು ವಿವಿಧ ಪ್ರಾಂತ್ಯಗಳಿಗೆ ಸಂಪರ್ಕ ಕಲ್ಪಿಸುವ ಉದ್ದೇಶದೊಂದಿಗೆ ಮಲ್ಪೆ, ಬೈಂದೂರು, ಕಾಳಿನದಿ ಮತ್ತು ಮಂಗಳೂರಿನಲ್ಲಿ ವಾಟರ್ ಡೋಮ್ ನಿರ್ಮಿಸಲು ಈಗಾಗಲೇ ಕಾರ್ಯಸಾಧ್ಯವಾಗಿಸುವ ವರದಿಗಳನ್ನು ಸಿದ್ಧಪಡಿಸಿ, ಕೇಂದ್ರ ಸರ್ಕಾರದ ನಾಗರಿಕ ವಿಮಾನಯಾನ, ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ. ಅಲ್ಲದೆ ಪ್ರಮುಖ ಜಲಾಶಯಗಳಾದ ಹಿಡಕಲ್, ಕೆ.ಆರ್.ಎಸ್, ಆಲಮಟ್ಟಿ ಮತ್ತು ತುಂಗಭದ್ರ ಜಲಾಶಯಗಳಲ್ಲಿಯೂ ಶೀಘ್ರದಲ್ಲಿಯೇ ವಾಟಿರ್‌ಡೋಮ್ ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.



ಕೇಂದ್ರ ಸಚಿವ ಪ್ರಲ್ಹಾದ್ ಅವರಿಗೂ ಸೋಮಣ್ಣ ಎಂದರೆ ಅಚ್ಚುಮೆಚ್ಚು...

ಮನೆ ನಿರ್ಮಾಣ ಹಾಗೂ ಅನುದಾನ ಬಿಡುಗಡೆ

ಪ್ರಸಕ್ತ ಸರ್ಕಾರದ ಅವಧಿಯಲ್ಲಿ ಈವರೆಗೆ ಒಟ್ಟು 3,47 ಲಕ್ಷ ಮನೆಗಳನ್ನು ನಿರ್ಮಿಸಲಾಗಿದ್ದು, ಪ್ರಸ್ತುತ 8.06 ಲಕ್ಷ ಮನೆಗಳ ನಿರ್ಮಾಣ ವಿವಿಧ ಹಂತದ ಪ್ರಗತಿಯಲ್ಲಿದೆ. ಹೊಸದಾಗಿ ಗ್ರಾಮೀಣ ಪ್ರದೇಶಕ್ಕೆ 4 ಲಕ್ಷ ಹಾಗೂ ನಗರ ಪ್ರದೇಶಕ್ಕೆ 1 ಲಕ್ಷ ಸೇರಿದಂತೆ ಒಟ್ಟು 5 ಲಕ್ಷ ಹೊಸ ಮನೆಗಳ ಗುರಿ ನೀಡಲಾಗಿದೆ.

1 ಲಕ್ಷ ಬಹುಮಹಡಿ ಬೆಂಗಳೂರು ವಸತಿ ಯೋಜನೆ: ಪ್ರಸಕ್ತ ಸರ್ಕಾರ ಅಧಿಕಾರಕ್ಕೆ ಬಂದ ನಂತರ 313 ಎಕರೆ ವಿವಾದ ರಹಿತ ಜಮೀನನ್ನು ಗುತ್ತಿಗೆದಾರರಿಗೆ ಹಸ್ತಾಂತರಿಸಿ, 42.988 ಮನೆಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದ್ದು, ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ, ಇವುಗಳ ಪೈಕಿ ಸುಮಾರು 2,000 ಮನೆಗಳು ಪೂರ್ಣಗೊಂಡಿದೆ. 553 ಎಕರೆ ಜಮೀನಿನಲ್ಲಿ ಮನೆಗಳ ನಿರ್ಮಾಣ ಪ್ರಾರಂಭಿಸಲಾಗುತ್ತಿದೆ.

ಸ್ಥಳೀಯ ವಿಧಾನಸಭಾ ಕ್ಷೇತ್ರದ ಫಲಾನುಭವಿಗಳಿಗೆ ಶೇ 50 % ರಷ್ಟು ಮನೆಗಳನ್ನು ಹಂಚಿಕೆ ಮಾಡಲಾಗುವುದು. ಈಗಾಗಲೇ 43,002 ಅರ್ಜಿಗಳನ್ನು ಸ್ವೀಕರಿಸಿದ್ದು. ₹1 ಲಕ್ಷ ಆರಂಭಿಕ ಠೇವಣಿಯನ್ನು ಪಾವತಿಸಿದ ಅರ್ಜಿದಾರರು ಆನ್‌ಲೈನ್ ಮೂಲಕ ತಾವು ಬಯಸಿದ ಮನೆಯನ್ನು ತಾವೇ ಆಯ್ಕೆಮಾಡಿಕೊಳ್ಳಬಹುದು.

ಬೆಂಗಳೂರಿನ ಸೂರ್ಯನಗರ 4ನೇ ಹಂತದಲ್ಲಿ 1,938 ಎಕರೆ ಪ್ರದೇಶದಲ್ಲಿ ₹3,455,00 ಕೋಟಿಗಳ ಮೊತ್ತದಲ್ಲಿ ಅತ್ಯಾಧುನಿಕ ಮೂಲ ಸೌಕರ್ಯಗಳುಳ್ಳ 25,000 ನಿವೇಶನಗಳ ಪ್ರಧಾನ ಮಂತ್ರಿ ಟೌನ್‌ಶಿಪ್ ನಿರ್ಮಿಸಲು ಕ್ರಮವಹಿಸಲಾಗಿದೆ.

ಕ್ರ. ಸಂ.	ಅರ್ಜಿ ನಂ.	ಅರ್ಜಿದಾರರ ಹೆಸರು ಮತ್ತು ವಿಳಾಸ
253	720	ಅಬ್ದುಲ್ ಕರೀಂ, 2607/1, ಸಿ–ರಹೀಮ್ ನಗರ, ಬಂಗಾರಪೇಟೆ 563114, ಕೋಲಾರ, ಕರ್ನಾಟಕ
254	721	ಸಾಬೀರ್ ಹುಸೇನ್, ನಂ.644, 11 ನೇ ಕ್ರಾಸ್, ಹೆಚ್‌ಬಿಆರ್ ಲೇಔಟ್, 5 ನೇ ಬ್ಲಾಕ್, ಬೆಂಗಳೂರು.
255	728	ಫಸೀಹಾ ಬೇಗಂ, 38/10, ಬಜಾರ್ ಸ್ಟ್ರೀಟ್, ನೀಲಸಂದ್ರ, ಬೆಂಗಳೂರು., ಕರ್ನಾಟಕ
256	731	ಜರೀನಾ ಬಾನು, ನಂ.31–1, 6ನೇ ಕ್ರಾಸ್, ಕಮಲಾ ನೆಹರು ವಿಸ್ತರಣೆ, ಯಶವಂತಪುರ, ಬೆಂಗಳೂರು.
257	732	ಅಫ್ಜಲ್ ಸೈತ್, ನಂ.31–1, 6ನೇ ಕ್ರಾಸ್, ಕಮಲಾ ನೆಹರು ವಿಸ್ತರಣೆ, ಯಶವಂತಪುರ, ಬೆಂಗಳೂರು.
258	733	ಯಾಸೀನ್ ಎಸ್, #73, 1ನೇ ಮುಖ್ಯರಸ್ತೆ, 5ನೇ ಕ್ರಾಸ್, ಐಡಿಎ ಲೇಔಟ್, ಇ ಬ್ಲಾಕ್, ಲಿಂಗರಾಜಪುರಂ, ಬೆಂಗಳೂರು.
259	734	ಮೊಹಮ್ಮದ್ ಯೂಸುಫ್, ಕೆಹೆಚ್‌ಎಂಜಿ ಹಾಸ್ಟೆಲ್ ಕಟ್ಟಡ, ಕಿರ್ಮಾನಿ ಮಸೀದಿ ಹತ್ತಿರ, 3 ನೇ ಮುಖ್ಯ, 1 ನೇ ಕ್ರಾಸ್, ಇಸ್ಲಾಂಪುರ ಹೆಚ್‌ಎಎಲ್, ಬೆಂಗಳೂರು–17
260	735	ನಜೀಬ್ ಅಹಮದ್ ಹೈದರ್, 19, 3 ನೇ ಕ್ರಾಸ್, ಆರ್‌ಕೆ ಲೆಂತಹಳ್ಳಿ, ಎಮರು, ನ್ಯೂ ವಿಲ್ಸನ್ ಗಾರ್ಡನ್, ಬೆಂಗಳೂರು.
261	738	ನಜೀಮ್ ಖಾನ್, 215/ಎ, 1 ನೇ ಮುಖ್ಯ ರಸ್ತೆ, ರಶಾದ್ ನಗರ, ರೈಸಿಂಗ್ ಸ್ಟಾರ್ ಸ್ಕೂಲ್ ಎದುರು, ಬೆಂಗಳೂರು.
262	740	ಗುಲ್ಜಾರ್ ಬೇಗಂ, #4, ಸಹಾನಾ ಮಸೀದಿ ಹಿಂದೆ, ಸಮಾಧಾನ ನಗರ, ಕೆ.ಜಿ.ಹಳ್ಳಿ, ಬೆಂಗಳೂರು–45
263	741	ಸಾದಿಕ್, 49, 8 ನೇ ಕ್ರಾಸ್, ಕಾವೇರಿ ನಗರ, ಬನಶಂಕರಿ 2 ನೇ ಹಂತ, ಬಿಎಸ್‌ಕೆ 3 ನೇ ಹಂತ, ಬೆಂಗಳೂರು–32
264	745	ಉಸ್ಮೀದಾ ಜೈನಾಬ್, #12, ಕಂದಸ್ವಾಮಿ ಮುದಲಿಯಾರ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು.
265	747	ನಸೀಮ್ ಖಾನಮ್, 102/ಎ, 8 ನೇ ಕ್ರಾಸ್, 9 ನೇ ಮುಖ್ಯ, 2 ನೇ ಬ್ಲಾಕ್, ಹೆಚ್‌ಬಿಆರ್ ಲೇಔಟ್, ಯಾಸೀನ್ ನಗರ, ಕಲ್ಯಾಣ ನಗರ, ಬೆಂಗಳೂರು.
266	748	ದಸ್ತಗೀರ್ ಖಾನ್, 102/ಎ, 8 ನೇ ಕ್ರಾಸ್, 9 ನೇ ಮುಖ್ಯ, 2 ನೇ ಬ್ಲಾಕ್, ಹೆಚ್‌ಬಿಆರ್ ಲೇಔಟ್, ಯಾಸೀನ್ ನಗರ, ಕಲ್ಯಾಣ ನಗರ, ಬೆಂಗಳೂರು.
267	749	ಫೈಜಾನ್ ಖಾನ್, 102/ಎ, 8 ನೇ ಕ್ರಾಸ್, 9 ನೇ ಮುಖ್ಯ, 2 ನೇ ಬ್ಲಾಕ್, ಹೆಚ್‌ಬಿಆರ್ ಲೇಔಟ್, ಯಾಸೀನ್ ನಗರ, ಕಲ್ಯಾಣ ನಗರ, ಬೆಂಗಳೂರು.
268	750	ಫಿರ್ದೋಸ್ ಖಾನಮ್, 102/ಎ, 8ನೇ ಕ್ರಾಸ್, 9ನೇ ಮುಖ್ಯ, 2ನೇ ಬ್ಲಾಕ್, ಎಚ್‌ಬಿಆರ್ ಲೇಔಟ್, ಯಾಸೀನ್ ನಗರ, ಕಲ್ಯಾಣ್ ನಗರ, ಬೆಂಗಳೂರು.
269	755	ಎಸ್ ನಿಸಾರ್ ಅಹಮದ್, 81, 1 ನೇ ಕ್ರಾಸ್, 2 ನೇ ಮುಖ್ಯ, ವಿನೋಬಾ ನಗರ ಪೊಲೀಸ್ ಠಾಣೆ, ಕೆ.ಜಿ.ಹಳ್ಳಿ, ಬೆಂಗಳೂರು.
270	758	ಶೇಕ್ ಮೊಹಮ್ಮದ್ ರಿಯಾಜ್, ನಂ.34/22–8, ಮಹಬೂಬ್ ಬಾಷಾ ಸ್ಟ್ರೀಟ್, ಎಸ್‌ಎನ್ ಕಾಲೋನಿ, ರಾಯಚೋಟಿ, ಕಡಪಾ, ಆಂಧ್ರ ಪ್ರದೇಶ
271	759	ಸೈಯದ್ ಇಮ್ರಾನ್, ನಂ.ಇ201ಎ/118, 9ನೇ ಮುಖ್ಯ ರಸ್ತೆ, 34ನೇ ಕ್ರಾಸ್, ಕರೆಂದ್ರ ಟೆಲಿಫೋನ್ ಎಕ್ಸ್‌ಚೇಂಜ್ ಹತ್ತಿರ, ಯಾರಬ್ ನಗರ, ಬನಶಂಕರಿ 2ನೇ ಹಂತ, ಬೆಂಗಳೂರು.
272	761	ಜೈದ್ ಮಹಮ್ಮದ್, #1757, 17ನೇ ಕ್ರಾಸ್, ಗೋವಿಂದಪುರ ಮುಖ್ಯ ರಸ್ತೆ, ಅರೇಬಿಕ್ ಕಾಲೇಜ್ ಪೋಸ್ಟ್, ಬೆಂಗಳೂರು.
273	762	ನಿಗರ್ ಸುಲ್ತಾನ, #89, ಬಾಬು ರೆಡ್ಡಿ ಕಾಲೋನಿ, ಮನೋರಾಯನಪಾಳ್ಯ, ಬೆಂಗಳೂರು–ಕರ್ನಾಟಕ
274	763	ಮಹಮ್ಮದ್ ಅಲ್ತಾಫ್ ಪಾಷಾ, #127, 6ನೇ ಕ್ರಾಸ್, ಸಿಂಗಾಪುರ, ಬೆಂಗಳೂರು–97.
275	764	ಯಾಸೀನ್ ಫಾತಿಮಾ, #22/1, 7ನೇ ಕ್ರಾಸ್, ಡಿ ಬ್ಲಾಕ್, ವಾಗ್ದಿ ರಸ್ತೆ, ಬೆಂಗಳೂರು.
276	766	ಎ ಜಯಲಾನಿ, #2, ಮುತ್ತಮ್ಮ ಲೇಔಟ್, ವಿಜಿನಾಪುರ, ದೂರವಾಣಿ ನಗರ ಅಂಚೆ, ಬೆಂಗಳೂರು
277	769	ಮೊಹಮ್ಮದ್ ಫೌಸ್, ನಂ.119/1, 1ನೇ ಎ ಮುಖ್ಯ ರಸ್ತೆ, ಭಾರತ್ ಮಾತ ಲೇಔಟ್, ವೆಂಕಟೇಶಪುರಂ, ಬೆಂಗಳೂರು
278	770	ಬಲ್ಕೀಸ್ ಫಾತಿಮಾ, ನಂ.3, ಎ ಬ್ಲಾಕ್, ಮುನೇಶ್ವರ ದೇವಸ್ಥಾನ, ಮಾಟದಹಳ್ಳಿ, ಆರ್‌ಟಿ ನಗರ ಅಂಚೆ, ಬೆಂಗಳೂರು.
279	772	ಉಸ್ಮಾನ್ ಅಲಿ, ನಂ.3, ಎ ಬ್ಲಾಕ್, ಮುನೇಶ್ವರ ದೇವಸ್ಥಾನ, ಮಠದಹಳ್ಳಿ, ಆರ್‌ಟಿ ನಗರ ಅಂಚೆ, ಬೆಂಗಳೂರು.
280	773	ರಹಮತುಲ್ಲಾ, 5 ನೇ ಕ್ರಾಸ್, ಮೊಹಮ್ಮದ್ ಅಲಿ ರಸ್ತೆ, ಡಿಜೆ ಹಳ್ಳಿ, ಬೆಂಗಳೂರು ಉತ್ತರ.
281	774	ಕಾಲಿಕ್ ಬಾಷಾ, ಆರೋಕ್ಯ ವಾಧ, ಕೊಯಿಲ್ ಸ್ಟ್ರೀಟ್, ದೇವರಾಜ್ ನಗರ, ವೆಲ್ಲೂರ್–632012.
282	775	ಮಹಮ್ಮದ್ ಜೀಷನ್ ಉಲ್ಲಾ ಶರೀಫ್, 3ನೇ ಕ್ರಾಸ್, ಟಿಪ್ಪುನಗರ, ಎಂ.ಎಂ. ರಸ್ತೆ, ಅರಸೀಕೆರೆ, ಹಾಸನ (ಜಿಲ್ಲೆ).
283	776	ಮೊಹಮ್ಮದ್ ಸರ್ಫರಾಜ್ ಮಿರ್ಜಿ, ಹಾಸನ ರಸ್ತೆ, 7ನೇ ಕ್ರಾಸ್, ಬಿಲಾಲ್ ಮಸೀದಿ ಹತ್ತಿರ, ಬಿಎಚ್ ರಸ್ತೆ, ಅರಸೀಕೆರೆ, ಹಾಸನ ಜಿಲ್ಲೆ
284	777	ಯಾಮಿನುದ್ ಅಹಮದ್, ಹಳೆ ಕಚೇರಿ ಹತ್ತಿರ, ಸುನ್ನಿದ್ ಬೀದಿ ಅಲೂರು ಹಾಸನ (ಜಿಲ್ಲೆ).
285	780	ಯಾಸ್ಮೀನ್ ಖಾನಮ್, ನಂ.4, 3ನೇ ಕ್ರಾಸ್, ಕೃಷ್ಣಪ್ಪ ಗಾರ್ಡನ್, ಬೆನ್ಸನ್ ಟೌನ್ ಪೋಸ್ಟ್, ಬೆಂಗಳೂರು.
286	781	ರಿಫತ್ ಉಲ್ ಐನ್, 27, ಬೆನ್ಸನ್ ರಸ್ತೆ, ಬೆನ್ಸನ್ ಟೌನ್, ಬೆಂಗಳೂರು, ಕರ್ನಾಟಕ.
287	782	ರುಕ್ಸಾನಾ ಆರ್, ನಂ.25, 3 ನೇ ಮುಖ್ಯ, 7 ನೇ ಕ್ರಾಸ್, ಸುಲ್ತಾನಪಾಳ್ಯ ಮುಖ್ಯ ರಸ್ತೆ, ಭುವನೇಶ್ವರಿ ನಗರ, ಆರ್‌ಟಿ ನಗರ ಅಂಚೆ, ಬೆಂಗಳೂರು.
288	783	ಮೊಹಮ್ಮದ್ ಸಮೀರ್ ಪಾಷಾ, #6370, 2ನೇ ಕ್ರಾಸ್, ವಿಜಯ ಭಾರತಿ ಶಾಲೆಯ ಹತ್ತಿರ, ಭುವನೇಶ್ವರಿ ನಗರ, ಆರ್‌ಟಿ ನಗರ, ಬೆಂಗಳೂರು.
289	784	ಅಲಿ ಮೊಹಮ್ಮದ್, ನಂ.29, 4 ನೇ ಕ್ರಾಸ್, 1 ನೇ ಮಹಡಿ, ಕನಕ ನಗರ, ಆರ್‌ಟಿ ನಗರ ಪೋಸ್ಟ್, ಬೆಂಗಳೂರು
290	785	ಮೊಹಮ್ಮದ್ ಹಬೀಬುಲ್ಲಾ, #8, 4ನೇ ಕ್ರಾಸ್, ಒಬಿಕ ರಸ್ತೆ, ಕುಶಾಲ್ ನಗರ, ಬೆಂಗಳೂರು.
291	786	ಮೊಹಮ್ಮದ್ ತಜಮ್ಮುಲ್, #8, 4ನೇ ಕ್ರಾಸ್, ಎಂಒಕಿ ರಸ್ತೆ, ಕುಶಾಲ್ ನಗರ, ಬೆಂಗಳೂರು.
292	787	ಅಲಿ ರಿಜ್ವಾನ್ ಶರೀಫ್, ನಂ.16/1, ಅನ್ವರ್ ಲೇಔಟ್, ಕೆಜಿ ಹಳ್ಳಿ ಅರೇಬಿಕ್ ಕಾಲೇಜು ಪೋಸ್ಟ್, ಬೆಂಗಳೂರು.
293	789	ಸೈಯದ್ ಬುರ್ಹಾನ್, #465, 1ನೇ ಬ್ಲಾಕ್, 1ನೇ ಮೇನ್, ಡಿಬಿ ಸಾಂದ್ರ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು–97
294	793	ನಸ್ರೀನ್ ತಾಜ್, ನಂ.3/2, ಸ್ಟಾಂಡೇಜ್ ರಸ್ತೆ, ಜಯ ಮಹಲ್, ಫ್ರೇಜರ್ ಟೌನ್, ಬೆಂಗಳೂರು
295	796	ಮಹಮ್ಮದ್ ಇಬ್ರಾಹಿಂ, #418, ತಂಪುರ ಗ್ರಾಮಠಾಣಾ, ಕೆಬಿ ಸಾಂದ್ರ, ಬೆಂಗಳೂರು–45
296	804	ಮೊಹಮ್ಮದ್ ಜಮೀಲ್ ಅಹ್ಮದ್, #183, 6ನೇ ಮೇನ್, 2ನೇ ಬ್ಲಾಕ್, ಆರ್.ಟಿ. ನಗರ, ಬೆಂಗಳೂರು, ಕರ್ನಾಟಕ
297	809	ಸೈಯದ್ ಮಹಮ್ಮದ್ ಮಹಾರ್, ಡೋರ್ ನಂ.145, 1ನೇ ಬ್ಲಾಕ್, ದೊಡ್ಡಬೊಮ್ಮಸಂದ್ರ, ಕೃಷ್ಣ ದೇವಸ್ಥಾನ ರಸ್ತೆ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು.
298	810	ನೂರ್ ಫರ್ಹಾನಾ, ಡೋರ್ ನಂ.145, 1ನೇ ಬ್ಲಾಕ್, ದೊಡ್ಡಬೊಮ್ಮಸಂದ್ರ, ಕೃಷ್ಣ ದೇವಸ್ಥಾನ ರಸ್ತೆ, ವಿದ್ಯಾರಣ್ಯಪುರ ಅಂಚೆ, ಬೆಂಗಳೂರು
299	813	ಸಬೀರಾ ಬಾಗಲಕೊಟೆ, ಕಮಾನ್ ಖಾನ್ ಬಜಾರ್ ರಸ್ತೆ, ಗುಲಾಂ ಹುಸೇನ್ ಗಲ್ಲಿ, ಬಿಜಾಪುರ
300	814	ನಜೀಮಾ, # ನಂ.16/1, ಅನ್ವರ್ ಲೇಔಟ್, ಕೆ.ಜಿ.ಹಳ್ಳಿ, ಅರೇಬಿಕ್ ಕಾಲೇಜು ಅಂಚೆ, ಬೆಂಗಳೂರು.
301	816	ಕಲೀಮ್ ಅಶ್ರಾಕ್ ಟಿ, ನಂ.19, ಲಿಂ.8ನೇ ಬೀದಿ, ಒಪಿಹೆಚ್ ರಸ್ತೆ ಕ್ರಾಸ್, ಶಿವಾಜಿನಗರ, ಬೆಂಗಳೂರು.
302	817	ಸೈಯದ್ ನವಾಜ್, ನಂ.10/1, 4 ನೇ ಮುಖ್ಯ, ಗಂಗಾ ನಗರ ವಿಸ್ತರಣೆ, ಆರ್‌ಟಿ ನಗರ ಪೋಸ್ಟ್, ಬೆಂಗಳೂರು.
303	821	ಎಸ್ ಎ ರಿಹಾನ್, ಫ್ಲಾಟ್ ನಂ.202, ಪೆಸಿಫಿಕ್ ರೆಸಿಡೆನ್ಸಿ, 2ನೇ ಮಹಡಿ, ನಂ.05, ಎನ್‌ಪಿ ಫ್ಯಾಕ್ಟರಿ ರಸ್ತೆ, ಕಾವಲ್ ಭೈರಸಂದ್ರ, ಆರ್‌ಟಿ ನಗರ, ಬೆಂಗಳೂರು.
304	822	ಸೈಯದ್ ಅಬ್ದುಲ್ ರಹಮಾನ್, ಫ್ಲಾಟ್ ನಂ.202, ಪೆಸಿಫಿಕ್ ರೆಸಿಡೆನ್ಸಿ, 2ನೇ ಮಹಡಿ, ನಂ.05, ಎನ್‌ಪಿ ಫ್ಯಾಕ್ಟರಿ ರಸ್ತೆ, ಕಾವಲ್ ಭೈರಸಂದ್ರ, ಆರ್‌ಟಿ ನಗರ, ಬೆಂಗಳೂರು.
305	823	ಎಸ್ ಅಮ್ರಿನ್, ನಂ.167/ಎ, ಟೈಪ್ 3 ರೈಲ್ವೆ ಕ್ವಾರ್ಟರ್ಸ್, ತಿಮ್ಮಯ್ಯ ರಸ್ತೆ, ಕಂಟೋನ್ಮೆಂಟ್ ರೈಲ್ವೆ ನಿಲ್ದಾಣದ ಹತ್ತಿರ, ವಸಂತ ನಗರ, ಬೆಂಗಳೂರು.
306	824	ನೂರ್ ಜೈನಾಬ್, ಫ್ಲಾಟ್ ನಂ.202, ಪೆಸಿಫಿಕ್ ರೆಸಿಡೆನ್ಸಿ, 2ನೇ ಮಹಡಿ, ನಂ.05, ಎನ್‌ಪಿ ಫ್ಯಾಕ್ಟರಿ ರಸ್ತೆ, ಕಾವಲ್ ಭೈರಸಂದ್ರ, ಆರ್‌ಟಿ ನಗರ, ಬೆಂಗಳೂರು.
307	826	ಇಸ್ಮಾಯಿಲ್ ಬೇಗ್, 6/29 ಎ, ಹೆಚ್ ಎರ ರಸ್ತೆ, 2 ನೇ ಕ್ರಾಸ್, ಲಿಂಗರಾಜಪುರಂ, (ಸೇಂಟ್ ಥಾಮಸ್ ಟೌನ್ ಪಿ.ಒ.), ಬೆಂಗಳೂರು.
308	832	ನಜೀಮಾ ತಬಸ್ಸುಮ್, ನಂ.13, 3 ನೇ ಸಿ ಮೇನ್, ರಫತ್ ಸಿಂಗ್ ಲೇಔಟ್, ಕಾವಲ್ ಭೈರಸಂದ್ರ, ಆರ್‌ಟಿ ನಗರ ಅಂಚೆ, ಬೆಂಗಳೂರು.
309	833	ಆಯೇಶಾ ಸಿದ್ದಿಕ್ಕಾ ಜಮೀಲ್, #183, 6ನೇ ಮೇನ್, 2ನೇ ಬ್ಲಾಕ್, ಆರ್ ಟಿ ನಗರ, ಬೆಂಗಳೂರು, ಕರ್ನಾಟಕ
310	834	ತಮೀನಾಜ್ ಶೇಕ್, 38, 2ನೇ ಕ್ರಾಸ್, ಇಂದಿರಾನಗರ 2ನೇ ಹಂತ, ಬೆಂಗಳೂರು.
311	835	ಆರ್ ಕೆ ಸಾರಾ ನೌಶೀನ್, 38, 10ನೇ ಎ ಮುಖ್ಯರಸ್ತೆ, 2ನೇ ಕ್ರಾಸ್, ಇಂದಿರಾನಗರ 2ನೇ ಹಂತ, ಬೆಂಗಳೂರು.
312	836	ಜಬೀರ್ ಅಹಮದ್ ಎ, ನಂ.7/1, 1ನೇ ಕ್ರಾಸ್, ಹೆಣ್ಣೂರು ಮುಖ್ಯ ರಸ್ತೆ, ಲಿಂಗರಾಜಪುರಂ, ಬೆಂಗಳೂರು.
313	837	ಹುಮೇರಾ ಬೇಗಂ, ನಂ.44, ಹಚಿನ್ಸ್ ರಸ್ತೆ, 2ನೇ ಕ್ರಾಸ್, ಲಿಂಗರಾಜಪುರಂ, ಸೇಂಟ್ ಥಾಮಸ್ ಟೌನ್, ಬೆಂಗಳೂರು.
314	838	ರಾಹಿಲಾ ಶರೀಫ್, ನಂ.8, 2ನೇ ಕ್ರಾಸ್, ಕ್ರಾಸ್‌ವೆಲ್ ಸ್ಟ್ರೀಟ್, ಲಿಂಗರಾಜಪುರಂ, ಬೆಂಗಳೂರು.
315	840	ಸೈಯದ್ ಅಸ್ಗರ್ ಅಹಮದ್, 6–468, 1ನೇ ಕ್ರಾಸ್, 1ನೇ ಬ್ಲಾಕ್, ದೊಡ್ಡಬೊಮ್ಮಸಂದ್ರ, ವಿದ್ಯಾರಣ್ಯಪುರ, ಬೆಂಗಳೂರು
316	844	ಉಮ್ಮ ಐಮನ್, ನಂ.47, ಹಳೆಯ ಬಂಬೂ ಬಜಾರ್ ರಸ್ತೆ, ಶಿವಾಜಿ ನಗರ, ಬೆಂಗಳೂರು, ಕರ್ನಾಟಕ
317	845	ಹುಮೈರಾ ಬಾನೋ, ನಂ.47, ಹಳೆಯ ಬಂಬೂ ಬಜಾರ್ ರಸ್ತೆ, ಶಿವಾಜಿನಗರ, ಬೆಂಗಳೂರು.
318	846	ಸೈಯದ್ ಜಮೀರ್, #368/ಎ, ಸುಲ್ತಾನ್ ಶಿಫ್ಟಾರಿಯಾ, ಎಸ್ ಎ ಫ್ರಂಕ್ಲಿನ್ ಹಾಲ್ ರಸ್ತೆ, ಮಹಾಲಕ್ಷ್ಮಿ ಲೇಔಟ್, ಕೋಲಾರ
319	852	ತಸ್ಲಿಯಾ ಅಕ್ತರ್, ಡಿ–20, ಐಟಿಐ ಲೇಔಟ್, 2ನೇ ಕ್ರಾಸ್, ವಿಜಿನಾಪುರ, ಬೆಂಗಳೂರು.
320	864	ಸೈಯದ್ ನದೀಮ್ ಅಹಮದ್
321	868	ಜಾಹಿದ್ ಫೈಸಲ್ ಸೌದಾಗರ್, ಎ5/105, ಕೌಸರ್ ಬಾಗ್ ಹೌ. ಸೊಕ್, ಕೊಂಧ್ವಾ ಖುರ್ದ್ ಪುಣೆ
322	869	ಸೈಯದ್ ನದೀಮ್ ಅಹಮದ್, 1/1, 2 ನೇ ಅಡ್ಡ, ಹೈನ್ಸ್ ರಸ್ತೆ, ಶಿವಾಜಿನಗರ, ಬೆಂಗಳೂರು.
323	871A	ಶಿರೀನ್ ಅಕ್ರಮ್ ಶೇಖ್, ಡಿ–20, ಐಟಿಐ ಲೇಔಟ್, 2ನೇ ಕ್ರಾಸ್, ವಿಜಿನಾಪುರ, ಬೆಂಗಳೂರು.
324	872	ಮೊಹಮ್ಮದ್ ಅಕ್ರಮ್, ಮನೆ # 20, ಐಟಿಐ ಲೇಔಟ್, 2ನೇ ಕ್ರಾಸ್, ವಿಜಿನಾಪುರ, ಬೆಂಗಳೂರು.
325	875	ಮೊಹಮ್ಮದ್ ಸಾದಿಕ್, ಟಿಎಂ ರಸ್ತೆ, ಬೆಳ್ಳೂರು, ಬೆಳ್ಳೂರು, ಮಂಡ್ಯ, ನಾಗಮಂಗಲ, ಕರ್ನಾಟಕ
326	879	ಮೊಹಮ್ಮದ್ ಸಜೀಲ್ ತನ್ವೀರ್, 460/2ಇ, 2ನೇ ಕ್ರಾಸ್, ಶಾಂತಿ ನಗರ ಪಶ್ಚಿಮ, ಹೊಸೂರು, ಕೃಷ್ಣಗಿರಿ ಜಿಲ್ಲೆ
327	-	ರಾಹಿಲಾ ಸುಲ್ತಾನಾ, #1036 ಐಎಲ್ಎಸ್ ಮಂಜಿಲ್, ತಿಲಕ್ ನಗರ, ಸರ್ಜಾಪುರ ರಸ್ತೆ, ಅತ್ತಿಬೆಲೆ, ಆನೇಕಲ್ ತಾಲೂಕು, ಬೆಂಗಳೂರು.
328	-	ತಾಹೇರಾ ಖಾತೂನ್, #1030 ಐಎಲ್ಎಸ್ ಮಂಜಿಲ್, ತಿಲಕ್ ನಗರ, ಸರ್ಜಾಪುರ ರಸ್ತೆ, ಅತ್ತಿಬೆಲೆ, ಆನೇಕಲ್ ತಾಲೂಕು, ಬೆಂಗಳೂರು.
329	-	ಫರ್ಹೀನ್ ಫೈಯಾಜ್ ಅಹ್ಮದ್, #53,003, ಅಫ್ತಾಬ್ ಅಮೃತ ಅಪಾರ್ಟ್ಮೆಂಟ್, ರಥನ್ ಸಿಂಗ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು.
330	-	ನಯಾಜ್ ಫೈಯಾಜ್ ಅಹಮದ್, #53,ಜಿ003, ಅಫ್ತಾಬ್ ಅಮೃತ ಅಪಾರ್ಟ್ಮೆಂಟ್, ರಥನ್ ಸಿಂಗ್ ರಸ್ತೆ, ಫ್ರೇಜರ್ ಟೌನ್, ಬೆಂಗಳೂರು.
331	-	ಸುಮೇರಾ ಶಬ್ರೀನ್, #1028, 1ನೇ ಕ್ರಾಸ್ ಪೆರಿಯಾರ್ ನಗರ, ವಾಟರ್ ಟ್ಯಾಂಕ್ ಹಿಂದೆ, ಡಿ.ಜೆ. ಹಳ್ಳಿ, ಬಿ.ಲೋರ್ ಉತ್ತರ, ಫ್ರೇಜರ್ ಟೌನ್, ಬೆಂಗಳೂರು.
332	-	ಮಹಬೂಬ್ ಜಾನ್ ಎಚ್.ಎ. # ಡಿಆರ್‌ಆರ್ ಸರ್ಕಾರ, ಪಾಲಿಟೆಕ್ನಿಕ್, ಹದಡಿ ರಸ್ತೆ, ದಾವಣಗೆರೆ
333	-	ಎಸ್.ಫಿರೋಜ್ ಬಾಷಾ #31, 7ನೇ ಕ್ರಾಸ್, ಕನಕ ನಗರ, ಆರ್.ಟಿ.ನಗರ ಪೋಸ್ಟ್, ಬೆಂಗಳೂರು.
334	-	ಮಹಮ್ಮದ್ ಅಫ್ಜಲ್, #64, 2ನೇ ಕ್ರಾಸ್, ಮೋದಿ ರಸ್ತೆ, ದೇವಜೀವನಹಳ್ಳಿ ಶ್ರೀನಿವಾಸ ನಗರ, ಬೆಂಗಳೂರು.
335	-	ಜಿತೇಂದ್ರ ಬಹದರ್ ಕಟಾಯತ್, #33, ಬೈಲಮ್ಮ ನಿಲಯ ಜಿಕೆವಿಕೆ ರಸ್ತೆ ಶನಿಮಹಾತ್ಮ ದೇವಸ್ಥಾನದ ಹತ್ತಿರ,
336	-	ಫರ್ವೀನ್ ಕವೆಂಕಾ ಜಬೀರ್, # 10, ವಸಂತ ಅಪ್ಪ ಬ್ಲಾಕ್, 5 ನೇ ಮುಖ್ಯ, 5 ನೇ ಕ್ರಾಸ್ ಮೆಕ್ಕಾ ಮಸೀದಿ ರಸ್ತೆ, ಗಂಗಾನಗರ, ಆರ್ ಟಿ ನಗರ, ಬೆಂಗಳೂರು
337	-	ಸಫೀನಾ ತಸ್ರೀನ್, # 379, 9 ನೇ ಕ್ರಾಸ್, 2 ನೇ ಬ್ಲಾಕ್, ಆರ್ ಟಿ ನಗರ, ಬೆಂಗಳೂರು.
338	-	ತಬ್ಬಸ್ಸುಮ್ ಬಾನು, # 379, ನೆಲ ಮಹಡಿ, 9 ನೇ ಕ್ರಾಸ್, 2 ನೇ ಬ್ಲಾಕ್, ಆರ್ ಟಿ ನಗರ, ಬೆಂಗಳೂರು.
339	-	ಅಬ್ದುಲ್ ಖಲೀಲ್, #7,'ಎಫ್' ಕ್ರಾಸ್, ನ್ಯೂ ಗುರಪ್ಪನ ಪಾಳ್ಯ, ಮದರಸಾಬ್ ಲೇಔಟ್, ಬೆಂಗಳೂರು.
340	-	ಸೈಯದ್ ಜಾಹಿದ್, #92, 3 ನೇ ಮಹಡಿ, 6 ನೇ ಕ್ರಾಸ್, ಸೋಮೇಶ್ವರ ನಗರ, ಜಯನಗರ, 1 ನೇ ಬ್ಲಾಕ್, ಬೆಂಗಳೂರು – 560011
341	-	ನಜೀಮ್ ಖಾನ್, #10, ಕಾಳೇನಹಳ್ಳಿ ಪೋಸ್ಟ್, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ – 573136
342	-	ಎ.ಬಿ ಅಸ್ಲಂ ಪಾಷಾ, #27/16, ಬಿಹೆಚ್‌ಇಎಲ್ ಲೇಔಟ್, ಮೆಕ್ಕಾ ಮಸೀದಿ ಹತ್ತಿರ, ಎಸ್‌ಆರ್‌ಕೆ ಉದ್ಯಾನದ ಹತ್ತಿರ, ದಕ್ಷಿಣ ಬೆಂಗಳೂರು.
343	-	ದಿಲ್ಶಾದ್ ಜನವರಿ, #27/16, ಬಿಹೆಚ್‌ಇಎಲ್ ಲೇಔಟ್, ಮೆಕ್ಕಾ ಮಸೀದಿ ಹತ್ತಿರ, ಎಸ್‌ಆರ್‌ಕೆ ಗಾರ್ಡನ್ ಹತ್ತಿರ, ದಕ್ಷಿಣ ಬೆಂಗಳೂರು.
344	-	ಆಯೇಷಾ ಸುಲ್ತಾನ, #16, 2ನೇ ಕ್ರಾಸ್, ಗಿಡ್ಡಪ್ಪ ಬ್ಲಾಕ್, ಜಾಕಿ ಗಾರ್ಡನ್, ಆರ್ ಟಿ ನಗರ, ಬೆಂಗಳೂರು.
345	-	ಅಬ್ದುಲ್ ಕಲೀಂ, #19/1, 5 ನೇ ಕ್ರಾಸ್, ಕೌಸರ್ ನಗರ, ದಿನ್ನೂರ್ ಮುಖ್ಯ ರಸ್ತೆ, ಆರ್ ಟಿ ನಗರ, ಬೆಂಗಳೂರು.
346	-	ಎನ್ ಎಚ್ ಶಫಿ ಅಹಮದ್, #01, 4 ನೇ ಮುಖ್ಯ, 3 ನೇ ಕ್ರಾಸ್, ಸಿದ್ದಿಕ್ ನಗರ, ಮೈಸೂರು
347	-	ಅಬಿದ್ ಹುಸಿಯನ್ ಎನ್ ಎಸ್, #01, 4ನೇ ಮುಖ್ಯ, 3ನೇ ಕ್ರಾಸ್, ಸಿದ್ದಿಕ್ ನಗರ, ಮೈಸೂರು
348	-	ಮಹಮ್ಮದ್ ತಾಯೂಬ್ ಅಹಮದ್, #138, 2ನೇ ಕ್ರಾಸ್, ಅನ್ವರ್ ಲೇಔಟ್, ಶಾಂಪುರ ಮುಖ್ಯ ರಸ್ತೆ, ವೇಣುಗೋಪಾಲ ಸ್ವಾಮಿ ಬೀದಿ, ಬೆಂಗಳೂರು.
349	-	ಪಿ. ರೆಹನಾ ಸುಲ್ತಾನಾ, #27, 10ನೇ ಕ್ರಾಸ್, 6ನೇ ಮುಖ್ಯ, ಪಿಳ್ಳಪ್ಪ ಬ್ಲಾಕ್, ಗಂಗಾನಗರ, ಆರ್ ಟಿ ನಗರ, ಬೆಂಗಳೂರು
350	-	ನಗೀನಾ, #ಇ387, ಜಿಪಿಓ ಶಾಲೆ, ಗೋವಿಂದಪುರ, ನಾಗವಾರ, ಅರೇಬಿಕ್ ಕಾಲೇಜು, ಬೆಂಗಳೂರು
351	-	ಎ ಇಮ್ರಾನ್ ಬಾಷಾ #20/1, ಡಿ ಸ್ಟ್ರೀಟ್, ಭಾರತಿ ನಗರ, ಬೆಂಗಳೂರು.
352	-	ಎಸ್ ರೋಶನ್ ಜಮೀರ್, #49, 3ನೇ ಕ್ರಾಸ್, ಕೆಂಪೇಗೌಡ ಲೇಔಟ್, ಆರ್,ಕೆ, ಹೆಗಡೆ ನಗರ, ಬೆಂಗಳೂರು.
353	-	ಎಸ್ ಖುರ್ಶಿದ್ ಬೇಗಂ, #418, ಹೆಚ್‌ಎಂಟಿ ಲೇಔಟ್, ಆನಂದ್ ನಗರ, ಹೆಬ್ಬಾಳ ಬೆಂಗಳೂರು.
354	-	ರೇಷ್ಮಾ ಸುಲ್ತಾನಾ, #418, ಹೆಚ್‌ಎಂಟಿ ಲೇಔಟ್, ಆನಂದ್ ನಗರ, ಹೆಬ್ಬಾಳ ಬೆಂಗಳೂರು.
355	-	ಎಸ್ ಮುಮ್ತಾಜ್ ಬೇಗಂ, #27, 6ನೇ ಮುಖ್ಯ, 10ನೇ ಕ್ರಾಸ್, ಪಿಳ್ಳಪ್ಪ ಬ್ಲಾಕ್, ಗಂಗಾನಗರ, ಬೆಂಗಳೂರು.
356	-	ಎಸ್ ನೂರ್ಜಹಾನ್ ಬೇಗಂ, #27, ನೂರಿ ಮಂಜಿಲ್, ಪಿಳ್ಳಪ್ಪ ಬ್ಲಾಕ್, ಗಂಗಾನಗರ ಸಿಬಿಐ ರಸ್ತೆ, ಆರ್ ಟಿ ನಗರ, ಬೆಂಗಳೂರು.
357	-	ಎಸ್ ನೂರ್ ಮೊಹಮ್ಮದ್, ಡಿ.# 418, 3ನೇ ಮುಖ್ಯರಸ್ತೆ, ಎಚ್‌ಎಂಟಿ ಲೇಔಟ್, ಆನಂದ್ ನಗರ, ಎಚ್‌ಎ ಫಾರ್ಮ್, ಬೆಂಗಳೂರು.
358	-	ಎಸ್ ರೋಶನಿ ತಾರಾ, ಡಿ.# 418, 3ನೇ ಮುಖ್ಯ ರಸ್ತೆ, ಎಚ್‌ಎಂಟಿ ಲೇಔಟ್, ಆನಂದ್ ನಗರ, ಎಚ್‌ಎ ಫಾರ್ಮ್, ಬೆಂಗಳೂರು.
359	-	ಸೈಯದ್ ಅಯೂಬ್, #27, ನೂರಿ ಮಂಜಿಲ್, 6 ನೇ ಮುಖ್ಯ, 10 ನೇ ಕ್ರಾಸ್, ಕುಲ್ಲಪ್ಪ ಬ್ಲಾಕ್, ಗಂಗಾ ನಗರ, ಆರ್‌ಟಿ ನಗರ ಪೋಸ್ಟ್, ಬೆಂಗಳೂರು.
360	-	ಆಯೇಷಾ ಪರ್ವೀನ್, #49, 3ನೇ ಕ್ರಾಸ್, ಕೆಂಪೇಗೌಡ ಲೇಔಟ್, ಆರ್.ಕೆ. ಹೆಗಡೆ ನಗರ, ಬೆಂಗಳೂರು.
361	-	ಚಾಂದ್ ಬಾಷಾ, #23, 4ನೇ ಎ ಮೇನ್, ಗುರಪ್ಪನಪಾಳ್ಯ ಹತ್ತಿರ, ಬೆಂಗಳೂರು.
362	-	ಅಜೀಮ ಕೋಲಾರ ಜಿಲ್ಲೆ, ಮಾಲೂರು ತಾಲೂಕು, ಮಾಸ್ತಿ.
363	-	ಸಲೇಹಾ ಖಾನಂ, #39, 14 ಕ್ರಾಸ್, ರಶೀದಿಯಾ ಮಸೀದಿ ಹತ್ತಿರ, ರಶಾದ್ ನಗರ, ನಾಗವಾರ, ಬೆಂಗಳೂರು.
364	-	ಗುಲ್ನಾಜ್ ಬೇಗಂ, #57, ನೆಲ ಮಹಡಿ, 4 ನೇ ಕ್ರಾಸ್, ಉಮರ್ ನಗರ, ಎಪಿಜೆ ಅಬ್ದುಲ್ ಕಲಾಂ ಮುಖ್ಯ ರಸ್ತೆ, ನಾಗವಾರ ಎಸಿ ಪೋಸ್ಟ್, ಬೆಂಗಳೂರು.
365	-	ಶೇಕ್ ಮೊಹಮ್ಮದ್ ರಫಿ, #156, 2ನೇ ಮುಖ್ಯರಸ್ತೆ, 9ನೇ ಕ್ರಾಸ್, ಎಂಎಸ್ ನಗರ, ತಿರುಮೇನಹಳ್ಳಿ, ಬೆಂಗಳೂರು.
366	-	ನೂರ್ ಮಲ್ಲಿಕಾ ಬಾನು, #37, ಉಮರ್ ಬಾಗ್ ಲೇಔಟ್, ಜೆಪಿ ನಗರ, ಪೋಸ್ಟ್, ಬೆಂಗಳೂರು.
367	-	ಹುಸ್ನಾ ನಿಖತ್, #16, ಧನಕೋಟಿ ಲೇನ್, ತಿಮ್ಮಯ್ಯ ರಸ್ತೆ, ಅಡ್ಡ, ಶಿವಾಜಿನಗರ, ಬೆಂಗಳೂರು.
368	-	ಎಸ್ ಮೊಹಮ್ಮದ್ ಅಜೀಂ, #7 ಬಿ, ವಾರ್ಡ್ ನಂ. 17, ಗುರುಕೃಪಾ ಕಾಲೋನಿ, ಪಟೇಲ್ ನಗರ, ಬಳ್ಳಾರಿ
369	-	ಎಸ್ ರಶೀದಾ #7/ಬಿ, 17 ವಾರ್ಡ್ ಪಟೇಲ್ ನಗರ, 4ನೇ ಕ್ರಾಸ್, ವೆಂಕಟೇಶ್ವರ ದೇವಸ್ಥಾನದ ಹತ್ತಿರ, ಗುರುಕೃಪಾ ಕಾಲೋನಿ, ಬಳ್ಳಾರಿ
370	-	ನುರುಥ್ ಅಂಜುಮ್ #7 ಬಿ, ವಾರ್ಡ್ ನಂ. 17, ಗುರುಕೃಪಾ ಕಾಲೋನಿ, ಪಟೇಲ್ ನಗರ, ಬಳ್ಳಾರಿ
371	-	ಮಹಮ್ಮದ್ ಇಫ್ತೇಕರ್, #7/ಬಿ, 17 ವಾರ್ಡ್ ಪಟೇಲ್ ನಗರ, 4 ನೇ ಕ್ರಾಸ್, ವೆಂಕಟೇಶ್ವರ ದೇವಸ್ಥಾನದ ಹತ್ತಿರ, ಗುರುಕೃಪಾ ಕಾಲೋನಿ, ಬಳ್ಳಾರಿ
372	-	ರಜಿಯಾ ಬೇಗಂ, #7/ಬಿ, 17 ವಾರ್ಡ್ ಪಟೇಲ್ ನಗರ, 4 ನೇ ಕ್ರಾಸ್, ಗುರುಕೃಪಾ ಕಾಲೋನಿ, ಬಳ್ಳಾರಿ
373	-	ಮೊಹಮ್ಮದ್ ಮುಜೀಬ್ ಪಾಷಾ, #9/9/1, 12/2, 6 ನೇ ಕ್ರಾಸ್, ಬಿಸ್ಮಿಲ್ಲಾ ನಗರ, ಬಿಜಿ ರಸ್ತೆ, ಬೆಂಗಳೂರು.
374	-	ಬಲ್ಕೀಸ್ ಫಾತಿಮಾ #3, ಎ ಬ್ಲಾಕ್, ಮುನೇಶ್ವರ ದೇವಸ್ಥಾನ, ಮಾಟದಹಳ್ಳಿ, ಆರ್‌ಟಿ ನಗರ ಪೋಸ್ಟ್, ಬೆಂಗಳೂರು.
375	-	"ಉಸ್ಮಾನ್ ಅಲಿ, #3, ಎ ಬ್ಲಾಕ್, ಮುನೇಶ್ವರ ದೇವಸ್ಥಾನ, ಮಠದಹಳ್ಳಿ, ಆರ್‌ಟಿ ನಗರ ಪೋಸ್ಟ್, ಬೆಂಗಳೂರು."

ಸಹಿ/–
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿ,
ಮೆ. ಆಲಾ ವೆಂಚರ್ಸ್ ಲಿ. ವಂಚನೆ ಪ್ರಕಟಣ,
ಬೆಂಗಳೂರು.

ವಾಸಾಸಂಇ/ವಾಪ್ರ/1412/2022–23

ಕೋವಿಡ್–19 – ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ–ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್‌ಗೆ ವಿದ್ಯಾರ್ಥಿಯಿಂದ ಇ–ಮೇಲ್

ಪರೀಕ್ಷೆಗೆ ಹೆದರಿ ಬಾಂಬ್ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರದಲ್ಲಿರುವ ನ್ಯಾಷನಲ್ ಹಿಲ್ ವ್ಯೂ ಪಬ್ಲಿಕ್ ಸ್ಕೂಲ್‌ಗೆ ಬಾಂಬ್ ಬೆದರಿಕೆ ಹಾಕಿದ್ದ ಪ್ರಕರಣದಲ್ಲಿ, ಅದೇ ಶಾಲೆಯ 10ನೇ ತರಗತಿ ವಿದ್ಯಾರ್ಥಿಯನ್ನು ಪೊಲೀಸರು ಮಂಗಳವಾರ ವಶಕ್ಕೆ ಪಡೆದಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಒಡೆತನದ ಶಾಲೆಗೆ ಹುಚ್ಚ ವೆಂಕಟ್ ಹೆಸರಿನ ಇ–ಮೇಲ್‌ನಿಂದ ಬಾಂಬ್ ಬೆದರಿಕೆ ಬಂದಿತ್ತು. ಶಾಲೆ ಕ್ಯಾಂಪಸ್‌ನಲ್ಲಿ ಶೋಧ ನಡೆಸಿದ್ದ ಪೊಲೀಸರು, ಇದೊಂದು ಹುಸಿ ಬೆದರಿಕೆ ಎಂಬುದಾಗಿ ಘೋಷಿಸಿದ್ದರು. ಪ್ರಕರಣ ದಾಖಲಿಸಿಕೊಂಡಿರುವ ರಾಜರಾಜೇಶ್ವರಿನಗರ ಠಾಣೆ ಪೊಲೀಸರು ತನಿಖೆ ಮುಂದುವರಿಸಿದ್ದರು.

'ಶಾಲೆಯ 10ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಯೇ ಬಾಂಬ್ ಬೆದರಿಕೆ ಇ–ಮೇಲ್ ಕಳುಹಿಸಿರುವುದು ತನಿಖೆಯಿಂದ ಪತ್ತೆಯಾಗಿದೆ. ಬಾಲಕನನ್ನು ವಶಕ್ಕೆ ಪಡೆದು ಬಾಲನ್ಯಾಯ ಕಾಯ್ದೆ ಪ್ರಕಾರ ಕ್ರಮ ಜರುಗಿಸಲಾಗಿದೆ. ಬಾಲಕನಾಗಿರುವುದರಿಂದ ಹೆಸರು ಬಹಿರಂಗಪಡಿಸಲಾಗದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶಾಲೆಯಲ್ಲಿ ಜುಲೈ 21ರಿಂದ ಪರೀಕ್ಷೆಗಳು ನಿಗದಿ ಆಗಿದ್ದವು. ಪರೀಕ್ಷೆಯಲ್ಲಿ ಅನುತ್ತೀರ್ಣ ಆಗುವ ಭಯದಲ್ಲಿದ್ದ ವಿದ್ಯಾರ್ಥಿ, ಹೇಗಾದರೂ ಮಾಡಿ ಪರೀಕ್ಷೆ ಮುಂದೂಡುವಂತೆ ಮಾಡಬೇಕೆಂದು ಯೋಚಿಸಿದ್ದ. ತಂದೆಯ ಲ್ಯಾಪ್‌ಟಾಪ್‌ನಲ್ಲಿ ಹುಚ್ಚ ವೆಂಕಟ್ ಹೆಸರಿನಲ್ಲಿ ಇ–ಮೇಲ್ ಸೃಷ್ಟಿಸಿ, ಅದೇ ಇ–ಮೇಲ್‌ನಿಂದ ಶಾಲೆಯ ಇ–ಮೇಲ್ ವಿಳಾಸಕ್ಕೆ ಸಂದೇಶ ಕಳುಹಿಸಿದ್ದ. ಶಾಲೆ ಕ್ಯಾಂಪಸ್‌ನಲ್ಲಿ ಬಾಂಬ್ ಸ್ಫೋಟಗೊಳ್ಳಲಿದೆ ಎಂದು ಹೇಳಿದ್ದ' ಎಂದು ಮೂಲಗಳು ತಿಳಿಸಿವೆ.

'ಸೋಮವಾರವೂ ವಿದ್ಯಾರ್ಥಿ ಎಂದಿನಂತೆ ಶಾಲೆಗೆ ಬಂದಿದ್ದ. ಪೊಲೀಸರು ಶೋಧ ನಡೆಸುವಾಗಲೂ ಆತ ಕ್ಯಾಂಪಸ್‌ನಲ್ಲಿದ್ದ. ಪರೀಕ್ಷೆ ಮುಂದೂಡುತ್ತಾರೆಂದು ಸ್ನೇಹಿತರಿಗೆ ಹೇಳುತ್ತಿದ್ದ.'

'ಬಾಲಕ ಓದಿನಲ್ಲೂ ಜಾಣನಿದ್ದಾನೆ. ಈ ಹಿಂದಿನ ಎಲ್ಲ ಪರೀಕ್ಷೆಯಲ್ಲೂ ಉತ್ತಮ ಅಂಕ ಪಡೆದಿದ್ದಾನೆ. ಆದರೆ, ಜುಲೈ 21ರಿಂದ ಆರಂಭವಾಗಲಿದ್ದ ಪರೀಕ್ಷೆಗೆ ತಯಾರಿ ಮಾಡಿಕೊಂಡಿರಲಿಲ್ಲ. ಅನುತ್ತೀರ್ಣವಾಗುವ ಹಾಗೂ ಪೋಷಕರು ಬಯ್ಯಬಹುದೆಂಬ ಭಯ ಅವನಲ್ಲಿತ್ತು. ಇದೇ ಕಾರಣಕ್ಕೆ ಈತ ಶಾಲೆಗೆ ಇ–ಮೇಲ್ ಮೂಲಕ ಬೆದರಿಕೆಯೊಡ್ಡಿದ್ದ' ಎಂದು ಹೇಳಿವೆ.

'ಯುಪಿಎಸ್' ಕಾರ್ಗೊ: 220 ದೇಶಗಳಿಗೆ ಸರಕು ಸಾಗಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಹೊಸದಾಗಿ 'ಯುಪಿಎಸ್ ಎಕ್ಸ್‌ಪ್ರೆಸ್' ಕಾರ್ಗೊ ಸೇವೆ ಆರಂಭವಾಗಿದ್ದು, ವಿಶ್ವದ 220 ದೇಶಗಳಿಗೆ ಸರಕು ಸಾಗಣೆ ಮಾಡಲು ಕಂಪನಿ ಮುಂದಾಗಿದೆ.

'ಸರಕು ಸಾಗಣೆ ಕ್ಷೇತ್ರದಲ್ಲಿ 1989ರಿಂದ ಕಾರ್ಯಾಚರಣೆ ಶುರು ಮಾಡಿರುವ ಯುಪಿಎಸ್ ಕಂಪನಿ, ಯುರೋಪ್ ದೇಶಗಳು ಹಾಗೂ ಇತರೆಡೆ ಜಾಲ ವ್ಯಾಪಿಸಿದೆ. 2020ರಲ್ಲಿ ಮೊದಲ ಬಾರಿಗೆ ದೇಶದ ದೆಹಲಿ ವಿಮಾನ ನಿಲ್ದಾಣದಲ್ಲಿ ಕಾರ್ಯಾಚರಣೆ ಆರಂಭಿಸಿತ್ತು. ಇದೀಗ, ಬೆಂಗಳೂರು ವಿಮಾನ ನಿಲ್ದಾಣದಲ್ಲಿ 3,000 ಚದರ ಅಡಿ ಜಾಗದಲ್ಲಿ ಹೊಸ ಗೇಟ್‌ವೇ ತೆರೆಯಲಾಗಿದೆ' ಎಂದು ಕಂಪನಿಯ ಭಾರತದ ಘಟಕದ ವ್ಯವಸ್ಥಾಪಕ ನಿರ್ದೇಶಕ ದೀಪಕ್ ಶ್ರೀವಾಸ್ತವ್ ಹೇಳಿದರು.



ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಸರಕು ಹೊತ್ತೊಯ್ದ ಯುಪಿಎಸ್ ಕಂಪನಿಯು ಬೋಯಿಂಗ್ 747–8 ವಿಮಾನ

'ದಕ್ಷಿಣ ಭಾರತದ ರಾಜ್ಯಗಳ ಉತ್ಪನ್ನಗಳನ್ನು ವಿಶ್ವದ 220 ದೇಶಗಳಿಗೆ ತಲುಪಿಸುವ ಜವಾಬ್ದಾರಿಯೊಂದಿಗೆ ಹೊಸ ಘಟಕ ಆರಂಭಿಸಲಾಗುತ್ತಿದೆ. ಈ ಭಾಗದಲ್ಲಿ ನಮ್ಮ ಗ್ರಾಹಕರ ಸಂಖ್ಯೆಯೂ ಹೆಚ್ಚಿದೆ. ರಫ್ತು ಹಾಗೂ ಆಮದು ಎರಡಕ್ಕೂ ಹೊಸ ಘಟಕ ಅನುಕೂಲವಾಗಲಿದೆ' ಎಂದು ತಿಳಿಸಿದರು.

'ಸರಕು ಸಾಗಣೆಗೆ ದೆಹಲಿಯಲ್ಲಿ ಉತ್ತಮ ಸ್ಪಂದನ ವ್ಯಕ್ತವಾಗಿರುವುದರಿಂದ, ನಮ್ಮ ಕಾರ್ಯಾಚರಣೆಯನ್ನು ಬೆಂಗಳೂರಿಗೂ ವಿಸ್ತರಿಸಲಾಗಿದೆ. 'ಬೋಯಿಂಗ್ 747–8' ವಿಮಾನವನ್ನು ಸರಕು ಸಾಗಣೆಗೆ ಬಳಸಿಕೊಳ್ಳಲಾಗುತ್ತಿದ್ದು, ಸದ್ಯ ವಾರಕ್ಕೆ ಐದು ಬಾರಿ ಹಾರಾಟ ನಡೆಸಲಿದೆ' ಎಂದು ದೀಪಕ್ ಹೇಳಿದರು.

'ಡ್ರಗ್ಸ್, ಚಿನ್ನ ಹಾಗೂ ನಿಷೇಧಿತ ವಸ್ತುಗಳ ಸಾಗಣೆಯನ್ನು ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ. ಪ್ರತಿ ಸರಕಿನ ಸ್ಕ್ಯಾನಿಂಗ್ ವ್ಯವಸ್ಥೆ ಇದೆ. ಜೊತೆಗೆ, ಸರಕು ಪರಿಶೀಲನೆಗೆಂದು ಬರುವ ಕಸ್ಟಮ್ಸ್ ಅಧಿಕಾರಿಗಳಿಗೆ ಪ್ರತ್ಯೇಕ ಕೊಠಡಿ ಮೀಸಲಿಡಲಾಗಿದೆ' ಎಂದೂ ತಿಳಿಸಿದರು.

ಬೆಂಗಳೂರು ವಿ.ವಿಗೆ 64ನೇ ಸ್ಥಾನ

ಬೆಂಗಳೂರು: ಪ್ರಸಕ್ತ ಸಾಲಿನ ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು (ಎನ್‌ಐಆರ್‌ಎಫ್) ಪಟ್ಟಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ 64ನೇ ಶ್ರೇಯಾಂಕ ಪಡೆದಿದೆ. 2021ರಲ್ಲಿ 69ನೇ ಶ್ರೇಯಾಂಕ ಪಡೆದಿತ್ತು.

'ಕರ್ನಾಟಕದ ಬಹು ಶಿಸ್ತೀಯ ರಾಜ್ಯ ವಿವಿಗಳಲ್ಲಿ ಬೆಂಗಳೂರು ವಿವಿ 2ನೇ ಸ್ಥಾನ ಪಡೆದಿದ್ದು, ವಿವಿಯ ಸಂಶೋಧನಾ ಹಾಗೂ ಇನ್ನಿತರ ಚಟುವಟಿಕೆಗೆ ಧನಸಹಾಯ ಕೋರಲು ನೆರವಾಗಲಿದೆ. ಇದು ಸಂಶೋಧನಾ ಹಾಗೂ ಶೈಕ್ಷಣಿಕ ಚಟುವಟಿಕೆಗಳ ಪ್ರಗತಿಯನ್ನು ಸೂಚಿಸುತ್ತದೆ' ಎಂದು ಕುಲಪತಿ ಪ್ರೊ. ಡಾ. ಎಸ್.ಎಂ. ಜಯಕರ್ ತಿಳಿಸಿದ್ದಾರೆ.

ಮಸ್ಕ್–ಟ್ವಿಟರ್ ವಿವಾದ: ವಿಚಾರಣೆ ಅಕ್ಟೋಬರ್‌ನಲ್ಲಿ

ವಿಲ್ಮಿಂಗ್ಟನ್ (ಎಪಿ): ಟೆಸ್ಲಾ ಕಂಪನಿ ಸಿಇಒ ಇಲಾನ್ ಮಸ್ಕ್ ವಿರುದ್ಧ ಟ್ವಿಟರ್ ಸಲ್ಲಿಸಿರುವ ಅರ್ಜಿ ವಿಚಾರಣೆ ಡೆಲವೇರ್‌ನ ಕೋರ್ಟ್‌ನಲ್ಲಿ ಮಂಗಳವಾರ ನಡೆಯಿತು. ಉಭಯ ಕಕ್ಷಿ ದಾರರ ವಕೀಲರ ವಾದ ಆಲಿಸಿದ ನ್ಯಾಯಾಧೀಶರು, ವಿಚಾರಣೆಯನ್ನು ಅಕ್ಟೋಬರ್‌ಗೆ ಮುಂದೂಡಿದರು.



'ಡೋಕ್ಲಾಮ್ ಬಳಿ ಚೀನಾದಿಂದ ಗ್ರಾಮ ನಿರ್ಮಾಣ'

ನವದೆಹಲಿ (ಪಿಟಿಐ): ಭೂತಾನ್ ಗಡಿ ಯಲ್ಲಿರುವ ಡೋಕ್ಲಾಮ್ ಪ್ರಸ್ಥಭೂಮಿಯ ಪೂರ್ವಭಾಗದಲ್ಲಿ ಚೀನಾ, ಗ್ರಾಮ ನಿರ್ಮಿಸಿರುವುದು ಉಪಗ್ರಹ ಚಿತ್ರಗಳಿಂದ ತಿಳಿದುಬಂದಿದೆ.

'ಗ್ರಾಮದ ಪ್ರತಿಯೊಂದು ಮನೆ ಮುಂದೆ ಕಾರು ನಿಲ್ಲಿಸಿರುವುದು ಚಿತ್ರಗಳಲ್ಲಿ ಕಾಣಿಸುತ್ತದೆ' ಎಂದು ಈ ಚಿತ್ರಗಳನ್ನು ಬಿಡುಗಡೆ ಮಾಡಿರುವ ಎನ್‌ಡಿಟಿವಿ ಹೇಳಿದೆ.

ಬಾಹ್ಯಾಕಾಶ ತಂತ್ರಜ್ಞಾನ ಹಾಗೂ ಬುದ್ಧಿಮತ್ತೆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ 'ಎಂಎಎಕ್ಸ್‌ಎಆರ್' ಎಂಬ ಕಂಪನಿ ಈ ಚಿತ್ರಗಳನ್ನು ಸೆರೆ ಹಿಡಿದಿದೆ.

ಈ ಹಿಂದೆ ಈ ಪ್ರದೇಶದಲ್ಲಿ ರಸ್ತೆ ನಿರ್ಮಿಸಲು ಮುಂದಾಗಿದ್ದ ಚೀನಾಕ್ಕೆ ಭಾರತ ಪ್ರತಿರೋಧವೊಡ್ಡಿತ್ತು. ಹೀಗಾಗಿ ಉಭಯ ದೇಶಗಳ ಸೇನೆಗಳ ನಡುವೆ 73 ದಿನಗಳ ಕಾಲ ಸಂಘರ್ಷ ವೇರ್ಪಟ್ಟಿತ್ತು. ನಂತರ, ಈ ಪ್ರದೇಶ ತನಗೆ ಸೇರಿದ್ದು ಎಂದು ಭೂತಾನ್ ಹೇಳಿತ್ತು. ಭದ್ರತೆಗೆ ಸಂಬಂಧಿಸಿ, ಈ ಪ್ರದೇಶ ಭಾರತಕ್ಕೆ ಮುಖ್ಯವಾದದ್ದು ಎಂದೇ ಪರಿಗಣಿಸಲಾಗುತ್ತದೆ.



ಅಂಕ್ಲೇಶ್ವರಿ ಅವರೊಂದಿಗೆ ಶಾಸಕ ರಿಜ್ವಾನ್ ಅರ್ಷದ್ ಚರ್ಚಿಸಿದರು

ಅಂಕ್ಲೇಶ್ವರಿ ಮನೆಗೆ ಶಾಸಕ ಭೇಟಿ

ಜನಸ್ಪಂದನ
ಸಿಟಿಜನ್ಸ್ ಫಾರ್ ಚೇಂಜ್
ಪ್ರತಿಸ್ಪಂದನ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ವತಿಯಿಂದ ಜುಲೈ 16ರಂದು ವಸಂತನಗರದ ಬಂಜಾರ ಸಮುದಾಯ ಭವನದಲ್ಲಿ ಆಯೋಜಿಸಿದ್ದ ಜನಸ್ಪಂದನದಲ್ಲಿ ಭಾಗವಹಿಸಿ, ಗಮನ ಸೆಳೆದಿದ್ದ ಟಾಸ್ಕರ್‌ಟೌನ್‌ನ ನಿವಾಸಿ ಅಂಕ್ಲೇಶ್ವರಿ (94 ವರ್ಷ) ಅವರ ನಿವಾಸಕ್ಕೆ ಶಿವಾಜಿನಗರದ ಶಾಸಕ ರಿಜ್ವಾನ್ ಅರ್ಷದ್ ಭೇಟಿ ಮಾಡಿ ಸಮಸ್ಯೆ ಪರಿಹರಿಸಿದರು.

'ಬಡಾವಣೆಯಲ್ಲಿ ಬೆಸ್ಕಾಂ ಅಳವಡಿಸಿರುವ ವಿದ್ಯುತ್ ಪರಿವರ್ತಕದ ಕೆಳಭಾಗದಲ್ಲಿ ತ್ಯಾಜ್ಯ ತಂದು ಹಾಕಲಾಗುತ್ತಿದೆ. ಅಲ್ಲಿಂದ ಕಸ ವಿಲೇವಾರಿ ಮಾಡುತ್ತಿಲ್ಲ. ಬೆಸ್ಕಾಂ, ಬಿಬಿಎಂಪಿ ಮಧ್ಯೆ ಸಮನ್ವಯ ಇಲ್ಲ' ಎಂದು ಅಂಕ್ಲೇಶ್ವರಿ ದೂರಿದ್ದರು.

'ನಿಮ್ಮ ಬಡಾವಣೆಗೆ ನಾನೇ ಬರುತ್ತೇನೆ' ಎಂದು ನೀಡಿದ್ದ ಭರವಸೆಯಂತೆ ರಿಜ್ವಾನ್ ಭೇಟಿ ನೀಡಿದ್ದಾರೆ. ಇದನ್ನು ಅವರು ಫೋಟೊ ಸಹಿತ ಟ್ವೀಟ್ ಮಾಡಿದ್ದಾರೆ.

'ಅಂಕ್ಲೇಶ್ವರಿ ಅವರ ಕಾಳಜಿ ಮೆಚ್ಚುವಂತಹದ್ದು. ಇಳಿವಯಸ್ಸಿನಲ್ಲೂ ಉತ್ತಮ ಸಮಾಜಕ್ಕೆ ಶ್ರಮಿಸುತ್ತಿದ್ದಾರೆ. ಅವರು ಎಲ್ಲರಿಗೂ ಸ್ಫೂರ್ತಿ' ಎಂದಿದ್ದಾರೆ.

ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಸರು, ಮಜ್ಜಿಗೆ ಹಾಗೂ ಮಂಡಕ್ಕಿಗೂ ಕೇಂದ್ರ ಸರ್ಕಾರವು ಜಿಎಸ್‌ಟಿ ವಿಧಿಸಿ ಜನರ ಜೀವಕ್ಕೇ ವಿಷ ಹಾಕುತ್ತಿದೆ. ಬಿಜೆಪಿ ಸರ್ಕಾರವು ನಿತ್ಯ ಒಂದಲ್ಲ ಒಂದು ರೀತಿಯಲ್ಲಿ ಜನರಿಗೆ ಬರೆ ಎಳೆಯುತ್ತಿದೆ ಎಂದು ಆರೋಪಿಸಿದ ಕಾಂಗ್ರೆಸ್ ಕಾರ್ಯಕರ್ತರು, ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

'ಬಿಜೆಪಿ ಸರ್ಕಾರ ದೇಶದಿಂದ ತೊಲಗದಿದ್ದರೆ ಸಾಮಾನ್ಯರು ಜೀವಿಸುವುದು ಕಷ್ಟ. ರೈತರು, ಸಾಮಾನ್ಯರು, ಶಾಲಾ ಮಕ್ಕಳೂ ಸಹ ಜಿಎಸ್‌ಟಿ ಭೂತಕ್ಕೆ ಸಿಲುಕಿ ನರಳುತ್ತಿದ್ದಾರೆ. ಮೋದಿ ಸರ್ಕಾರದ ಅಚ್ಛೇ ದಿನ್ ಹೆಸರಿನಲ್ಲಿ ದಿನನಿತ್ಯ ದೇಶದ ಜನರನ್ನು ಹಿಂಸಿಸುತ್ತಿದೆ' ಎಂದು ಆಪಾದಿಸಿದರು.

ಕೇವಲ ಪ್ರಚಾರ ಕಾರ್ಯದಲ್ಲಿ ನಿರತವಾಗಿರುವ ನರೇಂದ್ರ ಮೋದಿ, ನೈತಿಕ ಹೊಣೆ ಹೊತ್ತು ರಾಜೀನಾಮೆ ಸಲ್ಲಿಸಬೇಕು. ದೇಶದ ಎಲ್ಲೆಡೆ ಜನಸಾಮಾನ್ಯರು ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕುತ್ತಿದ್ದಾರೆ. ಜನರ ಆಕ್ರೋಶಕ್ಕೆ ತಲೆಬಾಗಿ ಮೋದಿ ಅವರು ಸ್ವಪ್ರೇರಣೆಯಿಂದ ರಾಜೀನಾಮೆ ನೀಡಿ ತೊಲಗಬೇಕು ಎಂದು ಆಗ್ರಹಿಸಿದರು.



ಬೆಲೆ ಏರಿಕೆ ಖಂಡಿಸಿ ಮಂಗಳವಾರ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟಿಸಿದರು

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್.ಮನೋಹರ್, ಪ್ರಚಾರ ಸಮಿತಿ ಅಧ್ಯಕ್ಷ ಎ.ಆನಂದ್, ಮುಖಂಡರಾದ ರವಿಶೇಖರ್, ಪ್ರಕಾಶ್, ನವೀನ್, ಮಂಜುನಾಥ್, ಅನಿಲ್, ಚಂದ್ರಶೇಖರ, ಬಾಲಕೃಷ್ಣ, ಪುಟ್ಟರಾಜು, ಆದಿತ್ಯ, ಸುಪ್ರಜ್, ಪ್ರಶಾಂತ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಕುದ್ದೂರು: ಅನೈತಿಕ ಪೊಲೀಸ್ ಗಿರಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಅನೈತಿಕ ಪೊಲೀಸ್‌ಗಿರಿಯ ಹಾವಳಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತೆ ಕಾಣಿಸಿಕೊಂಡಿದೆ. ಕಡಬ ತಾಲ್ಲೂಕಿನ ಆತೂರು ಸಮೀಪದ ಕುದ್ದೂರು ಗ್ರಾಮದ ಮುಸ್ಲಿಂ ಗೆಳತಿಯ ಮನೆಗೆ ಹಿಂದೂ ಯುವತಿಯೊಬ್ಬರು ಊಟಕ್ಕೆ ತೆರಳಿದ್ದು, ಈ ವೇಳೆ ಸಂಘ ಪರಿವಾರಕ್ಕೆ ಸೇರಿದೆ ಎನ್ನಲಾದ ಸಂಘಟನೆಯೊಂದರ ಸದಸ್ಯರು ಮನೆಗೆ ನುಗ್ಗಿ ದಾಂದಲೆ ನಡೆಸಿದ್ದಾರೆ ಎಂದು ದೂರಲಾಗಿದೆ.

ಕುದ್ದೂರಿನ ಮುಸ್ಲಿಂ ಯುವತಿ ಹಾಗೂ ಉಪ್ಪಿನಂಗಡಿಯ ಹಿಂದೂ ಯುವತಿ ಉಪ್ಪಿನಂಗಡಿಯಲ್ಲಿ ಬಟ್ಟೆ ಅಂಗಡಿಯೊಂದರಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದಾರೆ. ಹಿಂದೂ ಯುವತಿಯ ಸಹೋದರಿ ಗರ್ಭಿಣಿಯಾಗಿದ್ದು, ಬಿರಿಯಾನಿ ತಿನ್ನುವ ಆಸೆಯನ್ನು ಸೋದರಿ ಬಳಿ ವ್ಯಕ್ತಪಡಿಸಿದ್ದರು. ಜುಲೈ 12ರಂದು ಗೆಳತಿಯರಿಬ್ಬರು ಉಪ್ಪಿನಂಗಡಿಯಲ್ಲಿ ಕೋಳಿ ಖರೀದಿಸಿದ್ದರು. ಹಿಂದೂ ಯುವತಿಯು ಮುಸ್ಲಿಂ ಗೆಳತಿಯ ಜೊತೆ ಆಕೆಯ ಕುದ್ದೂರಿನ ಮನೆಗೆ ಆಟೊ ರಿಕ್ಷಾದಲ್ಲಿ ತೆರಳಿದ್ದರು. ಈ ವೇಳೆ ಅವರನ್ನು ಹಿಂಬಾಲಿಸಿದ್ದ ಯುವಕರ ಗುಂಪು ಮುಸ್ಲಿಂ ಯುವತಿಯ ಮನೆಯಲ್ಲೇ ಹಿಂದೂ ಯುವತಿಯನ್ನು ತರಾಟೆಗೆ ತೆಗೆದುಕೊಂಡಿತ್ತು. ಮುಸ್ಲಿಂ ಗೆಳತಿಯ ಮನೆಯವರಿಗೂ ಬೆದರಿಕೆ ಒಡ್ಡಿತ್ತು ಎಂದು ಮೂಲಗಳು ತಿಳಿಸಿವೆ.

ಯುವಕರ ಗುಂಪು ಕಡಬ ಠಾಣೆಯ ಪೊಲೀಸ್ ಸಿಬ್ಬಂದಿಯನ್ನೂ ಸ್ಥಳಕ್ಕೆ ಕರೆಸಿಕೊಂಡಿತ್ತು. ಸ್ಥಳಕ್ಕೆ ಬಂದ ಪೊಲೀಸ್ ಸಿಬ್ಬಂದಿ ಕೂಡ ಮುಸ್ಲಿಂ ಕುಟುಂಬವನ್ನು ಹಾಗೂ ಅವರ ಮನೆಗೆ ಭೇಟಿ ನೀಡಿದ್ದ ಹಿಂದೂ ಯುವತಿಯನ್ನೇ ತರಾಟೆಗೆ ತೆಗೆದುಕೊಂಡಿದ್ದರು ಎಂದು ತಿಳಿದುಬಂದಿದೆ.

'ಸಂಘಪರಿವಾರದ ಗೂಂಡಾಗಳು ಮುಸ್ಲಿಂ ಯುವತಿ ಮನೆಯಲ್ಲಿ ಗಲಾಟೆ ಎಬ್ಬಿಸಿ ಮನೆಯವರಿಗೆ ಕೊಲೆ ಬೆದರಿಕೆ ಹಾಕಿದ್ದಾರೆ' ಎಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಉಪ್ಪಿನಂಗಡಿ ತಾಲ್ಲೂಕು ಸಮಿತಿ ಅಧ್ಯಕ್ಷ ಅಬ್ದುಲ್ ಹಮೀದ್ ದೂರಿದ್ದಾರೆ. ಈ ಘಟನೆ ಕುರಿತು ಪ್ರತಿಕ್ರಿಯಿಸಿದ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೃಷಿಕೇಶ್ ಸೋನಾವಣೆ, 'ಈ ಬಗ್ಗೆ ಕಡಬ ಠಾಣೆಗೆ ಯಾರೂ ದೂರು ನೀಡಿಲ್ಲ. ದೂರು ನೀಡಿದರೆ ಪೊಲೀಸರು ತನಿಖೆ ನಡೆಸಲಿದ್ದಾರೆ.' ಎಂದರು.

ಪಿಎಸ್‌ಐ ನೇಮಕಾತಿ ಅಕ್ರಮ ಪ್ರಕರಣ • ಕೋರ್ಟ್‌ಗೆ ಪೌಲ್ ಪರ ವಕೀಲರಿಂದ ಮಾಹಿತಿ

ಸುಳ್ಳುಪತ್ತೆ ಪರೀಕ್ಷೆಗೆ ಅಮೃತ್ ಪೌಲ್ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ಪ್ರಮುಖ ಆರೋಪಿಯಾದ ಐಪಿಎಸ್ ಅಧಿಕಾರಿ ಅಮೃತ್ ಪೌಲ್ ಅವರು ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಲು ನಿರಾಕರಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಒಂದನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶ ಆನಂದ ಚೌಹಾಣ್ ಮಂಗಳವಾರ ವಿಚಾರಣೆ ನಡೆಸಿದರು. ಸುಳ್ಳುಪತ್ತೆ ಪರೀಕ್ಷೆಗೆ ಒಳಪಡಿಸಲು ಆರೋಪಿಯ ಅನುಮತಿ ಕೋರಿ ಪ್ರಾಸಿಕ್ಯೂಷನ್ ಸಲ್ಲಿಸಿದ್ದ ಅರ್ಜಿಗೆ ಪೌಲ್ ಪರ ವಕೀಲ ನಿತಿನ್ ರಮೇಶ್ ಉತ್ತರಿಸಿದರು.

ಇದೇ ವೇಳೆ ಪೌಲ್ ಅವರಿಗೆ ನಿಗದಿತ ಜಾಮೀನು ನೀಡುವಂತೆಯೂ ಅರ್ಜಿ ಸಲ್ಲಿಸಿದ ನಿತಿನ್ ಸುದೀರ್ಘ ವಾದ ಮಂಡಿಸಿದರು. ನಂತರ ನ್ಯಾಯಾಲಯವು ಮುಂದಿನ ವಿಚಾರಣೆಯನ್ನು ಬುಧವಾರಕ್ಕೆ (ಜುಲೈ 20) ಮುಂದೂಡಿತು.

'ಅರ್ಜಿದಾರರು ಉತ್ತಮ ಸೇವಾ ದಾಖಲೆ ಹೊಂದಿದ್ದಾರೆ. ಅವರು ಮುಗ್ಧರು, ಅವರನ್ನು ಪ್ರಕರಣದಲ್ಲಿ ತಪ್ಪಾಗಿ ಸಿಲುಕಿಸಲಾಗಿದೆ. ಅವರ ವಿರುದ್ಧ ಬೇರೆ ಯಾವುದೇ ಆರೋಪಗಳಿಲ್ಲ. ಕೋರ್ಟ್ ವಿಧಿಸುವ ಯಾವುದೇ ಷರತ್ತುಗಳಿಗೆ ಬದ್ಧರಾಗಿ ತನಿಖೆಗೆ ಸಂಪೂರ್ಣ ಸಹಕಾರ ನೀಡುತ್ತಾರೆ. ಆದ್ದರಿಂದ, ಜಾಮೀನು ನೀಡಬೇಕು' ಎಂದು ಅವರು ಕೋರಿದರು.

ಇದಕ್ಕೆ ಪ್ರಾಸಿಕ್ಯೂಷನ್ ಪರ ವಕೀಲ ಪಿ.ಪ್ರಸನ್ನಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿ, 'ಈ ಹಂತದಲ್ಲಿ ಆರೋಪಿಗೆ ಜಾಮೀನು ನೀಡಿದರೆ ಸಾಕ್ಷ್ಯನಾಶ ಮಾಡುವ ಸಾಧ್ಯತೆ ಇದ್ದು, ಜಾಮೀನು ನೀಡಬಾರದು' ಎಂದು ಮನವಿ ಮಾಡಿದರು.

ಆರೋಪ ಏನು?: 545 ಪಿಎಸ್‌ಐಗಳ ನೇಮಕಾತಿ ಸಂದರ್ಭದಲ್ಲಿ ನೇಮಕಾತಿ ವಿಭಾಗದ ಎಡಿಜಿಪಿ ಆಗಿದ್ದ ಅಮೃತ್ ಪೌಲ್, ಅಭ್ಯರ್ಥಿಗಳ ಉತ್ತರಪತ್ರಿಕೆಗಳ ಒಎಂಆರ್ ಪ್ರತಿಗಳನ್ನು ಇರಿಸಿದ್ದ ಕೊಠಡಿಯ ಕೀಲಿಕೈ ಉಸ್ತುವಾರಿ ಆಗಿದ್ದರು. ಆಗ ಸಹ ಆರೋಪಿಗಳಿಗೆ ಕೀ ಬಾಕ್ಸ್‌ನ ಚಾವಿ ನೀಡಿ ಉತ್ತರಪತ್ರಿಕೆ ತಿದ್ದಲು ನೆರವಾಗಿದ್ದರು ಎಂಬ ಆರೋಪದಡಿ ಬಂಧಿತರಾಗಿದ್ದು, ನ್ಯಾಯಾಂಗ ಬಂಧನದಲ್ಲಿದ್ದಾರೆ.

ನೇಮಕ ರದ್ದು ಆದೇಶ ಎತ್ತಿ ಹಿಡಿದ ಕೆಎಟಿ

ಬೆಂಗಳೂರು: ಪೊಲೀಸ್ ಸಬ್ ಇನ್ಸ್‌ಪೆಕ್ಟರ್ (ಪಿಎಸ್‌ಐ) ನೇಮಕಾತಿ ನಡೆಸಲಾಗಿದ್ದ ಲಿಖಿತ ಪರೀಕ್ಷೆ ರದ್ದುಪಡಿಸಿ, ಮರು ಪರೀಕ್ಷೆ ನಡೆಸುವ ಸಂಬಂಧ ಸರ್ಕಾರ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿದ್ದ ಅರ್ಜಿಯನ್ನು ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ವಜಾಗೊಳಿಸಿದೆ.

ಈ ಸಂಬಂಧ ಎಲ್.ಎನ್. ಪವಿತ್ರಾ ಸೇರಿದಂತೆ 28 ಅಭ್ಯರ್ಥಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ಕೆಎಟಿಯ ನ್ಯಾಯಾಂಗ ಸದಸ್ಯ ಟಿ. ನಾರಾಯಣ ಸ್ವಾಮಿ ಹಾಗೂ ಆಡಳಿತಾತ್ಮಕ ಸದಸ್ಯರಾದ ರಾಕಾ ಕೃಷ್ಣರಾಮ್ ಅವರಿದ್ದ ವಿಭಾಗೀಯ ಪೀಠ ಮಂಗಳವಾರ ಪ್ರಕಟಿಸಿದೆ.

ಸರ್ಕಾರದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆರ್. ಸುಬ್ರಹ್ಮಣ್ಯ, 'ಇದೊಂದು ಗಂಭೀರ ಹಗರಣ. ನೇಮಕಾತಿ ಪ್ರಾಧಿಕಾರದ ಮೇಲೆಯೇ ಆರೋಪಗಳಿರುವ ಹಿನ್ನೆಲೆಯಲ್ಲಿ ಕಳಂಕಿತ ಹಾಗೂ ಕಳಂಕರಹಿತರಲ್ಲದ ಅಭ್ಯರ್ಥಿಗಳನ್ನು ಪ್ರತ್ಯೇಕಿಸಲು ಸಾಧ್ಯವಿಲ್ಲ. ಆದ್ದರಿಂದಲೇ ಲಿಖಿತ ಪರೀಕ್ಷೆ ರದ್ದುಪಡಿಸಿ ಮರು ಪರೀಕ್ಷೆಗೆ ಆದೇಶಿಸಲಾಗಿದೆ' ಎಂದು ವಾದ ಮಂಡಿಸಿದ್ದರು.

ನ್ಯಾಯಪೀಠ ಈ ವಾದವನ್ನು ಮಾನ್ಯ ಮಾಡುವ ಮೂಲಕ ಅರ್ಜಿ ವಜಾಗೊಳಿಸಿ ಆದೇಶಿಸಿದೆ.

'ಲಿಖಿತ ಪರೀಕ್ಷೆ ರದ್ದುಪಡಿಸಿ, ಮರು ಪರೀಕ್ಷೆ ನಡೆಸುವ ಸಂಬಂಧ 2022ರ ಏಪ್ರಿಲ್ 29ರಂದು ಸರ್ಕಾರ ಹೊರಡಿಸಿರುವ ಆದೇಶವನ್ನು ರದ್ದುಪಡಿಸಬೇಕು. ಕಳಂಕರಹಿತ ಮತ್ತು ಕಳಂಕಿತ ಅಭ್ಯರ್ಥಿಗಳನ್ನು ಪ್ರತ್ಯೇಕಿಸಿ ಹಿಂದಿನ ಅಧಿಸೂಚನೆ ಅನುಸಾರವೇ ಪ್ರಕ್ರಿಯೆ ಪೂರ್ಣಗೊಳಿಸಿ, ನೇಮಕಾತಿ ಆದೇಶ ನೀಡಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.


ಸುದ್ದಿ 2 ನಿಮಿಷ

'ಹುಟ್ಟುಹಬ್ಬ ಆಚರಣೆ ಬೇಡ, ಸಂವಿಧಾನದ ಆಶಯ ಗಟ್ಟಿಗೊಳಿಸಿ'

ಬೆಂಗಳೂರು: 'ಇದೇ 21ರಂದು ನನ್ನ ಹುಟ್ಟುಹಬ್ಬ ಆಚರಿಸುವ ಬದಲು ಬುದ್ಧ, ಬಸವ, ಅಂಬೇಡ್ಕರ್ ತತ್ವಗಳನ್ನು ಹಾಗೂ ಸಂವಿಧಾನದ ಆಶಯಗಳನ್ನು ಗಟ್ಟಿಗೊಳಿಸುವ ಕೆಲಸವನ್ನು ಮಾಡಬೇಕು' ಎಂದು ತಮ್ಮ ಬೆಂಬಲಿಗರು ಮತ್ತು ಹಿತೈಷಿಗಳಿಗೆ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮನವಿ ಮಾಡಿದ್ದಾರೆ.

'21ಕ್ಕೆ ನನಗೆ 80 ವರ್ಷ ಪೂರ್ಣಗೊಳ್ಳಲಿದೆ. ಎಲ್ಲ ವರ್ಗಗಳ ಪ್ರೀತಿ, ಸಹಕಾರದಿಂದ ರಾಜಕೀಯ ಸೇವೆಯಲ್ಲಿ 50 ವರ್ಷಗಳೂ ಪೂರ್ಣಗೊಂಡಿದೆ. ಜೀವನದ ಪ್ರತಿ ಹೆಜ್ಜೆಯಲ್ಲಿ ಜೊತೆಗಾರರಾಗಿ ನನಗೆ ಶಕ್ತಿ ತುಂಬಿದ್ದೀರಿ. ಇಂದು ನಾನು ಯಾವುದೇ ಸ್ಥಾನದಲ್ಲಿದ್ದರೂ ಅದು ನಿಮ್ಮ ನಂಬಿಕೆ, ಪ್ರೀತಿ, ಆಶೀರ್ವಾದದ ಫಲ. ಈ ಪ್ರೀತಿ, ಅಭಿಮಾನಕ್ಕೆ ನಾನು ಚಿರಋಣಿ' ಎಂದು ಬಹಿರಂಗ ಪತ್ರದಲ್ಲಿ ಅವರು ಹೇಳಿಕೊಂಡಿದ್ದಾರೆ.

'ನನ್ನ ಹುಟ್ಟುಹಬ್ಬದ ದಿನ ಸದನ (ರಾಜ್ಯಸಭೆ) ಕಲಾಪ ಇದೆ. ಅದೇ ದಿನ ಪಕ್ಷದ ನಾಯಕಿ ಸೋನಿಯಾ ಗಾಂಧಿ ಅವರನ್ನು ಜಾರಿ ನಿರ್ದೇಶನಾಲಯದ (ಇಡಿ) ವಿಚಾರಣೆ ನೆಪದಲ್ಲಿ ಕೇಂದ್ರ ಸರ್ಕಾರ ಅಗ್ನಿ ಪರೀಕ್ಷೆಗೆ ಒಳಪಡಿಸಿದೆ. ಈ ಸಂದರ್ಭದಲ್ಲಿ ಅವರೊಂದಿಗೆ ಜೊತೆಯಾಗಿ ನಿಲ್ಲುವುದು ನಮ್ಮ ಕರ್ತವ್ಯ. ಆದ್ದರಿಂದ, ಅಂದು ನಾನು ಬೆಂಗಳೂರು ಅಥವಾ ಕಲಬುರಗಿಯಲ್ಲಿ ಭೇಟಿಗೆ ಲಭ್ಯ ಇರುವುದಿಲ್ಲ' ಎಂದೂ ಅವರು ತಿಳಿಸಿದ್ದಾರೆ.



ಡಾ.ಕಲಬುರ್ಗಿ ಹತ್ಯೆ ಪ್ರಕರಣ ಸಾಕ್ಷಿಗಳ ಹೇಳಿಕೆ ದಾಖಲು

ಧಾರವಾಡ: ಸಾಹಿತಿ ಡಾ.ಎಂ.ಎಂ.ಕಲಬುರ್ಗಿ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತ ಆರೋಪಿಗಳನ್ನು ಪ್ರತ್ಯಕ್ಷ ಸಾಕ್ಷಿಗಳು ಗುರುತಿಸಿ ಮಂಗಳವಾರ ಹೇಳಿಕೆ ನೀಡಿದರು.

ಆರೋಪಿಗಳಾದ ಅಮೋಲ್ ಕಾಳೆ, ಗಣೇಶ ಮಿಸ್ಕಿನ್, ಪ್ರವೀಣ ಚತುರ್, ವಾಸುದೇವ ಸೂರ್ಯವಂಶಿ, ಶರದ್ ಕಳಾಸ್ಕರ್, ಅಮಿತ್ ಬದ್ದಿ ಅವರನ್ನು ಇಲ್ಲಿನ 4ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಎದುರು ಹಾಜರುಪಡಿಸಲಾಯಿತು. ಆರೋಪಿಗಳನ್ನು ಗುರುತಿಸಿದ ಡಾ. ಕಲಬುರ್ಗಿ ಅವರ ಪತ್ನಿ ಉಮಾದೇವಿ ಕಲಬುರ್ಗಿ ಹಾಗೂ ಪುತ್ರಿ ರೂಪದರ್ಶಿ ಕಿಣಗಿ ಅವರ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಯಿತು.

ನ್ಯಾಯಾಧೀಶರಾದ ಶೋಭಾರಾಣಿ ಅವರು ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷಿಗಳ ಹೇಳಿಕೆ ದಾಖಲಿಸಿಕೊಂಡರು. ಬಳಿಕ ಈ ಕುರಿತು ಹೆಚ್ಚಿನ ವಿಚಾರಣೆ ಅಗತ್ಯ ಎಂದು ಅಭಿಪ್ರಾಯಪಟ್ಟು ಆ.6ಕ್ಕೆ ವಿಚಾರಣೆ ಮುಂದೂಡಿದರು.

2015ರ ಆ.30ರಂದು ಇಲ್ಲಿನ ಕಲ್ಯಾಣನಗರದಲ್ಲಿರುವ ನಿವಾಸದಲ್ಲಿ ಡಾ. ಎಂ.ಎಂ.ಕಲಬುರ್ಗಿ ಅವರನ್ನು ಗುಂಡಿಟ್ಟು ಹತ್ಯೆ ಮಾಡಲಾಗಿತ್ತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ಆದೇಶಿಸಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಆರು ಜನರನ್ನು ಬಂಧಿಸಿದ್ದರು.

ಅಂಗವಿಕಲ ನೌಕರರ ವರ್ಗಾವಣೆ ನೀತಿ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂಗವಿಕಲ ಸರ್ಕಾರಿ ನೌಕರರ ನಿಯೋಜನೆ, ವರ್ಗಾವಣೆಗೆ ಸಂಬಂಧಿಸಿ ಸಮಗ್ರ ನೀತಿ ರೂಪಿಸಲು ನಿರ್ದೇಶಿಸಬೇಕು' ಎಂದು ಕೋರಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೆ ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ, 'ನ್ಯಾಷನಲ್ ಫೆಡರೇಷನ್ ಆಫ್ ದಿ ಬ್ಲೈಂಡ್' ಸಂಸ್ಥೆ ಸಲ್ಲಿಸಿರುವ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯ್ದೆ-2016ರ ಕಲಂ 20 (5) ಹಾಗೂ ಈ ಬಗ್ಗೆ 2020ರಲ್ಲಿ ಕೇಂದ್ರ ಸರ್ಕಾರ ಹೊರಡಿಸಿರುವ ಸುತ್ತೋಲೆ ಬಗ್ಗೆ ಎರಡು ವಾರಗಳಲ್ಲಿ ನಿಲುವು ತಿಳಿಸಿ' ಎಂದೂ ನ್ಯಾಯಪೀಠ ರಾಜ್ಯ ಸರ್ಕಾರಕ್ಕೆ ಇದೇ ವೇಳೆ ನಿರ್ದೇಶಿಸಿದೆ.

ಆಕ್ಷೇಪ ಏನು?: 'ಅಂಗವಿಕಲ ನೌಕರರ ನಿಯೋಜನೆ ಮತ್ತು ವರ್ಗಾವಣೆಗೆ ಸಮಗ್ರ ನೀತಿ ರೂಪಿಸಲು 2020ರ ಆಗಸ್ಟ್ 4ರಂದು ಕೇಂದ್ರವು ಎಲ್ಲಾ ರಾಜ್ಯಗಳಿಗೆ ಪತ್ರ ಬರೆದಿದೆ. ಈ ಸಂಬಂಧ ರಾಜ್ಯ ಸರ್ಕಾರ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂಬುದು ಅರ್ಜಿದಾರರ ಆಕ್ಷೇಪ. ಅರ್ಜಿದಾರರ ಪರ ಹಿರಿಯ ವಕೀಲೆ ಜಯ್ನಾ ಕೊಠಾರಿ ವಾದ ಮಂಡಿಸಿದರು.

ಬಿಜೆಪಿಗೆ ರಾಜೇಶ್ ಸಂಘಟನಾ ಕಾರ್ಯದರ್ಶಿ?

ಬೆಂಗಳೂರು: ಬಿಜೆಪಿ ರಾಜ್ಯ ಘಟಕದ ಸಂಘಟನಾ ಕಾರ್ಯದರ್ಶಿಯಾಗಿದ್ದ ಅರುಣ್ ಕುಮಾರ್ ಅವರನ್ನು ಆರ್‌ಎಸ್‌ಎಸ್‌ಗೆ ಮರು ನಿಯುಕ್ತಿ ಮಾಡಿದ್ದು, ಆ ಹುದ್ದೆಗೆ ಆರ್‌ಎಸ್‌ಎಸ್‌ನ ತುಮಕೂರು ವಿಭಾಗದ ಪ್ರಚಾರಕ ರಾಜೇಶ್ ಅವರನ್ನು ನಿಯುಕ್ತಿಗೊಳಿಸುವ ಸಾಧ್ಯತೆ ಇದೆ.



ರಾಜೇಶ್

ನಗರದ ರಾಷ್ಟ್ರೋತ್ಥಾನ ಪರಿಷತ್‌ನಲ್ಲಿ ಮಂಗಳವಾರ ನಡೆದ ಆರ್‌ಎಸ್‌ಎಸ್‌ನ ಉತ್ತರ ಮತ್ತು ದಕ್ಷಿಣ ಪ್ರಾಂತಗಳ ಸಮನ್ವಯ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ಈ ಮೂಲಕ ಕರ್ನಾಟಕ ಆರ್‌ಎಸ್‌ಎಸ್ ನಲ್ಲಿ ಐವರು ಪ್ರಚಾರಕರ ಜವಾಬ್ದಾರಿಯನ್ನು ಬದಲಿಸಲಾಗಿದೆ. ಅರುಣ್‌ಕುಮಾರ್ ಅವರನ್ನು ಆರು ವರ್ಷಗಳ ಹಿಂದೆ ಬಿಜೆಪಿ ಸಂಘಟನಾ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿತ್ತು.

ಯಾರಿಗೆ ಏನು ಜವಾಬ್ದಾರಿ?

- ಗ.ರಾ.ಸುರೇಶ್: ಸಾಮರಸ್ಯ ಗತಿವಿಧಿ ಕರ್ನಾಟಕ ಪ್ರಾಂತ, ಘುಮಂತು (ಅಲೆಮಾರಿ ಸಮುದಾಯ) ಕಾರ್ಯದ ಕರ್ನಾಟಕ ರಾಜ್ಯ ಪ್ರಮುಖ.
- ಶಿ.ಲ.ಕೃಷ್ಣಮೂರ್ತಿ: ಹಿಂದೂ ಸೇವಾ ಪ್ರತಿಷ್ಠಾನ
- ಮನೋಹರ ಮಠದ್:- ಕರ್ನಾಟಕ ದೇವಸ್ಥಾನ ಸಂವರ್ಧನ ಸಮಿತಿ, ರಾಜ್ಯ ಸಂಯೋಜಕ.

ರಾಜಕೀಯ ಕ್ಷೇತ್ರಕ್ಕೆ (ಬಿಜೆಪಿ) ನಿಯೋಜನೆಗೊಂಡಿರುವ ರಾಜೇಶ್ ಅವರು ದಕ್ಷಿಣ ಕನ್ನಡದವರು. ಮೈಸೂರು ಜಿಲ್ಲಾ ಆರ್‌ಎಸ್‌ಎಸ್ ಪ್ರಚಾರಕರಾಗಿ ಕಾರ್ಯ ನಿರ್ವಹಿಸಿದ್ದರು. 2021ರಲ್ಲಿ ತುಮಕೂರು ವಿಭಾಗದ ಪ್ರಚಾರಕರಾಗಿ ನಿಯುಕ್ತಿಯಾಗಿದ್ದರು.

30 ಎಂಜಿನಿಯರಿಂಗ್ ಕಾಲೇಜುಗಳ ಅಭಿವೃದ್ಧಿ

ಪ್ರಮುಖ ನಾಯಕರ ಮಾಲೀಕತ್ವದ ಕಾಲೇಜುಗಳಿಗೂ ಪ್ರಗತಿ ಯೋಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಾದೇಶಿಕ ಉತ್ಕೃಷ್ಟ ತಾಂತ್ರಿಕ ಶಿಕ್ಷಣ ವ್ಯವಸ್ಥೆ' (ರೀತಿ) ಯೋಜನೆಯಡಿ 16 ಖಾಸಗಿ ಕಾಲೇಜುಗಳೂ ಸೇರಿ ಒಟ್ಟು 30 ಎಂಜಿನಿಯರಿಂಗ್ ಕಾಲೇಜುಗಳನ್ನು ರಾಜ್ಯ ಸರ್ಕಾರ ಅಭಿವೃದ್ಧಿಪಡಿಸಲಿದೆ.

ಬಿಜೆಪಿ ಶಾಸಕ ಬಿ.ಎಸ್. ಯಡಿಯೂರಪ್ಪ ಕುಟುಂಬದ ಒಡೆತನದ ಶಿವಮೊಗ್ಗದ ಪಿಇಎಸ್ ಎಂಜಿನಿಯರಿಂಗ್ ಕಾಲೇಜು, ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ಅಧ್ಯಕ್ಷರಾಗಿರುವ ಪುತ್ತೂರಿನ ವಿವೇಕಾನಂದ ಎಂಜಿನಿಯರಿಂಗ್ ಕಾಲೇಜು, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಅಧ್ಯಕ್ಷರಾಗಿರುವ ಭಾಲ್ಕಿಯ ಭೀಮಣ್ಣ ಖಂಡ್ರೆ ಎಂಜಿನಿಯರಿಂಗ್ ಕಾಲೇಜು ಸೇರಿದಂತೆ ಹಲವು ರಾಜಕೀಯ ಮುಖಂಡರ ಶಿಕ್ಷಣ ಸಂಸ್ಥೆಗಳು ಈ ಪಟ್ಟಿಯಲ್ಲಿವೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು), ಉದ್ಯಮ ಕ್ಷೇತ್ರ ಮತ್ತು ಆಯಾ ಕಾಲೇಜುಗಳ ಆಡಳಿತ ಮಂಡಳಿಗಳ ಸಹಭಾಗಿತ್ವದಲ್ಲಿ ಐದು ವರ್ಷಗಳ ಅವಧಿಯಲ್ಲಿ ಈ ಕಾಲೇಜುಗಳನ್ನು ಅಭಿವೃದ್ಧಿಪಡಿಸುವ ಗುರಿ ಇದೆ. ಮೂರೂ ವಲಯದವರು ತಲಾ ಶೇಕಡ 33ರಷ್ಟು ವೆಚ್ಚ ಹಂಚಿಕೆಯೊಂದಿಗೆ ಯೋಜನೆಯನ್ನು ಅನುಷ್ಠಾನಕ್ಕೆ ತರಲಿದ್ದಾರೆ.

ವಿಟಿಯು ಕುಲಪತಿ ಪ್ರೊ. ಕರಿಸಿದ್ದಪ್ಪ ನೇತೃತ್ವದ ಉನ್ನತಮಟ್ಟದ ಸಮಿತಿಯು ರೀತಿ ಯೋಜನೆಗೆ ಆಯ್ಕೆಯಾಗಿರುವ 30 ಕಾಲೇಜುಗಳಿಗೆ ಸಂಬಂಧಿಸಿದ ವರದಿಯನ್ನು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರಿಗೆ ಮಂಗಳವಾರ ಸಲ್ಲಿಸಿತು.

ವರದಿ ಸ್ವೀಕರಿಸಿದ ಮಾತನಾಡಿದ ಸಚಿವರು, 'ಜಿಲ್ಲೆಗೊಂದು ಅತ್ಯುತ್ತಮ ತಾಂತ್ರಿಕ ಶಿಕ್ಷಣ ಸಂಸ್ಥೆ ಅಭಿವೃದ್ಧಿಪಡಿಸುವುದು ಈ ಯೋಜನೆಯ ಉದ್ದೇಶ. ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಿಲ್ಲದ ಜಿಲ್ಲೆಗಳಲ್ಲಿ ಖಾಸಗಿ ಕಾಲೇಜುಗಳನ್ನು ಆಯ್ಕೆಮಾಡಲಾಗಿದೆ' ಎಂದರು.

ಅಂತರರಾಷ್ಟ್ರೀಯ ಗುಣಮಟ್ಟದ ತಾಂತ್ರಿಕ ಶಿಕ್ಷಣವನ್ನು ಈ ಕಾಲೇಜುಗಳಲ್ಲಿ ನೀಡಲಾಗುವುದು. ಸ್ವಯಂ ಮೌಲ್ಯಮಾಪನ ಮತ್ತು 'ಮೆಂಟರ್ ಆಡಿಟ್ ಮಾದರಿ'ಯನ್ನು ಈ ಕಾಲೇಜುಗಳಲ್ಲಿ ಜಾರಿಗೊಳಿಸಲಾಗುವುದು ಎಂದು ಹೇಳಿದರು.

ಯೋಜನೆಯ ಸ್ವರೂಪ: ಆಯ್ಕೆಯಾಗಿರುವ ಕಾಲೇಜುಗಳು ಮೂರು ವರ್ಷದೊಳಗೆ 'ರಾಷ್ಟ್ರೀಯ ಸಾಂಸ್ಥಿಕ ಶ್ರೇಯಾಂಕ ಚೌಕಟ್ಟು' (ಎನ್‌ಐಆರ್‌ಎಫ್) ರ‍್ಯಾಂಕಿಂಗ್ ಪಡೆಯಬೇಕು. ಐದು ವರ್ಷಗಳೊಳಗೆ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಗಳಿಂದ ಮಾನ್ಯತೆ ಪಡೆಯಬೇಕು. ಕೊನೆಯ ವರ್ಷದ ವೇಳೆಗೆ ಶೈಕ್ಷಣಿಕ ಯೋಜನೆಗಳಲ್ಲಿ ಕನಿಷ್ಠ ಶೇ 80ರಷ್ಟಕ್ಕೆ ಎನ್‌ಬಿಎ ಮಾನ್ಯತೆ ಹೊಂದಿರಬೇಕು ಎಂಬ ಷರತ್ತು ವಿಧಿಸಲಾಗಿದೆ.

ಅಂತಿಮ ವರ್ಷದ ಬಿ.ಇ ವಿದ್ಯಾರ್ಥಿಗಳಲ್ಲಿ ಕನಿಷ್ಠ ಶೇ 50ರಷ್ಟು ಮಂದಿಗೆ ಕೊನೆಯ ವರ್ಷದ ವೇಳೆಗೆ ಉದ್ಯೋಗಾವಕಾಶ ಲಭಿಸಿರಬೇಕು. ಶೇ 75ರಷ್ಟು ವಿದ್ಯಾರ್ಥಿಗಳಿಗೆ ಗುಣಮಟ್ಟದ ಇಂಟರ್ನ್‌ಶಿಪ್ ಮತ್ತು ಶೇ 100ರಷ್ಟು ವಿದ್ಯಾರ್ಥಿಗಳಿಗೆ ಉದ್ಯೋಗ ಲಭಿಸಬೇಕು. ವಿಟಿಯುನಿಂದ ಶಾಶ್ವತ ಮಾನ್ಯತೆ ಪಡೆಯಬೇಕು. ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿ ಕನಿಷ್ಠ 10 ಯೋಜನೆಗಳನ್ನು ಕೈಗೆತ್ತಿಕೊಳ್ಳಬೇಕು ಎಂದೂ ಶಿಫಾರಸು ಮಾಡಲಾಗಿದೆ.

ಕಾಲೇಜುಗಳ ವಿವರ

ಬೆಳಗಾವಿಯ ಅಂಗಡಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅಂಡ್ ಮ್ಯಾನೇಜ್‌ಮೆಂಟ್, ತುಮಕೂರು ಜಿಲ್ಲೆ ಗುಬ್ಬಿಯ ಚನ್ನಬಸವೇಶ್ವರ ಎಂಜಿನಿಯರಿಂಗ್ ಕಾಲೇಜು, ಉಡುಪಿಯ ಶ್ರೀಮಧ್ವ ವಾದಿರಾಜ ಎಂಜಿನಿಯರಿಂಗ್ ಅಂಡ್ ಮ್ಯಾನೇಜ್‌ಮೆಂಟ್, ಮೈಸೂರಿನ ಜಿಎಸ್‌ಎಸ್‌ಎಸ್ ಮಹಿಳಾ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಸಂಸ್ಥೆ, ಕೆಜಿಎಫ್‌ನ ಡಾ.ಟಿ ತಿಮ್ಮಯ್ಯ ತಾಂತ್ರಿಕ ಶಿಕ್ಷಣ ಕಾಲೇಜು, ಬಾಗಲಕೋಟೆ ಜಿಲ್ಲೆ ಮುಧೋಳದ ಬಿಳುಗೂರು ಗುರುಬಸವ ಮಹಾಸ್ವಾಮೀಜಿ ಇನ್‌ಸ್ಟಿಟ್ಯೂಟ್, ವಿಜಯಪುರದ ಪಿ.ಜಿ. ಹಳಕಟ್ಟಿ ಕಾಲೇಜ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ, ಚಿಕ್ಕಮಗಳೂರಿನ ಆದಿಚುಂಚನಗಿರಿ ತಾಂತ್ರಿಕ ಕಾಲೇಜು, ಚಿಕ್ಕಬಳ್ಳಾಪುರದ ಎಸ್.ಜೆ.ಸಿ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬಳ್ಳಾರಿಯ ರಾವ್ ಬಹದ್ದೂರ್ ವೈ.ಮಹಾಬಲೇಶ್ವರಪ್ಪ ಎಂಜಿನಿಯರಿಂಗ್ ಕಾಲೇಜು, ಶಿವಮೊಗ್ಗದ ಪಿಇಎಸ್ ತಾಂತ್ರಿಕ ಮತ್ತು ಮ್ಯಾನೇಜ್ಮೆಂಟ್ ಶಿಕ್ಷಣ ಸಂಸ್ಥೆ, ಬೀದರ್ ಜಿಲ್ಲೆ ಭಾಲ್ಕಿಯ ಭೀಮಣ್ಣ ಖಂಡ್ರೆ ತಾಂತ್ರಿಕ ಕಾಲೇಜು, ಗದಗದ ತೋಂಟದಾರ್ಯ ಎಂಜಿನಿಯರಿಂಗ್ ಕಾಲೇಜು, ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ವಿವೇಕಾನಂದ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಶಿಕ್ಷಣ ಕಾಲೇಜು, ಹುಬ್ಬಳ್ಳಿಯ ಜೈನ್ ಎಂಜಿನಿಯರಿಂಗ್ ಕಾಲೇಜು ಮತ್ತು ಯಾದಗಿರಿ ಜಿಲ್ಲೆಯ ಶೋರಾಪುರದ ವೀರಪ್ಪ ನಿಷ್ಠಿ ಎಂಜಿನಿಯರಿಂಗ್ ಕಾಲೇಜು.

ಸರ್ಕಾರಿ ಕಾಲೇಜುಗಳು: ಚಾಮರಾಜನಗರ, ಚಳ್ಳಕೆರೆ, ಹಾಸನ, ಹಾವೇರಿ, ಕುಶಾಲನಗರ, ತಲಕಾಡು, ಕೃಷ್ಣರಾಜಪೇಟೆ, ರಾಯಚೂರು, ರಾಮನಗರ, ಕಾರವಾರ, ಹೂವಿನಹಡಗಲಿಗಳಲ್ಲಿರುವ ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು, ಬೆಂಗಳೂರಿನ ಎಸ್.ಕೆ.ಎಸ್.ಜೆ.ಟಿ.ಐ., ದಾವಣಗೆರೆಯಲ್ಲಿರುವ ಯೂನಿವರ್ಸಿಟಿ ಬಿಡಿಟಿ ಕಾಲೇಜು ಮತ್ತು ಕಲಬುರ್ಗಿಯ ವಿಟಿಯು ಸ್ನಾತಕೋತ್ತರ ಅಧ್ಯಯನ ಕೇಂದ್ರ.

ಬಾಲೆ ಚಿಕಿತ್ಸೆಗೆ ₹51 ಲಕ್ಷ ಸಂಗ್ರಹ

ಕಾಸರಗೋಡು: ತಲಸ್ಸೇಮಿಯಾದಿಂದ ಬಳಲುತ್ತಿರುವ ಜಿಲ್ಲೆಯ ಕಜಮಲೆ ಗ್ರಾಮದ ಬಾಲಕಿ ಸಾನ್ವಿಯ ಚಿಕಿತ್ಸೆಗೆ ದೇಶ–ವಿದೇಶಗಳಿಂದ ₹51 ಲಕ್ಷ ದೇಣಿಗೆ ಹರಿದು ಬಂದಿದೆ.

ಚಿಕಿತ್ಸೆಗೆ ₹40 ಲಕ್ಷ ಅಗತ್ಯವಿದೆ ಎಂದು ವೈದ್ಯರು ತಿಳಿಸಿದ್ದರು. ಬಡ ಕುಟುಂಬದ ಈಕೆಗೆ ಚಿಕಿತ್ಸೆ ಕೊಡಿಸಲು ಗ್ರಾಮ ಪಂಚಾಯಿತಿಯವರು ಸಮಿತಿ ರಚಿಸಿ, ಹಣ ಸಂಗ್ರಹಿಸಿದ್ದರು. 'ಈಗ ದೇಣಿಗೆ ಸಂಗ್ರಹ ನಿಲ್ಲಿಸಿದ್ದೇವೆ. ಯಾರೂ ದೇಣಿಗೆ ನೀಡುವುದು ಬೇಡ. ಶೀಘ್ರವೇ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಶಸ್ತ್ರಚಿಕಿತ್ಸೆ ನಡೆಯಲಿದೆ' ಎಂದು ಸಮಿತಿ ಪದಾಧಿಕಾರಿಗಳು ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಊರ ಬಾಲೆ ಉಳಿಸಲು ಎದ್ದು ನಿಂತ ಜನ' ಎಂಬ ಶೀರ್ಷಿಕೆಯಲ್ಲಿ ಪ್ರಜಾವಾಣಿ ವರದಿ ಪ್ರಕಟಿಸಿತ್ತು.

'ರಾಜ್ಯ ಸಾರಿಗೆ ಬಸ್‌ಗೆ ಚಾಲಕನೇ ನಿರ್ವಾಹಕ'

ಬೆಂಗಳೂರು: ಸಾರಿಗೆ ನಿಗಮಗಳ ಪ್ರತಿಯೊಂದು ಬಸ್‌ಗಳಲ್ಲಿ ಚಾಲಕನೇ ನಿರ್ವಾಹಕನ ಕೆಲಸವನ್ನೂ ನಿಭಾಯಿಸುವಂತಾಗಬೇಕು ಎಂದು ಸಾರಿಗೆ ನಿಗಮಗಳನ್ನು ಪುನಶ್ಚೇತನಗೊಳಿಸುವ ಉದ್ದೇಶದಿಂದ ಸರ್ಕಾರ ನೇಮಿಸಿದ್ದ ನಿವೃತ್ತ ಐಎಎಸ್ ಅಧಿಕಾರಿ ಎಂ.ಆರ್.ಶ್ರೀನಿವಾಸಮೂರ್ತಿ ನೇತೃತ್ವದ ಏಕ ಸದಸ್ಯ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಸಾರಿಗೆ ನಿಗಮಗಳ ಆರ್ಥಿಕ ನಷ್ಟವನ್ನು ದೂರ ಮಾಡಿ ಸುಸ್ಥಿರ ಬೆಳವಣಿಗೆಗೆ ಸಹಾಯಕವಾಗುವ ಉದ್ದೇಶದಿಂದ ಈ ಸಮಿತಿ ರಚಿಸಲಾಗಿತ್ತು. ಶ್ರೀನಿವಾಸಮೂರ್ತಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮಂಗಳವಾರ ವರದಿ ಸಲ್ಲಿಸಿದರು. ಈಗ ನಾಲ್ಕು ಸಾರಿಗೆ ನಿಗಮಗಳಲ್ಲಿ ಒಟ್ಟು 24 ಸಾವಿರ ಬಸ್‌ಗಳಿವೆ. 2030 ಕ್ಕೆ ಆ ಸಂಖ್ಯೆಯನ್ನು 40 ಸಾವಿರಕ್ಕೆ ಏರಿಸುವ ಅಗತ್ಯವಿದೆ ಎಂದು ಶಿಫಾರಸು ಮಾಡಲಾಗಿದೆ.

ನಾಲ್ಕೂ ಸಾರಿಗೆ ನಿಗಮಗಳ ಬಸ್‌ಗಳ ಖರೀದಿಗೆ ಇನ್ನು ಮುಂದೆ ಸರ್ಕಾರ ಹಣ ನೀಡಬೇಕಾಗಿಲ್ಲ. ಮಧ್ಯವರ್ತಿ ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲದ ವ್ಯವಸ್ಥೆಯನ್ನು ನಿಗಮವೇ ಮಾಡಿಕೊಳ್ಳಬೇಕು. ಅಲ್ಲದೇ, ತಮ್ಮ ಆದಾಯದಲ್ಲೇ ನಿಗಮಗಳನ್ನು ಮುನ್ನಡೆಸಬೇಕು ಎಂಬ ಅಂಶವೂ ವರದಿಯಲ್ಲಿದೆ ಎಂದು ಮೂಲಗಳು ಹೇಳಿವೆ.

ಡೀಸೆಲ್ ಬಳಕೆಯಲ್ಲಿ ದಕ್ಷತೆ ತಂದರೆ ಶೇ 10 ರಷ್ಟು ಉಳಿತಾಯ ಸಾಧ್ಯವಿದೆ. ಅಲ್ಲದೆ, ಎಲ್ಲೆಂದರಲ್ಲಿ ಬಸ್‌ಗಳನ್ನು ನಿಲ್ಲಿಸುವುದು ತಪ್ಪಿಸಿ ನಿಲ್ದಾಣಗಳಲ್ಲಿಯೇ ಬಸ್‌ಗಳನ್ನು ನಿಲ್ಲಿಸಬೇಕು ಇದರಿಂದಲೂ ಇಂಧನ ಉಳಿತಾಯ ಸಾಧ್ಯ. ಪ್ರಯಾಣಿಕರ ಸಂಖ್ಯೆಗೆ ಅನುಗುಣವಾಗಿ ಬಸ್‌ಗಳ ಮಾರ್ಗಸೂಚಿಯನ್ನು ರೂಪಿಸಬೇಕು. ಸರ್ಕಾರ, ನೌಕರರು ಮತ್ತು ಕಾರ್ಮಿಕ ಸಂಘಟನೆಗಳ ಮಧ್ಯೆ ಉತ್ತಮ ಸಂಬಂಧವಿರಬೇಕು ಎಂಬ ಅಂಶಗಳೂ ವರದಿಯಲ್ಲಿವೆ.

ಸಾರಿಗೆ ವ್ಯವಸ್ಥೆಯಲ್ಲಿ ಸೋರಿಕೆ ತಡೆಗಟ್ಟುವುದು, ಸಂಪನ್ಮೂಲ ಸೃಜನೆಗೆ ಒತ್ತು ನೀಡುವುದು ಮತ್ತು ಉತ್ತಮ ಸೇವೆಯ ಮೂಲಕ ಸಂಸ್ಥೆಯನ್ನು ಲಾಭದಾಯಕವಾಗಿಸುವ ನಿಟ್ಟಿನಲ್ಲಿ ಅವರು ಹಲವು ಶಿಫಾರಸುಗಳನ್ನೂ ನೀಡಿದ್ದಾರೆ. ಈ ವರದಿಯನ್ನು ಇದೇ ಶುಕ್ರವಾರ ನಡೆಯುವ ಸಚಿವ ಸಂಪುಟ ಸಭೆಯ ಮುಂದಿಡಲಾಗುವುದು ಎಂದು ಸಿ.ಎಂ ಬೊಮ್ಮಾಯಿ ತಿಳಿಸಿದರು.

ವಿವಿಧ ಘಟ್ಟ ಪ್ರದೇಶ, ಹೆದ್ದಾರಿ ಸ್ಥಿತಿ ಕುರಿತು ಲೋಕೋಪಯೋಗಿ ಸಚಿವರ ಸಭೆಯಲ್ಲಿ ಚರ್ಚೆ

ದೋಣಿಗಲ್ ಬಳಿ ಏಕಮುಖ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಸನ ಜಿಲ್ಲೆ ಶಿರಾಡಿ ಘಾಟಿಯ ದೋಣಿಗಲ್ ಬಳಿ ಭೂಕುಸಿತ ಆಗಿದ್ದು, ರಸ್ತೆ ದುರಸ್ತಿ ಆಗುವವರೆಗೆ ಅಲ್ಲಿ ವಾಹನಗಳಿಗೆ ಏಕಮುಖ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ ಮಂಗಳವಾರ ತಿಳಿಸಿದರು.

ಇತ್ತೀಚೆಗೆ ಮಳೆ, ಭೂಕುಸಿತದಿಂದಾದ ರಾಷ್ಟ್ರೀಯ ಹೆದ್ದಾರಿ ಮತ್ತು ಘಟ್ಟ ಪ್ರದೇಶಗಳಲ್ಲಿನ ಸ್ಥಿತಿ ಬಗ್ಗೆ ಅಧಿಕಾರಿಗಳ ಜತೆ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಅವರು, 'ಸುಮಾರು ಎರಡೂವರೆ ಕಿ.ಮೀ ರಸ್ತೆ ಏಕಮುಖ ಸಂಚಾರ ವ್ಯವಸ್ಥೆಗೆ ಒಳಪಡಲಿದೆ' ಎಂದರು.

ಬೆಂಗಳೂರಿನಿಂದ ಮಂಗಳೂರು ಕಡೆ ಹೋಗುವ ವಾಹನಗಳು ಶಿರಾಡಿ ಘಾಟಿಯ ಈಗಿನ ರಸ್ತೆಯಲ್ಲೇ ಹೋಗಲು ಅವಕಾಶ ನೀಡಲಾಗುವುದು. ಮಂಗಳೂರಿನಿಂದ ಬೆಂಗಳೂರಿನ ಕಡೆಗೆ ಬರುವ ವಾಹನಗಳು ದೋಣಿಗಲ್ ಹತ್ತಿರದ ಕಪ್ಪಳ್ಳಿ–ಕೆಸಗಾನಹಳ್ಳಿ ಮಾರ್ಗವಾಗಿ ಇರುವ ಹಳೆ ರಸ್ತೆ ಬಳಸಬೇಕು. ಇದನ್ನು ತಾತ್ಕಾಲಿಕವಾಗಿ ವಿಸ್ತರಿಸಿ ಪರ್ಯಾಯ ರಸ್ತೆ ಮಾಡಲಾಗುವುದು ಎಂದರು.

ಏಕಮುಖ ಸಂಚಾರಕ್ಕೆ ಕೂಡಲೇ ಆದೇಶ ಮಾಡಲು ಹಾಸನ ಜಿಲ್ಲಾಧಿಕಾರಿಗೆ ತಿಳಿಸಲಾಗಿದೆ.ದೋಣಿಗಲ್ ಬಳಿ ಕಾರ್ಮಿಕರು, ರಸ್ತೆನಿರ್ಮಾಣದ ಕಚ್ಚಾ ಸಾಮಗ್ರಿಗಳು, ಯಂತ್ರೋಪಕರಣಗಳು ಸಿದ್ಧವಾಗಿಟ್ಟುಕೊಂಡು ತ್ವರಿತ ಕಾಮಗಾರಿಗೆ ಸೂಚಿಸಲಾಗಿದೆ ಎಂದರು.

'ಏಕಮುಖ ಸಂಚಾರ ತಾತ್ಕಾಲಿಕವಾಗಿರಲಿದೆ. ದೋಣಿಗಲ್ ಬಳಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಒಂದೂವರೆ ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು. ಶಿರಾಡಿ ಘಾಟಿ ರಸ್ತೆ ದುರಸ್ತಿ ತಡವಾಗಿದೆ ಎಂದು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಹಲವು ಕಾರಣಗಳಿವೆ. ಈ ವಿಚಾರವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೂ ತಿಳಿಸಿದ್ದೇವೆ. ಅಗತ್ಯವಿದ್ದರೆ ಕೇಂದ್ರ ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ಅವರನ್ನೂ ಭೇಟಿ ಮಾಡಿ ಕಾಮಗಾರಿ ತ್ವರಿತಗೊಳಿಸಲು ಒತ್ತಡ ಹೇರಲಾಗುವುದು' ಎಂದು ಪಾಟೀಲ ತಿಳಿಸಿದರು.

ಈ ರಸ್ತೆ ದುರಸ್ತಿ ಕಾಮಗಾರಿ ಪೂರ್ಣಗೊಳಿಸಲು 2023ರ ಮಾರ್ಚ್‌ಗೆ ಸಮಯ ವಿಸ್ತರಿಸಲಾಗಿದೆ. 39 ಕಿ.ಮೀ ಉದ್ದದ ರಸ್ತೆಯಲ್ಲಿ 20 ಕಿ.ಮೀ ರಾಷ್ಟ್ರೀಯ ಹೆದ್ದಾರಿ ವಲಯದ ವಶದಲ್ಲಿದ್ದು, ಉತ್ತಮವಾಗಿದೆ. 19 ಕಿ.ಮೀ (ಮಾರನಹಳ್ಳಿಯಿಂದ ಸಕಲೇಶಪುರ ಭಾಗ) ವ್ಯಾಪ್ತಿಯಲ್ಲಿ ಕಾಮಗಾರಿ ಕುಂಠಿತವಾಗಿದೆ. ಇದಕ್ಕೆ ₹200 ಕೋಟಿ ಬೇಕಿದ್ದು, ಜಿಎಸ್‌ಟಿ ವಿನಾಯ್ತಿ ನೀಡಿ, ಕಾಮಗಾರಿ ಕೈಗೊಳ್ಳಲು ಸೂಚಿಸಲಾಗಿದೆ ಎಂದೂ ಹೇಳಿದರು.

ಘಾಟ್ ರಸ್ತೆಗಳ ಸ್ಥಿತಿ, ದುರಸ್ತಿಗೆ ಬೇಕಾದ ಮೊತ್ತ

- ಸಂಪಾಜೆ, ಅರೆಬೈಲ್, ಆಗುಂಬೆ, ಗೇರುಸೊಪ್ಪೆ, ಮಾಲ್ ಘಾಟ್ ಪ್ರದೇಶಗಳಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ ಎರಡೂ ಬದಿಗಳಲ್ಲಿ 63 ಕಡೆ ಭೂಕುಸಿತ ಮತ್ತು ಮುಚ್ಚಿ ಹೋಗಿರುವ ಚರಂಡಿ ತೆರವು ಮಾಡಲಾಗಿದೆ. ಇವೆಲ್ಲ ಘಾಟ್‌ಗಳ ಹಾನಿಗೊಳಗಾದ ರಸ್ತೆ ಶಾಶ್ವತವಾಗಿ ಪುನರ್‌ಸ್ಥಾಪನೆಗೆ ₹157 ಕೋಟಿ ಹಾಗೂ ತಾತ್ಕಾಲಿಕ ಪುನರ್ ಸ್ಥಾಪನೆಗೆ ₹ 10 ಕೋಟಿ ಬೇಕಾಗುತ್ತದೆ
- ಆಗುಂಬೆ ಘಾಟ್‌ನಲ್ಲಿ ಒಂದೆಡೆ ದೊಡ್ಡ ಭೂಕುಸಿತ ಮತ್ತು 45 ಕಡೆ ಸಣ್ಣ ಪ್ರಮಾಣದ ಭೂಕುಸಿತವಾಗಿದೆ. ಈ ರಸ್ತೆಯ ಶಾಶ್ವತ ಮರುಸ್ಥಾಪನೆಗೆ ₹55 ಕೋಟಿ, ತಾತ್ಕಾಲಿಕ ಪುನರ್‌ಸ್ಥಾಪನೆಗೆ ₹7 ಕೋಟಿ ಬೇಕಾಗುತ್ತದೆ.
- ಕೊಡಗು ಜಿಲ್ಲೆ ಸಂಪಾಜೆ ಘಾಟ್‌ನಲ್ಲಿ 12 ಕಡೆಗಳಲ್ಲಿ ಭೂಕುಸಿತವಾಗಿದೆ. ಇದರ ಶಾಶ್ವತ ಪುನರ್ ಸ್ಥಾಪನೆಗೆ ₹10 ಕೋಟಿ, ತಾತ್ಕಾಲಿಕ ಪುನರ್ ಸ್ಥಾಪನೆಗಾಗಿ ₹1.50 ಕೋಟಿ ಬೇಕಾಗುತ್ತದೆ.
- ಗೇರುಸೊಪ್ಪ ಘಾಟ್‌ನಲ್ಲಿ ಕಿ.ಮೀ 239.80ರಲ್ಲಿ ಭೂಕುಸಿತವಾಗಿದೆ. ಶಾಶ್ವತ ಪುನರ್ ಸ್ಥಾಪನೆಗಾಗಿ ₹ 80 ಲಕ್ಷ ಮತ್ತು ತಾತ್ಕಾಲಿಕವಾಗಿ ₹30 ಲಕ್ಷ ಬೇಕಾಗುತ್ತದೆ.
- ಅರೆಬೈಲು ಘಾಟ್‌ನಲ್ಲಿ ನಾಲ್ಕು ಕಡೆ ಕುಸಿತವಾಗಿದೆ. ಶಾಶ್ವತ ಪುನರ್‌ಸ್ಥಾಪನೆಗೆ ₹ 4 ಕೋಟಿ ಮತ್ತು ತಾತ್ಕಾಲಿಕ ಪುನರ್ ಸ್ಥಾಪನೆಗೆ ₹1.3 ಕೋಟಿ ಬೇಕಾಗುತ್ತದೆ.

ಗರಿಷ್ಠ ಮಟ್ಟದತ್ತ ಕೆಆರ್‌ಎಸ್

ಮಂಡ್ಯ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬುಧವಾರ ಕೆಆರ್‌ಎಸ್ ಜಲಾಶಯಕ್ಕೆ ಬಾಗಿನ ಅರ್ಪಿಸಲಿದ್ದಾರೆ.

ಮಂಗಳವಾರ ರಾತ್ರಿಯ ವೇಳೆಗೆ ಗರಿಷ್ಠ ಮಟ್ಟ 124.80 ಅಡಿಗೆ ತಲುಪಲಿದೆ ಎಂದು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಕೊಡಗಿನಲ್ಲಿ ಮಣ್ಣು ಕುಸಿತ; ಆತಂಕ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಮಳೆ ಕಡಿಮೆಯಾಗಿದ್ದರೂ ಇಲ್ಲಿನ 2ನೇ ಮೊಣ್ಣಂಗೇರಿಯ ರಾಮನಕೊಲ್ಲಿ ಬಳಿ ಮಣ್ಣು ಕುಸಿತವಾಗಿದೆ.

2018ರಲ್ಲಿ ಭಾರಿ ಪ್ರಮಾಣದಲ್ಲಿ ಭೂಕುಸಿತ ಸಂಭವಿಸಿದ್ದ ಕಡೆಯೇ ಮತ್ತೆ ಕುಸಿದಿದ್ದು, ಗುಡ್ಡದಿಂದ ಹರಿಯುವ ತೊರೆಯು ಮಣ್ಣು ಹಾಗೂ ಮರದದಿಮ್ಮಿಗಳನ್ನು ಕೊಚ್ಚಿಕೊಂಡು ಬಂದಿದೆ. ನಿರ್ಮಾಣ ಹಂತದಲ್ಲಿದ್ದ ರಾಮನಕೊಲ್ಲಿ ಸೇತುವೆಗೂ ಹಾನಿಯಾಗಿದ್ದು, ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ.

ಸ್ಥಳಕ್ಕೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ್, ಶಾಸಕರಾದ ಎಂ.ಪಿ. ಅಪ್ಪಚ್ಚುರಂಜನ್, ಕೆ.ಜಿ.ಬೋಪಯ್ಯ ತೆರಳಿ ಪರಿಶೀಲನೆ ನಡೆಸಿದರು. ಇಲ್ಲಿರುವ ಕುಟುಂಬದವರನ್ನು ಕಾಟಕೇರಿಯ ಶಾಲೆಯಲ್ಲಿ ಕಾಳಜಿ ಕೇಂದ್ರ ತೆರೆದು ಆಶ್ರಯ ಕಲ್ಪಿಸಲು ನಿರ್ಧರಿಸಲಾಗಿದೆ.

ಇದಕ್ಕೂ ಮುನ್ನ, 'ಭಾರಿ ಶಬ್ದದೊಂದಿಗೆ ಜಲಸ್ಫೋಟ ಸಂಭವಿಸಿದೆ' ಎಂಬ ಸಂದೇಶಗಳು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡಿದ್ದವು. ಈ ಕುರಿತು ಪ್ರತಿಕ್ರಿಯಿಸಿದ ಜಿಲ್ಲಾ ವಿಪತ್ತು ನಿರ್ವಹಣಾ ಕೇಂದ್ರದ ಪರಿಣತ ಅನನ್ಯ ವಾಸುದೇವ್, 'ಇಲ್ಲಿ ತೀರಾ ಅಲ್ಪ ಪ್ರಮಾಣದಲ್ಲಿ ಮಣ್ಣು ಕುಸಿದಿದೆ. ರಾಮನಕೊಲ್ಲಿಗೆ ಸೇರುವ ತೊರೆಯು ಈಚೆಗೆ ಸುರಿದ ಮಳೆಯಿಂದ ಸಹಜವಾಗಿಯೇ ತುಂಬಿ ಹರಿಯುತ್ತಿದೆ. ಆತಂಕದ ಪರಿಸ್ಥಿತಿ ಇಲ್ಲ' ಎಂದು ತಿಳಿಸಿದರು.

ಗುಡುಗು ಸಹಿತ ಮಳೆ ಇಂದು: (ಬೆಂಗಳೂರು ವರದಿ): ಕರಾವಳಿ, ಮಲೆನಾಡು, ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಬುಧವಾರ ಗುಡುಗು ಮಿಂಚು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ರಾಜ್ಯದಲ್ಲಿ ಮಳೆ ಪ್ರಮಾಣವು ಮುಂದಿನ ದಿನಗಳಲ್ಲಿ ತಗ್ಗಲಿದೆ ಎಂದು ತಿಳಿಸಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	124.74	59,734	57,411
ಹಾರಂಗಿ	2,859	2,854.96	5,900	4,000
ಕಬಿನಿ	2284.00	2,283	22,716	-
ಹೇಮಾವತಿ	2,922	2,920.17	19,582	18,750
ಲಿಂಗನಮಕ್ಕಿ	1,819	1,796.50	30,311	5,838.87
ಸೂಪಾ (ಮೀ)	564	540.50	18,569	765
ಮಾಣಿ	595	583.18	3,654	-
ತುಂಗಭದ್ರಾ	1,633	1,631.10	1,61,394	1,50,503
ಮಲಪ್ರಭಾ	2079.5	2,067	5,996	394
ಘಟಪ್ರಭಾ	2175	2,148.50	23,465	144
ಭದ್ರಾ	186	182.3	33,891	33,301
ಆಲಮಟ್ಟಿ (ಮೀ)	519.6	517.22	1,36,469	1,12,951
ನಾರಾಯಣಪುರ (ಮೀ)	492.25	491.30	1,00,000	97,792

* ನೆಲಮಟ್ಟದಿಂದ

ಹೊಸಪೇಟೆ ಸುರಂಗ ಮಾರ್ಗ: ಗಡ್ಕರಿ ಮೆಚ್ಚುಗೆ

ಹೊಸಪೇಟೆ (ವಿಜಯನಗರ): ನಗರ ಹೊರವಲಯದ ರಾಷ್ಟ್ರೀಯ ಹೆದ್ದಾರಿ 50ರ ಸುರಂಗ ಮಾರ್ಗದ ಛಾಯಾಚಿತ್ರಗಳನ್ನು ಮಂಗಳವಾರ ತಮ್ಮ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವ ನಿತಿನ್ ಗಡ್ಕರಿ ಅವರು 'ನವ ಭಾರತದ ಮೂಲಸೌಕರ್ಯಗಳ ವಿಸ್ಮಯ' ಎಂದು ಬಣ್ಣಿಸಿದ್ದಾರೆ.

ಅವರು ಮೂರು ಚಿತ್ರಗಳನ್ನು ಅದರೊಂದಿಗೆ ಟ್ಯಾಗ್ ಮಾಡಿದ್ದಾರೆ. ಕರ್ನಾಟಕದ ಹುನಗುಂದ– ಹೊಸಪೇಟೆ ಚತುಷ್ಪಥ ರಸ್ತೆ ಕಾರ್ಯಾರಂಭ ಮಾಡಿದೆ. ಇದರಿಂದ ಕೇರಳ ಮತ್ತು ಮಹಾರಾಷ್ಟ್ರಕ್ಕೆ ಸಂಪರ್ಕ ಕಲ್ಪಿಸಿದಂತಾಗಿದೆ ಎಂದು ಬರೆದುಕೊಂಡಿದ್ದಾರೆ.

ನಗರದ ಹೊರವಲಯದ ಸುರಂಗ ಮಾರ್ಗವು ತುಂಗಭದ್ರಾ ಜಲಾಶಯದ ಹಿನ್ನೀರಿಗೆ ಹೊಂದಿಕೊಂಡಿದೆ. ಗುಂಡಾ ಅರಣ್ಯ ವ್ಯಾಪ್ತಿಯಲ್ಲಿ ಬರುವ ಅನೇಕ ಬೆಟ್ಟಗಳ ಶ್ರೇಣಿ ಅಲ್ಲಿರುವುದರಿಂದ ಅದು ಎಲ್ಲರ ಆಕರ್ಷಣೆಯ ಸ್ಥಳವಾಗಿದೆ.

'ಆನೆ ಹಂತಕರ ರಕ್ಷಣೆಗೆ ಸಂಸದ ಪ್ರಜ್ವಲ್ ಒತ್ತಡ'

ಪ್ರಜಾವಾಣಿ ವಾರ್ತೆ

ಹಾಸನ: 'ಆನೆ ಹಂತಕರ ರಕ್ಷಣೆಗೆ ಸಂಸದ ಪ್ರಜ್ವಲ್ ರೇವಣ್ಣ ಒತ್ತಡ ಹೇರುತ್ತಿದ್ದಾರೆ' ಎಂದು ಆರೋಪಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಂಸದೆ ಮನೇಕಾ ಗಾಂಧಿ ಜು.18 ರಂದು ದೂರು ಪತ್ರ ಬರೆದಿದ್ದಾರೆ.

'ಆನೆಯನ್ನು ಕೊಂದು ದಂತವನ್ನು ಮಾರಾಟ ಮಾಡಲು ಯತ್ನಿಸಿ ಸಿಕ್ಕಿಬಿದ್ದ ಆರೋಪಿಗಳ ರಕ್ಷಣೆಗೆ ಸಂಸದರು ಒತ್ತಡ ಹೇರಿದ್ದಾರೆ' ಎಂದು ಆರೋಪಿಸಿದ್ದಾರೆ.

'ವೀರಾಪುರ ಗ್ರಾಮದಲ್ಲಿ ಚಂದ್ರೇಗೌಡ ಎಂಬ ವ್ಯಕ್ತಿ ಆನೆಯನ್ನು ಕೊಂದು, ಜಮೀನಿನಲ್ಲಿ ಹೂತು ಹಾಕಿದ್ದ. ಬಳಿಕ ದಂತವನ್ನು ಕಿತ್ತು ಮಾರಾಟ ಮಾಡುವಾಗ ಮಾರ್ಚ್ 19 ರಂದು ಬೆಂಗಳೂರಿನ ಸಿ.ಕೆ ಅಚ್ಚುಕಟ್ಟು ಪೊಲೀಸರಿಗೆ ಆರೋಪಿಗಳು ಸಿಕ್ಕಿಬಿದ್ದಿದ್ದರು. ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಆದರೆ, ಈ ಬಗ್ಗೆ ಮತ್ತೊಂದು ಪ್ರಕರಣ ದಾಖಲಿಸಿಕೊಂಡಿರುವ ಹಾಸನದ ಅರಣ್ಯ ಅಧಿಕಾರಿಗಳು, ಪ್ರಕರಣವನ್ನು ತಮಗೆ ವರ್ಗಾಯಿಸುವಂತೆ ಪೊಲೀಸರ ಮೇಲೆ ಒತ್ತಡ ಹೇರುತ್ತಿದ್ದಾರೆ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಹಾಸನ ವಲಯ ಅರಣ್ಯ ಅಧಿಕಾರಿ ಕೂಡ ಇದಕ್ಕೆ ಕೈಜೋಡಿಸಿದ್ದಾರೆ. ತಕ್ಷಣ ಮಧ್ಯ ಪ್ರವೇಶಿಸಬೇಕು. ಪ್ರಕರಣವನ್ನು ಅರಣ್ಯ ಇಲಾಖೆಯಿಂದ ವಾಪಸ್ ಪಡೆದು, ಜಾಗೃತ ದಳದಿಂದ ತನಿಖೆ ನಡೆಸಬೇಕು. ಅವ್ಯವಹಾರ ನಡೆಸಿರುವ ಹಾಸನ ಆರ್‌ಎಫ್‌ಒ ವಿರುದ್ಧವೂ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದ್ದಾರೆ.

ಸಂಸದ ಪ್ರಜ್ವಲ್ ರೇವಣ್ಣ ಅವರು ಸಂಸತ್ ಅಧಿವೇಶನದಲ್ಲಿ ಭಾಗಿಯಾಗಿದ್ದು, ಪ್ರತಿಕ್ರಿಯೆಗೆ ಲಭ್ಯವಾಗಿಲ್ಲ.

'ಪ್ರವರ್ಗ 2ಎ ಮೀಸಲಿಗೆ ಮರಾಠರು'

ವರದಿ ಬಳಿಕ ಕ್ರಮ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮರಾಠ ಸಮುದಾಯವನ್ನು 3ಬಿ ಯಿಂದ 2ಎಗೆ ಸೇರಿಸಬೇಕು ಎಂಬ ಹಲವು ವರ್ಷಗಳ ಬೇಡಿಕೆ ಕುರಿತು ಹಿಂದುಳಿದ ವರ್ಗಗಳ ಆಯೋಗದ ವರದಿ ಬಂದ ಮೇಲೆ ತೀರ್ಮಾನಿಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ಮಂಗಳವಾರ ಇಲ್ಲಿ ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮಕ್ಕೆ ಚಾಲನೆ ನೀಡಿದ ಅವರು, 'ಸಾಂವಿಧಾನಿಕ ಚೌಕಟ್ಟಿನಡಿ ಮರಾಠ ಸಮುದಾಯಕ್ಕೆ ನ್ಯಾಯ ಕಲ್ಪಿಸಲಾಗುವುದು. ಆಯೋಗದ ಅಧ್ಯಕ್ಷರಿಗೆ ವರದಿ ಸಲ್ಲಿಸಲು ತಿಳಿಸಲಾಗಿದೆ' ಎಂದರು.

ಶಹಾಜಿ ರಾಜೆ ಭೋಸ್ಲೆ ಸಮಾಧಿ ಸ್ಥಳದ ಅಭಿವೃದ್ಧಿ ಸೇರಿದಂತೆ ಹಲವು ಬೇಡಿಕೆಗಳ ಮನವಿ ಬಂದಿವೆ. ವಿಸ್ತೃತ ವರದಿ ತಯಾರಿಸಲು ನಿಗಮಕ್ಕೆ ಹೆಚ್ಚುವರಿ ಆಗಿ ₹ 10 ಕೋಟಿ ಅನುದಾನ ಮಂಜೂರು ಮಾಡಲಾಗುವುದು ಎಂದು ಘೋಷಿಸಿದರು.

'ನಾನು ಜನಿಸಿದ್ದು ಹುಬ್ಬಳ್ಳಿಯ ಮರಾಠಗಲ್ಲಿಯಲ್ಲಿಯೇ' ಎಂದು ಸ್ಮರಿಸಿದ ಅವರು, 'ಈ ಸಮುದಾಯ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಗಡಿ ಗ್ರಾಮಗಳ ಅಭಿವೃದ್ಧಿಗೆ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರಕ್ಕೆ ಹೆಚ್ಚಿನ ಅನುದಾನ ಕೊಡಲಾಗುವುದು' ಎಂದರು.

ಶಾಸಕ ಬಿ.ಎಸ್.ಯಡಿಯೂರಪ್ಪ ಮಾತನಾಡಿ, 'ಮರಾಠ ಸಮುದಾಯದ ಬೆಂಬಲದಿಂದ ಬೊಮ್ಮಾಯಿ, ನಾನು ಮುಖ್ಯಮಂತ್ರಿ ಹುದ್ದೇಗೇರಲು ಸಾಧ್ಯ ಆಯಿತು. ಸರ್ಕಾರವು 2ಎಗೆ ಸೇರ್ಪಡೆ ಮಾಡಲಿದ್ದು, ಹೋರಾಟ ಮಾಡುವ ಅಗತ್ಯ ಇಲ್ಲ' ಎಂದರು.

ನಿಗಮದ ಅಧ್ಯಕ್ಷ ಎಂ.ಜಿ.ಮುಳೆ, 'ಆದಷ್ಟು ಬೇಗ 2'ಎ' ಸೇರ್ಪಡೆ ಕುರಿತು ತೀರ್ಮಾನಿಸಬೇಕು. ಯುವಜನರ ಭವಿಷ್ಯದ ದೃಷ್ಟಿಯಿಂದ ಇದು ಅಗತ್ಯ. ಸೈನಿಕ ಶಾಲೆ ನಿರ್ಮಿಸಬೇಕು. ಬೆಂಗಳೂರಿನಲ್ಲಿ ಸಮುದಾಯಕ್ಕೆ ಭವನ ನಿರ್ಮಿಸಬೇಕು' ಎಂದು ಕೋರಿದರು.

ಗೋಸಾಯಿ ಮಠದ ಮಂಜುನಾಥ ಭಾರತಿ ಸ್ವಾಮೀಜಿ, ಸಚಿವರಾದ ಶಶಿಕಲಾ ಜೊಲ್ಲೆ, ಶಿವರಾಂ ಹೆಬ್ಬಾರ್, ಶಾಸಕಿ ರೂಪಾಲಿ ನಾಯ್ಕ, ಶಾಸಕರಾದ ಶ್ರೀಮಂತ ಪಾಟೀಲ್, ಎಂ.ಪಿ.ರೇಣುಕಾಚಾರ್ಯ, ಮೇಲ್ಮನೆ ಸದಸ್ಯರಾದ ಲಕ್ಷ್ಮಣ ಸವದಿ, ಎಂ.ನಾಗರಾಜ್ ಯಾದವ್ ಹಾಜರಿದ್ದರು.



ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಛತ್ರಪತಿ ಶಿವಾಜಿ ಪ್ರತಿಮೆ ಸ್ಮರಣಿಕೆ ನೀಡಿ ಗೌರವಿಸಲಾಯಿತು. ಸಚಿವೆ ಶಶಿಕಲಾ ಜೊಲ್ಲೆ, ನಿಗಮದ ಅಧ್ಯಕ್ಷ ಎಂ.ಜಿ.ಮುಳೆ, ಶಾಸಕ ಬಿ.ಎಸ್.ಯಡಿಯೂರಪ್ಪ, ಗೋಸಾಯಿ ಮಠದ ಮಂಜುನಾಥ ಭಾರತೀಸ್ವಾಮೀಜಿ, ಸಚಿವ ಅಶ್ವತ್ಥ ನಾರಾಯಣ ಹಾಜರಿದ್ದರು – ಪ್ರಜಾವಾಣಿ ಚಿತ್ರ

ಇಬ್ಬರಿಗೆ ಸಚಿವ ಸ್ಥಾನ: ಶಾಸಕ ಮಾನೆ ಆಗ್ರಹ

'ಹಿಂದಿನ ಸರ್ಕಾರಗಳಲ್ಲಿ ಮರಾಠ ಸಮುದಾಯದ ಒಬ್ಬರಿಗಾದರೂ ಸಚಿವ ಸ್ಥಾನ ಸಿಗುತ್ತಿತ್ತು. ಬೊಮ್ಮಾಯಿ ಅವರೂ ಸಮುದಾಯದ ಇಬ್ಬರಿಗೆ ಸಚಿವ ಸ್ಥಾನ ನೀಡಬೇಕು. ಆಯಾಕಾಲದ ಸರ್ಕಾರಗಳು ಮರಾಠ ಸಮುದಾಯಕ್ಕೆ ಆದ್ಯತೆ ಮೇರೆಗೆ ಸೌಲಭ್ಯ ಕಲ್ಪಿಸಿವೆ' ಎಂದು ಕಾಂಗ್ರೆಸ್ ಶಾಸಕ ಶ್ರೀನಿವಾಸ ಮಾನೆ ಹೇಳಿದರು.

'ಗ್ರಾ.ಪಂ.ಗೊಂದು ಮಾದರಿ ಶಾಲೆ; ವಿಲೀನಕ್ಕೆ ಮುನ್ನುಡಿ'

ಒಂದನೇ ಪುಟದಿಂದ...

ಹಲವು ವರ್ಷಗಳಿಂದ ಶಿಕ್ಷಕರ ನೇಮಕಾತಿ ಸರಿಯಾಗಿ ನಡೆಯದೆ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಎದುರಾಗಿದೆ. ಈ ಕೊರತೆ ನೀಗಿಸಲು ಈಗಾಗಲೇ 15 ಸಾವಿರ ಶಿಕ್ಷಕರ ನೇಮಕ ಮಾಡಿಕೊಳ್ಳಲಾಗುತ್ತಿದೆ ಎಂದರು.

7 ಸಾವಿರ ಕೊಠಡಿಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ. ಎರಡು ಜತೆ ಸಮವಸ್ತ್ರ ಶೀಘ್ರ ವಿತರಿಸಲಾಗುವುದು. ಶೂ ಖರೀದಿಗೆ ನಿಗದಿಪಡಿಸಿದ ಹಣ ಕಡಿಮೆಯಾಗಿಲ್ಲ. ಅದೇ ದರಕ್ಕೆ ಉತ್ತಮ ಗುಣಮಟ್ಟದ ಶೂ, ಚಪ್ಪಲಿ, ಸಾಕ್ಸ್ ನೀಡಲು ಹಲವು ಕಂಪನಿಗಳು ಮುಂದೆ ಬಂದಿವೆ ಎಂದು ಸಮರ್ಥಿಸಿಕೊಂಡರು.

ಕೆಲವು ಶಾಲೆಗಳ ಕಂದಾಯ ದಾಖಲೆಗಳು ಸಮರ್ಪಕವಾಗಿಲ್ಲ. ನವೆಂಬರ್ ಒಳಗೆ ಎಲ್ಲ ದಾಖಲೆಗಳನ್ನು ಸರಿಪಡಿಸಲು ಸೂಚಿಸಲಾಗಿದೆ. ಶಾಲಾ ಮಕ್ಕಳನ್ನು ಕಾಳಜಿಯಿಂದ ಕರೆದುಕೊಂಡು ಹೋಗಲು ಬಿಎಂಟಿಸಿ ಚಾಲಕರು, ನಿರ್ವಾಹಕರಿಗೆ ಎಚ್ಚರಿಸಲಾಗುವುದು. ಶೈಕ್ಷಣಿಕ ದತ್ತು ಯೋಜನೆ ಸರಳೀಕರಣಗೊಳಿಸಲಾಗಿದ್ದು, ಹಲವು ದಾನಿಗಳು ಮುಂದೆ ಬಂದಿದ್ದಾರೆ ಎಂದು ಮಾಹಿತಿ ನೀಡಿದರು.



ಹುಬ್ಬಳ್ಳಿಯ ಬೆಂಗೇರಿಯ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ಆವರಣದಲ್ಲಿರುವ ರಾಷ್ಟ್ರಧ್ವಜ ತಯಾರಿಕಾ ಘಟಕಕ್ಕೆ ಮಂಗಳವಾರ ಭೇಟಿ ನೀಡಿದ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಮೊಹಮ್ಮದ್ ನಲಪಾಡ್, ಕಾರ್ಮಿಕರ ಸಮಸ್ಯೆಗಳನ್ನು ಆಲಿಸಿದರು

'ಮೇಕ್ ಇನ್ ಚೀನಾ ಎನ್ನುತ್ತಿರುವ ಮೋದಿ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಎಲ್ಲಾ ವಸ್ತುಗಳ ವಿಷಯದಲ್ಲಿ 'ಮೇಕ್ ಇನ್ ಇಂಡಿಯಾ' ಎನ್ನುವ ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಅಸ್ಮಿತೆಯಾದ ರಾಷ್ಟ್ರಧ್ವಜದ ವಿಷಯದಲ್ಲಿ ಮೇಕ್ ಇನ್ ಚೀನಾ ಎನ್ನುತ್ತಿದ್ದಾರೆ' ಎಂದು ರಾಜ್ಯ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಮೊಹಮ್ಮದ್ ನಲಪಾಡ್ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಬೆಂಗೇರಿಯ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ ಆವರಣದಲ್ಲಿರುವ ರಾಷ್ಟ್ರಧ್ವಜ ತಯಾರಿಕಾ ಘಟಕಕ್ಕೆ ಮಂಗಳವಾರ ಭೇಟಿ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ಧ್ವಜ ಸಂಹಿತೆಗೆ ತಿದ್ದುಪಡಿ ತಂದು ಪಾಲಿಸ್ಟರ್ ಧ್ವಜಕ್ಕೆ ಅವಕಾಶ ನೀಡಿ, ನಮ್ಮ ನೆಲದ ಖಾದಿಗೆ ಮೋದಿ ಅವಮಾನಿಸಿದ್ದಾರೆ. ಸ್ವಾತಂತ್ರ್ಯ ಹೋರಾಟದಲ್ಲಿ, ಬ್ರಿಟಿಷರನ್ನು ದೇಶದಿಂದ ಓಡಿಸುವ ದೊಡ್ಡ ಅಸ್ತ್ರವಾಗಿಯೂ ಖಾದಿ ಬಳಕೆಯಾಗಿತ್ತು. ಹೊಸ ತಿದ್ದುಪಡಿಯು, ಖಾದಿ ಧ್ವಜಕ್ಕೆ ಕುತ್ತು ತಂದಿದೆ. ಇಷ್ಟಕ್ಕೂ ಪಾಲಿಸ್ಟರ್ ಧ್ವಜ ಪರಿಸರ ಸ್ನೇಹಿ ಅಲ್ಲ' ಎಂದರು.

'ನಮ್ಮ ಸಂಸ್ಕೃತಿ ಮತ್ತು ಪರಂಪರೆಗೆ ಧಕ್ಕೆ ತಂದರೆ ಕಾಂಗ್ರೆಸ್ ಸುಮ್ಮನೆ ಇರುವುದಿಲ್ಲ. ಯಾವುದೇ ಕಾರಣಕ್ಕೂ ಪಾಲಿಸ್ಟರ್ ಧ್ವಜಕ್ಕೆ ಅವಕಾಶ ನೀಡಬಾರದು. ಕೇಂದ್ರ ಸರ್ಕಾರ ಕೂಡಲೇ ತಿದ್ದುಪಡಿ ಹಿಂಪಡೆಯಬೇಕು' ಎಂದರು.

ಕಾಂಗ್ರೆಸ್‌ನಿಂದ ಖರೀದಿ

'ಪಾಲಿಸ್ಟರ್ ಧ್ವಜಕ್ಕೆ ಅವಕಾಶ ನೀಡಿದ್ದರಿಂದ ಖಾದಿ ಗ್ರಾಮೋದ್ಯೋಗದಲ್ಲಿ ಮಾರಾಟವಾಗದೆ ಉಳಿದಿರುವ ಧ್ವಜಗಳನ್ನು ಕಾಂಗ್ರೆಸ್ ಪಕ್ಷವು ಖರೀದಿಸಲಿದೆ. ಜೊತೆಗೆ, ಖಾದಿ ಗ್ರಾಮೋದ್ಯೋಗವನ್ನು ಉಳಿಸಲು ದೊಡ್ಡ ಮಟ್ಟದಲ್ಲಿ ಹೋರಾಟ ಮಾಡಲಿದೆ' ಎಂದು ಮೊಹಮ್ಮದ್ ನಲಪಾಡ್ ಹೇಳಿದರು.

ಮಲೆನಾಡಿನಲ್ಲಿ ಮತ್ತೆ ಕೊಳೆ ರೋಗದ ಭೀತಿ

ಒಂದನೇ ಪುಟದಿಂದ...

'ನಿರಂತರ ಮಳೆ ಸುರಿದ ಕಾರಣ ಬಹುತೇಕ ರೈತರಿಗೆ ಇದುವರೆಗೂ ಬೋರ್ಡೊ ದ್ರಾವಣ ಸಿಂಪಡಿಸಲು ಅವಕಾಶ ದೊರೆತಿಲ್ಲ. ಅಲ್ಲದೆ, ಮಳೆಯ ಜತೆಗೆ ಶೀತಗಾಳಿಯೂ ಬೀಸುತ್ತಿರುವ ಕಾರಣ ಕೊಳೆರೋಗ ವ್ಯಾಪಿಸುವ ಸಾಧ್ಯತೆ ಹೆಚ್ಚಿದೆ' ಎಂದು ಶಿರಸಿಯ ತೋಟಗಾರಿಕೆ ಉಪನಿರ್ದೇಶಕ ಬಿ.ಪಿ. ಸತೀಶ್ ಹೇಳುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ, ಮೂಡಿಗೆರೆ, ಕೊಪ್ಪ, ಬಾಳೆಹೊನ್ನೂರು, ತರೀಕೆರೆ, ಕಳಸ ಭಾಗದ ತೋಟಗಳಲ್ಲೂ ಈ ರೋಗ ಕಾಣಿಸಿಕೊಂಡಿದೆ.

'ಜಿಲ್ಲೆಯಲ್ಲಿ ಸುಮಾರು 70,000 ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದೆ. ಈ ಪೈಕಿ 15ರಿಂದ 20,000 ಹೆಕ್ಟೇರ್ ಪ್ರದೇಶದಲ್ಲಿ ಕೊಳೆರೋಗ ಕಾಣಿಸಿಕೊಂಡಿದೆ. ಬೆಳೆ ವಿಮೆ ಮಾಡಿಸಿದ್ದ ಬೆಳೆಗಾರರಿಗೆ ವಿಮೆ ಮೊತ್ತ ಪಾವತಿಯಾಗುತ್ತದೆ' ಎಂದು ಚಿಕ್ಕಮಗಳೂರಿನ ತೋಟಗಾರಿಕೆ ಉಪನಿರ್ದೇಶಕ ವೇದಮೂರ್ತಿ ತಿಳಿಸಿದರು.

'ಕೊಳೆರೋಗದಿಂದಾಗಿ ಅಡಿಕೆ ಮರಗಳ ಗೊನೆಗಳಲ್ಲಿ ತೊಟ್ಟುಗಳು ಕೊಳೆತಿವೆ. ಗಾಳಿಗೆ ಕಾಯಿಗಳು ಉದುರುತ್ತವೆ. ಬೋರ್ಡೊ ದ್ರಾವಣ ಸಿಂಪಡಿಸಿದ್ದೇವೆ. ರೋಗದಿಂದಾಗಿ ಫಸಲು ಮುಕ್ಕಾಲು ಭಾಗ ನೆಲಕಚ್ಚಿದೆ. ಮರಗಳನ್ನು ಉಳಿಸಿಕೊಳ್ಳುವುದು ಸವಾಲಾಗಿದೆ' ಎಂದು ಚಿಕ್ಕಮಗಳೂರು ಜಿಲ್ಲೆಯ ಹೇರೂರಿನ ಬೆಳೆಗಾರ ಡಾ.ಕೃಷ್ಣಾನಂದ ಸಂಕಷ್ಟ ತೋಡಿಕೊಂಡರು.

(ಪೂರಕ ಮಾಹಿತಿ: ಬಿ.ಜೆ.ಧನ್ಯಪ್ರಸಾದ್, ಗಣಪತಿ ಹೆಗಡೆ)

> **ನಿರಂತರವಾಗಿ ಮಳೆ ಇರುವುದರಿಂದ ಈ ಬಾರಿ ಜಿಲ್ಲೆಯಲ್ಲಿ ಕೊಳೆರೋಗದ ಸಮೀಕ್ಷೆ ಮಾಡಲು ಸಾಧ್ಯವಾಗಿಲ್ಲ. ಬೆಳೆಗಾರರಿಗೆ ಮುಂಜಾಗ್ರತಾ ಕ್ರಮ ತಿಳಿಸಲಾಗಿದೆ.**
> **ಪ್ರಕಾಶ್ ಜಿ.ಎನ್,** ಉಪನಿರ್ದೇಶಕ, ಶಿವಮೊಗ್ಗ ತೋಟಗಾರಿಕೆ ಇಲಾಖೆ

ವಾಡಿಕೆಗಿಂತ ಅಧಿಕ ಮಳೆ

ಜುಲೈ 1ರಿಂದ 18ರವರೆಗೆ ಶಿವಮೊಗ್ಗ ಜಿಲ್ಲೆಯಲ್ಲಿ ವಾಡಿಕೆಯಂತೆ 45.40 ಸೆಂ. ಮೀ ಮಳೆ ಆಗಬೇಕಿತ್ತು. ಆದರೆ, 84.80 ಸೆಂ.ಮೀ ಮಳೆ ಬಿದ್ದಿದೆ. ವಾಡಿಕೆಗಿಂತ ಶೇ 87ರಷ್ಟು ಹೆಚ್ಚು ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಜನವರಿಯಿಂದ ಜುಲೈ 17ರವರೆಗೆ ವಾಡಿಕೆಯ ಮಳೆ ಪ್ರಮಾಣ 79.9 ಸೆಂ. ಮೀ ಆಗಿದೆ. ಈ ಬಾರಿ 123.8 ಸೆಂ.ಮೀ (ಶೇ 155) ಮಳೆಯಾಗಿದೆ. ಕಳೆದ ಒಂದು ವಾರದಲ್ಲಿ 31.9 ಸೆಂ.ಮೀ ಸುರಿದಿದೆ.

'ರೋಗ ತೀವ್ರಗೊಂಡರೆ ಶೇ 60ರಷ್ಟು ಹಾನಿ'

'ಕೊಳೆರೋಗದಿಂದ ಬಾಧಿತವಾದ ತೋಟದಲ್ಲಿ ಪ್ರತಿ ಎಕರೆಗೆ ಸಾಮಾನ್ಯವಾಗಿ ಶೇ 20ರಷ್ಟು ಇಳುವರಿ ಕಡಿಮೆ ಆಗುತ್ತದೆ. ರೋಗ ತೀವ್ರವಾಗಿ ಬಾಧಿತವಾದಲ್ಲಿ ಶೇ 40ರಿಂದ 60ರಷ್ಟು ಫಸಲು ಕಡಿಮೆ ಆಗುತ್ತದೆ. ಕೆಲವೊಮ್ಮೆ ಇಡೀ ತೋಟ ನಾಶವಾಗುತ್ತದೆ' ಎಂದು ತೀರ್ಥಹಳ್ಳಿಯ ಅಡಿಕೆ ಸಂಶೋಧನಾ ಕೇಂದ್ರದ ವಿಜ್ಞಾನಿ ಡಾ.ರವಿಕುಮಾರ್ ಹೇಳುತ್ತಾರೆ.



ಶಿರಸಿ ತಾಲ್ಲೂಕಿನ ನೆಕ್ಕರಿಕೆ ಗ್ರಾಮದ ರೈತ ಶಿವು ಸಾತು ಮರಾಠಿ ಅವರ ತೋಟದಲ್ಲಿ ಕೊಳೆರೋಗದಿಂದ ಉದುರಿದ ಅಡಿಕೆ ಮಿಳ್ಳೆಗಳು

ಕೊಳೆರೋಗ ನಿಯಂತ್ರಣಕ್ಕೆ ಬೋರ್ಡೊ ದ್ರಾವಣ ಸಿಂಪರಣೆ ರಾಮಬಾಣ. ಪ್ರತಿ ಬ್ಯಾರಲ್‌ಗೆ ಶೇ 1ರಷ್ಟು ದ್ರಾವಣ ಸಿಂಪಡಿಸಬೇಕು. ಮಳೆಗಾಲದ ಆರಂಭಕ್ಕೆ ಮುನ್ನ ಒಮ್ಮೆ ಸಿಂಪರಿಸಿದರೆ ಪರಿಣಾಮಕಾರಿ. ಕೆಲವು ರೈತರು 40 ಇಂಚಿನಷ್ಟು ಮಳೆ ಬಿದ್ದ ನಂತರ ಬೋರ್ಡೊ ದ್ರಾವಣ ಸಿಂಪಡಿಸಲು ಮುಂದಾಗುತ್ತಾರೆ. ಅದು ಸರಿಯಲ್ಲ. ತಿಂಗಳಿಗೆ ಮೂರು ಬಾರಿ ಕೆಲವೊಮ್ಮೆ ನಾಲ್ಕು ಬಾರಿ ಸಿಂಪಡಿಸಿದರೂ ತಪ್ಪಿಲ್ಲ ಎನ್ನುತ್ತಾರೆ. ಮರದ ತಲೆಭಾಗ ತೋಯುವಂತೆ ಬೋರ್ಡೊ ದ್ರಾವಣವನ್ನು ಸಿಂಪಡಿಸಬೇಕು. ಇದರಿಂದ ಎಲೆಚುಕ್ಕಿ ಬಾಧೆ, ಶಿರಕೊಳೆ, ಸುಳಿ ಕೊಳೆಯುವುದನ್ನು ತಪ್ಪಿಸಬಹುದು ಎಂದು ಅವರು ಸಲಹೆ ನೀಡುತ್ತಾರೆ.

ವರುಣ್ ಗಾಂಧಿ, ವಿರೋಧ ಪಕ್ಷಗಳ ಆರೋಪ– ‘ಗಾಳಿ ಸುದ್ದಿ’ ಎಂದ ರಕ್ಷಣಾ ಸಚಿವ

ಸೇನಾ ನೇಮಕಾತಿಯಲ್ಲಿ ಜಾತಿ

ನವದೆಹಲಿ (ಪಿಟಿಐ): ಅಗ್ನಿಪಥ ಯೋಜನೆಯಡಿ ಸೇನಾ ನೇಮಕಾತಿಗೆ ಭಾರತೀಯ ಸೇನೆಯು ಜಾತಿಯನ್ನು ಮಾನದಂಡವಾಗಿ ಬಳಸುತ್ತಿದೆ ಎಂದು ಎಎಪಿ, ಜೆಡಿಯು ಮುಖಂಡರು ಹಾಗೂ ಬಿಜೆಪಿಯ ಸಂಸದ ವರುಣ್ ಗಾಂಧಿ ಆರೋಪಿಸಿದ್ದಾರೆ.

ಈ ಆರೋಪಗಳನ್ನು ಅಲ್ಲಗಳೆದಿರುವ ರಕ್ಷಣಾ ಸಚಿವ ರಾಜನಾಥ ಸಿಂಗ್, ‘ಇದು ಗಾಳಿ ಸುದ್ದಿ’ಯಷ್ಟೇ ಎಂದಿದ್ದಾರೆ.

ಜೆಡಿಯು ನಾಯಕ ಉಪೇಂದ್ರ ಕುಶ್ವಾಹಾ ಮತ್ತು ಬಿಜೆಪಿಯ ವರುಣ್ ಗಾಂಧಿ ಅವರು ‘ಸೇನಾ ನೇಮಕಾತಿಗೆ ಜಾತಿ ಪ್ರಮಾಣ ಪತ್ರದ ಅಗತ್ಯವೇನು’ ಎಂದು ಟ್ವೀಟ್ ಮಾಡಿದ ಬೆನ್ನಲ್ಲೇ ಎಎಪಿ ಸಂಸದ ಸಂಜಯ್ ಸಿಂಗ್ ಅವರೂ ಅಗ್ನಿಪಥ ಯೋಜನೆ ಸಂಬಂಧ ಪ್ರಧಾನಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ಮಾಡಿದ್ದಾರೆ.

ಮುಖ್ಯಾಂಶಗಳು

- ಸೇನಾ ನೇಮಕಾತಿ ನಿಯಮಗಳಲ್ಲಿ ಬದಲಾವಣೆ ಸಲ್ಲ: ವರುಣ್
- ಪ್ರತಿಪಕ್ಷಗಳ ವಾಗ್ದಾಳಿ

ಈ ಸಂಬಂಧ ಪ್ರತಿಕ್ರಿಯಿಸಿದ ಸಚಿವ ರಾಜನಾಥ ಸಿಂಗ್, ‘ಇದು ಗಾಳಿ ಸುದ್ದಿ. ನೇಮಕಾತಿ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಯಿಲ್ಲ. ಸ್ವಾತಂತ್ರ ಪೂರ್ವದಿಂದ ಚಾಲ್ತಿಯಲ್ಲಿರುವ ನೇಮಕಾತಿ ವ್ಯವಸ್ಥೆಯೇ ಮುಂದುವರಿಯಲಿದೆ’ ಎಂದರು.

ಇದಕ್ಕೂ ಮುನ್ನ ಟ್ವೀಟ್ ಮಾಡಿರುವ ಎಎಪಿಯ ಸಂಸದ ಸಂಜಯ್ ಸಿಂಗ್, ‘ಭಾರತದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸೇನಾ ನೇಮಕಾತಿಯಲ್ಲಿ ಜಾತಿ ನಮೂದಿಸುವಂತೆ ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ. ಸಶಸ್ತ್ರ ಪಡೆಗಳಲ್ಲಿ ಕಾರ್ಯನಿರ್ವಹಿಸಲು ದಲಿತರು, ಹಿಂದುಳಿದವರು ಮತ್ತು ಆದಿವಾಸಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಅವಕಾಶ ನೀಡುವುದಿಲ್ಲವೇ’ ಎಂದು ಪ್ರಶ್ನಿಸಿದ್ದಾರೆ.

‘ಮೋದಿ ಸರ್ಕಾರದ ನಿಜವಾದ ಮುಖ ಈಗ ಬಯಲಾಗಿದೆ. ಮೋದಿ ಜೀ ಅವರೇ ನೀವು ‘ಅಗ್ನಿವೀರ’ ಅಥವಾ ‘ಜಾತಿವೀರ’ ಯಾರನ್ನು ರೂಪಿಸ ಬೇಕೆಂದಿದ್ದೀರಿ’ ಎಂದು ದೂರಿದ್ದಾರೆ.

‘ಯಾರದಾದರೂ ಜಾತಿಯನ್ನು ಆಧರಿಸಿ ಅವರ ದೇಶಭಕ್ತಿಯನ್ನು ನಿರ್ಧರಿಸುವುದು ಸರಿಯಲ್ಲ’ ಎಂದಿರುವ ವರುಣ್ ಗಾಂಧಿ ಅವರು, ‘ಸರ್ಕಾರವು ಸೇನಾ ನೇಮಕಾತಿ ನಿಯಮಗಳಲ್ಲಿ ಬದಲಾವಣೆ ತರುವುದು ಸರಿಯಲ್ಲ. ಇದು ರಾಷ್ಟ್ರೀಯ ಭದ್ರತೆ ವಿಚಾರದ ಮೇಲೆ ಪರಿಣಾಮ ಬೀರುತ್ತದೆ’ ಎಂದಿದ್ದಾರೆ.

ಪಿಐಎಲ್‌ಗಳನ್ನು ದೆಹಲಿ ಹೈಕೋರ್ಟ್‌ಗೆ ವರ್ಗಾಯಿಸಲು ‘ಸುಪ್ರೀಂ’ಗೆ ಸೂಚನೆ

ನವದೆಹಲಿ (ಪಿಟಿಐ): ಸಶಸ್ತ್ರ ಪಡೆಗಳಲ್ಲಿನ ನೇಮಕಾತಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಪ್ರಕಟಿಸಿರುವ ಅಗ್ನಿಪಥ ಯೋಜನೆಯನ್ನು ಪ್ರಶ್ನಿಸಿ ಸಲ್ಲಿಕೆಯಾಗಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ದೆಹಲಿ ಹೈಕೋರ್ಟ್‌ಗೆ ವರ್ಗಾಯಿಸುವಂತೆ ಸುಪ್ರೀಂಕೋರ್ಟ್ ಮಂಗಳವಾರ ತಿಳಿಸಿದೆ.

ಈ ಯೋಜನೆ ಪ್ರಶ್ನಿಸಿ ಕೇರಳ, ಪಂಜಾಬ್– ಹರಿಯಾಣ, ಪಟ್ನಾ ಹಾಗೂ ಉತ್ತರಾಖಂಡ ಹೈಕೋರ್ಟ್‌ಗಳಲ್ಲಿ ದಾಖಲಾಗಿರುವ ಪಿಐಎಲ್‌ಗಳನ್ನು ದೆಹಲಿ ಹೈಕೋರ್ಟ್‌ಗೆ ವರ್ಗಾಯಿಸಬೇಕು ಅಥವಾ ದೆಹಲಿ ಹೈಕೋರ್ಟ್ ಆದೇಶ ಹೊರಬೀಳುವ ತನಕ ಈ ಅರ್ಜಿಗಳ ವಿಚಾರಣೆಯನ್ನು ಬಾಕಿ ಇಡಬೇಕು ಎಂದು ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಸೂರ್ಯಕಾಂತ್ ಮತ್ತು ಎ.ಎಸ್. ಬೋಪಣ್ಣ ಅವರನ್ನೊಳಗೊಂಡ ನ್ಯಾಯಪೀಠ ಸೂಚಿಸಿದೆ.

ಈ ನಾಲ್ಕು ಹೈಕೋರ್ಟ್‌ಗಳಲ್ಲಿ ಪಿಐಎಲ್ ಸಲ್ಲಿಸಿರುವ ಅರ್ಜಿದಾರರು ಬಯಸಿದರೆ ದೆಹಲಿ ಹೈಕೋರ್ಟ್‌ನ ವಿಚಾರಣೆ ಸಂದರ್ಭದಲ್ಲಿ ತಮ್ಮ ವಾದ ದಾಖಲಿಸಬಹುದು ಎಂದೂ ಪೀಠ ಹೇಳಿದೆ.



ಮಾರ್ಗರೇಟ್ ಆಳ್ವ ಅವರು ಮಂಗಳವಾರ ನವದೆಹಲಿಯ ಸಂಸತ್ ಭವನದಲ್ಲಿ ನಾಮಪತ್ರ ಸಲ್ಲಿಸಿದರು. ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ನಾಯಕ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ, ಎನ್‌ಸಿಪಿ ಮುಖಂಡ ಶರದ್ ಪವಾರ್, ಸಿಪಿಎಂನ ಸೀತಾರಾಂ ಯೆಚೂರಿ, ಶಿವಸೇನಾದ ಸಂಜಯ್ ರಾವುತ್ ಇದ್ದಾರೆ –ಪಿಟಿಐ ಚಿತ್ರ

ಉಪ ರಾಷ್ಟ್ರಪತಿ ಚುನಾವಣೆ: ಮಾರ್ಗರೇಟ್ ಆಳ್ವ ನಾಮಪತ್ರ

ನವದೆಹಲಿ (ಪಿಟಿಐ): ಉಪ ರಾಷ್ಟ್ರಪತಿ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಒಮ್ಮತದ ಅಭ್ಯರ್ಥಿಯಾಗಿರುವ ಕರ್ನಾಟಕದ ಮಾರ್ಗರೇಟ್ ಆಳ್ವ ಅವರು ಮಂಗಳವಾರ ಸಂಸತ್ ಭವನದಲ್ಲಿ ತಮ್ಮ ನಾಮಪತ್ರ ಸಲ್ಲಿಸಿದರು.

ಈ ವೇಳೆ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಎನ್‌ಸಿಪಿ ಮುಖಂಡ ಶರದ್ ಪವಾರ್, ರಾಜ್ಯಸಭೆಯಲ್ಲಿ ವಿರೋಧ ಪಕ್ಷಗಳ ನಾಯಕ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಸೇರಿದಂತೆ ಹಲವು ನಾಯಕರು ಹಾಜರಿದ್ದರು. ಆದರೆ ಟಿಎಂಸಿ ಮತ್ತು ಎಎಪಿಯ ಯಾವೊಬ್ಬ ನಾಯಕರೂ ಹಾಜರಿರಲಿಲ್ಲ.

ನಾಮಪತ್ರ ಸಲ್ಲಿಸಿದ ಬಳಿಕ ಪ್ರತಿಕ್ರಿಯಿಸಿದ ಆಳ್ವ, ಚುನಾವಣೆಯಲ್ಲಿ ಸೋಲು– ಗೆಲುವು ಸಹಜ. ಅದು ಜೀವನದ ಒಂದು ಭಾಗವೂ ಹೌದು. ಸಂಸತ್ತಿನ ಉಭಯ ಸದನಗಳ ಸದಸ್ಯರ ವಿಶ್ವಾಸ ಗಳಿಸಲು, ಆ ಮೂಲಕ ಜನರನ್ನು ಒಗ್ಗೂಡಿಸಲು ಅವಕಾಶ ದೊರೆತಿದೆ. ಈ ಮೂಲಕ ಸಾಮಾನ್ಯ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ಬಲಿಷ್ಠ, ಏಕೀಕೃತ ಭಾರತ ನಿರ್ಮಾಣಕ್ಕೆ ನೆರವಾಗಲು ಸಾಧ್ಯವಾಗುತ್ತದೆ ಎಂದರು.

80 ವರ್ಷದ ಆಳ್ವ ಅವರು, ಎನ್‌ಡಿಎ ಅಭ್ಯರ್ಥಿ ಜಗದೀಪ್ ಧನಕರ್ ವಿರುದ್ಧ ಸ್ಪರ್ಧಿಸಲಿದ್ದಾರೆ. ಉಪ ರಾಷ್ಟ್ರಪತಿ ಚುನಾವಣೆ ಆಗಸ್ಟ್ 6ರಂದು ನಡೆಯಲಿದೆ.

ನೂಪುರ್ ಶರ್ಮಾಗೆ ಮಧ್ಯಂತರ ರಕ್ಷಣೆ ನೀಡಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಟಿ.ವಿಯ ಚರ್ಚೆಯೊಂದರಲ್ಲಿ ಪ್ರವಾದಿ ಮಹಮ್ಮದ್ ಅವರ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದ ಬಿಜೆಪಿಯ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಮಂಗಳವಾರ ಸುಪ್ರೀಂ ಕೋರ್ಟ್ ಮಧ್ಯಂತರ ರಕ್ಷಣೆ ನೀಡಿದೆ.

ನೂಪುರ್ ಅವರ ವಿರುದ್ಧ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವರ ವಿರುದ್ಧ ಯಾವುದೇ ಬಲವಂತ ಕ್ರಮಗಳನ್ನು ಕೈಗೊಳ್ಳುವಂತಿಲ್ಲ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜೆ.ಬಿ. ಪಾರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠವು ಹೇಳಿದೆ.

ನೂಪುರ್ ಅವರ ವಿರುದ್ಧ ವಿವಿಧ ರಾಜ್ಯಗಳಲ್ಲಿ ಎಫ್‌ಐಆರ್‌ಗಳು ಮತ್ತು ದೂರುಗಳು ದಾಖಲಾಗಿದ್ದು, ಈ ಹಿಂದೆ ಇದೇ ನ್ಯಾಯಪೀಠವು ನೀಡಿದ್ದ ಹೇಳಿಕೆಯಿಂದಾಗಿ ನೂಪುರ್ ಅವರಿಗೆ ಜೀವಭಯ ಇರುವುದನ್ನೂ ನ್ಯಾಯಾಲಯವು ಗಮನಿಸಿತು.

ನೂಪುರ್ ಅವರು ಪರಿಹಾರಕ್ಕಾಗಿ ಪ್ರತಿಯೊಂದು ಕೋರ್ಟ್‌ಗೂ ಅಲೆಯಬೇಕಿಲ್ಲ. ಇದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ, ದೆಹಲಿ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ ರಾಜ್ಯ ಗಳಿಗೆ ನೋಟಿಸ್ ಜಾರಿ ಮಾಡಿದ ನ್ಯಾಯಪೀಠವು, ಇದಕ್ಕೆ ಆಗಸ್ಟ್ 10ರೊಳಗೆ ಪ್ರತಿಕ್ರಿಯೆ ನೀಡಬೇಕೆಂದು ಸೂಚಿಸಿದೆ.

ನೂಪುರ್ ಹತ್ಯೆಗಾಗಿ ಬಂದಿದ್ದ ಪಾಕ್ ಪ್ರಜೆ

ನವದೆಹಲಿ (ಪಿಟಿಐ): ‘ಪ್ರವಾದಿ ಮಹಮ್ಮದ್ ಅವರ ಕುರಿತು ವಿವಾದಾತ್ಮಕ ಹೇಳಿಕೆ ನೀಡಿದ್ದ ಬಿಜೆಪಿಯ ಮಾಜಿ ವಕ್ತಾರೆ ನೂಪುರ್ ಶರ್ಮಾ ಅವರನ್ನು ಹತ್ಯೆ ಮಾಡಲು ಗಡಿದಾಟಿ ಬಂದಿದ್ದ ಪಾಕಿಸ್ತಾನ ಪ್ರಜೆಯನ್ನು ಬಿಎಸ್‌ಎಫ್ ಬಂಧಿಸಿದೆ’ ಎಂದು ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

ರಿಜ್ವಾನ್ ಅಶ್ರಫ್ (22) ಬಂಧಿತ. ಈತ ಪಾಕಿಸ್ತಾನದ ಪಂಜಾಬ್ ಪ್ರಾಂತ್ಯದ ಬಹೌದ್ದಿನ್ ಜಿಲ್ಲೆಯ ಮಂಡಿ ನಿವಾಸಿ.

ಪ್ರಕರಣದ ವಿಚಾರಣೆಯನ್ನು ಆಗಸ್ಟ್ 10ಕ್ಕೆ ನ್ಯಾಯಪೀಠವು ಮುಂದೂಡಿತು.

ಜುಲೈ 1ರಂದು ಸುಪ್ರೀಂಕೋರ್ಟ್‌ನ ಇದೇ ನ್ಯಾಯಪೀಠವು, ಪ್ರವಾದಿ ಮಹಮ್ಮದ್ ಅವರ ವಿವಾದಾತ್ಮಕ ಹೇಳಿಕೆಗಳಿಗಾಗಿ ನೂಪುರ್ ಅವರನ್ನು ತೀವ್ರವಾಗಿ ಟೀಕಿಸಿತ್ತು. ‘ನೂಪುರ್ ಅವರ ಸಡಿಲವಾದ ನಾಲಿಗೆಯು ಇಡೀ ದೇಶಕ್ಕೆ ಬೆಂಕಿ ಹಚ್ಚಿದೆ. ದೇಶದಲ್ಲಿ ಈಗ ಏನಾಗುತ್ತಿದೆಯೋ ಅದಕ್ಕೆ ಅವರೊಬ್ಬರೇ ಏಕಾಂಗಿ ಹೊಣೆಗಾರರು’ ಎಂದೂ ಹೇಳಿತ್ತು.

ಕಲ್ಲಕುರಿಚಿ ಹಿಂಸಾಚಾರ: ಎಸ್‌ಐಟಿ ರಚನೆ

ಚೆನ್ನೈ (ಪಿಟಿಐ): ತಮಿಳುನಾಡಿನ ಕಲ್ಲಕುರಿಚಿಯ ಚಿನ್ನಸೇಲಂನಲ್ಲಿರುವ ಖಾಸಗಿ ವಸತಿ ಶಾಲೆಯೊಂದರ ವಿದ್ಯಾರ್ಥಿನಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ ಬಳಿಕ ನಡೆದಿರುವ ಹಿಂಸಾಚಾರದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ ಎಂದು ತಮಿಳುನಾಡಿನ ಡಿಜಿಪಿ ಸಿ. ಶೈಲೇಂದ್ರ ಬಾಬು ಮಂಗಳವಾರ ತಿಳಿಸಿದ್ದಾರೆ.

ಸೇಲಂ ವಲಯದ ಡಿಐಜಿ ಪ್ರವೀಣ್ ಕುಮಾರ್ ಅಭಿನಪು ಅವರ ನೇತೃತ್ವದಲ್ಲಿ ಎಸ್‌ಐಟಿ ತನಿಖೆ ನಡೆಯಲಿದೆ. ಪೊಲೀಸ್ ಇಲಾಖೆಯ ಉನ್ನತ ಸ್ಥಾನದಲ್ಲಿರುವ ಐವರು ಅಧಿಕಾರಿಗಳೂ ಎಸ್‌ಐಟಿಯಲ್ಲಿದ್ದಾರೆ.

ಈ ಮಧ್ಯೆ ಕಲ್ಲಕುರಿಚಿಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿದೆ.

ಸಮವಸ್ತ್ರ ತೆಗೆಯಲು ಒತ್ತಾಯ: ಶಿಕ್ಷಕಿಯರ ವಿರುದ್ಧ ಎಫ್‌ಐಆರ್

ಹಾಪುರ, ಉತ್ತರ ಪ್ರದೇಶ (ಪಿಟಿಐ): ಪರಿಶಿಷ್ಟ ಸಮುದಾಯಕ್ಕೆ ಸೇರಿದ ಇಬ್ಬರು ವಿದ್ಯಾರ್ಥಿನಿಯರಿಗೆ ಸಮವಸ್ತ್ರ ತೆಗೆಯುವಂತೆ ಒತ್ತಾಯಿಸಿದ ಆರೋಪದ ಮೇಲೆ ಪ್ರಾಥಮಿಕ ಶಾಲೆಯೊಂದರ ಇಬ್ಬರು ಶಿಕ್ಷಕಿಯರನ್ನು ಅಮಾನತುಗೊಳಿಸಿ, ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

‘ಹಾಪುರ ಜಿಲ್ಲೆಯ ಉದಯಪುರ ಗ್ರಾಮದಲ್ಲಿ ಜುಲೈ 11ರಂದು ಈ ಘಟನೆ ನಡೆದಿದೆ. ಶಿಕ್ಷಕಿಯರಾದ ಸುನೀತಾ ಹಾಗೂ ವಂದನಾ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಶಾಲೆಯಲ್ಲಿ ವಿದ್ಯಾರ್ಥಿಗಳ ಫೋಟೊ ತೆಗೆಯಲಾಗುತ್ತಿತ್ತು. ಆದರೆ, ಇಬ್ಬರು ಬಾಲಕಿಯರು ಸಮವಸ್ತ್ರ ಧರಿಸಿರಲಿಲ್ಲ. ಹೀಗಾಗಿ, ಸಮವಸ್ತ್ರಗಳನ್ನು ತೆಗೆದು ಆ ಇಬ್ಬರಿಗೆ ನೀಡುವಂತೆ ಶಿಕ್ಷಕಿಯರು ಪರಿಶಿಷ್ಟ ವಿದ್ಯಾರ್ಥಿನಿಯರಿಗೆ ಸೂಚಿಸಿದ್ದರು ಎನ್ನಲಾಗಿದೆ. ಈ ಸಂಬಂಧ ವಿದ್ಯಾರ್ಥಿನಿಯರ ಪಾಲಕರು ನೀಡಿರುವ ದೂರಿನ ಮೇರೆಗೆ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಎಎಸ್ಪಿ ಸರ್ವೇಶ್ ಮಿಶ್ರಾ ತಿಳಿಸಿದ್ದಾರೆ.

ಪ್ರಜಾವಾಣಿ DH DECCAN HERALD
ಡಿಎಚ್–ಪಿವಿ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ನಿಧಿ

ಸಂ	ಹೆಸರು, ವಿಳಾಸ	ದೇಣಿಗೆ (₹ಗಳಲ್ಲಿ)
1	**ರಾಮದಾಸ ಭಟ್ಟ ಸಾಸ್ತಾನ** ಬೆಂಗಳೂರು	30,000
2	**ಬೆಟ್ಟದೂರು ಆಸ್ಪತ್ರೆ**, ಚಂದ್ರಮೌಳೇಶ್ವರ ಚೌಕ್, ಗಂಜ್ ರಸ್ತೆ, ರಾಯಚೂರು	25,000
3	**ಕಾತ್ಯಾಯಿನಿ ಎಂ.ಎಸ್.** 1,215, 10ನೇ ಕ್ರಾಸ್, ಕೆ.ಆರ್. ಮೊಹಲ್ಲ, ಮೈಸೂರು	20,000
4	**ನಂಜೇಗೌಡ ಎಚ್.ಎಸ್.** ನಂ. 597, 7ನೇ ಮುಖ್ಯರಸ್ತೆ, ಹಂಪಿ ನಗರ, ಬೆಂಗಳೂರು	10,000
5	**ಡಾ.ಎಂ.ಆರ್. ಗುರುರಾಜ ರಾವ್** ನಂ.155, ಯುಎಎಸ್ ಲೇಔಟ್, ಆರ್‌ಎಂವಿ 2ನೇ ಹಂತ, ಬೆಂಗಳೂರು	10,000
6	**ಅನಂತ ರಾವ್ ಸಿ.ಎನ್.** ನಂ. 3770, 13ನೇ ಬಿ ಮುಖ್ಯರಸ್ತೆ, ಇಂದಿರಾನಗರ, ಬೆಂಗಳೂರು	5,000
7	**ನಿಂಗಯ್ಯ ಎಂ.** ನಂ. 525, 11ನೇ ಕ್ರಾಸ್, ಎನ್‌ಜಿಇಎಫ್ ಲೇಔಟ್, ಮಲ್ಲತಹಳ್ಳಿ,ಬೆಂಗಳೂರು	5,000
8	**ಲಕ್ಷ್ಮಿಕಾಂತ ಆರ್.ಕೆ.** ನಂ.8, ಬ್ಲಾಕ್ 21, ಎಸ್‌ಬಿಎಂ ಕಾಲೊನಿ, ಕುವೆಂಪುನಗರ,ಮೈಸೂರು	5,000
9	**ವಿಶ್ವನಾಥನ್ ಎನ್.** ಬೆಂಗಳೂರು	5,000
10	**ಸುನಿತಾ ಟಿ.** 202, ಎ ಬ್ಲಾಕ್, ಗೋಪಾಲಗೌಡ ಬಡಾವಣೆ, ಶಿವಮೊಗ್ಗ	5,000
11	**ಬಸವರಾಜು ಎಚ್.ಆರ್.** 310–ಬಿ, ಪರಿವಾರ್ ಪೆಂಡೆಂಟ್ ಅಪಾರ್ಟ್‌ಮೆಂಟ್, ಕೋಡಿಚಿಕ್ಕನಹಳ್ಳಿ,ಬೆಂಗಳೂರು	4,658
12	**ಸಿದ್ದಮೇಸ್ತ್ರಿ ಜಿ.** ನಂ. 164, ಹೌಸಿಂಗ್‌ಬೋರ್ಡ್ ಕಾಲೊನಿ, ಬಸವೇಶ್ವರನಗರ,ಬೆಂಗಳೂರು	3,000
13	**ಡಾ. ಸರಿತಾ ಎಸ್. ರಾವ್** ನಂ. 14, ರೈಲ್ವೆ ಪ್ಯಾರಲಲ್ ರಸ್ತೆ, ಕುಮಾರಾಪಾರ್ಕ್ ಈಸ್ಟ್, ಬೆಂಗಳೂರು	3,000
14	**ಸದಾನಂದ ಹೆಗಡೆಕಟ್ಟಾ ವಿ.** ಕೊಡಂಗಲ್ಲು, ಮೂಡುಬಿದಿರೆ	2,222
15	**ಕೃಷ್ಣಮೂರ್ತಿ ಎಸ್.ಜಿ.** ನಂ.929, 9ನೇ ಕ್ರಾಸ್, ಬೆಮೆಲ್ 3ನೇ ಹಂತ, ಆರ್‌ಆರ್ ನಗರ,ಬೆಂಗಳೂರು	2,022
16	**ಕುಮಾರಿ ಜಾಹ್ನವಿ,** ಸುಕನ್ಯಾ ಕಿರಣ್ ನಂ. 1777, ಗೋವಿಂದರಾಜನಗರ, ವಿಜಯನಗರ, ಬೆಂಗಳೂರು	2,022
17	**ಟಿ.ಎಸ್. ನಂಜುಂಡೇಶ್ವರ** 39, 7ನೇ ಕ್ರಾಸ್, ತಲಕಾವೇರಿ ಲೇಔಟ್, ಅಮೃತಹಳ್ಳಿ,ಬೆಂಗಳೂರು	2,001
18	**ರಾಮಯ್ಯ ಜಿ.ಜಿ.** ಬೆಂಗಳೂರು	2,001
19	**ಮಾಧುರಿ ಶೀತಲ್** ಶಿವನಗರ, ಗೋಕಾಕ	2,000
20	**ಎಸ್.ವೈ.ಗುಬ್ಬಣ್ಣವರ** ಎಸ್‌ಬಿಐ ಸಮೀಪ, ರಾಜೇಂದ್ರನಗರ, ಹಾವೇರಿ	2,000
21	**ದಶರಥ ಎಚ್.ಎನ್.** ಬಿ 175, ಕಲ್ಯಾಣನಗರ, ಸಿಡಿಎ ಲೇಔಟ್, ಚಿಕ್ಕಮಗಳೂರು	1,500
22	**ಮದನ್ ಒಬಳೇಶ್ ಶ್ರೀನಿವಾಸ** 146, ಒಂದನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು	1,500
23	**ಲತಿಶಾ ಮಾಲಾ ಅರುಣ್** ನಂ. 1777, ಗೋವಿಂದರಾಜನಗರ, ವಿಜಯನಗರ,ಬೆಂಗಳೂರು	1,146
24	**ಕೊಟ್ಟಾಳ ಮಹದೇವಪ್ಪ** ವಿನಾಯಕನಗರ, ಲಕ್ಷ್ಮೇಶ್ವರ, ಗದಗ ಜಿಲ್ಲೆ	1,001
25	**ಲತಾ ಎನ್.** ಬೆಂಗಳೂರು	1,000
26	**ಪ್ರಕಾಶ್ ಎಸ್.** ಅಕ್ಷಯ ನಿಲಯ, ಶಾಂತಿನಗರ, ಹಾಸನ	1,000
	ಇದುವರೆಗೆ ಸಂಗ್ರಹವಾದ ಒಟ್ಟು ಮೊತ್ತ	11,00,000

ಲೋಕಸಭೆಯಲ್ಲಿ ರಾಹುಲ್ ಶೆವಾಲೆ ಶಿವಸೇನಾ ನಾಯಕ

ಉದ್ಧವ್‌ರಿಂದ 12 ಮಂದಿ ದೂರ

ನವದೆಹಲಿ/ಮುಂಬೈ: ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾಕ್ಕೆ ಮತ್ತೊಂದು ಆಘಾತ ಎದುರಾಗಿದೆ. ಸೇನಾದ ಲೋಕಸಭಾ ಸದಸ್ಯರ ಪೈಕಿ 12 ಸಂಸದರು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಅವರನ್ನು ದೆಹಲಿಯಲ್ಲಿ ಮಂಗಳವಾರ ಭೇಟಿಯಾಗಿದ್ದಾರೆ. ಈ ಸಂಸದರು ತಮ್ಮ ಗುಂಪಿಗೆ ಹೊಸ ನಾಯಕ ಮತ್ತು ಮುಖ್ಯ ಸಚೇತಕನನ್ನು ನೇಮಿಸಿಕೊಂಡಿದ್ದಾರೆ. ಆದರೆ, ಅವರು ಪ್ರತ್ಯೇಕ ಗುಂಪು ರಚಿಸಿಕೊಂಡಿಲ್ಲ.

ಮುಂಬೈ ದಕ್ಷಿಣ–ಕೇಂದ್ರ ಕ್ಷೇತ್ರದ ಸಂಸದ ರಾಹುಲ್ ಶೆವಾಲೆ ಅವರನ್ನು ಗುಂಪಿನ ನಾಯಕ ಎಂದು ಘೋಷಿಸಲಾಗಿದೆ. ಯವತ್‌ಮಾಲ್ ಸಂಸದೆ ಭಾವನಾ ಗವಳಿ ಅವರನ್ನು ಮುಖ್ಯ ಸಚೇತಕಿಯಾಗಿ ನೇಮಕ ಮಾಡಲಾಗಿದೆ. ಈ ನೇಮಕಗಳನ್ನು ಲೋಕಸಭೆ ಸ್ಪೀಕರ್ ಗಮನಕ್ಕೆ ತರಲಾಗಿದೆ.

ಗವಳಿ ಅವರು ಈ ಹಿಂದೆಯೂ ಮುಖ್ಯಸಚೇತಕಿ ಆಗಿದ್ದರು. ಆದರೆ, ಶಿಂದೆ ನೇತೃತ್ವದ ಗುಂಪು ಬಂಡಾಯ ಎದ್ದ ಸಂದರ್ಭದಲ್ಲಿ ಗವಳಿ ಅವರನ್ನು ಈ ಸ್ಥಾನದಿಂದ ತೆರವು ಮಾಡಲಾಗಿತ್ತು.

ಸದನದಲ್ಲಿ ಪಕ್ಷದ ನಾಯಕರಾಗಿದ್ದ ವಿನಾಯಕ ರಾವುತ್ ಅವರು ಉದ್ಧವ್ ಜತೆಗಿದ್ದಾರೆ. ಮಹಾರಾಷ್ಟ್ರದಲ್ಲಿ ಸೇನಾವು 18 ಸಂಸದರನ್ನು ಹೊಂದಿದೆ. ಅವರ ಪೈಕಿ ಆರು ಸಂಸದರು ಮಾತ್ರ ಉದ್ಧವ್ ಜತೆಗೆ ಉಳಿದಿದ್ದಾರೆ. ದಾದ್ರಾ–ನಗರ ಹವೇಲಿಯ ಸಂಸದೆ ಕಲಾಬೆನ್ ಡೆಲ್ಕರ್ ಅವರು ಉದ್ಧವ್ ಅವರಿಗೆ ನಿಷ್ಠೆ ತೋರುವ ಸಾಧ್ಯತೆ ಇದೆ. ಹೀಗಾಗಿ ಉದ್ಧವ್ ಜತೆ ಲೋಕಸಭೆಯ ಏಳು ಸಂಸದರು ಉಳಿಯುವಂತಾಗುತ್ತದೆ.

ಮೈತ್ರಿಗೆ ಮುಂದಾಗಿದ್ದ ಉದ್ಧವ್: 2021ರ ಜೂನ್‌ನಲ್ಲಿ ಬಿಜೆಪಿ ಜತೆ ಮೈತ್ರಿ ಮಾಡಿಕೊಳ್ಳಲು ಉದ್ಧವ್ ಮುಂದಾಗಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರ ಜತೆಗೆ ಈ ಕುರಿತು ಮಾತುಕತೆಯೂ ಆಗಿತ್ತು. ಆದರೆ, ಅದು ಕಾರ್ಯರೂಪಕ್ಕೆ ಬರಲಿಲ್ಲ ಎಂದು ಶಿವಸೇನಾ ಸಂಸದ ರಾಹುಲ್ ಶೆವಾಲೆ ಹೇಳಿದ್ದಾರೆ. ಆದರೆ, ಇದನ್ನು ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಅಲ್ಲಗಳೆದಿದೆ.

ಸುತ್ತೋಲೆ: ಸ್ಪೀಕರ್ ಓಂ ಬಿರ್ಲಾ ಅವರು ಶೆವಾಲೆ ಅವರನ್ನು ಲೋಕಸಭೆಯಲ್ಲಿ ಶಿವಸೇನಾ ನಾಯಕರನ್ನಾಗಿ ಮಂಗಳವಾರ ರಾತ್ರಿ ಹೆಸರಿಸಿದ್ದಾರೆ. ಈ ಸಂಬಂಧ ಲೋಕಸಭಾ ಸೆಕ್ರೆಟರಿಯೇಟ್ ಸುತ್ತೋಲೆಯನ್ನೂ ಹೊರಡಿಸಿದೆ.

ಶೆವಾಲೆ ಮೇಲೆ ಅತ್ಯಾಚಾರ ಆರೋಪ

ಮದುವೆಯಾಗುತ್ತೇನೆ ಎಂದು ನಂಬಿಸಿ ರಾಹುಲ್ ಶೆವಾಲೆ ಅವರು ತಮ್ಮ ಮೇಲೆ ಅತ್ಯಾಚಾರ ಎಸಗಿದ್ದಾರೆ ಎಂದು ಮುಂಬೈನ ಮಹಿಳೆಯೊಬ್ಬರು ಆರೋಪಿಸಿದ್ದಾರೆ. ಶೆವಾಲೆ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಬೇಕು ಎಂದು ಅವರು ಮುಖ್ಯಮಂತ್ರಿ ಏಕನಾಥ ಶಿಂದೆ ಅವರಿಗೆ ಪತ್ರ ಬರೆದಿದ್ದಾರೆ.

ಮುಖ್ಯಮಂತ್ರಿಗೆ ದೂರು ನೀಡಿದ್ದಾಗಿ 33 ವರ್ಷದ ಮಹಿಳೆ ಟ್ವೀಟ್ ಮಾಡಿದ್ದಾರೆ. ಶೆವಾಲೆ ಅವರ ದೂರಿನ ಆಧಾರದಲ್ಲಿ ತಮ್ಮ ಮೇಲೆ ಸುಲಿಗೆ ಮತ್ತು ಇತರ ಪ್ರಕರಣಗಳನ್ನು ಸಾಕಿನಾಕ ಪೊಲೀಸರು ದಾಖಲಿಸಿದ್ದಾರೆ ಎಂದೂ ಮಹಿಳೆ ಹೇಳಿದ್ದಾರೆ.

ಶೆವಾಲೆ ಅವರ ಹೆಂಡತಿ ಕಾಮಿನಿ ಅವರು ಈ ಆರೋಪಗಳನ್ನು ಅಲ್ಲಗಳೆದಿದ್ದಾರೆ. ‘25 ವರ್ಷಕ್ಕೂ ಹೆಚ್ಚು ವರ್ಷದಿಂದ ಸಮಾಜ ಸೇವೆ ಮತ್ತು ರಾಜಕೀಯದಲ್ಲಿರುವ ರಾಹುಲ್ ಶೆವಾಲೆ ಅವರ ತೇಜೋವಧೆಯೇ ಇದರ ಉದ್ದೇಶ’ ಎಂದು ಅವರು ಹೇಳಿದ್ದಾರೆ.

ರಾಜ್ಯಗಳ ಬೇಡಿಕೆಗಿಲ್ಲ ಕಿಮ್ಮತ್ತು

ಒಂದನೇ ಪುಟದಿಂದ

ಜಿಎಸ್‌ಟಿ ಜಾರಿಯಾದ ಮೇಲೆ ರಾಜ್ಯಗಳಿಗೆ ಶೇ 14ರಷ್ಟು ನಷ್ಟ ಪರಿಹಾರ ನೀಡುವ ವ್ಯವಸ್ಥೆ 2017ರ ಜುಲೈನಲ್ಲಿ ಆರಂಭವಾಯಿತು. ಹೊಸ ತೆರಿಗೆ ವ್ಯವಸ್ಥೆ ಜಾರಿಯಾದ ಬಳಿಕ ರಾಜ್ಯಗಳಿಗೆ ಆಗುವ ನಷ್ಟವನ್ನು ಭರಿಸಲು ಈ ಯೋಜನೆ ಜಾರಿ ಮಾಡಲಾಗಿತ್ತು. ಪರಿಹಾರ ವ್ಯವಸ್ಥೆ ಜೂನ್ ಅಂತ್ಯಕ್ಕೆ ಕೊನೆಗೊಂಡಿದೆ. ಚಂಡೀಗಡದಲ್ಲಿ ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಧ್ವನಿ ಎತ್ತಿದ್ದ 12 ರಾಜ್ಯಗಳು, ಪರಿಹಾರ ನೀಡುವ ವ್ಯವಸ್ಥೆಯನ್ನು ಕನಿಷ್ಠ 5 ವರ್ಷ ವಿಸ್ತರಿಸಬೇಕು ಎಂದು ಒತ್ತಾಯಿಸಿದ್ದವು. ಆದರೆ, ಈ ಬಗ್ಗೆ ಸಭೆಯಲ್ಲಿ ಯಾವುದೇ ತೀರ್ಮಾನ ಕೈಗೊಂಡಿರಲಿಲ್ಲ.

ಜಿಎಸ್‌ಟಿ ಸಂಗ್ರಹ

ವರ್ಷ	ಜಿಎಸ್‌ಟಿ ಸಂಗ್ರಹ (₹ಕೋಟಿಗಳಲ್ಲಿ)	ರಾಜ್ಯಗಳಿಗೆ ಪರಿಹಾರ
2017-18	7,40,650	49,622
2018-19	11,77,368	84,619
2019-20	12,22,116	1,68,399
2020-21	11,36,805	68,939
2021-22	14,83,291	17,973

ಕರ್ನಾಟಕಕ್ಕೆ ಕೊಟ್ಟಿರುವ ಜಿಎಸ್‌ಟಿ ಪರಿಹಾರ

ವರ್ಷ	ಮೊತ್ತ (₹ಕೋಟಿಗಳಲ್ಲಿ)
2017-18	7,670
2018-19	12,465
2019-20	18,628
2020-21	15,500
2021-22	5,707
2022-23	2,926
ಒಟ್ಟು	62,896

ಪ್ರೀಮಿಯಂ ರೈಲು: ₹20ಕ್ಕೆ ಚಹಾ, ಕಾಫಿ

ನವದೆಹಲಿ (ಪಿಟಿಐ): ಪ್ರೀಮಿಯಂ ರೈಲುಗಳಲ್ಲಿ ಸೇವಾ ಶುಲ್ಕ ತೆಗೆದು ಹಾಕಿದ ಪರಿಣಾಮ ಈಗ ಚಹಾ ಮತ್ತು ಕಾಫಿ ₹ 20ಕ್ಕೆ ಲಭ್ಯವಾಗಲಿದೆ.

ಐಆರ್‌ಸಿಟಿಸಿಯ ನೂತನ ನಿಯಮಗಳ ಪ್ರಕಾರ, ಪ್ರಯಾಣಿಕರು ಮುಂಗಡವಾಗಿ ಆರ್ಡರ್ ಮಾಡಿರಲಿ ಅಥವಾ ಪ್ರಯಾಣದ ವೇಳೆ ಆರ್ಡರ್ ಮಾಡಿದರೂ ಸರಿ, ಚಹಾ ಮತ್ತು ಕಾಫಿ ದರ ₹ 20 ಇರಲಿದೆ.

ಈ ಹಿಂದೆ, ಮುಂಗಡ ಆರ್ಡರ್ ಮಾಡಿರದಿದ್ದ ಚಹಾ/ಕಾಫಿಗೆ ₹ 50 ಸೇವಾ ಶುಲ್ಕ ವಿಧಿಸಲಾಗುತ್ತಿತ್ತು. ಹೀಗಾಗಿ, ಇವುಗಳ ದರ ₹70 ಆಗುತ್ತಿತ್ತು. ತಿಂಡಿ, ಊಟ–ತಿನಿಸುಗಳಿಗೆ ಮೊದಲು ಸೇವಾ ಶುಲ್ಕವಿಧಿಸಲಾಗುತ್ತಿತ್ತು. ಈಗ, ಇವುಗಳ ಮೂಲ ಬೆಲೆಯಲ್ಲಿ ಸೇವಾ ಶುಲ್ಕವನ್ನು (₹50) ಸೇರಿಸಿರುವ ಕಾರಣ ದರಗಳಲ್ಲಿ ವ್ಯತ್ಯಾಸ ಇಲ್ಲ.

ಆಹಾರ ಪದಾರ್ಥಕ್ಕೆ ತೆರಿಗೆ ಮೊದಲಲ್ಲ: ನಿರ್ಮಲಾ ತಿರುಗೇಟು

ಒಂದನೇ ಪುಟದಿಂದ

‘ಆಹಾರ ಪದಾರ್ಥಗಳ ಮೇಲೆ ತೆರಿಗೆ ವಿಧಿಸುತ್ತಿರುವುದು ಇದೇ ಮೊದಲೇ? ಇಲ್ಲ. ಜಿಎಸ್‌ಟಿಗೂ ಮೊದಲು ಆಹಾರ ಪದಾರ್ಥಗಳ ಮೇಲಿನ ತೆರಿಗೆಯಿಂದ ಪಂಜಾಬ್ ₹ 2,000 ಕೋಟಿ ಸಂಗ್ರಹಿಸುತ್ತಿತ್ತು. ಉತ್ತರ ಪ್ರದೇಶ ₹ 700 ಕೋಟಿ ಸಂಗ್ರಹಿಸುತ್ತಿತ್ತು. 2017ಕ್ಕೂ ಮೊದಲು ಪಂಜಾಬ್, ತೆಲಂಗಾಣ, ಉತ್ತರ ಪ್ರದೇಶ, ಆಂಧ್ರಪ್ರದೇಶ, ಕೇರಳ ಮತ್ತು ಬಿಹಾರ ರಾಜ್ಯಗಳು ಅಕ್ಕಿಗೆ ವ್ಯಾಟ್ ವಿಧಿಸುತ್ತಿದ್ದವು’ ಎಂದು ನಿರ್ಮಲಾ ಅವರು ಟ್ವೀಟ್ ಮೂಲಕ ತಿಳಿಸಿದ್ದಾರೆ.

ಮೊದಲು ಬ್ರ್ಯಾಂಡೆಡ್ ಆಹಾರ ಧಾನ್ಯಗಳ ಮೇಲೆ ಮಾತ್ರ ಜಿಎಸ್‌ಟಿ ಇತ್ತು. ಆದರೆ ಪ್ರತಿಷ್ಠಿತ ಕಂಪನಿಗಳು ಇದನ್ನು ದುರ್ಬಳಕೆ ಮಾಡಿಕೊಂಡವು. ಹೀಗಾಗಿ ಈ ಪದಾರ್ಥಗಳಿಂದ ಬರುವ ಜಿಎಸ್‌ಟಿ ವರಮಾನ ಕ್ರಮೇಣ ಕಡಿಮೆಯಾಯಿತು. ದುರ್ಬಳಕೆ ಹತ್ತಿಕ್ಕಲು, ಪ್ಯಾಕ್ ಮಾಡಿರುವ ಎಲ್ಲ ಆಹಾರ ಪದಾರ್ಥಗಳಿಗೂ ತೆರಿಗೆ ವಿಧಿಸುವಂತೆ ಉದ್ಯಮದ ಪ್ರತಿನಿಧಿಗಳು ಆಗ್ರಹಿಸಿದರು. ಈ ವಿಚಾರವನ್ನು ಸಮಿತಿಯೊಂದಕ್ಕೆ ಪರಿಶೀಲನೆಗೆ ವಹಿಸಲಾಯಿತು. ಅದು ಬದಲಾವಣೆಗೆ ಶಿಫಾರಸು ಮಾಡಿತು. ಇದನ್ನು ಸಚಿವರ ಸಮಿತಿಯು ಪರಿಶೀಲಿಸಿತು. ಸಚಿವರ ಸಮಿತಿಯ ಶಿಫಾರಸನ್ನು ಜಿಎಸ್‌ಟಿ ಮಂಡಳಿ ಮುಂದಿರಿಸಲಾಯಿತು ಎಂದು ಅವರು ಹೇಳಿದ್ದಾರೆ.

ಈ ಹಿನ್ನೆಲೆಯಲ್ಲಿ ಜಿಎಸ್‌ಟಿ ಮಂಡಳಿಯು ಶೇ 5ರಷ್ಟು ತೆರಿಗೆ ವಿಧಿಸುವ ತೀರ್ಮಾನ ಕೈಗೊಂಡಿತು ಎಂದು ನಿರ್ಮಲಾ ಅವರು ವಿವರಣೆ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬ್ರಿಟನ್ ಪ್ರಧಾನಿ: ರಿಷಿ ಮುನ್ನಡೆ



ರಿಷಿ ಸುನಕ್

ಲಂಡನ್ (ಪಿಟಿಐ): ಭಾರತ ಮೂಲದ ರಿಷಿ ಸುನಕ್ ಅವರು ಬ್ರಿಟನ್ ಪ್ರಧಾನಿ ಸ್ಥಾನದ ಸ್ಪರ್ಧೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ಮಂಗಳವಾರ ನಡೆದ ಮತ್ತೊಂದು ಸುತ್ತಿನ ಮತದಾನದಲ್ಲಿ 118 ಮತಗಳನ್ನು ಪಡೆಯುವ ಮೂಲಕ ಅವರು ತಮ್ಮ ಸ್ಥಾನವನ್ನು ಮತ್ತಷ್ಟು ಉತ್ತಮಪಡಿಸಿಕೊಂಡಿದ್ದಾರೆ.

ಪೆನಿ ಮೊರ್ಡಾಂಟ್ ಅವರು 92 ಮತಗಳನ್ನು ಪಡೆದರೆ, ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರುಸ್ 86 ಮತಗಳನ್ನು ಪಡೆದಿದ್ದಾರೆ. ಆ ಮೂಲಕ, ಕಣದಲ್ಲಿ ಅಂತಿಮವಾಗಿ ಉಳಿಯಲಿರುವ ಮತ್ತೊಬ್ಬ ಅಭ್ಯರ್ಥಿಗಾಗಿ ನಡೆಯಲಿರುವ ಪೈಪೋಟಿಯಲ್ಲಿ ತಾವೂ ಇರುವ ಸಂದೇಶ ರವಾನಿಸಿದ್ದಾರೆ.

59 ಮತಗಳನ್ನು ಪಡೆದ ಕೆಮಿ ಬಡೆನೊಚ್ ಅವರು ಸ್ಪರ್ಧೆಯಿಂದ ಹೊರಬಿದ್ದಿದ್ದಾರೆ.

ಬುಧವಾರ ಐದನೇ ಸುತ್ತಿನ ಮತದಾನ ನಡೆಯಲಿದ್ದು, ನಂತರವಷ್ಟೇ ಅಂತಿಮ ಕಣದಲ್ಲಿ ಉಳಿಯುವ ಅಭ್ಯರ್ಥಿಗಳು ಯಾರು ಎಂಬುದು ನಿಚ್ಚಳವಾಗಲಿದೆ.

ಪ್ರಧಾನಿ ಸ್ಥಾನದ ಅಭ್ಯರ್ಥಿಯಾಗಲು ಕನಿಷ್ಠ 120 ಸದಸ್ಯರ ಬೆಂಬಲ ಅಗತ್ಯ. ಅಂತಿಮ ಕಣದಲ್ಲಿ ಉಳಿಯುವ ಇಬ್ಬರು ಅಭ್ಯರ್ಥಿಗಳ ನಡುವೆ ಪ್ರಧಾನಿ ಪಟ್ಟಕ್ಕಾಗಿ ಹಣಾಹಣಿ ನಡೆಯಲಿದೆ. ಈ ಹಂತದಲ್ಲಿ ಟೋರಿ ಪಕ್ಷದ ಸದಸ್ಯರು ಮತ ಚಲಾಯಿಸುವರು.

ಟೋರಿ ಪಕ್ಷದ ಸದಸ್ಯರ ಸಂಖ್ಯೆ 1,60,000 ಇದ್ದು, ಅವರ ಮತಗಳೇ ಪ್ರಧಾನಿ ಯಾರಾಗಲಿದ್ದಾರೆ ಎಂದು ನಿರ್ಣಯಿಸಲಿವೆ. ಈ ಮತಗಳ ಎಣಿಕೆ ಕಾರ್ಯ ಆಗಸ್ಟ್ ಅಂತ್ಯಕ್ಕೆ ನಡೆಯಲಿದ್ದರೆ, ಸೆಪ್ಟೆಂಬರ್ 5ರಂದು ವಿಜೇತರ ಹೆಸರನ್ನು ಘೋಷಿಸಲಾಗುತ್ತದೆ.

‘ಭಾರತದಲ್ಲಿ ಇಂಥ ಸ್ಥಿತಿ ಎದುರಾಗದು’

ನವದೆಹಲಿ (ಪಿಟಿಐ): ‘ನೆರೆಯ ಶ್ರೀಲಂಕಾದಲ್ಲಿ ಗಂಭೀರವಾದ ಬಿಕ್ಕಟ್ಟು ಎದುರಾಗಿದೆ. ಇದು, ಸಹಜವಾಗಿ ಭಾರತಕ್ಕೆ ಕಳವಳ ಮೂಡಿಸಿದೆ’ ಎಂದು ಮಂಗಳವಾರ ಸರ್ವಪಕ್ಷಗಳ ಸಭೆಯಲ್ಲಿ ವಿದೇಶಾಂಗ ಸಚಿವ ಎಸ್.ಜೈಶಂಕರ್ ಹೇಳಿದರು.

ಇದೇ ವೇಳೆ, ಭಾರತದಲ್ಲೂ ಇಂಥ ಸನ್ನಿವೇಶ ಸೃಷ್ಟಿಯಾಗಬಹುದು ಎಂಬ ಅಭಿಪ್ರಾಯವನ್ನು ಅವರು ಅಲ್ಲಗಳೆದರು.

ಸಚಿವ ಪ್ರಲ್ಹಾದ ಜೋಶಿ, ಕಾಂಗ್ರೆಸ್‌ನ ಪಿ.ಚಿದಂಬರಂ, ಮಾಣಿಕ್ಯಂ ಠಾಗೋರ್, ಎನ್‌ಸಿಪಿ ನಾಯಕ ಶರದ್ ಪವಾರ್ ಹಾಗೂ ಡಿಎಂಕೆ, ಎಐಎಡಿಎಂಕೆ, ಟಿಎಂಸಿ, ಎನ್‌ಸಿ, ಎಎಪಿ, ಟಿಆರ್‌ಎಸ್, ಬಿಎಸ್‌ಪಿ ನಾಯಕರು ಭಾಗಿಯಾಗಿದ್ದರು.

ಶ್ರೀಲಂಕಾ: ಅಧ್ಯಕ್ಷರ ಆಯ್ಕೆಗೆ ಇಂದು ಚುನಾವಣೆ

ಕೊಲಂಬೊ (ಪಿಟಿಐ): ಶ್ರೀಲಂಕಾದ ನೂತನ ಅಧ್ಯಕ್ಷರ ಆಯ್ಕೆಗೆ ಬುಧವಾರ ಚುನಾವಣೆ ನಡೆಯಲಿದ್ದು, ಹಂಗಾಮಿ ಅಧ್ಯಕ್ಷ ರಾನಿಲ್ ವಿಕ್ರಮಸಿಂಘೆ ಸೇರಿದಂತೆ ಮೂವರ ಹೆಸರನ್ನು ಸಂಸದರು ಮಂಗಳವಾರ ಸೂಚಿಸಿದರು.

ಆಡಳಿತ ಪಕ್ಷ ಶ್ರೀಲಂಕಾ ಪೊಡುಜನ ಪೆರಮುನದ (ಎಸ್‌ಎಲ್‌ಪಿಪಿ) ಭಿನ್ನ ಗುಂಪಿನ ನಾಯಕ 63 ವರ್ಷದ ಡುಲ್ಲಾಸ್ ಅಲಹಪ್ಪೆರುಮ, ಜನತಾ ವಿಮುಕ್ತಿ ಪೆರಮುನ (ಜೆವಿಪಿ) ನಾಯಕ 53 ವರ್ಷದ ಅರುಣಾ ಕುಮಾರ ಡಿಸ್ಸಾನಾಯಕೆ ಕಣದಲ್ಲಿರುವ ಇತರರು.

ಕಡೆಗಳಿಗೆಯಲ್ಲಿ ಸ್ಪರ್ಧೆಯಿಂದ ಹಿಂದೆ ಸರಿದ ವಿರೋಧಪಕ್ಷ ಸಮಗಿ ಜನ ಬಲವೇಗಯದ (ಎಸ್‌ಜೆಪಿ) ನಾಯಕ ಸಜಿತ್ ಪ್ರೇಮದಾಸ ಅವರೂ ಅಲಹಪ್ಪೆರುಮ ಅವರಿಗೆ ಬೆಂಬಲ ಘೋಷಿಸಿದರು. ಸಂಸತ್ತಿನ ಸದಸ್ಯ ಬಲ 225 ಆಗಿದ್ದು, ಹೊಸ ಅಧ್ಯಕ್ಷರ ಆಯ್ಕೆಗೆ ಮತದಾನ ಮಾಡುವರು. ನೂತನ ಅಧ್ಯಕ್ಷರ ಅಧಿಕಾರಾವಧಿ ನವೆಂಬರ್ 2024ರವರೆಗೂ ಇರಲಿದೆ.

ಹೆಚ್ಚಿನ ಸದಸ್ಯರು ಡುಲ್ಲಾಸ್ ಅಲಹಪ್ಪೆರುಮ ಪರವಾಗಿ ಒಲವು ಹೊಂದಿದ್ದಾರೆ ಎಂದು ವರದಿಯೊಂದು ತಿಳಿಸಿದೆ.

‘ತಮ್ಮ ಮತ್ತು ಇತರೆ ವಿರೋಧ–ಪಕ್ಷಗಳು ಒಗ್ಗೂಡಿ ಡುಲ್ಲಾಸ್ ಅವರ ಗೆಲುವಿಗೆ ಶ್ರಮಿಸಲಿವೆ. ದೇಶದ ಭವಿಷ್ಯ ಮತ್ತು ನಾನು ಪ್ರೀತಿಸುವ ಪ್ರಜೆಗಳ ಏಳಿಗೆ ದೃಷ್ಟಿಯಿಂದ ತಾವು ಸ್ಪರ್ಧೆಯಿಂದ ಹಿಂದೆ ಸರಿದಿದ್ದೇನೆ’ ಎಂದು ಪ್ರೇಮದಾಸ ಅವರು ಟ್ವೀಟ್ ಮಾಡಿದ್ದಾರೆ. ಆರ್ಥಿಕ ವ್ಯವಸ್ಥೆಯು ಕುಸಿದ ಹಿಂದೆಯೇ ದೇಶದಾದ್ಯಂತ ಕಂಡುಬಂದ ಜನಾಕ್ರೋಶಕ್ಕೆ ಮಣಿದು ಅಧ್ಯಕ್ಷ ಸ್ಥಾನಕ್ಕೆ ಗೋಟಬಯ ರಾಜಪಕ್ಸ ರಾಜೀನಾಮೆ ನೀಡಿದ್ದರು. ತೆರವಾದ ಸ್ಥಾನಕ್ಕೆ ಈಗ ಚುನಾವಣೆ ನಡೆಯುತ್ತಿದೆ.

‘ವಿಜ್ಞಾನ ಪ್ರತಿಭಾ ಶೋಧ’ ಪರೀಕ್ಷೆ ರದ್ದು

ನವದೆಹಲಿ (ಪಿಟಿಐ): ಎರಡು ದಶಕಗಳಿಂದ ನಡೆಸಿಕೊಂಡು ಬರಲಾಗುತ್ತಿದ್ದ ಜನಪ್ರಿಯ ‘ವಿಜ್ಞಾನ ಪ್ರತಿಭಾ ಶೋಧ’ (ಕಿಶೋರ್ ವೈಜ್ಞಾನಿಕ ಪ್ರೋತ್ಸಾಹ ಯೋಜನೆ ಪರೀಕ್ಷೆ–ಕೆವಿಪಿವೈ) ಪರೀಕ್ಷೆಯನ್ನು ಕೈಬಿಡಲು ಕೇಂದ್ರ ಸರ್ಕಾರವು ನಿರ್ಧರಿಸಿದೆ.

ಹೆಚ್ಚು ವಿದ್ಯಾರ್ಥಿಗಳು ಈ ಪರೀಕ್ಷೆಯಲ್ಲಿ ಭಾಗವಹಿಸುತ್ತಿಲ್ಲ. ಈ ಪರೀಕ್ಷೆ ನಡೆಸಲು ಬಹಳ ವೆಚ್ಚ ತಗಲುತ್ತಿದೆ ಎಂಬುದು ಸರ್ಕಾರದ ಈ ನಿರ್ಧಾರಕ್ಕೆ ಕಾರಣ. ಆದರೆ ಈ ನಿರ್ಧಾರವನ್ನು ಹಲವು ವಿಜ್ಞಾನಿಗಳು ಖಂಡಿಸಿದ್ದಾರೆ.

ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿರುವ ಎಲ್ಲ ಭಾಷೆಗಳಲ್ಲಿಯೂ 2022ರಿಂದ ಈ ಪರೀಕ್ಷೆ ನಡೆಸಬೇಕು ಎಂದು ಮದ್ರಾಸ್ ಹೈಕೋರ್ಟ್, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯಕ್ಕೆ ಇತ್ತೀಚೆಗೆ ಸೂಚಿಸಿತ್ತು. ಇದುವೇ ಪರೀಕ್ಷೆಯನ್ನು ದಿಢೀರ್ ರದ್ದುಪಡಿಸಲು ಕಾರಣ ಎಂದು ಹೇಳಲಾಗಿದೆ.

ಇನ್‌ಸ್ಪೈರ್ (ಇನ್ನೋವೇಷನ್ ಫಾರ್ ಸೈನ್ಸ್ ಪರ್ಸ್ಯೂಟ್ ಫಾರ್ ಇನ್‌ಸ್ಪೈರ್ ರಿಸರ್ಚ್) ಎಂಬ ಫೆಲೋಶಿಪ್‌ನಲ್ಲಿ ಕೆವಿಪಿವೈಯನ್ನು ವಿಲೀನಗೊಳಿಸಲು ನಿರ್ಧರಿಸಲಾಗಿದೆ. ಕೆವಿಪಿವೈನಲ್ಲಿ ಈಗಾಗಲೇ ಆಯ್ಕೆ ಆದವರಿಗೆ ಫೆಲೋಶಿಪ್ ದೊರೆಯಲಿದೆ. ಹೊಸದಾಗಿ ಪರೀಕ್ಷೆ ನಡೆಸುವುದಿಲ್ಲ ಎಂದು ಸರ್ಕಾರ ತಿಳಿಸಿದೆ. ಇನ್‌ಸ್ಪೈರ್ ಫೆಲೋಶಿಪ್‌ಗೆ ಪರೀಕ್ಷೆ ಇರುವುದಿಲ್ಲ.

ನೀಟ್: ಕೇರಳದಲ್ಲಿ ಹಿಂಸಾಚಾರ; ಐವರ ಬಂಧನ

ಕೊಲ್ಲಂ/ನವದೆಹಲಿ (ಪಿಟಿಐ): ನೀಟ್ ಪರೀಕ್ಷೆ ಬರೆಯುವ ಮುನ್ನ ವಿದ್ಯಾರ್ಥಿನಿಯೊಬ್ಬರ ಒಳಉಡುಪು ತೆಗೆಸಿ ಅವಮಾನ ನಡೆಸಲಾಗಿದೆ ಎನ್ನುವ ದೂರಿಗೆ ಸಂಬಂಧಿಸಿದಂತೆ ಮಂಗಳವಾರ ದಕ್ಷಿಣ ಕೇರಳದಲ್ಲಿ ನಡೆದ ಪ್ರತಿಭಟನೆಯು ಹಿಂಸೆಗೆ ತಿರುಗಿದ್ದು, ‘ದೂರಿನಲ್ಲಿ ವಿದ್ಯಾರ್ಥಿನಿ ಆರೋಪಿಸಿರುವುದು ಕಾಲ್ಪನಿಕ’ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಹೇಳಿದೆ. ಸೋಮವಾರ ಆರಂಭವಾಗಿದ್ದ ಪ್ರತಿಭಟನೆಗಳು ಮಂಗಳವಾರ ತೀವ್ರಗೊಂಡಿದ್ದು, ಪ್ರತಿಭಟನಕಾರರು ಕೊಲ್ಲಂ ಜಿಲ್ಲೆಯ ಆಯುರ್‌ನಲ್ಲಿರುವ ಖಾಸಗಿ ಶಿಕ್ಷಣ ಸಂಸ್ಥೆಯೊಂದನ್ನು ಹಾಳುಗೆಡವಿದ್ದಾರೆ. ಪೊಲೀಸ್ ಸರ್ಪಗಾವಲಿನ ನಡುವೆಯೇ ವಿದ್ಯಾರ್ಥಿ ಪ್ರತಿಭಟನಕಾರರು ಘಟನೆ ನಡೆದಿದೆ ಎನ್ನಲಾದ ಕಾಲೇಜು ಆವರಣಕ್ಕೆ ನುಗ್ಗಿ, ಹಾನಿ ಮಾಡಿದ್ದಾರೆ. ಪೊಲೀಸರು ನಡೆಸಿದ ದಾಳಿಯಲ್ಲಿ ಹಲವು ವಿದ್ಯಾರ್ಥಿಗಳು ಗಾಯಗೊಂಡಿದ್ದಾರೆ.

ಬಂಧನ: ನೀಟ್ ಪರೀಕ್ಷೆ ಬರೆಯುವ ಮುನ್ನ ವಿದ್ಯಾರ್ಥಿನಿಯೊಬ್ಬರ ಒಳಉಡುಪು ತೆಗೆಸಿ ಅವಮಾನಿಸಲಾಗಿದೆ ಎಂಬ ಆರೋಪಗಳಿಗೆ ಸಂಬಂಧಿಸಿ, ಪರೀಕ್ಷಾ ಕರ್ತವ್ಯದಲ್ಲಿದ್ದ ಐವರು ಮಹಿಳೆಯರನ್ನು ಮಂಗಳವಾರ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಂಧಿತರ ಪೈಕಿ ಮೂವರು ಎನ್‌ಟಿಎ ಗುತ್ತಿಗೆ ಪಡೆದಿದ್ದ ಸಂಸ್ಥೆಯೊಂದರ ಉದ್ಯೋಗಿಗಳು.

ಗುಂಡು ಹೊಡೆದು ಕ್ಲೀನರ್‌ನನ್ನು ಬಂಧಿಸಿದ ಪೊಲೀಸರು

ಟ್ರಕ್ ಹರಿಸಿ ಡಿವೈಎಸ್‌ಪಿ ಹತ್ಯೆ

ಗುರುಗ್ರಾಮ (ಪಿಟಿಐ): ಹರಿಯಾಣದ ನೂಹ್ ಜಿಲ್ಲೆಯಲ್ಲಿ ನಡೆಯುತ್ತಿರುವ ಅಕ್ರಮ ಕಲ್ಲು ಗಣಿಗಾರಿಕೆ ತಡೆಯಲು ಮುಂದಾಗಿದ್ದ ಡಿವೈಎಸ್‌ಪಿಯೊಬ್ಬರನ್ನು ಅಕ್ರಮದಲ್ಲಿ ತೊಡಗಿದ್ದವರು ಟ್ರಕ್ ಹರಿಸಿ ಮಂಗಳವಾರ ಹತ್ಯೆ ಮಾಡಿದ್ದಾರೆ.

‘ತವೂರು ಡಿವೈಎಸ್‌ಪಿ ಸುರೇಂದ್ರ ಸಿಂಗ್ ಹತ್ಯೆಯಾದವರು. ಅವರ ತಂಡವು ದಾಖಲೆಗಳ ಪರಿಶೀಲನೆಗಾಗಿ ಗಣಿ ಪ್ರದೇಶದಿಂದ ಬರುತ್ತಿದ್ದ ಟ್ರಕ್ ಅನ್ನು ನಿಲ್ಲಿಸಲು ಮುಂದಾಗಿತ್ತು. ಈ ವೇಳೆ ಚಾಲಕನು ಟ್ರಕ್ ಹರಿಸಿ ಪರಾರಿಯಾಗಿದ್ದಾನೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ನಂತರ ನಡೆದ ಎನ್‌ಕೌಂಟರ್‌ನಲ್ಲಿ, ಪೊಲೀಸರು ಗುಂಡು ಹೊಡೆದು ಟ್ರಕ್‌ನ ಕ್ಲೀನರ್‌ವೊಬ್ಬರನ್ನು ಬಂಧಿಸಿದ್ದಾರೆ.

ಗಾಯಾಳುವನ್ನು ನೂಹ್‌ನ ನಲ್ಹಾರ್ ಮೆಡಿಕಲ್ ಕಾಲೇಜು ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಗಂಭೀರವಾಗಿ ಗಾಯಗೊಂಡಿದ್ದ ಸಿಂಗ್ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತಾದರೂ, ಅವರು ಮೃತಪಟ್ಟಿದ್ದಾಗಿ ವೈದ್ಯರು ಘೋಷಿಸಿದರು. ಸಿಂಗ್ ಅವರ ಜೊತೆಗಿದ್ದ ಗನ್‌ಮ್ಯಾನ್ ಹಾಗೂ ಚಾಲಕ ರಸ್ತೆ ಬದಿಗೆ ಜಿಗಿದು ಜೀವ ಉಳಿಸಿಕೊಂಡಿದ್ದಾರೆ’ ಎಂದು ಹೇಳಿದ್ದಾರೆ.

‘ಪಚಗಾಂವ್ ಪ್ರದೇಶದ ಅರಾವಳಿ ಬೆಟ್ಟದಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದವರ ಮೇಲೆ ದಾಳಿ ನಡೆಸುವುದಕ್ಕಾಗಿ ಸಿಂಗ್ ಅವರ ತಂಡ ಹೋಗಿತ್ತು. ಬೆಳಿಗ್ಗೆ 11.50ರ ಸುಮಾರಿಗೆ ಟ್ರಕ್‌ವೊಂದು ಬರುತ್ತಿರುವುದನ್ನು ಗಮನಿಸಿದ್ದ ಸಿಂಗ್, ಟ್ರಕ್‌ಗೆ ಅಡ್ಡಲಾಗಿ ಕೈಹಾಕಿ ಅದನ್ನು ನಿಲ್ಲಿಸುವಂತೆ ಚಾಲಕನಿಗೆ ಸೂಚಿಸಿದ್ದರು’ ಎಂದು ತಿಳಿಸಿದ್ದಾರೆ.

‘ನೂಹ್ ಜಿಲ್ಲೆಯಲ್ಲಿ 2015 ರಿಂದಲೂ ಅಕ್ರಮ ಕಲ್ಲು ಗಣಿಗಾರಿಕೆ ನಡೆಯುತ್ತಿದ್ದು, ಪ್ರತಿ ವರ್ಷವೂ ಸರಾಸರಿ 50 ದೂರುಗಳು ದಾಖಲಾಗುತ್ತವೆ’ ಎಂದಿದ್ದಾರೆ.

ಸಿಂಗ್ ಅವರು ಹಿಸ್ಸಾರ್ ಜಿಲ್ಲೆಯ ಸರಂಗ್‌ಪುರದವರು. ಕುರುಕ್ಷೇತ್ರದಲ್ಲಿ ನೆಲೆಸಿದ್ದರು.

ಆಗ್ರಹ: ‘ಡಿವೈಎಸ್‌ಪಿ ಸುರೇಂದ್ರ ಸಿಂಗ್ ಹತ್ಯೆ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು. ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ಕೂಡಲೇ ರಾಜೀನಾಮೆ ನೀಡಬೇಕು’ ಎಂದು ಕಾಂಗ್ರೆಸ್ ಒತ್ತಾಯಿಸಿದೆ.

‘ದೇಶವನ್ನೇ ತಲ್ಲಣಗೊಳಿಸಿರುವ ಈ ಪ್ರಕರಣ ಕುರಿತು ಹೈಕೋರ್ಟ್ ಮೇಲ್ವಿಚಾರಣೆಯಲ್ಲೇ ತನಿಖೆ ನಡೆಸಬೇಕು’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಆಗ್ರಹಿಸಿದ್ದಾರೆ.

ಸುರೇಂದ್ರ ಪುತ್ರಿ ಬೆಂಗಳೂರಿನ ಬ್ಯಾಂಕೊಂದರಲ್ಲಿ ಅಧಿಕಾರಿ

‘ಅಣ್ಣನಿಗೆ ಪತ್ನಿ, ಮಗ ಹಾಗೂ ಮಗಳಿದ್ದಾರೆ. ಪುತ್ರಿಯ ವಿವಾಹವಾಗಿದ್ದು, ಆಕೆ ಬೆಂಗಳೂರಿನ ಬ್ಯಾಂಕೊಂದರಲ್ಲಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಳೆ. ಮಗ ಕೆನಡಾದಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ’ ಎಂದು ಸುರೇಂದ್ರ ಅವರ ತಮ್ಮ ಅಶೋಕ್ ಕುಮಾರ್ ಬಿಷ್ಣೋಯಿ ಹೇಳಿದ್ದಾರೆ.

‘ಅಣ್ಣನಿಗೆ ಮಂಗಳವಾರ ಬೆಳಿಗ್ಗೆ ಕರೆಮಾಡಿ ಮಾತನಾಡಿದ್ದೆ. ಮೂರು ತಿಂಗಳಲ್ಲಿ ನಿವೃತ್ತನಾಗುತ್ತೇನೆ. ಬಳಿಕ ಊರಿಗೆ ಬರುತ್ತೇನೆಂದು ಹೇಳಿದ್ದ’ ಎಂದಿದ್ದಾರೆ.



ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಯಂತ್ರಗಳಿಗೆ ಯೋಚನಾ ಶಕ್ತಿ

ಅವಿನಾಶ್ ಬಿ.

ಇತ್ತೀಚೆಗೆ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ (ಎಐ) ಎಂಬ ಪದವನ್ನು ನಾವು ತುಸು ಹೆಚ್ಚಾಗಿಯೇ ಕೇಳಲಾರಂಭಿಸಿದ್ದೇವೆ. ನಮ್ಮ ಅನುಗಾಲದ ಒಡನಾಡಿಯೇ ಆಗಿಬಿಟ್ಟಿರುವ ಸ್ಮಾರ್ಟ್ ಫೋನ್‌ಗಳಲ್ಲೇ ಈ ಅತ್ಯಾಧುನಿಕ ತಂತ್ರಜ್ಞಾನವು ಅಡಕವಾಗಿದೆ ಮತ್ತು ನಾವದನ್ನು ದಿನನಿತ್ಯ ಬಳಸುತ್ತಿದ್ದೇವೆ ಎಂದರೆ ಕೆಲವರಿಗಾದರೂ ಅಚ್ಚರಿಯಾದೀತು.

ಏನಿದು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್?

ಆಂಗ್ಲ ಜೋಡಿಪದ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' ಅನ್ನು 'ಕೃತಕ ಬುದ್ಧಿಮತ್ತೆ' ಎಂದೋ 'ಕೃತಕ ಜಾಣ್ಮೆ' ಎಂದೋ ಪದಶಃ ಭಾಷಾಂತರಿಸಿ ಬಹುತೇಕರು ಬಳಸುತ್ತಾರೆ. ಆದರೆ, ಈ ಆರ್ಟಿಫಿಶಿಯಲ್ ತಂತ್ರಜ್ಞಾನವು ಕೃತಕ ಅಥವಾ ಕೃತ್ರಿಮವೂ ಅಲ್ಲ, ನಕಲಿಯೂ ಅಲ್ಲ. ಅಷ್ಟೇಕೆ, ಸಹಜ ಬುದ್ಧಿಮತ್ತೆಯೂ ಅಲ್ಲ. ಹಾಗಿದ್ದರೆ ಏನಿದು? ಎಂಬ ಪ್ರಶ್ನೆಗೆ ಉತ್ತರಿಸಬೇಕಿದ್ದರೆ 'ಯಾಂತ್ರಿಕ ಕಲಿಕೆ' (ಮಶಿನ್ ಲರ್ನಿಂಗ್ ಅಥವಾ ಎಂಎಲ್) ಎಂಬ ಮತ್ತೊಂದು ತಂತ್ರಜ್ಞಾನದ ಕುರಿತು ತಿಳಿದುಕೊಳ್ಳಬೇಕಾಗುತ್ತದೆ.

> ಆಧುನಿಕ ತಂತ್ರಜ್ಞಾನದಲ್ಲಿ ಕೆಲಸಗಳನ್ನು ಸುಲಭವಾಗಿಸುವ ಮತ್ತು ವೇಗವಾಗಿಸುತ್ತಿರುವ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಥವಾ 'ಕೃತಕ ಬುದ್ಧಿಮತ್ತೆ' ತಂತ್ರಜ್ಞಾನವನ್ನು ನಮಗರಿವಿಲ್ಲದಂತೆಯೇ ನಾವು ಆನಂದಿಸುತ್ತಿದ್ದೇವೆ.

ಸ್ಮಾರ್ಟ್ ಫೋನ್‌ಗಳಲ್ಲಿ ನಾವು ಟೈಪ್ ಮಾಡುತ್ತೇವೆ. ಉದಾಹರಣೆಗೆ, ಯಾವುದೋ ಲೇಖನ ಬರೆಯುವಾಗ, 'ಸೇರ್ಪಡೆ ದಿನಾಂಕ' ಎಂದು ಬರೆಯಬೇಕಾದಲ್ಲಿ (Date of Joining), ಸಂಕ್ಷಿಪ್ತವಾಗಿ DOJ ಅಂತ ಬರೆಯುತ್ತೇವೆ. ಆಗ, ತಕ್ಷಣವೇ ಫೋನ್‌ನಲ್ಲಿ ಅಡಕವಾಗಿರುವ ಸ್ಮಾರ್ಟ್ ತಂತ್ರಜ್ಞಾನವು ಮೊದಲೇ ಅಳವಡಿಸಿದ್ದ ನಿಘಂಟಿನ ಸಹಾಯ ಪಡೆದು, 'ಅದು DOG ಆಗಬೇಕೇ?' ಎಂದು ನಿಮ್ಮನ್ನು ಅಲ್ಲೇ ಕೇಳುತ್ತದೆ. 'ಇಲ್ಲ, ಇದು DOJ ಆಗಬೇಕು' ಅಂತ ನೀವು ಮುಂದುವರಿದರೆ (ಅದನ್ನೇ ಆರಿಸಿಕೊಳ್ಳುವ ಆಯ್ಕೆಯೂ ಅಲ್ಲೇ ಗೋಚರಿಸುತ್ತದೆ); ಮುಂದಿನ ಬಾರಿ ನೀವು 'DOG' ಪದವನ್ನು ಟೈಪ್ ಮಾಡಲು ಹೋದಾಗ, 'ಅದು DOJ ಆಗಬೇಕೇ?' ಎಂದು ಆಯ್ಕೆಯನ್ನು ಆ ಫೋನ್ ತೋರಿಸುತ್ತದೆ. ಅಂದರೆ, ಯಂತ್ರವೊಂದು ಕಲಿತು (ಮಶಿನ್ ಲರ್ನಿಂಗ್) ಆ ಪದವನ್ನು ಅಥವಾ ಯಾವುದೇ ದತ್ತಾಂಶವನ್ನು ನೆನಪಿಟ್ಟುಕೊಂಡು, ಅದರ ಆಧಾರದಲ್ಲಿ ನಮಗೆ ಬೇಕಾದಾಗಲೆಲ್ಲಾ ಸ್ವಯಂ ಆಗಿ ನಮ್ಮ ನೆರವಿಗೆ ಬರುವುದು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್. ಇದು ವಿದ್ಯಾರ್ಜನೆ ಮಾಡಿದಂತೆ, ಅದು ಕೂಡ ಹೊಸ ಹೊಸ ವಿದ್ಯೆಗಳನ್ನು ಆರ್ಜಿಸಿಕೊಳ್ಳುತ್ತದೆ.

ಕೃತಕ ಬುದ್ಧಿಮತ್ತೆ ತಂತ್ರಜ್ಞಾನವೀಗ ಬೃಹದಾಕಾರವಾಗಿ ಬೆಳೆದುನಿಂತಿದೆ. ಫೇಸ್‌ಬುಕ್‌ನಲ್ಲಿ ಜಾಲಾಡುವಾಗ ನಮಗೆ ಜಾಹೀರಾತುಗಳು ಕಾಣಿಸುತ್ತವೆಯಲ್ಲ? ಅದರ ಹಿಂದೆಯೂ ಈ ಎಐ ತಂತ್ರಜ್ಞಾನ ಕೆಲಸ ಮಾಡುತ್ತಿರುತ್ತದೆ. ನಿಮಗೇನೋ ಬೇಕಾದುದನ್ನು ಗೂಗಲ್‌ನಲ್ಲಿ ನೀವು ಹುಡುಕಾಡುತ್ತಿರುತ್ತೀರಿ; ಕೆಲವೇ ಕ್ಷಣಗಳಲ್ಲಿ ನಿಮ್ಮ ಫೇಸ್‌ಬುಕ್ ತಾಣದಲ್ಲಿ ಅಥವಾ ನೀವು ಭೇಟಿ ನೀಡುವ ಬೇರೆ ಯಾವುದೇ ಜಾಲತಾಣಗಳಲ್ಲಿ ಅದಕ್ಕೆ ಸಂಬಂಧಿಸಿದ ಜಾಹೀರಾತುಗಳೇ ಕಾಣಸಿಗುತ್ತವೆ. ಉದಾಹರಣೆಗೆ, ಎಲೆಕ್ಟ್ರಿಕ್ ಸ್ಕೂಟರ್ ಕುರಿತಾಗಿ ಗೂಗಲ್‌ನಲ್ಲಿ ಹುಡುಕಾಟ ಮಾಡಿದ್ದರೆ, ಈ ಸ್ಕೂಟರ್‌ಗಳ ಕಂಪನಿಗಳ ಜಾಹೀರಾತುಗಳೇ ಹೆಚ್ಚು ಹೆಚ್ಚು ಕಾಣಲಾರಂಭಿಸುತ್ತವೆ. ಇದು ಕೂಡ ಮಶಿನ್ ಲರ್ನಿಂಗ್ ಮತ್ತು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ತಂತ್ರಜ್ಞಾನಗಳ ಸಂಗಮದ ಫಲ.

ಮಶಿನ್ ಲರ್ನಿಂಗ್ ಅಥವಾ ಯಾಂತ್ರಿಕ ಕಲಿಕೆ ಎಂಬುದು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್‌ನ ಒಂದು ಭಾಗ. ನಿರ್ದಿಷ್ಟ ನಿರ್ಧಾರ ಕೈಗೊಳ್ಳಲು ಅಥವಾ ಬುದ್ಧಿಮತ್ತೆಯನ್ನು ಆರ್ಜಿಸಿಕೊಳ್ಳಲು, ಪ್ರೋಗ್ರಾಮಿಂಗ್ ಯಂತ್ರಗಳು ಮತ್ತು ತಂತ್ರಾಂಶಗಳ ನೆರವಿನಿಂದ ದತ್ತಾಂಶವನ್ನು ತನಗೆ ಬೇಕಾದಂತೆ ಸಂಗ್ರಹಿಸಿಟ್ಟುಕೊಳ್ಳುವುದು ಮಶಿನ್ ಲರ್ನಿಂಗ್. ಈ ದತ್ತಾಂಶದ ಆಧಾರದಲ್ಲಿ ಯಾವ ಸಮಯದಲ್ಲಿ, ಹೇಗೆ 'ಯೋಚಿಸಿ', ಯಾವ ರೀತಿಯಲ್ಲಿ ಕೆಲಸ ಮಾಡಬೇಕು ಎಂಬುದನ್ನು ಕಂಪ್ಯೂಟರ್‌ಗೆ ಅಥವಾ ಸ್ಮಾರ್ಟ್ ಫೋನ್‌ಗಳಿಗೆ ಹೇಳಿಕೊಡುವುದು ಈ ಯಾಂತ್ರಿಕ ಕಲಿಕೆ. ಅದು ಸೂಚಿಸಿದಂತೆ, ತಾನು ಆರ್ಜಿಸಿಕೊಂಡ ಜ್ಞಾನದ ಆಧಾರದಲ್ಲಿ ಕೆಲಸ ಮಾಡುವುದು ಆರ್ಟಿಫಿಶಿಯಲ್ ಇಂಟೆಲಿಜೆನ್ಸ್.

ಸ್ಮಾರ್ಟ್ ಫೋನ್‌ಗಳಲ್ಲಿ...


ತಂತ್ರಜ್ಞಾನ ಪ್ರಪಂಚದಲ್ಲಿ ಒಂದನ್ನೊಂದು ಬಿಟ್ಟಿರಲಾರದ 'ಅಣ್ತಮ್ಮಾಸ್' ರೀತಿಯಲ್ಲಿ ಕೆಲಸ ಮಾಡುವ ಎಂಎಲ್ ಮತ್ತು ಎಐ ತಂತ್ರಜ್ಞಾನಗಳು ನಮ್ಮ ಸ್ಮಾರ್ಟ್ ಫೋನ್‌ಗಳಲ್ಲಿ ಹಾಸುಹೊಕ್ಕಾಗಿವೆ ಮತ್ತು ನಮ್ಮ ಕೆಲಸಗಳನ್ನು ಸುಲಭವಾಗಿಸುತ್ತ-ವೆ, ವೇಗವಾಗಿಸುತ್ತವೆ. ಅವುಗಳಲ್ಲಿ ನಾವು ಸಾಮಾನ್ಯವಾಗಿ ಬಳಸುವ ಕೆಲವನ್ನಷ್ಟೇ ಉಲ್ಲೇಖಿಸಬಹುದಾದರೆ, ಟೈಪ್ ಮಾಡಲು ಸಮಯವಿಲ್ಲವೆಂದಾದರೆ, ನಮ್ಮ ಧ್ವನಿಯನ್ನು ಪಠ್ಯವಾಗಿಸುವ ಸ್ಪೀಚ್-ಟು-ಟೆಕ್ಸ್ಟ್ (ಮಾತಿನಿಂದ ಪಠ್ಯಕ್ಕೆ ಬದಲಿಸುವ) ತಂತ್ರಜ್ಞಾನ, ಅದೇ ರೀತಿ, ಪಠ್ಯವನ್ನು ಧ್ವನಿಯಾಗಿಸುವ 'ಟೆಕ್ಸ್ಟ್-ಟು-ಸ್ಪೀಚ್' ತಂತ್ರಜ್ಞಾನ, ನಮ್ಮದೇ ಸೆಲ್ಫೀ ಫೋಟೊಗಳಿಗೆ ವೈವಿಧ್ಯಮಯ ಸ್ಟಿಕರ್ ಬಳಸಿ ವಿಚಿತ್ರ ರೂಪದಲ್ಲಿ ತೋರಿಸುವ (ಮನೋರಂಜನೆ ಅಥವಾ ಹಾಸ್ಯಕ್ಕಾಗಿ) ಇಲ್ಲವೇ, ನಮ್ಮ ಮುಖವನ್ನು 'ಅರೆ! ಇದು ನಾನಾ?' ಅಂತ ನಾವೇ ಅಚ್ಚರಿಪಟ್ಟುಕೊಳ್ಳುವಂತೆ ಸುಂದರವಾಗಿಸುವ ಫೋಟೋ ಫಿಲ್ಟರ್‌ಗಳು, ನಾವು ಬೆರಳಚ್ಚಿಸುತ್ತಾ ಹೋದಂತೆ, ಅಕ್ಷರ ದೋಷಗಳನ್ನು ಸರಿಪಡಿಸುತ್ತಾ, ವ್ಯಾಕರಣದೋಷವನ್ನೂ ಸರಿಪಡಿಸುವ ಸಲಹೆಗಳನ್ನು ಕೊಡುವ ತಂತ್ರಜ್ಞಾನ.

ಸ್ಮಾರ್ಟ್ ಫೋನ್‌ಗಳಲ್ಲಿ ಕ್ಯಾಮೆರಾ ತಂತ್ರಜ್ಞಾನದಲ್ಲಿ ಅದ್ಭುತ ಎನಿಸುವ ಆಧುನಿಕತೆ ಬಂದಿರುವುದು ಇದೇ ಎಐ ಸಹಾಯದಿಂದ. ಮಂದ ಬೆಳಕಿನಲ್ಲಿಯೂ ಉತ್ತಮವಾದ ಫೋಟೊ ಮೂಡಿಬರಲು ಕಾರಣವಾಗುವುದು; ನಮ್ಮ ಮುಖದ ಕಲೆಗಳನ್ನೆಲ್ಲ ನಿವಾರಿಸಿ, ಹೊಳೆಯುವಂತೆ ಮಾಡಿ, ಸುಂದರವಾದ ಪ್ರೊಫೈಲ್ ಚಿತ್ರ ಮಾಡಿಕೊಳ್ಳಲು ನೆರವಾಗುವುದು; ನಮ್ಮ ಮುಖವನ್ನಷ್ಟೇ ಫೋಕಸ್ ಮಾಡಿ, ಹಿನ್ನೆಲೆಯನ್ನು ಮಬ್ಬಾಗಿಸುವ ಪೋರ್ಟ್ರೇಟ್ ಅಥವಾ ಬೊಕೆ ಎಫೆಕ್ಟ್... ಇವೆಲ್ಲವೂ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್. ಅಷ್ಟೇ ಅಲ್ಲ, ನಾವು ನಮ್ಮ ಸ್ಮಾರ್ಟ್ ಗ್ಯಾಜೆಟ್‌ಗಳಿಗೆ ಲಾಗಿನ್ ಆಗಬೇಕಿದ್ದರೆ ಅಥವಾ ಸ್ಕ್ರೀನ್ ಅನ್‌ಲಾಕ್ ಮಾಡಬೇಕಿದ್ದರೆ, ಮುಖ ಗುರುತಿಸುವ ಹಾಗೂ ಬೆರಳಚ್ಚು ಗುರುತಿಸುವ ತಂತ್ರಜ್ಞಾನವನ್ನು ಬಳಸುತ್ತೇವೆ. ಇದು ಕೂಡ ಎಐ ಪರಿಣಾಮ. ಆಂಡ್ರಾಯ್ಡ್ ಫೋನ್ ಬಳಸುತ್ತಿರುವವರು ಗೂಗಲ್ ಫೋಟೋಸ್ ಆ್ಯಪ್‌ನಲ್ಲಿರುವ ಸರ್ಚ್ ಬಟನ್ ಒತ್ತಿದಾಗ, ನಮ್ಮದೂ ಸೇರಿದಂತೆ ಹಲವು ಮುಖಗಳು ಕಾಣಿಸುತ್ತವೆ. ಆ ಚಿತ್ರವನ್ನು ಬೆರಳಿನಿಂದ ಒತ್ತಿದರೆ, ಆ ಮುಖ ಇರುವ ಎಲ್ಲ ಫೋಟೊಗಳೂ ಒಂದೇ ಕಡೆ ಕಾಣಿಸುತ್ತವೆ. ಅದಕ್ಕೆ ನಾವು ಹೆಸರುಗಳನ್ನು ನೀಡಿ ಸೇವ್ ಮಾಡಿಟ್ಟುಕೊಳ್ಳಬಹುದು. ಮುಂದೆಂದಾದರೂ ಆ ವ್ಯಕ್ತಿಯ ಚಿತ್ರ ಬೇಕಿದ್ದರೆ ಮತ್ತೆ ಪುನಃ ಅಲ್ಲೇ ಹುಡುಕಿದರಾಯಿತು.

ಅದೇ ರೀತಿ, ಗೂಗಲ್ ವಾಯ್ಸ್ ಅಸಿಸ್ಟೆಂಟ್, ಅಮೆಜಾನ್ ಅಲೆಕ್ಸಾ, ಆ್ಯಪಲ್ ಸಿರಿ, ಸ್ಯಾಮ್‌ಸಂಗ್ ಬಿಕ್ಸ್‌ಬಿ ಮುಂತಾದ ಧ್ವನಿ ಸಹಾಯಕ ತಂತ್ರಾಂಶಗಳು ಕೆಲಸ ಮಾಡುವುದೇ ಎಐ-ಎಂಎಲ್‌ಗಳ ಸಂಗಮದಿಂದ. ಇಲ್ಲಿ ಯಂತ್ರಗಳು ನಮ್ಮ ಧ್ವನಿಯನ್ನು ಗುರುತಿಸುತ್ತವೆ. ತಂತ್ರಜ್ಞಾನ ದಿಗ್ಗಜ ಕಂಪನಿಗಳು ನಮ್ಮ ದತ್ತಾಂಶವನ್ನು (ಉದಾಹರಣೆಗೆ ಧ್ವನಿಯನ್ನು) ಈ ರೀತಿಯಾಗಿ ಸಂಗ್ರಹಿಸಲು (ಅನಿವಾರ್ಯವಾಗಿ ಕೊಡಲೇಬೇಕಾಗುವ) ಅನುಮತಿ ಕೇಳುತ್ತವೆ. ಈ ಬೃಹತ್ ದತ್ತಾಂಶವನ್ನು ಸಂಗ್ರಹಿಸಿ, ನಾವು ತಪ್ಪು ಮಾಡುತ್ತಾ, ಬಳಿಕ ಸರಿಪಡಿಸಿಕೊಳ್ಳುವುದನ್ನು ಈ ಯಂತ್ರಾಂಶಗಳೂ ಕಲಿತುಕೊಂಡು, ಒಂದು ದೋಷರಹಿತ ತಂತ್ರಜ್ಞಾನ ರೂಪುಗೊಳ್ಳಲು ಕಾರಣವಾಗುತ್ತವೆ. ಗೂಗಲ್ ಅನುವಾದ ಎಂಜಿನ್ ಕೂಡ ಹೀಗೆಯೇ ಕೆಲಸ ಮಾಡುತ್ತದೆ. ಈ ತಂತ್ರಜ್ಞಾನದ ವ್ಯಾಪ್ತಿ-ವಿಸ್ತಾರಗಳು ಅಗಾಧ. ಅತ್ಯಾಧುನಿಕ ರೋಬೋಗಳು, ಚಾಲಕರಹಿತ ವಾಹನಗಳು, ಬಾಟ್ ಸಂದೇಶಕಾರರು ರೂಪುಗೊಂಡಿರುವುದು ಇದೇ ತಂತ್ರಜ್ಞಾನದ ಫಲ. ತತ್ಸಂಬಂಧಿತ ನೂರಾರು ಆ್ಯಪ್‌ಗಳು ಕೂಡ ನಮ್ಮ ಕಾರ್ಯಕ್ಷೇತ್ರಗಳನ್ನು ಸುಲಭವಾಗಿಸಿವೆ.



ಹೀಗೆ, ಆಧುನಿಕ ತಂತ್ರಜ್ಞಾನ ಮತ್ತು ವೇಗದ ಯುಗದಲ್ಲಿ ಕೆಲಸಗಳನ್ನು ಸುಲಭವಾಗಿಸುವ ಮತ್ತು ವೇಗವಾಗಿಸುತ್ತಿರುವ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಅಥವಾ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ನಮಗರಿವಿಲ್ಲದಂತೆಯೇ ನಾವು ಆನಂದಿಸುತ್ತಿದ್ದೇವೆ, ನಾವೂ ಅದಕ್ಕೆ ಕೊಡುಗೆ ನೀಡುತ್ತಿದ್ದೇವೆ ಮತ್ತು ಅದರ ಭಾಗವಾಗಿಬಿಟ್ಟಿದ್ದೇವೆ. ಪರಿಣಾಮ, ನಮ್ಮ ಯೋಚನಾ ಶಕ್ತಿಗೆ ಕೆಲಸ ಕಡಿಮೆಯಾಗಿ, ಯಂತ್ರಗಳ 'ಆಲೋಚನಾ' ಶಕ್ತಿ ವಿಸ್ತಾರಗೊಳ್ಳುತ್ತಿದೆ. ❖



ಸಿನಿಮಾ: ನಿಮ್ಮ ಭಾಷೆಯಲ್ಲೇ ಕೇಳಿ

ಶರತ್ ಹೆಗ್ಡೆ

ಬಹುಭಾಷೆಯಲ್ಲಿ ಬಿಡುಗಡೆಯಾದ ಒಂದು ಸಿನಿಮಾ ನೋಡಲು ಹೋಗುತ್ತೀರಿ. ಆದರೆ, ನಿಮಗೆ ಬೇಕಾದ ಭಾಷೆಯ ಸಿನಿಮಾ ಆವೃತ್ತಿಯ ಟಿಕೆಟ್ ಲಭ್ಯವಿಲ್ಲ ಎಂದಿಟ್ಟುಕೊಳ್ಳಿ. ಅದೇ ಸಿನಿಮಾದ ಬೇರೆ ಭಾಷೆಯ ಟಿಕೆಟ್ ಲಭ್ಯ ಇದೆ. ಅದು ನಿಮಗೆ ಅರ್ಥವಾಗದ ಭಾಷೆಯೇ ಇರಬಹುದು. ಭಾಷೆ ಅರ್ಥ ಮಾಡಿಸಲು ನಿಮಗೆ ಸಿನಿಡಬ್ಸ್ ಆ್ಯಪ್ ನೆರವಾಗುತ್ತದೆ.

ಸದ್ಯ ಕನ್ನಡದ ಮಟ್ಟಿಗೆ ನಿಧಾನಕ್ಕೆ ಪರಿಚಯವಾಗುತ್ತಿರುವ ಆ್ಯಪ್ ಇದು. ಕಿಚ್ಚ ಸುದೀಪ್ ನಟನೆಯ 'ವಿಕ್ರಾಂತ್ ರೋಣ' ಈ ಆ್ಯಪ್‌ನಲ್ಲಿ ತನ್ನ ಎಲ್ಲ ಆವೃತ್ತಿಗಳ ಆಡಿಯೋ ಟ್ರ್ಯಾಕ್ ಬಿಡುಗಡೆ ಮಾಡಿದೆ. ಸಿನಿಡಬ್ ಬಗ್ಗೆ ಸುದೀಪ್ ಅವರೇ ಇತ್ತೀಚೆಗೆ ಮಾಹಿತಿ ನೀಡಿದರು.

ಹೇಗೆ ಕೆಲಸ ಮಾಡುತ್ತದೆ?

ಉದಾಹರಣೆಗೆ, ಒಂದು ಚಿತ್ರದ ಹಿಂದಿ ಅವತರಣಿಕೆಯ ಪ್ರದರ್ಶನಕ್ಕೆ ನೀವು ಹೋದಿರಿ ಎಂದಿಟ್ಟುಕೊಳ್ಳೋಣ. ಚಿತ್ರಮಂದಿರದ ಒಳಗೆ ಕುಳಿತು (ಚಿತ್ರಮಂದಿರದ ಹೊರಗೆ ಈ ಆ್ಯಪ್ ನಿಮಗೆ ಬೇಕಾದಂತೆ ಕೆಲಸ ಮಾಡುವುದಿಲ್ಲ) ಆ್ಯಪ್ ಚಾಲನೆ ಮಾಡಿ. ನಿರ್ದಿಷ್ಟ ಚಿತ್ರಮಂದಿರ, ಅದರ ಲೊಕೇಷನ್, ನೀವು ನೋಡುತ್ತಿರುವ ಚಿತ್ರ ಮತ್ತು ಪ್ರದರ್ಶನದ ವೇಳೆ ಮತ್ತು ನಿಮಗೆ ಕೇಳಬೇಕಾದ ಭಾಷೆಯನ್ನು (ಉದಾ: ಕನ್ನಡ) ಆ್ಯಪ್‌ನಲ್ಲಿ ನಮೂದಿಸಿ. ಇಯರ್ ಫೋನ್ ಸಿಕ್ಕಿಸಿಕೊಳ್ಳಿ. ಈಗ ತೆರೆಯ ಮೇಲೆ ಮೂಡುವ ದೃಶ್ಯಗಳ ಸಂಭಾಷಣೆ, ಹಾಡುಗಳು ನೀವು ನಮೂದಿಸಿದ ಭಾಷೆಯಲ್ಲಿ ಎಲ್ಲ ಪರಿಣಾಮಗಳ ಸಹಿತ ಕೇಳಿಸುತ್ತದೆ. ತೆರೆಯ ದೃಶ್ಯಗಳಿಗೂ ಧ್ವನಿಗೂ ನಿಖರವಾಗಿ ಹೊಂದುವಂತೆ ಈ ಆ್ಯಪ್‌ನ್ನು ರೂಪಿಸಲಾಗಿದೆ. ಇಡೀ ಚಿತ್ರವನ್ನು ನೀವು ಕನ್ನಡದಲ್ಲೇ ನೋಡಿದ ಅನುಭವ ಸಿಗುತ್ತದೆ.

ಇತಿಮಿತಿಗಳು

ನೀವು ಆಯ್ಕೆ ಮಾಡಿದ ಭಾಷೆಯಲ್ಲಿ ಚಿತ್ರ ಡಬ್ ಆಗಿರಬೇಕು. ಸಾಮಾನ್ಯವಾಗಿ ಪಾನ್ ಇಂಡಿಯಾ ಚಿತ್ರಗಳು ಕನಿಷ್ಠ ನಾಲ್ಕು ಭಾಷೆಗಳಲ್ಲಿ ಡಬ್ ಆಗಿರುತ್ತವೆ. ಹಾಗೆ ಡಬ್ ಆಗಿರುವ ಯಾವುದೇ ಭಾಷೆಯ ಆಡಿಯೋ ಟ್ರ್ಯಾಕ್ ನಿಮಗೆ ಸಿಗುತ್ತದೆ. ಪೈರೇಟೆಡ್ (ನಕಲು ಪ್ರತಿ) ಪ್ರತಿಗಳನ್ನು ವೀಕ್ಷಿಸುವುದಿದ್ದರೆ ಈ ಆ್ಯಪ್ ಕೆಲಸ ಮಾಡುವುದಿಲ್ಲ.

ಪ್ರಯೋಜನಗಳು: ನಿಗದಿತ ದಿನದಂದೇ ಸಿನಿಮಾ ನೋಡಬೇಕೆನ್ನುವವರಿಗೆ, ತಮ್ಮ ಭಾಷೆಯ ಆವೃತ್ತಿಯ ಟಿಕೆಟ್ ಸಿಗದಿದ್ದವರಿಗೆ ಯಾವುದೇ ಭಾಷೆಯ ಆವೃತ್ತಿ ನೋಡಿದರೂ ತಮ್ಮ ಭಾಷೆಯಲ್ಲಿ ಅದನ್ನು ಅರ್ಥ ಮಾಡಿಕೊಳ್ಳಲು ಸುಲಭವಾಗುತ್ತದೆ. ಸಿನಿಮಾ ಮಾರುಕಟ್ಟೆ ವಿಸ್ತರಣೆ, ಪ್ರೇಕ್ಷಕರನ್ನು ಚಿತ್ರಮಂದಿರದತ್ತಲೇ ಕರೆದೊಯ್ಯಲು ಇದು ಸಹಕಾರಿ ಎಂದು ಸುದೀಪ್ ಅಭಿಪ್ರಾಯಪಟ್ಟರು.

ಗೂಗಲ್ ಪ್ಲೇಸ್ಟೋರ್‌ನಲ್ಲಿ ಈ ಆ್ಯಪ್ ಉಚಿತವಾಗಿ ಲಭ್ಯವಿದೆ. ಪಾನ್ ಇಂಡಿಯಾ ಎಂದು ಬಿಡುಗಡೆಯಾದ ಚಿತ್ರದ ಯಾವುದೇ ಆವೃತ್ತಿಯ ಪ್ರದರ್ಶನಕ್ಕೆ ಹೋಗಿ, ನಿಮ್ಮ ಭಾಷೆಯಲ್ಲಿ ಕೇಳಿ, ನೋಡಿ, ಆನಂದಿಸಿ.

ಹೆಚ್ಚಿನ ವಿವರಗಳಿಗೆ ನೋಡಿ:
https://www. cinedubs.com

ಜನರ ಪ್ರೀತಿ, ಆಶೀರ್ವಾದವೇ ನನಗೆ ಶ್ರೀರಕ್ಷೆ



‘ರಾಜ್ಯದಲ್ಲಿಯೇ ಹೆಬ್ಬಾಳ ಮಾದರಿ ಕ್ಷೇತ್ರವಾಗಲಿದೆ’

‘ರಾಜ್ಯದಲ್ಲೇ ಹೆಬ್ಬಾಳ ವಿಧಾನಸಭಾ ಕ್ಷೇತ್ರ ಮಾದರಿಯಾಗಲಿದೆ’ ಎಂದು ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಶಾಸಕ ಬೈರತಿ ಸುರೇಶ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

‘ಕ್ಷೇತ್ರದಲ್ಲಿ ಈಗಾಗಲೇ ವಿವಿಧ ಯೋಜನೆಗಳ ಮೂಲಕ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಸರ್ಕಾರದಿಂದಲೂ ಸಾಕಷ್ಟು ಅನುದಾನ ದೊರೆತಿದೆ. ಇನ್ನು ಮುಂದಿನ 8 ತಿಂಗಳಲ್ಲಿ ಬಾಕಿ ಕಾರ್ಯಗಳನ್ನು ಸಹ ತ್ವರಿತಗತಿಯಲ್ಲಿ ಕೈಗೊಂಡು ಮುಕ್ತಾಯಗೊಳಿಸಲಾಗುವುದು. ಈ ಮೂಲಕ ಮಾದರಿ ಕ್ಷೇತ್ರವನ್ನಾಗಿ ಮಾಡುವ ಕನಸು ಸಾಕಾರಗೊಳ್ಳಲಿದೆ’ ಎಂದು ಪ್ರತಿಪಾದಿಸಿದ್ದಾರೆ.

‘ಕ್ಷೇತ್ರದ ಅಭಿವೃದ್ಧಿ ಕುರಿತಾದ ನನ್ನ ಕಲ್ಪನೆಗಳನ್ನು ಸಾಕಾರಗೊಳಿಸಿದ್ದೇನೆ. ಶೈಕ್ಷಣಿಕ, ಆರೋಗ್ಯ ಸೇರಿದಂತೆ ಎಲ್ಲ ವಲಯಗಳ ಅಭಿವೃದ್ಧಿಪಡಿಸಲಾಗಿದೆ. ಕ್ಷೇತ್ರದ ಎಲ್ಲ ಸಮುದಾಯಗಳ ಜನರ ಜತೆ ಸಂಪರ್ಕದಲ್ಲಿದ್ದೇನೆ. ಜನರ ಬೇಡಿಕೆಗಳನ್ನು ಈಡೇರಿಸಿದ್ದೇನೆ’ ಎಂದು ಹೇಳಿದ್ದಾರೆ.

‘ಹೆಬ್ಬಾಳದ ಪಶುವೈದ್ಯಕೀಯ ಮಹಾವಿದ್ಯಾಲಯದ ಆವರಣದಲ್ಲಿ ಐದು ಎಕರೆ ಜಾಗವನ್ನು ಕೆರೆ ನಿರ್ಮಿಸುವ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಇದರಿಂದ, ಕ್ಷೇತ್ರದಲ್ಲಿನ ನೀರಿನ ಸಮಸ್ಯೆ ಬಗೆಹರಿಯಲಿದೆ. ಜತೆಗೆ, ಪಕ್ಕದ ಕ್ಷೇತ್ರಗಳಿಗೂ ನೀರು ಪೂರೈಸಬಹುದು. ಇದು ಮಹತ್ವದ ಯೋಜನೆಯಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಪ್ರಯತ್ನಗಳು ನಡೆದಿವೆ. ಈ ಯೋಜನೆಯಿಂದ ಸಾಕಷ್ಟು ಅನುಕೂಲಗಳಿವೆ. ಮಹಾವಿದ್ಯಾಲಯದಲ್ಲೂ ಸಾಕಷ್ಟು ಜಾಗ ಇದೆ. ಹೀಗಾಗಿ, ಜಾಗದ ಸಮಸ್ಯೆ ಇಲ್ಲ’ ಎಂದು ವಿವರಿಸಿದ್ದಾರೆ.

’ಕೋವಿಡ್ ಲಾಕ್ ಡೌನ್ ಸಂದರ್ಭದಲ್ಲಿ ಸಂಕಷ್ಟದಲ್ಲಿದ್ದ ಜನರಿಗೆ ನೆರವು ಕಲ್ಪಿಸಲಾಯಿತು. ವೈರಾಣುವಿನಿಂದ ಹೈರಾಣದ ಜನತೆಗೆ ಧೈರ್ಯ ತುಂಬುವ ಜತೆಗೆ, ಅಗತ್ಯ ವಸ್ತುಗಳನ್ನು ಪೂರೈಸಲಾಗಿದೆ. ಸ್ವಂತ ಹಣದಲ್ಲಿ ರೇಷನ್ ಕಿಟ್‌ಗಳನ್ನು ನೀಡಲಾಗಿದೆ. ಈ ರೀತಿಯ ಹಲವಾರು ಕಾರ್ಯಗಳು ಜನರಲ್ಲಿ ಆತ್ಮಸ್ಥೈರ್ಯ ಹೆಚ್ಚಲು ಕಾರಣವಾಯಿತು’ ಎಂದು ಶಾಸಕರು ತಮ್ಮ ಜನಪರ ಕಾಳಜಿಯ ಬಗ್ಗೆ ವಿವರಿಸಿದ್ದಾರೆ.

‘ಕೋವಿಡ್ ತಡೆಗಟ್ಟಲು ಮುಂಚೂಣಿಯಲ್ಲಿದ್ದ ಕೋವಿಡ್ ಯೋಧರಿಗೂ ನೈತಿಕ ಸ್ಥೈರ್ಯವನ್ನು ತುಂಬುತ್ತಾ ಅವರಿಗೆ ವೈಯಕ್ತಿಕವಾಗಿ ಸಾರ್ವಜನಿಕವಾಗಿ ಸನ್ಮಾನಿಸಲಾಗಿದೆ. ಸೋಂಕಿತರಿಗೂ ಅತ್ಯುತ್ತಮ ಆಸ್ಪತ್ರೆ ಸೌಲಭ್ಯ ಹಾಗೂ ಔಷಧಿಗಳನ್ನು ಕಲ್ಪಿಸಲಾಯಿತು. ಇಂತಹ ಹಲವಾರು ಕ್ರಮಗಳಿಂದ ಕೋವಿಡ್ ನಿಯಂತ್ರಿಸಲು ಸಾಧ್ಯವಾಯಿತು’ ಎಂದು ಹೇಳಿದ್ದಾರೆ.

‘ಕ್ಷೇತ್ರದ ಜನತೆ ಮತ್ತು ಕಾರ್ಯಕರ್ತರ ಸಹಕಾರದಿಂದ ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗಿದೆ’ ಎಂದು ತಿಳಿಸಿದ್ದಾರೆ.



‘ಜನರ ಪ್ರೀತಿ, ಆಶೀರ್ವಾದವೇ ಶ್ರೀರಕ್ಷೆ. ಪಕ್ಷಾತೀತವಾಗಿ, ಜಾತ್ಯತೀತವಾಗಿ ಎಲ್ಲ ವರ್ಗದವರೂ ನನ್ನನ್ನು ಪ್ರೀತಿಸುತ್ತಾರೆ’ ಎಂದು ಶಾಸಕ ಬೈರತಿ ಸುರೇಶ್ ಹೇಳುತ್ತಾರೆ.

‘ಜನರ ಪ್ರೀತಿ ಮತ್ತು ಅಭಿಮಾನಕ್ಕೆ ನಾನು ಚಿರಋಣಿ. ಅವರ ಕಷ್ಟ-ಸುಖಗಳಿಗೆ ಸ್ಪಂದಿಸಿದ್ದೇನೆ. ಜನರ ಮಧ್ಯದಲ್ಲಿದ್ದು, ಜನಸೇವೆಯಲ್ಲಿ ತೊಡಗಿದ್ದೇನೆ. ಜನ ಸೇವೆಯಿಂದ ಶೇಕಡ 100ರಷ್ಟು ತೃಪ್ತಿ ದೊರೆತಿದೆ. ವಿರೋಧ ಪಕ್ಷದ ಶಾಸಕನಾಗಿದ್ದರೂ ಆಡಳಿತ ಪಕ್ಷದವರಿಗಿಂತಲೂ ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದ್ದೇನೆ. ನನ್ನ ಜನಸೇವೆಗೆ ಎಲ್ಲರೂ ಸಹಕಾರ ನೀಡಿದ್ದಾರೆ. ಅವರಿಗೆ ಕೃತಜ್ಞತೆಗಳು’ ಎಂದು ಹೇಳುತ್ತಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

‘ಕ್ಷೇತ್ರದಲ್ಲಿ ಜನರು ನನ್ನನ್ನು ಸ್ನೇಹಿತ ಮತ್ತು ಸಹೋದರ ರೀತಿಯಲ್ಲಿ ಕಾಣುತ್ತಿದ್ದಾರೆ. ಜನರ ಸೇವೆ ಮಾಡುವ ಅವಕಾಶ ದೊರೆತಿರುವುದು ನನ್ನ ಪುಣ್ಯ. ಜನರ ಆಶೋತ್ತರಗಳನ್ನು ಈಡೇರಿಸಲು ಹಗಲಿರುಳು ಶ್ರಮಿಸುತ್ತಿದ್ದೇನೆ’ ಎಂದು ಹೇಳುತ್ತಾರೆ.

- ಕ್ಷೇತ್ರದಾದ್ಯಂತ 115 ಕಿಲೋ ಮೀಟರ್‌ನಷ್ಟು ನೆಲದಡಿಯಲ್ಲಿ ವಿದ್ಯುತ್ ಕೇಬಲ್ ಅಳವಡಿಸಲಾಗಿದೆ. ಹೆಬ್ಬಾಳ ಕ್ಷೇತ್ರದಲ್ಲೇ ಈ ಯೋಜನೆಗೆ ಆದ್ಯತೆ ನೀಡಲಾಗಿದೆ.
- ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ ನೀಡಲಾಗಿದ್ದು, ಹಲವು ಮಹಿಳಾ ಸಂಘಗಳಿಗೆ ಲಕ್ಷಾಂತರ ರೂಪಾಯಿ ಸ್ವಂತ ಹಣ ನೀಡಲಾಗಿದೆ.
- ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್, ಕಿವಿ ಉಪಕರಣಗಳು, ಆರೋಗ್ಯ ಮತ್ತು ರಕ್ತದಾನ ಶಿಬಿರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
- ಕೊಳೆಗೇರಿ ಮಂಡಳಿಯಿಂದ ಬಡವರಿಗೆ ಹಕ್ಕು ಪತ್ರ ಒದಗಿಸಲಾಗಿದೆ.

‘ಸರ್ಕಾರದ ಅನುದಾನದ ಜತೆ, ಸ್ವಂತ ಹಣದಲ್ಲಿಯೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಕೋವಿಡ್ ಸಂದರ್ಭದಲ್ಲಿ ಜನರ ಸಂಕಟಗಳಿಗೆ ಸ್ಪಂದಿಸಿದ್ದೇನೆ. ರೇಷನ್ ಕಿಟ್‌ಗಳನ್ನು ವಿತರಿಸಿ ಬಡವರಿಗೆ ನೆರವಾಗಿದ್ದೇನೆ. ರಾಜ್ಯದಲ್ಲೇ ಮೊದಲ ಬಾರಿ ವಾಹನದ ಮೂಲಕ ಸ್ಯಾನಿಟೈಸರ್ ಮಾಡಿಸಿದ್ದೇನೆ. ವಾಹನಕ್ಕೆ ಜನರೇಟರ್ ಮತ್ತು ಮೋಟಾರ್ ಅಳವಡಿಸುವ ಮೂಲಕ ಈ ಕಾರ್ಯ ಕೈಗೊಳ್ಳಲಾಗಿತ್ತು. ಇದರಿಂದ, ಕೋವಿಡ್ ಹಬ್ಬದಂತೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಯಿತು’ ಎಂದು ವಿವರಿಸುತ್ತಾರೆ.

‘ದೇವರ ದಯೆಯಿಂದ ಕ್ಷೇತ್ರದ ಜನರ ಸೇವೆ ಮಾಡುವ ಅವಕಾಶ ದೊರೆತಿದೆ. ಜನರು ತೋರಿರುವ ಅಪಾರ ಪ್ರೀತಿಗೆ ಬೆಲೆ ಕಟ್ಟಲು ಸಾಧ್ಯವಿಲ್ಲ. ಈಗ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಮುಂದುವರಿಸುತ್ತೇನೆ. ಕ್ಷೇತ್ರದ ಜನತೆಯ ನೆಮ್ಮದಿಯ ಬದುಕಿಗೆ ಸಕಲ ಸೌಕರ್ಯಗಳನ್ನು ಕಲ್ಪಿಸುವುದೇ ನನ್ನ ಧ್ಯೇಯ. ಇದಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಹಗಲಿರುಳು ಶ್ರಮಿಸುತ್ತಿದ್ದೇನೆ’ ಎಂದು ಹೇಳುತ್ತಾರೆ.



‘ಸೌಹಾರ್ದತೆಯಿಂದ ಎಲ್ಲ ಜಾತಿ, ಜನಾಂಗದವರು ಬದುಕಬೇಕು. ಕೋಮುವಾದಿಗಳಿಂದ ದೂರ ಇರಬೇಕು. ಅಣ್ಣ–ತಮ್ಮಂದಿರ ರೀತಿಯಲ್ಲಿ ಬದುಕಿ ಸುಖ–ಶಾಂತಿ ನೆಲೆಸಬೇಕು. ಎಲ್ಲ ಸಮುದಾಯದವರು ನೆಮ್ಮದಿಯಿಂದ ಜೀವನ ನಡೆಸಬೇಕು ಎನ್ನುವುದೇ ನನ್ನ ಆಶಯ’.
– ಬೈರತಿ ಸುರೇಶ್, ಶಾಸಕರು





ಬಳ್ಳಾರಿ ಮುಖ್ಯರಸ್ತೆಯಲ್ಲಿ ನಿರ್ಮಿಸಿರುವ ಸ್ಕೈವಾಕ್

ಹೆಬ್ಬಾಳಕ್ಕೆ ಹೊಸ ಸ್ಪರ್ಶ ನೀಡಿದ ಶಾಸಕ ಬೈರತಿ ಸುರೇಶ್

ಕೋವಿಡ್ ಸಂದರ್ಭದಲ್ಲಿ ಶಾಸಕ ಬೈರತಿ ಸುರೇಶ್ ಅವರು ಕೈಗೊಂಡ ಕಾರ್ಯಗಳು ಅವಿಸ್ಮರಣೀಯ. ರೇಷನ್ ಕಿಟ್‌ಗಳನ್ನು ನೀಡುವ ಮೂಲಕ ಬಡವರಿಗೆ ಆಸರೆಯಾಗುವ ಜತೆಗೆ ಸ್ಯಾನಿಟೈಸ್ ಮಾಡುವ ಕಾರ್ಯವೂ ರಾಜ್ಯದಲ್ಲೇ ಮಾದರಿ ಮತ್ತು ಅನುಕರಣೀಯವಾಗಿತ್ತು.

ಹೆಬ್ಬಾಳ ಕ್ಷೇತ್ರದಲ್ಲಿ ವಿಭಿನ್ನವಾದ ಮತ್ತು ಅತ್ಯಾಧುನಿಕ ಆಸ್ಪತ್ರೆ ಸೌಲಭ್ಯ ಕಲ್ಪಿಸಿ ಜನರಲ್ಲಿ ಆಶಾಕಿರಣ ಮೂಡಿಸಿದರು. ಚೋಳನಾಯ್ಕನಹಳ್ಳಿಯಲ್ಲಿ ತಮ್ಮ ಸ್ವಂತ ಹಣ ₹1 ಕೋಟಿ ನೀಡಿ ಕೋವಿಡ್ ಆಸ್ಪತ್ರೆ ನಿರ್ಮಿಸಿ ಸೋಂಕಿತರಿಗೆ ನೆರವಾದರು.

ಚಿಕಿತ್ಸೆಯ ಜೊತೆಗೆ ರೋಗಿಗಳನ್ನು ಮಾನಸಿಕವಾಗಿಯೂ ಲವಲವಿಕೆಯಿಂದ ಇಡುವ ವ್ಯವಸ್ಥೆಯನ್ನು ಈ ಆಸ್ಪತ್ರೆಯಲ್ಲಿ ಮಾಡಲಾಗಿತ್ತು. 100 ಹಾಸಿಗೆಗಳ ಈ ಆಸ್ಪತ್ರೆಯಲ್ಲಿ ಶೇ 50ರಷ್ಟು ಹಾಸಿಗೆಗಳನ್ನು ಹೆಬ್ಬಾಳ ಕ್ಷೇತ್ರದ ಕೊರೊನಾ ಸೋಂಕಿತರಿಗೆ ಮೀಸಲಿಡಲಾಗಿತ್ತು. ಉಳಿದ ಶೇ 50ರಷ್ಟನ್ನು ಬಿಬಿಎಂಪಿ ಮೂಲಕ ಬರುವ ರೋಗಿಗಳಿಗೆ ನೀಡಲಾಗಿತ್ತು.

ಖಾಸಗಿ ಆಸ್ಪತ್ರೆಗಳನ್ನೂ ಮೀರಿಸುವಂತೆ ಈ ನೂತನ ಕೋವಿಡ್ ಆಸ್ಪತ್ರೆಯನ್ನು ರೂಪಿಸಲಾಗಿತ್ತು. 30 ಐಸಿಯು, 40 ಆಮ್ಲಜನಕ ವ್ಯವಸ್ಥೆ, 5 ವೆಂಟಿಲೇಟರ್ ಮತ್ತು 25 ಸಾಮಾನ್ಯ ಹಾಸಿಗೆಗಳ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ಹೆಬ್ಬಾಳ ಕ್ಷೇತ್ರದವರ ಪಾಲಿಗೆ ನೇರ ಚಿಕಿತ್ಸಾ ಕೇಂದ್ರದಂತೆ (ಟ್ರಯಾಜ್ ಸೆಂಟರ್) ಇದು ಕಾರ್ಯನಿರ್ವಹಿಸಿತ್ತು.

ಸಂಘ–ಸಂಸ್ಥೆಗಳ ನೆರವಿನಿಂದ ಮತ್ತು ನಗರಪಾಲಿಕೆ ಹಾಗೂ ಸ್ಥಳೀಯ ಶಾಸಕರ ಸೇರಿ ರೂಪಿಸಿರುವ ಈ ಮಾದರಿ ಆಸ್ಪತ್ರೆ ರಾಜ್ಯದಲ್ಲಿಯೇ ಮೊದಲ ಪ್ರಯೋಗವಾಗಿದೆ.

ಕೋವಿಡ್ ಸಂದರ್ಭದಲ್ಲಿ ಕೈಗೊಂಡ ಯೋಜನೆಗಳು

- ಕೋವಿಡ್ ಯೋಧರಿಗೆ ಸನ್ಮಾನ ಮಾಡುವ ಮೂಲಕ ಅವರ ಸೇವೆಯನ್ನು ಗುರುತಿಸಲಾಯಿತು. ಜತೆಗೆ, ಅಗತ್ಯ ಸಹಾಯವನ್ನು ಯೋಧರಿಗೆ ನೀಡಲಾಯಿತು.
- ₹ 30 ಲಕ್ಷ ಸ್ವಂತ ಹಣದಲ್ಲಿ ಆಕ್ಸಿಜನ್ ಸಿಲಿಂಡರ್‌ಗಳ ಕೊಡುಗೆ
- ಸ್ವಂತ ಹಣದಲ್ಲಿ ಕೋವಿಡ್ ಸಮಯದಿಂದ ಇಲ್ಲಿಯವರೆಗೆ 2 ಲಕ್ಷ ರೇಷನ್ ಕಿಟ್‌ಗಳ ಹಂಚಿಕೆ ಮಾಡಲಾಗಿದೆ.
- ಕೋವಿಡ್‌ನಿಂದ ಮೃತಪಟ್ಟ ಕುಟುಂಬದ ವಾರಸುದಾರರಿಗೆ ಸ್ವಂತ ಹಣದಲ್ಲಿ ₹20,000 ಚೆಕ್ ಅನ್ನು ನೊಂದವರಿಗೆ ನೀಡಲಾಯಿತು.
- ಕೋವಿಡ್ ಸಮಯದಲ್ಲಿ ಇಸ್ಕಾನ್ ಸಹಭಾಗಿತ್ವದಲ್ಲಿ ಊಟದ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗಿತ್ತು. ಬೆಳಿಗ್ಗೆ ಹಾಗೂ ಸಂಜೆ ಊಟದ ವ್ಯವಸ್ಥೆ ಕಲ್ಪಿಸಲಾಗಿತ್ತು.
- ರಾಜ್ಯದಲ್ಲಿಯೇ ಮೊದಲ ಬಾರಿಗೆ ಸ್ಯಾನಿಟೈಸ್ ವ್ಯವಸ್ಥೆಯನ್ನು ಸಮಗ್ರವಾಗಿ ಕೈಗೊಳ್ಳಲಾಗಿತ್ತು.
- ರೈತರಿಗೆ ಸಹಾಯ ಕಲ್ಪಿಸುವ ನಿಟ್ಟಿನಲ್ಲಿ ರೈತರಿಂದ ನೇರವಾಗಿ ಹೊಲದಲ್ಲಿಯೇ ತರಕಾರಿಗಳನ್ನು ಖರೀದಿ ಮಾಡಿ ಕ್ಷೇತ್ರದ ಜನರಿಗೆ ಉಚಿತವಾಗಿ ಹಂಚಲಾಯಿತು.

ಬ್ರಿಟನ್‌ನ ಬರ್ಡೀನ್ ವಿಶ್ವವಿದ್ಯಾಲಯದಲ್ಲಿ ಮಾಸ್ಟರ್ ಆಫ್ ಪಬ್ಲಿಕ್ ಹೆಲ್ತ್ ಉನ್ನತ ವ್ಯಾಸಂಗ ಕೈಗೊಂಡಿದ್ದ ವಿ.ನಾಗೇನಹಳ್ಳಿ ಬಳಿಯ ಗುಡ್ಡದಹಳ್ಳಿಯ ಡಾ.ಅರ್ಚನಾ ಎನ್ನುವ ವಿದ್ಯಾರ್ಥಿನಿಗೆ ಶಾಸಕ ಬೈರತಿ ಸುರೇಶ್ ಅವರು ಸರ್ಕಾರದಿಂದ ₹40 ಲಕ್ಷ ಮಂಜೂರು ಮಾಡಿಸಿದ್ದರು. ಜತೆಗೆ, ತಮ್ಮ ಸ್ವಂತ ಹಣದಲ್ಲಿ 1ಲಕ್ಷಗಳ ಧನಸಹಾಯವನ್ನು ಮಾಡಿ ಆಕೆಯ ಮುಂದಿನ ಉನ್ನತ ವ್ಯಾಸಂಗಕ್ಕಾಗಿ ಪ್ರೋತ್ಸಾಹ ನೀಡಿದ್ದಾರೆ.









ಹೆಬ್ಬಾಳ: ಪ್ರಗತಿಗೆ ಹೊಸ ಮಾದರಿ



ಶಾಸಕ ಬೈರತಿ ಸುರೇಶ್ ಕೈಗೊಂಡಿರುವ ಅಭಿವೃದ್ಧಿ ಯೋಜನೆಗಳು

- ಹೆಬ್ಬಾಳ ಕ್ಷೇತ್ರದಲ್ಲಿ ಎಕ್ಸ್‌ಪ್ರೆಸ್ ಕಾವೇರಿ ಲೈನ್ ಅಳವಡಿಸಿರುವುದು ಪ್ರಮುಖ ಕಾರ್ಯವಾಗಿದೆ.
- ಹೆಬ್ಬಾಳ ಕ್ಷೇತ್ರ ವ್ಯಾಪ್ತಿಯಲ್ಲಿ ಮುಖ್ಯ ರಸ್ತೆಗಳ ಡಾಂಬರೀಕರಣ ಹಾಗೂ ಸಿ.ಸಿ ರಸ್ತೆಗಳ ಕಾಮಗಾರಿ
- 30 ವರ್ಷಗಳ ಹಿಂದಿನ ಒಳಚರಂಡಿ ಪೈಪ್‌ಲೈನ್‌ಗಳ ಬದಲಾವಣೆ ಮಾಡುವ ಮೂಲಕ ಕಾಯಕಲ್ಪ ಮಾಡಲಾಗಿದೆ.
- ಕೊಳಚೆ ಪ್ರದೇಶಾಭಿವೃದ್ಧಿ ಮಂಡಳಿಗೆ ಕ್ಷೇತ್ರದ ಕೊಳಗೇರಿ ಪ್ರದೇಶದ ಜನರಿಗಾಗಿ ಸ್ವಂತ ಹಣ ₹60 ಲಕ್ಷ ಧನ ಸಹಾಯಕ್ಕೆ ಚಾಲನೆ ನೀಡಿ ಹಣ ಬಿಡುಗಡೆ ಮಾಡಲಾಗಿದೆ.
- ಹೆಬ್ಬಾಳ ಕ್ಷೇತ್ರ ವ್ಯಾಪ್ತಿಯಲ್ಲಿನ ಎಲ್ಲ ಉದ್ಯಾನವನಗಳ ನವೀಕರಣ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ಉದ್ಯಾನಗಳಲ್ಲಿ ವ್ಯಾಯಾಮ ಸಲಕರಣೆಗಳನ್ನು ಅಳವಡಿಸಿ
- ಏಳು ಸಮುದಾಯ ಭವನಗಳ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.
- ಎರಡು ಅಂಬೇಡ್ಕರ್ ಸಮುದಾಯ ಭವನಗಳನ್ನು ಕೈಗೊಳ್ಳಲಾಗಿದೆ
- 34 ಶುದ್ಧ ಕುಡಿಯುವ ನೀರಿನ ಘಟಕಗಳು ನಿರ್ಮಿಸುವ ಮೂಲಕ ಕ್ಷೇತ್ರದ ಜನರಿಗೆ ಅನುಕೂಲ ಕಲ್ಪಿಸಲಾಗಿದೆ.
- 20 ಬಸ್ ನಿಲ್ದಾಣಗಳ ನವೀಕರಣ ಕಾರ್ಯವನ್ನು ಕೈಗೊಳ್ಳಲಾಗಿದೆ.
- ಎರಡು ಹೊಸ ಆಸ್ಪತ್ರೆಗಳ ನಿರ್ಮಾಣ
- ಗಂಗಾನಗರ ಮತ್ತು ಜೆ.ಸಿ ನಗರ ಆಸ್ಪತ್ರೆಗಳ ಅಭಿವೃದ್ಧಿ ಪೂರ್ಣಗೊಳ್ಳುವ ಹಂತದಲ್ಲಿದೆ.
- 8 ಕೋಟಿ ವೆಚ್ಚದಲ್ಲಿ ಆಸ್ಪತ್ರೆಗೆ ಗುದ್ದಲಿ ಪೂಜೆ
- ನೂತನ ಡಯಾಲಿಸಿಸ್ ಕೇಂದ್ರ
- ಡಾ. ಬಿ.ಆರ್. ಅಂಬೇಡ್ಕರ್, ಕೆಂಪೇಗೌಡ, ರವೀಂದ್ರನಾಥ ಠಾಗೂರ್ ಹಾಗೂ ರಾಷ್ಟ್ರೀಯ ಲಾಂಛನ ಪುತ್ಥಳಿ ಅನಾವರಣ
- ವಾರ್ಡ್ 33ರಲ್ಲಿ ಮಾಡರ್ನ್ ಸ್ಟ್ರೀಟ್ ಮಾದರಿ ರಸ್ತೆಗಳ ನಿರ್ಮಾಣ
- ಹೆಬ್ಬಾಳ ಕ್ಷೇತ್ರ ವ್ಯಾಪ್ತಿಯಲ್ಲಿನ ದೇವಸ್ಥಾನಗಳು, ಮಸೀದಿ, ಚರ್ಚ್‌ಗಳ ಜೀರ್ಣೋದ್ಧಾರ.
- ಡಾ ಬಿ.ಆರ್ ಅಂಬೇಡ್ಕರ್ ಆಸ್ಪತ್ರೆಯಲ್ಲಿ ಸ್ವಂತ ಹಣದಲ್ಲಿ ಉಚಿತ ಡಯಾಲಿಸಿಸ್ ಕೇಂದ್ರವನ್ನು ಆರಂಭಿಸಲಾಗಿದೆ. ಈ ಸೌಲಭ್ಯವನ್ನು ಇದುವರೆಗೆ ಸಾವಿರಾರು ರೋಗಿಗಳು ಪಡೆದಿದ್ದಾರೆ. ರೋಗಿಗಳು ಒಂದು ಪೈಸೆಯನ್ನು ಸಹ ನೀಡಬೇಕಾಗಿಲ್ಲ. ಇದರಿಂದ, ಬಡ ಮತ್ತು ಮಧ್ಯಮ ವರ್ಗದ ಸಾವಿರಾರು ರೋಗಿಗಳಿಗೆ ಅನುಕೂಲವಾಗಿದೆ.
- ಜೆ.ಸಿ ನಗರ ಆಸ್ಪತ್ರೆಗೆ ಸ್ವಂತ ಹಣದಲ್ಲಿ ತುರ್ತು ನಿಗಾ ಘಟಕಕ್ಕೆ ಆಕ್ಸಿಜನ್ ವೆಂಟಿಲೇಟರ್‌ಗಳ ಕೊಡುಗೆ ನೀಡಲಾಗಿದೆ
- ಸ್ವಂತ ಹಣದಲ್ಲಿ ಜೆ.ಸಿ ನಗರ, ಗಂಗಾನಗರ, ಗಂಗೇನಹಳ್ಳಿಯಲ್ಲಿ ಮನೆಗಳ ನಿರ್ಮಾಣ
- ಸ್ವಂತ ಹಣದಲ್ಲಿ ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು
- ಕ್ಷೇತ್ರದ ಜನರಿಗಾಗಿ ಉಚಿತ ಆಂಬುಲೆನ್ಸ್ ಸೇವೆ ಕಲ್ಪಿಸಲಾಗಿದೆ.
- ಕ್ಷೇತ್ರದ ಜನರಿಗಾಗಿ ಲಕ್ಷಾಂತರ ರೂಪಾಯಿಗಳ ಶಸ್ತ್ರ ಚಿಕಿತ್ಸೆಗೆ ಸಹಾಯ ಒದಗಿಸಲಾಗಿದೆ.
- ಸ್ವಂತ ಹಣದಲ್ಲಿ ಕಿವುಡರಿಗೆ 'ಹಿಯರಿಂಗ್ ಏಯ್ಡ್ ಮಿಷಿನ್'
- ಸ್ವಂತ ಹಣದಲ್ಲಿ ತಳ್ಳುಗಾಡಿಗಳು, ಅಂಗವಿಕಲರಿಗೆ ತ್ರಿಚಕ್ರ ವಾಹನಗಳು, ಸೈಕಲ್ ವಿತರಣೆ ಮಾಡಲಾಗಿದೆ. ₹25ಸಾವಿರದಿಂದ ₹1 ಲಕ್ಷದವರೆಗೂ ಧನ ಸಹಾಯ ಮಾಡಲಾಗಿದೆ.
- ಕ್ಷೇತ್ರದ ಜನರು ಆಟೋ ಹಾಗೂ ಟ್ಯಾಕ್ಸಿ ಗಳಿಗೆ ಧನ ಸಹಾಯ ಮಾಡಲಾಗಿದೆ.
- ಕ್ಷೇತ್ರ ವ್ಯಾಪ್ತಿಯಲ್ಲಿ ಸ್ವಂತ ಹಣದಲ್ಲಿ ಎಲ್‌ಇಡಿ ಲೈಟ್‌ಗಳ ಅಳವಡಿಸಲಾಗಿದೆ.
- ಸಾರ್ವಜನಿಕರಿಗಾಗಿ ಉಚಿತ ಆರೋಗ್ಯ ಶಿಬಿರಗಳನ್ನು ಆಯೋಜಿಸಲಾಗಿದೆ.
- ಸ್ವಂತ ಹಣದಲ್ಲಿ ಸಾವಿರಾರು ಜನರಿಗೆ ಊಟ ವಿತರಿಸಲಾಗಿದೆ.
- ಪ್ರತಿ ವರ್ಷ ಕ್ಯಾನ್ಸರ್ ರೋಗಿಗಳಿಗೆ ವಿಶೇಷ ಕ್ಯಾಂಪ್ ಆಯೋಜಿಸಲಾಗುತ್ತಿದೆ.
- ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಹಣದಲ್ಲಿ ಕುರ್ಚಿ, ಟೇಬಲ್ ಸೇರಿದಂತೆ ವಿವಿಧ ಪೀಠೋಪಕರಣಗಳನ್ನು ನೀಡಲಾಗಿದೆ.
- ಸರ್ಕಾರದ ವಿವಿಧ ಅಭಿವೃದ್ಧಿ ನಿಗಮಗಳ ಮೂಲಕ ಸಾಲ ಮತ್ತು ಸಹಾಯ ಧನ ಒದಗಿಸಲಾಗಿದೆ.

ಹೆಬ್ಬಾಳ ಕ್ಷೇತ್ರದಲ್ಲಿ ಅಭಿವೃದ್ಧಿ ಪರ್ವ

ಜನಪರ ನಾಯಕ, ಅಭಿವೃದ್ಧಿಯ ಹರಿಕಾರ

ಸದಾ ಅಭಿವೃದ್ಧಿಪರ ಚಿಂತನೆ ಮತ್ತು ದೂರದೃಷ್ಟಿ ಹೊಂದಿರುವ ಹೆಬ್ಬಾಳ ಕ್ಷೇತ್ರದ ಕಾಂಗ್ರೆಸ್ ಶಾಸಕ ಬೈರತಿ ಸುರೇಶ್ ಅವರು ಜನಪರ ಮತ್ತು ಜನಪ್ರಿಯ ನಾಯಕರು. ಎಲ್ಲ ಸಮುದಾಯಗಳ ಏಳ್ಗೆಗೆ ಹಗಲಿರುಳು ಶ್ರಮಿಸುವ ಮೂಲಕ ಕ್ಷೇತ್ರವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ಶ್ರಮಿಸುತ್ತಿದ್ದಾರೆ.

ಹೆಬ್ಬಾಳ ವಿಧಾನಸಭಾ ಕ್ಷೇತ್ರದಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಜನರಿಗೆ ಸಕಲ ಸೌಕರ್ಯಗಳನ್ನು ಕಲ್ಪಿಸುವ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಬೈರತಿ ಸುರೇಶ್ ಅವರು, ಜನರ ಸಂಕಷ್ಟಗಳಿಗೆ ಸದಾ ಸ್ಪಂದಿಸುತ್ತಿದ್ದಾರೆ.

ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ ಅಡಿ ಹಾಗೂ ಮುಖ್ಯಮಂತ್ರಿಗಳ ನಗರೋತ್ಥಾನ ಯೋಜನೆ ಅಡಿ ₹90 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಜತೆಗೆ ತಮ್ಮ ಸ್ವಂತ ಹಣದಲ್ಲೂ ವಿವಿಧ ರೀತಿಯ ಹಲವಾರು ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ.

ಕುಡಿಯುವ ನೀರು ಸೌಲಭ್ಯ, ಆಸ್ಪತ್ರೆ ಮತ್ತು ರಸ್ತೆಗಳಿಗೆ ಕಾಯಕಲ್ಪ, ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಜನರಿಗೆ ನೆರವು ಸೇರಿದಂತೆ ನಾನಾ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಕ್ಷೇತ್ರಕ್ಕೆ ಹೊಸ ಸ್ಪರ್ಶ ನೀಡಿದ್ದಾರೆ.

ಕ್ಷೇತ್ರದಲ್ಲಿ ಮೊದಲ ಬಾರಿ ಸರ್ಕಾರಿ ನೂತನ ಪದವಿ ಪೂರ್ವ ಕಾಲೇಜು ಆರಂಭಿಸುವ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಶಾಸಕರು ಶ್ರಮಿಸಿದ್ದಾರೆ. ಹೆಬ್ಬಾಳ ಕ್ಷೇತ್ರ ವ್ಯಾಪ್ತಿಯಲ್ಲಿ ಗಂಗಾನಗರ ಬಸ್ ನಿಲ್ದಾಣ ಸೇರಿದಂತೆ ಕ್ಷೇತ್ರದಲ್ಲಿನ ಬಸ್ ನಿಲ್ದಾಣಗಳಿಗೆ ಶಾಸಕರು ಹೊಸ ಮೆರುಗು ನೀಡಿದ್ದಾರೆ. ಆರ್.ಟಿ. ನಗರ ಸೇರಿದಂತೆ ಕ್ಷೇತ್ರದೆಲ್ಲೆಡೆ ಸಿಮೆಂಟ್ ರಸ್ತೆಗಳನ್ನು ನಿರ್ಮಿಸಲು ಬೈರತಿ ಸುರೇಶ್ ಅವರು ಕಾರಣರಾಗಿದ್ದಾರೆ.

ಸ್ಕಾಲರ್‌ಶಿಪ್ ಯೋಜನೆಯನ್ನು ಸ್ವಂತ ಹಣದಲ್ಲಿ ಜಾರಿಗೊಳಿಸುವ ಮೂಲಕ ಬಡವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರಗತಿಗೆ ಶಾಸಕರು ನೆರವಾಗಿದ್ದಾರೆ. ಮಹಿಳೆಯರ ಸಬಲೀಕರಣದ ಕಾರ್ಯಗಳಿಗೆ ಶಾಸಕ ಬೈರತಿ ಸುರೇಶ್ ಅವರು ಅಭಯಹಸ್ತ ನೀಡಿದ್ದಾರೆ. ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ಮತ್ತು ಸಕಾಲಕ್ಕೆ ಅನುಷ್ಠಾನಗೊಳಿಸುವ ಮೂಲಕ ಸುರೇಶ್ ಅವರು ಮಹಿಳೆಯರ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಈ ಮೂಲಕ ಸಮಾಜದ ಮುಖ್ಯವಾಹಿನಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಪ್ರಯತ್ನಗಳನ್ನು ಕೈಗೊಂಡಿದ್ದಾರೆ.

ದೇವಸ್ಥಾನಗಳು, ಮಸೀದಿ, ಚರ್ಚ್‌ಗಳ ಜೀರ್ಣೋದ್ಧಾರ ಕಾರ್ಯಗಳನ್ನು ಕೈಗೊಳ್ಳು ಮೂಲಕ ಕ್ಷೇತ್ರದಲ್ಲಿ ಶಾಸಕರು ಭಾವೈಕ್ಯತೆ ಮೂಡಿಸುವ ಜತೆಗೆ ಸರ್ವಜನಾಂಗಗಳ ಶಾಂತಿಯ ತೋಟವನ್ನು ನಿರ್ಮಿಸಿದ್ದಾರೆ.

- ಸಂಜಯನಗರ ಆಸ್ಪತ್ರೆಯಲ್ಲಿ 50 ಆಸ್ಪತ್ರೆಗಳ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದ್ದು, ಈಗಾಗಲೇ ಗುದ್ದಲಿ ಪೂಜೆ ನೆರವೇರಿಸಲಾಗಿದೆ.
- ಯುಪಿಎಸ್‌ಸಿ ಕಟ್ಟಡದಲ್ಲಿ ನಾಲ್ಕು ಕೋಟಿ ರೂಪಾಯಿ ವೆಚ್ಚದಲ್ಲಿ ಹೊಸ ಆಸ್ಪತ್ರೆ ನಿರ್ಮಾಣಕ್ಕೆ ಮಂಜೂರಾತಿ ದೊರೆತಿದೆ. ಕೆಆರ್‌ಐಡಿಎಲ್ ಮೂಲಕ ಈ ಆಸ್ಪತ್ರೆ ನಿರ್ಮಾಣ ಕಾರ್ಯ ಕೈಗೊಳ್ಳಲಾಗುತ್ತಿದೆ.





ಶೈಕ್ಷಣಿಕ ಪ್ರಗತಿಗೆ ಶಾಸಕ ಬೈರತಿ ಸುರೇಶ್ ಕೊಡುಗೆಗಳು

- ನೂತನ ಪದವಿ ಪೂರ್ವ ಕಾಲೇಜು ಆರಂಭಿಸುವ ಮೂಲಕ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಶಾಸಕರು ಬೆನ್ನೆಲುಬಾಗಿ ನಿಂತಿದ್ದಾರೆ. ಪ್ರಥಮ ಬಾರಿಗೆ ಇಂತಹ ಕಾರ್ಯವನ್ನು ಕ್ಷೇತ್ರದಲ್ಲಿ ಕೈಗೊಳ್ಳಲಾಗಿದೆ.
- ಹೆಬ್ಬಾಳ ಕ್ಷೇತ್ರ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಶಾಲೆಗಳ ನವೀಕರಣ ಕಾರ್ಯ ಕೈಗೊಳ್ಳಲಾಗಿದೆ.
- ಸರ್ಕಾರಿ ಶಾಲೆಗಳಲ್ಲಿ 1ನೇ ತರಗತಿಯಿಂದಲ್ಲೇ ಆಂಗ್ಲ ಮಾಧ್ಯಮಕ್ಕೆ ಉತ್ತೇಜನ ನೀಡಲಾಗಿದೆ.
- ಸ್ವಂತ ಹಣದಲ್ಲಿ ಶಾಲಾ ಮಕ್ಕಳಿಗೆ ನೋಟ್ ಬುಕ್ ಸಮವಸ್ತ್ರ ಹಾಗೂ ವಿದ್ಯಾರ್ಥಿವೇತನ ನೀಡಲಾಗುತ್ತಿದೆ.
- ಹೆಬ್ಬಾಳದ ಪದವಿ ಪೂರ್ವ ಕಾಲೇಜಿಗೆ ಸ್ವಂತ ಹಣದಲ್ಲಿ ಕಂಪ್ಯೂಟರ್‌ಗಳು, ಪೀಠೋಪಕರಣಗಳು ಕೊಠಡಿಗಳ ನಿರ್ಮಾಣ ಮಾಡಲಾಗಿದೆ.









ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in




ಸುಭಾಷಿತ

ಜ್ಞಾನದ ಏಕೈಕ ಉದ್ದೇಶವೆಂದರೆ ಮನಸ್ಸಿಗೆ ಶಕ್ತಿ ನೀಡುವುದು ಮತ್ತು ಅದನ್ನು ಶಿಸ್ತಿಗೆ ಒಳಪಡಿಸುವುದು.
-ಸ್ವಾಮಿ ವಿವೇಕಾನಂದ

ಅನುದಾನ ಹಂಚಿಕೆಯಲ್ಲಿ ತಾರತಮ್ಯ ಅಭಿವೃದ್ಧಿಯಲ್ಲಿ ಅಸಮತೋಲನಕ್ಕೆ ದಾರಿ

ಅಭಿವೃದ್ಧಿ ಚಟುವಟಿಕೆಗಳಿಗೆ ಅನುದಾನ ಹಂಚಿಕೆಯಲ್ಲಿ ತಾರತಮ್ಯ ಎಸಗುವ ಪರಿಪಾಟ ಇಂದು ನಿನ್ನೆಯದಲ್ಲ. ಆಡಳಿತಾರೂಢರ ಈ ನಡೆ ಯಾವುದೇ ನೆಲೆಯಲ್ಲೂ ಸಮರ್ಥನೀಯವಲ್ಲ. ಆಡಳಿತ ಪಕ್ಷದ ಶಾಸಕರು ಹಾಗೂ ರಾಜಕೀಯವಾಗಿ ಪ್ರಭಾವ ಹೊಂದಿರುವ ಜನಪ್ರತಿನಿಧಿಗಳು ಪ್ರತಿನಿಧಿಸುವ ಕ್ಷೇತ್ರಗಳಿಗೆ ದೊಡ್ಡ ಮೊತ್ತದ ಅನುದಾನವನ್ನು ಮನಸೋಇಚ್ಛೆ ನೀಡುವುದರಿಂದ ಅಭಿವೃದ್ಧಿಯಲ್ಲಿ ಅಸಮತೋಲನ ಉಂಟಾಗುತ್ತದೆ. ಈ ಪಿಡುಗು ರಾಜ್ಯದ ರಾಜಧಾನಿ ಬೆಂಗಳೂರನ್ನೂ ಬಿಟ್ಟಿಲ್ಲ. ಅನುದಾನ ಹಂಚಿಕೆಯಲ್ಲಿ ಇಲ್ಲಿಯೂ ತಾರತಮ್ಯ ಢಾಳಾಗಿ ಗೋಚರಿಸುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಸರ್ಕಾರ ಪ್ರತಿವರ್ಷವೂ ಸಾವಿರಾರು ಕೋಟಿ ರೂಪಾಯಿ ಅನುದಾನವನ್ನು ವಿವಿಧ ಯೋಜನೆಗಳಡಿ ನೀಡುತ್ತಿದೆ. ಈ ಅನುದಾನವು ಹೆಚ್ಚು ಅಗತ್ಯವಿರುವ ಕಾಮಗಾರಿಗೆ ಬಳಕೆ ಆಗುವ ಬದಲು ಪ್ರಭಾವಿ ಜನಪ್ರತಿನಿಧಿಗಳ ಕ್ಷೇತ್ರಗಳಿಗಷ್ಟೇ ಹಂಚಿಕೆಯಾಗುತ್ತಿರುವುದು ವಿಪರ್ಯಾಸ. ಬಿಬಿಎಂಪಿ ವ್ಯಾಪ್ತಿಯ ಕೆಲವು ವಿಧಾನಸಭಾ ಕ್ಷೇತ್ರಗಳು ನೂರಾರು ಕೋಟಿ ರೂಪಾಯಿ ಅನುದಾನ ಗಿಟ್ಟಿಸಿಕೊಳ್ಳುತ್ತಿವೆ. ಅಲ್ಲಿನ ರಸ್ತೆಗಳು ಪದೇ ಪದೇ ಡಾಂಬರು ಕಾಣುತ್ತಿದ್ದರೆ, ಇನ್ನು ಕೆಲವು ಕ್ಷೇತ್ರಗಳಲ್ಲಿ ರಸ್ತೆಗುಂಡಿ ಮುಚ್ಚುವುದಕ್ಕೂ ಹಣವಿಲ್ಲದ ದುಃಸ್ಥಿತಿ ಇದೆ. ಕೆಲವು ವಾರ್ಡ್‌ಗಳಲ್ಲಿ ಪಾದಚಾರಿ ಮಾರ್ಗಗಳು ಎರಡು-ಮೂರು ವರ್ಷಗಳಿಗೊಮ್ಮೆ ನವೀಕರಣಗೊಳ್ಳುತ್ತವೆ. ಇನ್ನು ಕೆಲವು ಕಡೆ ಪಾದಚಾರಿ ಮಾರ್ಗದಲ್ಲಿ ಕಿತ್ತುಹೋದ ಕಲ್ಲುಹಾಸುಗಳ ದುರಸ್ತಿಗೂ ಹಣ ಸಿಗುವುದಿಲ್ಲ. ಅನುದಾನದ ತಾರತಮ್ಯಕ್ಕೆ ಇತ್ತೀಚಿನ ಉದಾಹರಣೆ, ಮುಖ್ಯಮಂತ್ರಿಯವರ ಅಮೃತ ನಗರೋತ್ಥಾನ ಯೋಜನೆ. ಈ ಯೋಜನೆಯಡಿ ಬಿಬಿಎಂಪಿ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರವು ₹6 ಸಾವಿರ ಕೋಟಿ ಒದಗಿಸಿದೆ. ಇದರ ಹಂಚಿಕೆಯಲ್ಲಂತೂ ತಾರತಮ್ಯ ಕಣ್ಣಿಗೆ ರಾಚುವಂತಿದೆ.



ಅನುದಾನ ಹಂಚಿಕೆಗೆ ಸ್ಪಷ್ಟ ಮಾನದಂಡಗಳನ್ನು ರೂಪಿಸಬೇಕಾಗಿದೆ

ನಗರೋತ್ಥಾನ ಯೋಜನೆಯಡಿ ನಗರದ 28 ವಿಧಾನಸಭಾ ಕ್ಷೇತ್ರಗಳಿಗೆ ಒಟ್ಟು ₹3,850 ಕೋಟಿ ಅನುದಾನವನ್ನು ನೇರವಾಗಿ ಹಂಚಿಕೆ ಮಾಡಲಾಗಿದೆ. ಇದರ ಸಿಂಹಪಾಲು ಸಿಕ್ಕಿರುವುದು ಆಡಳಿತಾರೂಢ ಬಿಜೆಪಿ ಶಾಸಕರು ಪ್ರತಿನಿಧಿಸುವ ಕ್ಷೇತ್ರಗಳಿಗೆ. ಬಿಜೆಪಿ ಶಾಸಕರು ಪ್ರತಿನಿಧಿಸುತ್ತಿರುವ 15 ಕ್ಷೇತ್ರಗಳಿಗೆ ಶೇ 70ರಷ್ಟು ಮೊತ್ತ ಹಂಚಿಕೆಯಾಗಿದೆ. ಬಿಜೆಪಿಯ ಶಾಸಕರು ಪ್ರತಿನಿಧಿಸುವ ಮಹದೇವಪುರ ಹಾಗೂ ರಾಜರಾಜೇಶ್ವರಿನಗರ ಕ್ಷೇತ್ರಗಳಿಗೆ ತಲಾ ₹208 ಕೋಟಿ ಅನುದಾನ ಸಿಕ್ಕಿದ್ದರೆ, ಕಾಂಗ್ರೆಸ್ ಶಾಸಕರು ಪ್ರತಿನಿಧಿಸುವ ಜಯನಗರ, ವಿಜಯನಗರ ಕ್ಷೇತ್ರಗಳಿಗೆ ₹ 60 ಕೋಟಿ ಮಾತ್ರ ನೀಡಲಾಗಿದೆ. ಯಾವ ಕಾಮಗಾರಿಗೆ ಎಷ್ಟು ಅನುದಾನ ಎಂಬುದನ್ನು ಅನುದಾನ ಹಂಚಿಕೆಯ ಆದೇಶದಲ್ಲಿ ಸ್ಪಷ್ಟಪಡಿಸಿಲ್ಲ. ಶಾಸಕರ ವಿವೇಚನೆ ಅನುಸಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಈ ಅನುದಾನವನ್ನು ಬಳಸಬಹುದು. ರಸ್ತೆ ಮೂಲಸೌಕರ್ಯ ಅಭಿವೃದ್ಧಿಗೆ ಸಂಬಂಧಿಸಿದ 227 ಕಾಮಗಾರಿಗಳಿಗೆ ₹ 700 ಕೋಟಿ ಅನುದಾನ ಹಂಚಿಕೆ ಮಾಡಲಾಗಿದೆ. ಅದರಲ್ಲೂ ರಾಜರಾಜೇಶ್ವರಿ ನಗರ ವಲಯವೇ ಅತಿಹೆಚ್ಚು ಪಾಲನ್ನು ಪಡೆದಿದೆ. ಈಗಾಗಲೇ ಅಭಿವೃದ್ಧಿಯಾಗಿರುವ ನಗರದ ಕೇಂದ್ರ ವಾಣಿಜ್ಯ ಪ್ರದೇಶಗಳಿಗೆ ಮತ್ತೆ ನೂರಾರು ಕೋಟಿ ಅನುದಾನವನ್ನು ಒದಗಿಸಲಾಗಿದೆ. ಪೀಣ್ಯದಂತಹ ಪ್ರಮುಖ ಕೈಗಾರಿಕಾ ಅಭಿವೃದ್ಧಿ ಪ್ರದೇಶಗಳನ್ನು ಹೊಂದಿರುವ, ಲಕ್ಷಗಟ್ಟಲೆ ಕಾರ್ಮಿಕರು ನೆಲೆಸಿರುವ ದಾಸರಹಳ್ಳಿ ಕ್ಷೇತ್ರವನ್ನು ಕಡೆಗಣಿಸಲಾಗಿದೆ. ಅನುದಾನ ಹಂಚಿಕೆಯಲ್ಲಿ ಈ ರೀತಿಯ ತಾರತಮ್ಯವು ಪ್ರಜಾಪ್ರಭುತ್ವ ವ್ಯವಸ್ಥೆಯ ಆಶಯಗಳಿಗೆ ಮಾರಕವಾಗಬಲ್ಲದು.

ಬೆಂಗಳೂರಿನ ಆಡಳಿತ ಸುಧಾರಣೆಗಾಗಿ ಬಿ.ಎಸ್.ಪಾಟೀಲ ನೇತೃತ್ವದ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದೆ. ಅನುದಾನ ಹಂಚಿಕೆಯಲ್ಲಿ ತಾರತಮ್ಯ ಮಾಡುವುದರಿಂದ ಮುಂದೆ ಒದಗಬಹುದಾದ ಸಮಸ್ಯೆಗಳ ಕುರಿತು ಅದರಲ್ಲಿ ಬೆಳಕು ಚೆಲ್ಲಲಾಗಿದೆ. ನಗರದ ಎಲ್ಲ ಪ್ರದೇಶಗಳೂ ಸಮಾನವಾಗಿ ಅಭಿವೃದ್ಧಿ ಆಗುವಂತೆ ನೋಡಿಕೊಳ್ಳುವುದಕ್ಕೂ ಸಮಿತಿ ಕೆಲ ಸಲಹೆಗಳನ್ನು ನೀಡಿದೆ. ಬಿಬಿಎಂಪಿಯಲ್ಲೂ ಪಂಚವಾರ್ಷಿಕ ಯೋಜನೆ ಹಾಗೂ ವಾರ್ಷಿಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಕ್ಕೆ ತರಬೇಕು. ವಾರ್ಡ್ ಸಮಿತಿಗಳು ವಾರ್ಡ್ ಮಟ್ಟದಲ್ಲೂ ದೀರ್ಘಕಾಲೀನ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಬೇಕು. ಈ ಯೋಜನೆಗಳು ಮಹಾನಗರ ಯೋಜನಾ ಸಮಿತಿ (ಎಂಪಿಸಿ) ರೂಪಿಸುವ ದೂರಗಾಮಿ ಯೋಜನೆಗಳ ಜೊತೆ ಹೊಂದಿಕೆ ಆಗುವಂತೆ ನೋಡಿಕೊಳ್ಳಬೇಕು ಎಂದು ಶಿಫಾರಸು ಮಾಡಿದೆ. ಈ ಸಮಿತಿಯ ಶಿಫಾರಸುಗಳನ್ನು ಜಾರಿಗೊಳಿಸಲು ಯಾವುದೇ ಪಕ್ಷದ ನೇತೃತ್ವದ ಸರ್ಕಾರವೂ ಮುಂದಾಗಲಿಲ್ಲ. ನಗರದ ದೀರ್ಘಕಾಲೀನ ಅಭಿವೃದ್ಧಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ನಗರ ಮಹಾಯೋಜನೆಯನ್ನು ರೂಪಿಸಿ, ಅದಕ್ಕೆ ಅನುಗುಣವಾಗಿಯೇ ಅಭಿವೃದ್ಧಿಗೆ ಅನುದಾನ ಹಂಚಿಕೆ ಮಾಡಬೇಕು. ದುರಂತವೆಂದರೆ 2015ರ ನಗರ ಮಹಾಯೋಜನೆಯ ಅವಧಿ ಮುಕ್ತಾಯವಾಗಿ ಏಳು ವರ್ಷಗಳಾದರೂ ಇನ್ನೂ ಪರಿಷ್ಕೃತ ಮಹಾಯೋಜನೆ ಜಾರಿಯಾಗಿಲ್ಲ. 2031ರ ನಗರ ಮಹಾಯೋಜನೆಯನ್ನು ಸಿದ್ಧಗೊಳಿಸಲಾಗಿತ್ತಾದರೂ, ಸರ್ಕಾರದ ನಾಯಕತ್ವ ಬದಲಾಗಿದ್ದರಿಂದ ಅದನ್ನೂ ಕೈಬಿಡಲಾಯಿತು. ಈಗ ಬಿಬಿಎಂಪಿಯಲ್ಲಿ ಚುನಾಯಿತ ಕೌನ್ಸಿಲ್ ಕೂಡ ಇಲ್ಲ. ಪ್ರಭಾವಿ ಶಾಸಕರು ಆಡಿದ್ದೇ ಆಟ ಎಂಬಂತಾಗಿದೆ. ತಮಗೆ ಬೇಕಾದ ಅಧಿಕಾರಿಗಳನ್ನು ಬಿಬಿಎಂಪಿಗೆ ನಿಯೋಜಿಸಿಕೊಂಡು ಆಡಳಿತ ಪಕ್ಷದ ಪ್ರಭಾವಿ ಶಾಸಕರು ಮನಬಂದಂತೆ ಅಧಿಕಾರ ಚಲಾಯಿಸುತ್ತಿದ್ದಾರೆ ಎಂಬ ಆರೋಪದಲ್ಲಿ ಹುರುಳಿಲ್ಲದೇ ಇಲ್ಲ. ರಾಜಕೀಯ ಲಾಭವನ್ನೇ ಗುರಿಯಾಗಿಟ್ಟುಕೊಂಡು ಅನುದಾನ ಹಂಚಿಕೆ ಮಾಡುವ ಕ್ರಮವು ನಗರದ ಅಭಿವೃದ್ಧಿಯಲ್ಲಿನ ಅಸಮತೋಲನ ಮತ್ತಷ್ಟು ಹೆಚ್ಚಲು ಕಾರಣವಾಗುತ್ತದೆ. ಒಂದು ಕ್ಷೇತ್ರದ ಮತದಾರರು ನಿರ್ದಿಷ್ಟ ಪಕ್ಷದ ಅಭ್ಯರ್ಥಿಯನ್ನು ಚುನಾವಣೆಯಲ್ಲಿ ಗೆಲ್ಲಿಸಿಲ್ಲ ಎಂಬ ಏಕೈಕ ಕಾರಣದಿಂದ ಆ ಕ್ಷೇತ್ರಕ್ಕೆ ಅನುದಾನ ನಿರಾಕರಿಸುವುದು ಜನರ ಹಕ್ಕನ್ನು ಮೊಟಕುಗೊಳಿಸಿದಂತೆ. ಅನುದಾನ ಹಂಚಿಕೆಗೆ ಸ್ಪಷ್ಟ ಮಾನದಂಡಗಳನ್ನು ರೂಪಿಸಬೇಕು. ಅದರ ಅನುಸಾರ ಅನುದಾನ ಹಂಚಿಕೆ ಆಗಬೇಕು.

ದಿನದ ಟ್ವೀಟ್

ಭಾರತವನ್ನು ಪ್ರೀತಿಸುತ್ತೇನೆ...

ನಾನು ಭಾರತವನ್ನು ಪ್ರೀತಿಸುತ್ತೇನೆ. ಏಕೆಂದರೆ, ಒಬ್ಬ ಮುಸ್ಲಿಂ, ಒಬ್ಬ ಸಿಖ್, ಒಬ್ಬ ದಲಿತ, ಒಬ್ಬ ಮಹಿಳೆ, ಒಬ್ಬ ನಾಸ್ತಿಕ ಅಥವಾ ಒಬ್ಬ ಬುಡಕಟ್ಟು ವ್ಯಕ್ತಿ ಸೇರಿದಂತೆ ಯಾರು ಬೇಕಾದರೂ ರಾಷ್ಟ್ರಪತಿ ಅಥವಾ ದೇಶದ ಮುಖ್ಯಸ್ಥರಾಗಬಹುದು. ಹಲವಾರು ಮುಂದುವರಿದ ಮತ್ತು ಉದಾರವಾದಿ ರಾಷ್ಟ್ರಗಳು ಇಷ್ಟೊಂದು ಉದಾರವಾಗಿರಲು ಸಾಧ್ಯವಿಲ್ಲ.



ತಸ್ಲಿಮಾ ನಸ್ರೀನ್, ಲೇಖಕಿ

ಕಿಡಿನುಡಿ

ಹನಿಗವನ: ಮೊಸರಿಲ್ಲದೆ ಯಜಮಾನರಿಗೆ ಒಳಹೋಗದು ಯಾವುದೇ ಆಹಾರ. ಗೃಹಿಣಿಯರ ಈ ಬವಣೆಗೆ ಕಂಡುಕೊಂಡರು ಮೋದಿ, ಜಿಎಸ್‌ಟಿ ಒಂದೇ ಶಾಶ್ವತ ಪರಿಹಾರ!



ರೋಹಿತ್ ಸಿಂಹ, ಎಂಜಿನಿಯರ್

25 ವರ್ಷಗಳ ಹಿಂದೆ

ಭಾನುವಾರ, 20-7-1997

● **'ಕೃಷ್ಣಾ ನೀರು ಬಳಕೆ ಅವಧಿ ವಿಸ್ತರಣೆಗೆ ಮನವಿ ಇಲ್ಲ'**

ಬೆಳಗಾವಿ, ಜುಲೈ 19– ಕೃಷ್ಣಾ ನದಿ ನೀರಿನ ಬಳಕೆಗೆ ಬಚಾವತ್ ಆಯೋಗ ವಿಧಿಸಿರುವ 2,000ನೇ ಇಸವಿ ಮಿತಿಯನ್ನು ವಿಸ್ತರಿಸುವಂತೆ ಕರ್ನಾಟಕ ಸರ್ಕಾರ ಕೇಳುವುದಿಲ್ಲ ಎಂದು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವ ಕೆ.ಎನ್. ನಾಗೇಗೌಡ ಇಂದು ಹಿಡಕಲ್‌ನಲ್ಲಿ ಸ್ಪಷ್ಟಪಡಿಸಿದರು.

ಘಟಪ್ರಭಾ ಜಲಾಶಯದ ತಟದಲ್ಲಿನ ಹುನ್ನೂರು ಪ್ರವಾಸಿ ಮಂದಿರದಲ್ಲಿ ವರದಿಗಾರರ ಜೊತೆ ಮಾತನಾಡುತ್ತಿದ್ದ ಅವರು, 'ಬದಲಿಗೆ ಕರ್ನಾಟಕದ ಪಾಲಿನ 734 ಟಿ.ಎಂ.ಸಿ ಅಡಿಗಿಂತ ಹೆಚ್ಚುವರಿ ನೀರನ್ನು ಹಂಚಿಕೊಳ್ಳುವ ಕುರಿತು ಆಂಧ್ರದ ಮುಖ್ಯಮಂತ್ರಿಯವರು ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ಜೊತೆಗೆ ಮಾತುಕತೆಗೆ ಮುಂದಾಗಬೇಕು' ಎಂದು ಕರೆ ನೀಡಿದರು.

ಕೃಷ್ಣಾ ನದಿ ಮತ್ತು ಅದರ ಉಪನದಿಗಳು ಸೇರಿ ಈ ಶತಮಾನದ ಅಂತ್ಯದವರೆಗೆ 734 ಟಿ.ಎಂ.ಸಿ ಅಡಿ ನೀರನ್ನು ಬಳಸಿಕೊಳ್ಳಬೇಕು ಎಂದು ಬಚಾವತ್ ಆಯೋಗ ತೀರ್ಪು ನೀಡಿದೆ.

50 ವರ್ಷಗಳ ಹಿಂದೆ

ಗುರುವಾರ, 20-7-1972

● **'ಕಂಡಲ್ಲಿ ಗುಂಡು'– ನಕ್ಸಲೀಯ ಹಿಂಸಾಚಾರ ಮೆಟ್ಟಿಹಾಕಲು ಪ. ಬಂಗಾಳ ಸರ್ಕಾರದ ಆಜ್ಞೆ**

ಕಲ್ಕತ್ತ, ಜುಲೈ 19– ನಕ್ಸಲೀಯರ ಹಿಂಸಾಚಾರದ ಪರಿಣಾಮವಾಗಿ ಇಂದು ನಗರದಲ್ಲಿ ಇನ್ನೂ ಒಬ್ಬ ಕಾನ್‌ಸ್ಟೆಬಲ್ ಬಲಿಯಾದುದರಿಂದ, ಕೊಲೆಗಾಗಿ ಯಾರಾದರೂ ಪ್ರಯತ್ನ ನಡೆಸುವುದು ಕಂಡು ಬಂದರೆ ತತ್‌ಕ್ಷಣ ಅಂತಹವರ ಮೇಲೆ ಗುಂಡು ಹಾರಿಸುವಂತೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸಿದ್ಧಾರ್ಥ ಶಂಕರರಾಯ್ ಅವರು ಪೊಲೀಸರಿಗೆ ಆಜ್ಞೆ ಮಾಡಿದ್ದಾರೆ.

ನಕ್ಸಲೀಯ ನಾಯಕ ಚಾರು ಮಜುಂದಾರ್ ಅವರ ಬಂಧನದ ನಂತರ ನಕ್ಸಲೀಯರ ಚಟುವಟಿಕೆಗಳು ಮತ್ತೆ ಸಿಡಿದೆದ್ದಿರುವುದರ ಹಿನ್ನೆಲೆಯಲ್ಲಿ, ರಾಜ್ಯ ಸಂಪುಟದ ವಿಶೇಷ ಸಭೆಯು ಇಂದು ಕಾನೂನು ಮತ್ತು ಶಿಸ್ತು ಪರಿಸ್ಥಿತಿಯನ್ನು ಪರಿಶೀಲಿಸಿದ ನಂತರ ರಾಯ್ ಅವರು ಈ ಆಜ್ಞೆ ನೀಡಿದರು.

ಕಲ್ಕತ್ತ ಸಶಸ್ತ್ರ ಪೊಲೀಸ್ ಪಡೆಯ ಒಬ್ಬ ಹವಾಲ್ದಾರ್ ನಕ್ಸಲೀಯರಿಗೆ ನಿನ್ನೆ ಬಲಿಯಾದ.

ಜಿಡಿಪಿಯ ಕನ್ನಡಿಯಲ್ಲಿ ಏನೋ ಐಬಿದೆ ಎಂದು ಹಲವರಿಗೆ ಅನ್ನಿಸಿದೆ

ಬೆಳವಣಿಗೆಯ ಮಾಪಕ: ಒಂದು ಜಿಜ್ಞಾಸೆ



ವಿಶ್ಲೇಷಣೆ

ವೇಣುಗೋಪಾಲ್ ಟಿ.ಎಸ್.

ಜಿಡಿಪಿಯಲ್ಲಿ ಶೇಕಡ 2ರಷ್ಟು ಕುಸಿತ ಅಥವಾ ಶೇಕಡ 10ರಷ್ಟು ಹೆಚ್ಚಳ ಎನ್ನುವಂತಹ ಸುದ್ದಿಯನ್ನು ಆಗಾಗ್ಗೆ ಓದುತ್ತಲೇ ಇರುತ್ತೇವೆ. ಜಿಡಿಪಿಯ ಕನ್ನಡಿಯಲ್ಲಿ ನಮ್ಮ ಪ್ರಗತಿಯ ಬಿಂಬವನ್ನು ನೋಡಿಕೊಂಡು ಮುಖತಿರುವ ಉಲ್ಲಸಿತರೋ ಅಳುತ್ತಿರುತ್ತೇವೆ. ಜಿಡಿಪಿ ಹೆಚ್ಚಾದರೆ, ಏನೋ ಸಾಧಿಸಿಬಿಟ್ಟೆವು ಎಂದು ಬೀಗುತ್ತೇವೆ. ಬಿದ್ದಾಗ, ಏನೇನೋ ಕಾರಣ ಕೊಟ್ಟು ಸಮರ್ಥಿಸಿಕೊಳ್ಳುತ್ತೇವೆ. ಆದರೆ ಆ ಕನ್ನಡಿಯಲ್ಲಿ ಏನೋ ಐಬಿದೆ, ಅಲ್ಲಿ ಕಾಣುತ್ತಿರುವ ಚಿತ್ರ ಹಾಗೂ ಜನರ ವಾಸ್ತವದ ಅನುಭವ ಎರಡೂ ಬೇರೆ ಎಂದು ಹಲವರಿಗೆ ಅನ್ನಿಸಿದೆ.

ಜಿಡಿಪಿ ಅಂದರೆ 'ಗ್ರಾಸ್ ಡೊಮೆಸ್ಟಿಕ್ ಪ್ರಾಡಕ್ಟ್' (ನಿವ್ವಳ ಆಂತರಿಕ ಉತ್ಪನ್ನ) ಅನ್ನುವುದು ಅನಾದಿಕಾಲದಿಂದ ಇದ್ದ ಕಲ್ಪನೆಯೇನೂ ಅಲ್ಲ ಎನ್ನುವುದನ್ನು ಮಾತನಾಡುತ್ತಿದ್ದೇವೆ. ಆದರೆ ಅದು ತೀರಾ ಇತ್ತೀಚಿನ ಕಲ್ಪನೆ. ಮಹಾನ್ ಆರ್ಥಿಕ ಕುಸಿತವನ್ನು ಎದುರಿಸುವ ಸಲುವಾಗಿ 1930ರಲ್ಲಿ ಹುಟ್ಟಿಕೊಂಡಿತು. ಅದಕ್ಕಿಂತ ಮೊದಲು 'ಆರ್ಥಿಕತೆ' ಎನ್ನುವ ಪರಿಕಲ್ಪನೆ ಇರಲಿಲ್ಲ. ಆರ್ಥಿಕ ಪ್ರಗತಿ ಎಂದರೆ ಜನ ಮಾತನಾಡುತ್ತಿರಲಿಲ್ಲ. ಮಳೆ ಬಂದರೆ ಬೆಳೆ. ದೇಶದ ಸಂಪತ್ತು ಅಂದರೆ ರಾಜನ ಸಂಪತ್ತು. ಯುದ್ಧದಲ್ಲಿ ಗೆದ್ದರೆ ಸಂಪತ್ತು ಬೆಳೆಯುತ್ತಿತ್ತು. ಈಗಿನಂತೆ ದೇಶದ ಸಂಪತ್ತನ್ನು ಲೆಕ್ಕ ಹಾಕುವ ಪರಿಪಾಟವೇ ಇರಲಿಲ್ಲ. ಯುದ್ಧ ಮಾಡುವುದಕ್ಕೆ ತಮ್ಮಲ್ಲಿರುವ ದುಡ್ಡು ಸಾಕೋ ಇಲ್ಲವೋ ಎನ್ನುವುದು ಗೊತ್ತಾದರೆ ಸಾಕಿತ್ತು.

1930ರ ಆರ್ಥಿಕ ಕುಸಿತವು ಸರ್ಕಾರವನ್ನು ಕಂಗೆಡಿಸಿತು. ಅದಕ್ಕೆ ಪರಿಹಾರ ಕಂಡುಕೊಳ್ಳಬೇಕಾದರೆ ದೇಶದಲ್ಲಿ ಏನಾಗುತ್ತಿದೆ ಅನ್ನುವುದು ಗೊತ್ತಿರಬೇಕಿತ್ತು, ಆರ್ಥಿಕ ಚಟುವಟಿಕೆಗಳನ್ನು ಅರ್ಥಮಾಡಿಕೊಳ್ಳುವುದು ಅವಶ್ಯಕವಾಯಿತು. ಆಗ ದೇಶದ ಸಂಪತ್ತನ್ನು ಲೆಕ್ಕ ಹಾಕುವ ಪ್ರಯತ್ನ ಮೊದಲಿಗೆ ನಡೆಯಿತು. ಇದರ ಜವಾಬ್ದಾರಿಯನ್ನು ಸೈಮನ್ ಕುಜ್ನೆಟ್ಸ್‌ಗೆ ಅಮೆರಿಕದ ಅಧ್ಯಕ್ಷ ಹರ್ಬರ್ಟ್ ಹೂವರ್ ವಹಿಸಿದರು. ಕುಜ್ನೆಟ್ಸ್ ಎಲ್ಲ ಆರ್ಥಿಕ ಚಟುವಟಿಕೆಗಳನ್ನು ಕ್ರೋಡೀಕರಿಸಿ ಒಂದು ಸಂಖ್ಯೆಗೆ ಇಳಿಸಿದರು. ಅದಕ್ಕಾಗಿ ತಂಡವೊಂದನ್ನು ಕಟ್ಟಿಕೊಂಡು, ಅಮೆರಿಕದ ಉದ್ದಗಲಕ್ಕೂ ಸುತ್ತಿ, ರೈತರು ಏನು ಬೆಳೆಯುತ್ತಾರೆ, ಉದ್ಯಮಿಗಳು ಏನು ತಯಾರಿಸುತ್ತಾರೆ ಎಂಬ ಮಾಹಿತಿಯನ್ನು ಸಂಗ್ರಹಿಸಿದರು.

ಜನರ ಒಳಿತಿಗೆ ಪೂರಕವಾದ ಆರ್ಥಿಕ ಚಟುವಟಿಕೆಗಳನ್ನು ಮಾತ್ರ ರಾಷ್ಟ್ರೀಯ ವರಮಾನದ ಲೆಕ್ಕಾಚಾರದಲ್ಲಿ ಸೇರಿಸಬೇಕು ಅನ್ನುವುದು ಅವರ ಅಭಿಪ್ರಾಯವಾಗಿತ್ತು. ಹಾಗಾಗಿ, ಯುದ್ಧ ಒಳ್ಳೆಯದಲ್ಲ, ಅದರ ವೆಚ್ಚವನ್ನು ಸೇರಿಸಬಾರದೆಂದು ವಾದಿಸಿದ್ದರು. ಅದು ನಡೆಯಲಿಲ್ಲ. ಯುದ್ಧದ ಖರ್ಚು, ಅಫೀಮು, ಮತ್ತೇನೇನೋ ರಾಷ್ಟ್ರೀಯ ವರಮಾನದ ಲೆಕ್ಕಾಚಾರದಲ್ಲಿ ಸೇರಿಕೊಂಡವು. ಕುಜ್ನೆಟ್ಸ್ ಹುಟ್ಟುಹಾಕಿದ ಜಿಡಿಪಿ ಇಂದು ಜಗತ್ತನ್ನೇ ಆವರಿಸಿಕೊಂಡಿದೆ.

ಏನಿದು ಜಿಡಿಪಿ? ಅದು ಆ ವರ್ಷ ರಾಷ್ಟ್ರದಲ್ಲಿ ತಯಾರಾದ ಎಲ್ಲಾ ಸರಕು, ಸೇವೆಗಳ ಒಟ್ಟು ಮೊತ್ತ. ಜಿಡಿಪಿಯು ಮಾರುಕಟ್ಟೆಯ ವ್ಯವಹಾರಗಳನ್ನು ಮಾತ್ರ ಪರಿಗಣಿಸುತ್ತದೆ. ಹಣ ವಿನಿಮಯವಿಲ್ಲದ ಯಾವ ವ್ಯವಹಾರವೂ ಇದರಲ್ಲಿ ಸೇರುವುದಿಲ್ಲ. ಮಹಿಳೆಯರ ಮನೆಗೆಲಸ, ಹಳ್ಳಿಗಳಲ್ಲಿ ಮೈಲುಗಟ್ಟಲೆ ನಡೆದು ನೀರನ್ನು ಹೊತ್ತು ತರುವ ಶ್ರಮ ಇಂಥವೆಲ್ಲಾ ಇದರಲ್ಲಿ ಸೇರುವುದಿಲ್ಲ. ಆದರೆ ಮಾಲ್‌ಗಳಲ್ಲಿ ಮಾರುವ ಬಾಟಲಿ ನೀರು, ಹಾಲಿನಪುಡಿ ಇವೆಲ್ಲಾ ಸೇರುತ್ತವೆ. ಇವೆಲ್ಲ ದೇಶದ ಸಂಪತ್ತನ್ನು ಹೆಚ್ಚಿಸುತ್ತವೆ. ಕಾಡಿನ ಮರ ರಾಷ್ಟ್ರೀಯ ಸಂಪತ್ತಾಗಬೇಕಾದರೆ ಅದನ್ನು ಕಡಿದು ಪೀಠೋಪಕರಣ ಮಾಡಿ ಮಾರಬೇಕು. ಡ್ರಗ್ ವ್ಯಾಪಾರ, ವೇಶ್ಯಾವಾಟಿಕೆಯು ದೇಶದ ಜಿಡಿಪಿಯನ್ನು ಹೆಚ್ಚಿಸುತ್ತವೆ. ಆದರೆ ಸರ್ಕಾರಿ ಶಾಲೆಗಳು, ಆಸ್ಪತ್ರೆಗಳ ಸೇವೆಯು ರಾಷ್ಟ್ರೀಯ ವರಮಾನದಲ್ಲಿ ಸೇರಬೇಕಾದರೆ ಅವುಗಳಿಂದ ದುಬಾರಿ ಶುಲ್ಕ ವಸೂಲಿ ಮಾಡಬೇಕು. ಅಂದರೆ ಜನರಿಗೆ ಎಟುಕದಂತೆ ಮಾಡಬೇಕು. ಬದುಕಿಗೆ ಅರ್ಥಪೂರ್ಣವಾದದ್ದನ್ನು ಬಿಟ್ಟು ಉಳಿದದ್ದೆಲ್ಲವನ್ನೂ ಜಿಡಿಪಿ ಅಳೆಯುತ್ತದೆ.

ಬೆಳವಣಿಗೆ ಅಂದರೆ ನಿರಂತರವಾಗಿ ಉತ್ಪಾದನೆ ಆಗುತ್ತಿರಬೇಕು. ಬೇಕೋ ಬೇಡವೋ ಜನ ಅವುಗಳನ್ನು ಕೊಳ್ಳುತ್ತಲೇ ಇರಬೇಕು. ಅವರಿಗಾ ಬೇಕೆ ಬೇಕು ಎಂದು ಜಾಹೀರಾತುಗಳು ನಂಬಿಸಿ. ಇಷ್ಟಾದರೂ ಬೇಡಿಕೆಯ ಕೊರತೆಯೇ ನಮ್ಮ ಆರ್ಥಿಕ ಬಿಕ್ಕಟ್ಟಿಗೆ ಕಾರಣ ಎನ್ನುತ್ತೇವೆ. ಹಾಗಾದರೆ ಜನ ಇನ್ನೇನು ಕೊಳ್ಳಬೇಕೆಂದು ದಿಗಿಲಾಗುತ್ತದೆ. ಆಧುನಿಕ ಅರ್ಥಶಾಸ್ತ್ರ ನಿಂತಿರುವುದೇ ಮಾನವನ ಇಂಗದ ಆಸೆಗಳ ಮೇಲೆ. ಇದೊಂದು ಹುಚ್ಚು ಅನ್ನುವುದು ನಮ್ಮ ಅಂತರಾತ್ಮಕ್ಕೆ ಗೊತ್ತು. ನಿರಂತರ ವಿಸ್ತರಣೆಯನ್ನು ಒಳ್ಳೆಯ ಬೆಳವಣಿಗೆಯಾಗಿ ನೋಡುವುದು ಅರ್ಥಶಾಸ್ತ್ರದಲ್ಲಿ ಮಾತ್ರ. ಜೀವಶಾಸ್ತ್ರದಲ್ಲಿ ಇದನ್ನು ಕ್ಯಾನ್ಸರ್ ಅನ್ನುತ್ತಾರೆ.

ಸರ್ಕಾರಗಳು ಬೆಳವಣಿಗೆಯನ್ನು ಗರಿಷ್ಠಗೊಳಿಸುವುದಕ್ಕಾಗಿಯೇ ನಿಯಮಗಳು, ಯೋಜನೆಗಳನ್ನು ರೂಪಿಸುತ್ತವೆ. ಸಂಪತ್ತು ಹೇಗೆ ವಿತರಣೆಯಾಗುತ್ತಿದೆ ಅನ್ನುವುದನ್ನು ಜಿಡಿಪಿ ಹೇಳುವುದಿಲ್ಲ. ಪರಿಸರ ಮಾಲಿನ್ಯ, ಅಸಮಾನತೆ ಅದಕ್ಕೆ ಸಮಸ್ಯೆಗಳಲ್ಲ. ಮುಂದಿನ ಪೀಳಿಗೆಯ ಗುಡಿಸಲುಗಳ ಮಧ್ಯದಲ್ಲಿ ಭವ್ಯ ಬಂಗಲೆಯನ್ನು ನೋಡಿ ಬೀಗುತ್ತೇವೆ.

ಹೀಗೆ, ಜಿಡಿಪಿಯ ಬಗ್ಗೆ ಹಲವು ತಕರಾರುಗಳು ಸಾಧ್ಯ. ಅವನ್ನು ಸುಧಾರಿಸುವ ಹಲವು ಪ್ರಯತ್ನಗಳಾಗಿವೆ. ಪರಿಸರಕ್ಕೆ ಮಹತ್ವ ಕೊಡಬೇಕೆಂಬ ಕಾರಣಕ್ಕೆ ಚೀನಾದ ನಿಯಂ ವೆನ್‌ಯುವಾನ್ ಹಸಿರು ಜಿಡಿಪಿಯ ಪರಿಕಲ್ಪನೆಯನ್ನು ಮುಂದಿಟ್ಟಿದ್ದಾರೆ. ಭೂತಾನ್‌ನಂತಹ ದೇಶಗಳಲ್ಲಿ ಜನರ ಸಂತೋಷವನ್ನು ಆಧರಿಸಿ ದೇಶದ ಬೆಳವಣಿಗೆಯನ್ನು ಅಳೆಯುವ ಪ್ರಯತ್ನ ನಡೆದಿದೆ. ಜನರ ಕಲ್ಯಾಣವನ್ನು ಗಮನದಲ್ಲಿ ಇಟ್ಟುಕೊಂಡು ಮಾನವ ಅಭಿವೃದ್ಧಿ ಸೂಚಿಯನ್ನು ಸೂಚಿಸಲಾಗಿದೆ. ಇವೆಲ್ಲದರ ನಡುವೆ ಜಿಡಿಪಿಯ ಆಧಿಪತ್ಯ ಮುಂದುವರಿದೇ ಇದೆ.



ಜಿಡಿಪಿಗಿಂತ 'ರಾಷ್ಟ್ರೀಯ ವರಮಾನ' ಪರಿಕಲ್ಪನೆಯು ಒಳ್ಳೆಯ ಮಾಪಕ ಅನ್ನುತ್ತಾರೆ ಥಾಮಸ್ ಪಿಕೆಟ್ಟಿ. ಏಕೆಂದರೆ, ಅದರಲ್ಲಿ ಯಂತ್ರಗಳ ಸವಕಲು, ನೈಸರ್ಗಿಕ ಸಂಪನ್ಮೂಲ ಇವೆಲ್ಲವನ್ನೂ ಕಳೆಯಲಾಗುತ್ತದೆ. ಉದಾಹರಣೆಗೆ, ದೇಶದಲ್ಲಿ ಲಕ್ಷ ಕೋಟಿ ಡಾಲರ್ ಮೌಲ್ಯದ ಪೆಟ್ರೋಲ್ ತೆಗೆಯಲಾಗುತ್ತದೆ ಎಂದು ಭಾವಿಸಿಕೊಳ್ಳಿ. ಜಿಡಿಪಿ ಅದಕ್ಕೆ ತಕ್ಕಂತೆ ಹೆಚ್ಚುತ್ತದೆ. ಆದರೆ ರಾಷ್ಟ್ರೀಯ ವರಮಾನ ಕಡಿಮೆಯಾಗುತ್ತದೆ. ಯಾಕೆಂದರೆ ಅಷ್ಟೇ ಪ್ರಮಾಣದಲ್ಲಿ ನೈಸರ್ಗಿಕ ಸಂಪನ್ಮೂಲ ಕಡಿಮೆಯಾಗುತ್ತದೆ. ಜೊತೆಗೆ ಅದರಿಂದಾಗುವ ಪರಿಸರದ ಹಾನಿಯೂ ಸೇರಿಕೊಳ್ಳುತ್ತದೆ. ಆದರೆ ಹಣದ ರೂಪದಲ್ಲಿ ಪರಿಸರಹಾನಿ ಲೆಕ್ಕ ಹಾಕುವುದರಲ್ಲಿ ಒಂದು ಅಪಾಯವಿದೆ. ಅಂತಹ ನಷ್ಟವನ್ನು ಹಣದಿಂದ ಭರಿಸಬಹುದೆಂಬ ಭ್ರಮೆ ಸೃಷ್ಟಿಯಾಗುತ್ತದೆ. ಅದರ ಬದಲು, ಪರಿಸರದಲ್ಲಿನ ಇಂಗಾಲಾಮ್ಲದ ಪ್ರಮಾಣಕ್ಕೆ ಮಿತಿ ಹಾಕುವುದು ಒಳ್ಳೆಯದು. ಹಾಗೆಯೇ ಯಾರಿಂದ, ಯಾವ ಪ್ರಮಾಣದಲ್ಲಿ ಪರಿಸರ ಹಾಳಾಗುತ್ತದೆ ಎನ್ನುವುದನ್ನೂ ಗಮನಿಸಬೇಕು. ಜೊತೆಗೆ ಕೇವಲ ಪರಿಸರಕ್ಕೆ ಸೀಮಿತ ಮಾಡಿಕೊಂಡರೆ ಸಾಲುವುದಿಲ್ಲ. ಆರ್ಥಿಕ, ಸಾಮಾಜಿಕ ಸೂಚ್ಯಂಕಗಳನ್ನೂ ಗಮನಿಸಬೇಕು.

ವಾಸ್ತವ ಜಗತ್ತಿಗೆ ಹಲವು ಆಯಾಮಗಳಿರುತ್ತವೆ. ಅವುಗಳನ್ನೆಲ್ಲಾ ಕ್ರೋಡೀಕರಿಸಿ ಒಂದು ಸಂಖ್ಯೆಗೆ ಇಳಿಸಲು ಪ್ರಯತ್ನಿಸಿದರೆ ಎಷ್ಟೋ ಮಾಹಿತಿಗಳನ್ನು ಕಳೆದುಕೊಳ್ಳುತ್ತೇವೆ. ಹಾಗಾಗಿ ನೀತಿಗಳನ್ನು ರೂಪಿಸುವವರು ಜಿಡಿಪಿ (ಅಥವಾ ರಾಷ್ಟ್ರೀಯ ವರಮಾನ) ಜೊತೆಗೆ ಇನ್ನಿತರ ಪ್ರಮುಖ ಸೂಚಿಗಳನ್ನೂ ಗಮನಿಸುವುದು ಹೆಚ್ಚು ಸೂಕ್ತ. ಹವಾಮಾನ ಬದಲಾವಣೆ ಹಾಗೂ ಅದರ ಪರಿಣಾಮ, ಸಂಪತ್ತು ಹಾಗೂ ವರಮಾನದ ಅಸಮಾನತೆ, ಆರೋಗ್ಯ, ಶಿಕ್ಷಣ, ಮಹಿಳೆಯರ ದುಡಿಮೆ, ಮಾರುಕಟ್ಟೆಯಲ್ಲಿನ ಕೂಲಿ ದರ, ಪೌಷ್ಟಿಕ ಆಹಾರವನ್ನು ಕೊಳ್ಳುವ ಜನರ ಸಾಮರ್ಥ್ಯ ಇವೆಲ್ಲವೂ ದೇಶದ ಬೆಳವಣಿಗೆಯ ದೃಷ್ಟಿಯಿಂದ ಮುಖ್ಯವಾಗುತ್ತವೆ.

ಇವೆಲ್ಲವನ್ನೂ ಅರ್ಥಮಾಡಿಕೊಳ್ಳುವುದಕ್ಕೂ ಸರಳವಾದ ಕ್ರಮವನ್ನು ಅನುಸರಿಸುವುದು ಒಳ್ಳೆಯದು. ಉದಾಹರಣೆಗೆ, ಶೇಕಡ 50ರಷ್ಟು ಕಡು ಬಡವರಿಗೆ ಎಷ್ಟು ಸಂಪತ್ತು ಹಂಚಿಕೆಯಾಗುತ್ತದೆ ಮತ್ತು ಮೇಲಿನ ಶೇಕಡ 10ರಷ್ಟು ಅತ್ಯಂತ ಶ್ರೀಮಂತರಿಗೆ ಎಷ್ಟು ಹರಿದು ಹೋಗುತ್ತದೆ ಎನ್ನುವುದರ ಮೂಲಕ ಅಸಮಾನತೆಯನ್ನು ಅರ್ಥಮಾಡಿಕೊಳ್ಳುವುದು ಒಳ್ಳೆಯದು.

ಇವೆಲ್ಲವನ್ನೂ ಒಟ್ಟೊಟ್ಟಿಗೇ ಗಮನಿಸಿದರೆ, ಬೆಳವಣಿಗೆಯನ್ನು ನೋಡುವ ಕ್ರಮವೇ ಬದಲಾಗುತ್ತದೆ. ಜಾಗತಿಕ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ರೂಪಿಸುವ ನೀತಿಗಳೂ ಬದಲಾಗಬಹುದು. ಹೆಚ್ಚು ಸಮಾನ ಸಮಾಜವನ್ನು ರೂಪಿಸಲು ಸಾಧ್ಯವಾಗಬಹುದು. ನಮ್ಮ ದೃಷ್ಟಿಕೋನ ವಿಶಾಲವಾದಷ್ಟೂ ಬದುಕಿನ ವಾಸ್ತವ ಹೆಚ್ಚು ಚೆನ್ನಾಗಿ ಅರ್ಥವಾಗುತ್ತದೆ. ಇದು ನಮ್ಮ ಅರ್ಥಶಾಸ್ತ್ರಜ್ಞರ ಭಾವಕೋಶದೊಳಕ್ಕೆ ಹೊಕ್ಕರೆ, ಅವರು ರೂಪಿಸುವ ನೀತಿಗಳಿಂದ ಜನರಿಗೆ ಹೆಚ್ಚು ನೆಮ್ಮದಿ ಸಿಗುತ್ತದೆ.

ಚುರುಮುರಿ



ಚಿಣ್ಣರೇ ಸ್ಫೂರ್ತಿ

● ನಾರಾಯಣ ರಾಯಚೂರ್

'ಹಲೋ... ನಮಸ್ಕಾರ... ಲಾಯರ್ ಲಕ್ಷ್ಮಿಕಾಂತ್ ಅವರಲ್ಲವಾ?'

'ಹ್ಞಾಂ... ಹೌದು... ನೀವು?'

'ಸಾರ್, ತಾವು ತುಂಬಾ ಫೇಮಸ್ಸು, ತುಂಬಾ ಕಾಸ್ಟ್ಲಿ. ಮೂರು ಪ್ರಶ್ನೆಗೇ ಆರು ಸಾವಿರ ರೂಪಾಯಿ ತಗೊತೀರಂತೆ?!'

'ಹೌದು, ನಿಮ್ಮ ಎರಡನೇ ಪ್ರಶ್ನೆ ಏನು?'

'ಹ್ಞಾಂ! ಒಂದು ಪ್ರಶ್ನೆ ಆಗಿಹೋಯ್ತಾ?! ನನ್ನ ಹೆಸರು ಬದಲಾಯಿಸಬೇಕಿತ್ತು. ಜಿ.ಎಸ್. ತಿಮ್ಮೇಶ್ ಅಂತ ನನ್ನ ಹೆಸರು. ಎಲ್ಲರೂ ನನ್ನನ್ನ ಜಿಎಸ್‌ಟಿ ಅಂತ ಶಾರ್ಟ್ ಆಗಿ ಕರೀತಾರೆ. ಆದ್ರೆ ಸರ್ಕಾರದವ್ರು ಈ ಜಿಎಸ್‌ಟಿ ಜಾರಿ ಮಾಡಿದ್ಮೇಲೆ ನನ್ನನ್ನ ದ್ವೇಷಿಸೋರೆ ಜಾಸ್ತಿ ಆಗಿಬಿಟ್ಟಿದ್ದಾರೆ ಸಾರ್...'

'ಬರೀ ಹೆಸರು ಚೇಂಜ್ ಮಾಡೋದ್ರಿಂದ ಸಮಸ್ಯೆ ಬಗೆಹರಿಯಲ್ಲ. ಹಾಸ್ಯಮಾತುಗಾರ ವೈ.ಎಂ.ಎನ್.ಮೂರ್ತಿ ಅವರು ಹೇಳೋರು- 'ಒಬ್ಬರು ಹುಚ್ಚುರಾವ್ ಅಂತ, ಮನೆ ಮುಂದೆ ಬೋರ್ಡ್ ಬರೆಸಿದ್ರಂತೆ. ಮಕ್ಕಳು ಪ್ರತಿದಿನ ಆ ಬೋರ್ಡ್ ಜೋರಾಗಿ ಓದಿಕೊಂಡು ತಮಾಷೆ ಮಾಡ್ಕೊಂಡು ಹೋಗ್ತಿದ್ರಂತೆ. ಅವರಿಗೆ ಬೇಜಾರಾಗಿ 'ಹೆಚ್.ರಾವ್' ಅಂತ ಚೇಂಜ್ ಮಾಡ್ಸಿ ಹಾಕಿದ್ರಂತೆ. ಮಾರನೇ ದಿನ ಹುಡುಗ್ರು ಬೋರ್ಡ್ ನೋಡಿ ಇನ್ನೂ ಗಟ್ಟಿಯಾಗಿ ನಗ್ತಾ 'ಹುಚ್ಚು ಹೆಚ್ ಆಗಿದೆ, ಹುಚ್ಚು ಹೆಚ್ಚಾಗಿದೆ!' ಅಂತ ನಗಾಡಿದ್ರಂತೆ.

'ಜೋಕ್ ಚೆನ್ನಾಗಿದೆ, ಈ ಜೋಕು ಫ್ರೀ ತಾನೇ ಸಾರ್?! ಚೇಂಜ್ ಮಾಡಿಬಿಡಿ ಸಾರ್ ಹೆಸರು'.

'ಆಗ್ಲಿ, ಸಂಜೆ ಬನ್ನಿ, ನನಗೀಗ ಡೆಲ್ಲಿಯಿಂದ ಸುಪ್ರೀಂ ಕೋರ್ಟ್ ಲಾಯರ್ ಕರೆ ಬರ್ತಾಯಿದೆ'.

'ಒಂಬತ್ತು ಗಂಟೆಗೇ ಶುರುವಾಗೋಯ್ತಾ ಸಾರ್ ಕೋರ್ಟು?'

'ಪೇಪರ್ ನೋಡ್ಲಿಲ್ಲವೇನ್ರಿ? 'ಸುಪ್ರೀಂ' ಸಮಯಪ್ರಜ್ಞೆಗೆ ಚಿಣ್ಣರೇ ಸ್ಫೂರ್ತಿ. ಮಕ್ಕಳೇ ಬೆಳಿಗ್ಗೆ ಏಳು ಗಂಟೆಗೆ ಶಾಲೆಗೆ ಹೊರಡ್ತಾರೆ ಎಂದಾದ್ರೆ ನ್ಯಾಯಮೂರ್ತಿಗಳು, ವಕೀಲರು ಒಂಬತ್ತು ಗಂಟೆಗೆ ಯಾಕೆ ಕೆಲಸ ಶುರು ಮಾಡಬಾರದು ಎಂದಿದ್ದಾರೆ ನ್ಯಾಯಮೂರ್ತಿಗಳು. ನೋಡ್ರಿ... ಮಕ್ಕಳೇ ಮಾದರಿಯಾಗ್ತಿದಾರೆ'.

'ನಮ್ಮ ಮಕ್ಕಳು, ಯುವಕರು ಮಾದರಿ ಆಗಿಯೇ ಇದ್ದಾರೆ ಸಾರ್, ನಮ್ಮ ನಾಯಕರು, ಜನಪ್ರತಿನಿಧಿಗಳು ಮಾದರಿಯಾಗಿಬಿಟ್ಟರೆ...!'

ಸಂಗತ

ನೆನಪು ಮಧುರ, ಆದರೆ...

ಹತ್ತಾರು ವರ್ಷ ಒಂದು ಉದ್ಯೋಗದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದಾಗ ಭಾವನೆಗಳ ಬಲೆಯಿಂದ ಬಿಡಿಸಿಕೊಳ್ಳುವುದು ಸುಲಭದ ಮಾತಲ್ಲ

● ಡಾ. ಶ್ರೀಕಾಂತ್ ಸಿದ್ದಾಪುರ

ಕೆಲವು ವರ್ಷಗಳ ಹಿಂದಿನ ಪ್ರಕರಣ. ಚುನಾವಣಾ ಕರ್ತವ್ಯ. ಮತಗಟ್ಟೆ ಅಧ್ಯಕ್ಷಾಧಿಕಾರಿಯಾಗಿ ಅವರಿಗೆ ಹೊಣೆ. ಮತದಾನಕ್ಕಾಗಿ ಒಬ್ಬರು ಮತಗಟ್ಟೆಯನ್ನು ಪ್ರವೇಶಿಸಿದರು. ಅವರ ಪ್ರಾಯ ಅರವತ್ತು ಮೀರಿತ್ತು. ಅದಾಗಲೇ ಮತಗಟ್ಟೆಯಲ್ಲಿ ಸರದಿ ಸಾಲಿತ್ತು. ಈ ವ್ಯಕ್ತಿ ನೇರವಾಗಿ ಒಳಗೆ ಪ್ರವೇಶಿಸಲು ಮುಂದಾದಾಗ, ಸರದಿಯಲ್ಲಿ ಬರುವಂತೆ ಅಲ್ಲಿದ್ದ ಅಧಿಕಾರಿಯೊಬ್ಬರು ವಿನಂತಿಸಿದರು. ಆ ಮನುಷ್ಯನ ತಾಳ್ಮೆ ಸ್ವಲ್ಪಮಟ್ಟಿಗೆ ತಪ್ಪಿದಂತೆ ಕಾಣಿಸಿತು. 'ನಾನೂ ಒಬ್ಬ ಅಧಿಕಾರಿಯಾಗಿದ್ದವನು. ಅಧಿಕಾರದಲ್ಲಿದ್ದಾಗ ಹತ್ತಾರು ಚುನಾವಣಾ ಕರ್ತವ್ಯಗಳನ್ನು ನಿರ್ವಹಿಸಿದವನು' ಎಂದು ಸ್ವಲ್ಪ ಧ್ವನಿ ಏರಿಸಿ ಮಾತನಾಡಿದರು. ಅಷ್ಟರಲ್ಲಿ ಅಧ್ಯಕ್ಷಾಧಿಕಾರಿ ಬಂದು ಅವರ ಮನವೊಲಿಸಿ ಸರದಿಯಲ್ಲಿ ನಿಲ್ಲಿಸುವಲ್ಲಿ ಯಶಸ್ವಿಯಾದರು.

ನಿವೃತ್ತ ಅಧಿಕಾರಿಯೊಬ್ಬರ ಬಗ್ಗೆ ಇತ್ತೀಚೆಗಷ್ಟೆ ಒಬ್ಬರು ಹೇಳಿದ ಘಟನೆ. ಅವರು ನಿವೃತ್ತರಾಗಿ ಒಂದು ವರ್ಷವಾಗಿರಬಹುದು. ಅವರ ಮಾತಿನಲ್ಲಿ ನೋವು ತುಂಬಿದಂತೆ ಕಾಣಿಸುತ್ತಿತ್ತಂತೆ. ಮಾತಿನ ಕೊನೆಗೆ ಹೇಳಿದರಂತೆ. 'ಇಪ್ಪತ್ತಕ್ಕೂ ಹೆಚ್ಚು ವರ್ಷ ದುಡಿದೆ. ನಾನು ಸೇವೆ ಸಲ್ಲಿಸಿದ ಕಚೇರಿಗೆ ಈಗ ಹೋದರೆ ನನ್ನನ್ನು ಮಾತನಾಡಿಸುವವರಿಲ್ಲ'. ಇನ್ನೊಬ್ಬ ನಿವೃತ್ತರ ಅನಿಸಿಕೆ ಇನ್ನೂ ವಿಚಿತ್ರ. 'ನಾನೀಗೀಗ ಕಚೇರಿಗೆ ಹೋಗುವುದನ್ನೇ ಬಿಟ್ಟಿದ್ದೇನೆ. ನನ್ನ ಸಹೋದ್ಯೋಗಿಗಳಾಗಿದ್ದವರು ನನ್ನನ್ನು ಅಪರಿಚಿತನಂತೆ ಕಾಣುತ್ತಾರೆ'.

ಕೆಲವು ನಿವೃತ್ತರದ್ದು ಇನ್ನೊಂದು ವಿಧದ ನೋವು. 'ನನ್ನೊಂದಿಗೆ ಕೆಲಸ ಮಾಡಿದ ಅನೇಕರು ಒಂದು ಕಾಲ್ ಮಾಡಿ ಅಪರೂಪಕ್ಕಾದರೂ ಯೋಗಕ್ಷೇಮ ವಿಚಾರಿಸುವುದಿಲ್ಲ. ಕೆಲವೊಮ್ಮೆ ನಾನೇ ಕಾಲ್ ಮಾಡುತ್ತೇನೆ. ಸ್ವೀಕರಿಸುವ ಸೌಜನ್ಯವೂ ಅವರಲ್ಲಿಲ್ಲ'.

ಅನೇಕ ನಿವೃತ್ತರಿಗೆ ಈ ವಿಧದ ಹಲವು ಅನುಭವಗಳು ಆಗಿರುತ್ತವೆ. ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ನಿವೃತ್ತಿಯ ನಂತರವೂ ಕಚೇರಿಯ ಮತ್ತು ಸಹೋದ್ಯೋಗಿಗಳಾಗಿದ್ದವರ ಗುಂಗಿನಲ್ಲಿಯೇ ಅವರು ಕಾಲಕಳೆಯಬೇಕೇ? ಯಾರು ಏನಾದರೂ ಮಾಡಿಕೊಳ್ಳಲಿ, ಅದಕ್ಕೇಕೆ ತಲೆಕೆಡಿಸಿಕೊಳ್ಳಬೇಕು? ಮೇಲ್ನೋಟಕ್ಕೆ ಈ ವಾದ ಸರಿಯೆನಿಸಬಹುದು. ಆದರೆ ಭಾವನಾತ್ಮಕವಾದ ಸಂಬಂಧದ ಪ್ರಶ್ನೆ ಬಂದಾಗ ಈ ವಿಧದ ವಾದಗಳು ಸೋಲಬಹುದು.

ಹತ್ತಾರು ವರ್ಷಗಳ ಕಾಲ ಸೇವೆ ಸಲ್ಲಿಸಿ, ನಿವೃತ್ತರಾದಾಗ ಭಾವನೆಗಳ ಬಲೆಯಿಂದ ಬಿಡಿಸಿಕೊಳ್ಳುವುದು ಸುಲಭದ ಮಾತಲ್ಲ. ನಿವೃತ್ತರಾದಾಗ ಏನನ್ನೋ ಕಳೆದುಕೊಂಡಂತೆ ಶೂನ್ಯ ಭಾವ ಆವರಿಸಬಹುದು. ಸಹೋದ್ಯೋಗಿಗಳೊಂದಿಗೆ ಕಾಫಿ, ಚಹಾ ಹೀರುತ್ತಾ ನೋವು ನಲಿವುಗಳನ್ನು ಹಂಚಿಕೊಂಡ ಆ ದಿನಗಳು ಕಾಡಬಹುದು. ಆ ನೆನಪುಗಳನ್ನು ಮರೆಯಲಾಗದೆ ನಿವೃತ್ತಿಯ ನಂತರವೂ ಮನೆಯಲ್ಲಿಯೇ ಕುಳಿತು ಸಹೋದ್ಯೋಗಿಗಳಾಗಿದ್ದವರ ದೂರವಾಣಿ ಕರೆಗಳ ನಿರೀಕ್ಷೆ ಮಾಡಬಹುದು. ಆ ನಿರೀಕ್ಷೆ ಹುಸಿಯಾದಾಗ, ತನ್ನನ್ನು ಕಡೆಗಣಿಸುತ್ತಿರುವರೋ ಎಂಬ ಸಂದೇಹ ಸಹಜವಾಗಿಯೇ ಅವರಲ್ಲಿ ಮೂಡಬಹುದು.

ಇಂಥದ್ದೊಂದು ಭಾವಪ್ರಪಂಚ ರೂಪುಗೊಳ್ಳಲು ಕಾರಣರಾದವರೇ ಪರಿಹಾರವನ್ನೂ ಕಂಡುಕೊಳ್ಳಬೇಕು. ಅರವತ್ತು ಆಯಿತು ಎಂದಾಕ್ಷಣ ನಿವೃತ್ತಿಗೆ ಮಾನಸಿಕವಾಗಿ ಸಜ್ಜಾಗಬೇಕು. ಸೇವೆಯಲ್ಲಿದ್ದಾಗಿನ ದಿನಗಳ ನೆನಪುಗಳು ಮನಸ್ಸಿಗೆ ಭಾರವಾಗದಂತೆ ನೋಡಿಕೊಳ್ಳಬೇಕು. ನೆನಪುಗಳನ್ನು ಒಮ್ಮೆಗೇ ಅಳಿಸಿಹಾಕಲು ಆಗದಿದ್ದರೂ ನಮ್ಮ ಮನಸ್ಸಿನ ನೆಮ್ಮದಿಯನ್ನು ಕದಡುವಷ್ಟರ ಮಟ್ಟಿಗೆ ಅವುಗಳನ್ನು ಬೆಳೆಯಲು ಬಿಡಬಾರದು. ಹಾಗೆಂದು ಈ ಸಮಸ್ಯೆಗೆ ನಿವೃತ್ತರನ್ನೇ ಪೂರ್ತಿಯಾಗಿ ದೂಷಿಸುವಂತಿಲ್ಲ. ಇದರಲ್ಲಿ ಇತರರದ್ದೂ ಪಾತ್ರವಿದೆ. ತಮ್ಮೊಂದಿಗೆ ಅನೇಕ ವರ್ಷ ದುಡಿದ ಸಹೋದ್ಯೋಗಿಯೊಬ್ಬರು ನಿವೃತ್ತರಾದರು ಎಂದಮಾತ್ರಕ್ಕೆ ಅವರೊಂದಿಗೆ ಏಕಾಏಕಿ ನಂಟು ಕಡಿದುಕೊಳ್ಳುವುದು ಎಷ್ಟು ಸರಿ? ನಿವೃತ್ತರಾದ ಬಳಿಕ ಕೆಲವು ದಿನಗಳ ಮಟ್ಟಿಗಾದರೂ ಅವರ ಯೋಗಕ್ಷೇಮವನ್ನು ವಿಚಾರಿಸಿದರೆ ನಮ್ಮ ಗಂಟೇನು ಹೋಗುತ್ತದೆ? ನಿವೃತ್ತರ ಕರೆಯನ್ನು ಕಿರಿಕಿರಿ ಎಂದು ಭಾವಿಸದೆ ಚುಟುಕಾಗಿಯಾದರೂ ಉತ್ತರಿಸಿದರೆ ಅವರಿಗೆ ಇನ್ನಿಲ್ಲದ ಸಮಾಧಾನ ಸಿಗಬಹುದು. ಅವರು ಎದುರು ಸಿಕ್ಕಿದಾಗ ಅವರಿಂದ ತಪ್ಪಿಸಿಕೊಳ್ಳಲೂ ಹಲವರು ಪ್ರಯತ್ನಿಸುತ್ತಾರೆ. ಮನುಷ್ಯ ಸಂಬಂಧ ಬರೀ ಯಂತ್ರದಂತಲ್ಲ ಅಲ್ಲವೇ?



ನಿವೃತ್ತರು ಅಥವಾ ಹಿರಿಯ ನಾಗರಿಕರ ಈ ಬಗೆಯ ನೋವುಗಳನ್ನು ಅರ್ಥಮಾಡಿಕೊಂಡೋ ಏನೋ ಸರ್ಕಾರವು ಅವರಿಗೆ ನೈತಿಕ ಧೈರ್ಯ ತುಂಬುವ ಕೆಲಸಕ್ಕೆ ಮುಂದಾಗಿದೆ. ಅವರು ಯಾವುದೇ ಕಚೇರಿಗಳಿಗೆ ಹೋಗಲಿ ಅಲ್ಲಿ ಅವರನ್ನು ಗೌರವದಿಂದ ಕಾಣಬೇಕೆಂಬ ಆದೇಶವನ್ನು ಹೊರಡಿಸಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇತ್ತೀಚೆಗೆ ನಿವೃತ್ತ ನೌಕರರನ್ನುದ್ದೇಶಿಸಿ ಭರವಸೆಯ ಮಾತುಗಳನ್ನು ಆಡಿದ್ದು ಪತ್ರಿಕೆಗಳಲ್ಲಿ ವರದಿಯಾಗಿತ್ತು. ಅಧಿಕಾರಸ್ಥರಿಂದ ನಾವು ನಿರೀಕ್ಷಿಸುವುದು ಇಂತಹ ಸಕಾರಾತ್ಮಕವಾದ ನಡೆಯನ್ನೇ ಅಲ್ಲವೇ?

ನಿವೃತ್ತರೊಂದಿಗೆ ಗೌರವದಿಂದ, ಪ್ರೀತಿಯಿಂದ ನಡೆದುಕೊಳ್ಳಬೇಕು. ಅಂತಹ ಹೊಣೆ ಸಮಾಜದ ಮೇಲಿದೆ. ನಿಯಮದಂತೆ ವಯಸ್ಸಿಗೆ ಅನುಗುಣವಾಗಿ ಎಲ್ಲರೂ ಒಂದಲ್ಲ ಒಂದು ದಿನ ಸೇವೆಯಿಂದ ನಿವೃತ್ತರಾಗುತ್ತಾರೆ. ಆ ನಂತರವೂ ಬದುಕಿನ ಪಯಣ ದೊಡ್ಡದಿದೆ. ಅದಕ್ಕೆ ಹೊಂದಿಕೊಳ್ಳಲು ಅವರಿಗೆ ನೆರವಾಗುವುದು ಎಲ್ಲರ ಕರ್ತವ್ಯ.

ವಾಚಕರ ವಾಣಿ

ತೆರಿಗೆಯ ಹೊರೆ ತಕ್ಷಣ ಇಳಿಸಿ

ನಿರಂತರ ಬೆಲೆ ಏರಿಕೆ ಹಾಗೂ ಕೊರೊನಾ ಹೊಡೆತದಿಂದ ಜನಸಾಮಾನ್ಯರ ಪಾಡು ಅಧೋಗತಿ ಆಗಿದೆ. ಇದರ ಮಧ್ಯೆ ಕೆಲವು ಅಗತ್ಯ ವಸ್ತುಗಳು ಮತ್ತು ಸೇವೆಗಳ ಮೇಲೆ ಜಿಎಸ್‌ಟಿ ಹೇರಿರುವುದು ಗಂಟಲಿನ ಬಿಸಿ ತುಪ್ಪದಂತಾಗಿದೆ. ಜನರ ಆಕ್ರೋಶ ಹೆಚ್ಚಾದಾಗ, ಚುನಾವಣೆ ಸಮೀಪಿಸಿದಾಗ ಬೆಲೆ ಏರಿಕೆಗೆ ತಾತ್ಕಾಲಿಕ ಬ್ರೇಕ್ ಹಾಕುವ ಸರ್ಕಾರ, ಬಳಿಕ ತಾನು ಹಿಂದೆ ನಿಲ್ಲಿಸಿದ್ದ ಕಾರ್ಯಕ್ಕೆ ಮರುಚಾಲನೆ ನೀಡುತ್ತದೆ. ಪೆಟ್ರೋಲ್- ಡೀಸೆಲ್, ಅಡುಗೆ ಅನಿಲ, ದವಸಧಾನ್ಯ, ಅಡುಗೆ ಎಣ್ಣೆ, ಬ್ಯಾಂಕಿಂಗ್ ಸೇವೆ ಹೀಗೆ ಪಟ್ಟಿ ಮಾಡುತ್ತಾ ಹೋದರೆ ಪ್ರತಿಯೊಂದಕ್ಕೂ ತೆರಿಗೆಯ ಭಾರ ಹೇರಿರುವುದು ಕಂಡುಬರುತ್ತದೆ.

ಸರ್ಕಾರಿ ಕಚೇರಿಗೆ ಹೋದರೆ ಲಂಚದ ಹಾವಳಿ. ಮನೆಯಿಂದ ಹೊರಗೆ ಕಾಲಿಡಬೇಕಾದರೆ ಒಮ್ಮೆ ಜೇಬು ತಡಕಿಕೊಳ್ಳುವ ಪರಿಸ್ಥಿತಿ. ಜಿಎಸ್‌ಟಿಯಿಂದ ಈವರೆಗೆ ವಿನಾಯಿತಿ ಪಡೆದಿದ್ದ ಪದಾರ್ಥಗಳಿಗೂ ಶೇ 5ರಿಂದ 12ರಷ್ಟು ಜಿಎಸ್‌ಟಿ ವಿಧಿಸಿರುವುದು ವಿಪರ್ಯಾಸ. ಸರ್ಕಾರ ಏನೇ ನಿರ್ಧಾರ ಕೈಗೊಂಡರೂ ಅದನ್ನು ಜನ ಸಹಿಸಿಕೊಂಡು ಹೋಗುತ್ತಿರುವುದೇ ಇದೆಲ್ಲಕ್ಕೂ ಕಾರಣ. ಜನರು ಬೀದಿಗೆ ಇಳಿದು ಪ್ರತಿಭಟಿಸುತ್ತಿಲ್ಲ, ಆಕ್ರೋಶ ವ್ಯಕ್ತಪಡಿಸುತ್ತಿಲ್ಲ. ಏಕೆಂದರೆ ಅವರಿಗೆ ಅಷ್ಟು ಸಮಯವಿಲ್ಲ. ಇದನ್ನೇ ಬಂಡವಾಳ ಮಾಡಿಕೊಂಡಂತಿರುವ ಸರ್ಕಾರ, ಒಂದಿಲ್ಲೊಂದು ರೀತಿಯಲ್ಲಿ ಬೆಲೆ ಏರಿಸುತ್ತಲೇ ಇದೆ. ಹೀಗಾದರೆ ಜನರ ಪಾಡೇನು? ಅವರ ಸಂಸಾರ ನಿರ್ವಹಣೆ ಹೇಗೆ? ಇದೀಗ ಅಗತ್ಯ ಸರಕು ಹಾಗೂ ಸೇವೆಗಳ ಮೇಲೆ ವಿಧಿಸಿರುವ ತೆರಿಗೆಯ ಹೊರೆಯನ್ನು ಕೂಡಲೇ ವಾಪಸ್ ಪಡೆಯಬೇಕಿದೆ.

ಶಿವಶಂಕರ ಎಸ್., ಮುತ್ತರಾಯನಹಳ್ಳಿ, ಮಧುಗಿರಿ

ಪಶ್ಚಿಮಘಟ್ಟ: ತಜ್ಞರ ಎಚ್ಚರಿಕೆಯನ್ನು ಗಮನಿಸಿ

ಪಶ್ಚಿಮಘಟ್ಟ ಪ್ರದೇಶವನ್ನು ಸೂಕ್ಷ್ಮ ವಲಯವೆಂದು ಗುರುತಿಸಿ ಹೊರಡಿಸಿರುವ ಅಧಿಸೂಚನೆಗೆ ಮಲೆನಾಡು ಹಾಗೂ ಕರಾವಳಿ ಭಾಗದ ಶಾಸಕರಿಂದ ವಿರೋಧ ವ್ಯಕ್ತವಾಗಿದೆ (ಪ್ರ.ವಾ., ಜುಲೈ 19). ನಮ್ಮ ಪರಿಸರ ಉಳಿದರೆ ತಾನೆ ನಾವು ಉಳಿಯುವುದು ಎಂಬ ಸರಳ ಪ್ರಶ್ನೆಗೆ ನಾವು ಉತ್ತರ ಕಂಡುಕೊಳ್ಳಬೇಕಿದೆ. ಏಕೆಂದರೆ, ಪಶ್ಚಿಮಘಟ್ಟ ಪ್ರದೇಶ ನಮ್ಮ ನಾಡಿಗೆ ಹಲವಾರು ನದಿಗಳನ್ನು ನೀಡುತ್ತದೆ. ಈ ನದಿಗಳಿಂದ ಅಲ್ಲವೇ ನಮ್ಮ ನಾಡಿಗೆ ಬೆಳಕು ಮತ್ತು ಬದುಕು? ಅಂಥ ಪರಿಸರವನ್ನು ನಾವು ಕಾಪಾಡಿ ನಮ್ಮ ಮುಂದಿನ ಪೀಳಿಗೆಗೂ ಉಳಿಸಿಕೊಡಬೇಕಿದೆ.

ಪಶ್ಚಿಮಘಟ್ಟ ಪ್ರದೇಶದಲ್ಲಿ ವಿಪರೀತ ಮಾನವ ಹಸ್ತಕ್ಷೇಪ ಆಗುತ್ತಿರುವುದರಿಂದ ಅದು ಮುಂದೊಂದು ದಿನ ಅಲ್ಲಿಯ ಜನರಿಗಷ್ಟೇ ಅಲ್ಲದೆ ನಮ್ಮ ಇಡೀ ನಾಡಿನ ಬದುಕಿಗೆ ದುರವಸ್ಥೆ ತರುತ್ತದೆ ಎಂಬ ಪರಿಸರ ತಜ್ಞರ ಎಚ್ಚರಿಕೆಯನ್ನು ನಾವು ಗಮನಿಸಲೇಬೇಕು. ಕೇಂದ್ರ ಸರ್ಕಾರ ಈ ದಿಸೆಯಲ್ಲಿ ಇಟ್ಟಿರುವ ಹೆಜ್ಜೆಯನ್ನು ನಾವು ಸ್ವಾಗತಿಸಬೇಕಿದೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ತಾರತಮ್ಯ ಧೋರಣೆ ಸರಿಯೇ?

ರಾಜ್ಯದಲ್ಲಿನ ಕಾರಾಗೃಹಗಳಲ್ಲಿ ದುಡಿಯುತ್ತಿರುವ ಕೈದಿಗಳಿಗೆ ರಾಜ್ಯ ಸರ್ಕಾರವು ದಿನಗೂಲಿಯನ್ನು ₹200ರಿಂದ ₹ 525ಕ್ಕೆ ಏರಿಕೆ ಮಾಡಲು ಮುಂದಾಗಿದೆ. ಅಂದರೆ, ಕೈದಿಗಳಿಗೆ ತಿಂಗಳಿಗೆ ಸುಮಾರು ₹15,000 ಸಂಬಳ ದೊರೆಯುತ್ತದೆ. ಅದೇ ಪದವಿ, ಸ್ನಾತಕೋತ್ತರ ಪದವಿ ಮುಗಿಸಿ, ಬೆಳಿಗ್ಗೆ 10ರಿಂದ ಸಂಜೆ 6 ಗಂಟೆಯವರೆಗೆ ಶಾಲೆಯಲ್ಲಿ ದುಡಿಯುವ ಅತಿಥಿ ಶಿಕ್ಷಕರಿಗೆ ರಾಜ್ಯ ಸರ್ಕಾರವು ತಿಂಗಳಿಗೆ ನೀಡುತ್ತಿರುವ ಸಂಬಳ ಕೇವಲ ₹10,500. ಇಂತಹ ತಾರತಮ್ಯ ಸರಿಯೇ? ಸರ್ಕಾರ ಈ ಬಗ್ಗೆ ಗಂಭೀರವಾಗಿ ಯೋಚಿಸಬೇಕು.

ಬಸವರಾಜ ಎಸ್.ಎನ್., ಬೆಳಗಾವಿ

ಬೆದರಿಕೆ ಪತ್ರ: ಸಮೀಕರಣದ ಚೋದ್ಯ!

ಒಂದು ರಾಜಕೀಯ ಪಕ್ಷದ ಮುಖಂಡರೊಂದಿಗೆ ಲೇಖಕರನ್ನೂ ಸೇರಿಸಿ ಅಪರಿಚಿತರು ಜೀವಬೆದರಿಕೆ ಹಾಕಿರುವುದು (ಪ್ರ.ವಾ., ಜುಲೈ 18) ಸೋಜಿಗ ಹಾಗೂ ನೋವಿನ ಸಂಗತಿ. ಇಂತಹ ಬೆದರಿಕೆಯ ಪತ್ರಗಳು ರಾಜಕಾರಣಿಗಳಿಗೆ ಸಾಮಾನ್ಯ. ಅವರು ಬೆದರಿಕೆಗೆ ಹೆದರುವವರಲ್ಲ, ಸೊಪ್ಪು ಹಾಕುವವರಲ್ಲ. ರಾಜಕೀಯ ತಂತ್ರ, ಪ್ರತಿತಂತ್ರಗಳಿಂದ ತಿರುಗೇಟು ನೀಡಿ ಪರಿಸ್ಥಿತಿಯನ್ನು ಎದುರಿಸುವ ಧೈರ್ಯ ಅವರಿಗೆ ಇರುತ್ತದೆ. ಆದರೆ ರಾಜಕಾರಣಿಗಳೊಂದಿಗೆ ಲೇಖಕರನ್ನು ಸಮೀಕರಿಸಿರುವುದು ಚೋದ್ಯವೆನಿಸುತ್ತದೆ!

ಸಾಹಿತಿಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸುವಲ್ಲಿ ನಿರಂಕುಶಮತಿಗಳು. ತಮ್ಮ ಪ್ರಖರವಾದ ವಿಚಾರಗಳಿಂದ ಸಮಾಜವನ್ನು ಪರಿವರ್ತಿಸುವ ಬುದ್ಧಿಜೀವಿಗಳು. ಇವರು ಸಮಾಜದ ಆಸ್ತಿ. ಇವರಿಗೆ ಪ್ರಾಣಬೆದರಿಕೆ ಸರಿಯಲ್ಲ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಪಠ್ಯಕ್ರಮದಲ್ಲಿರಲಿ ಸರಿಯಾದ ಸಂದೇಶ

ಪಠ್ಯಪುಸ್ತಕದಲ್ಲಿ ತಪ್ಪು ಸಂದೇಶ ನೀಡುವುದು ಸರಿಯಲ್ಲ ಎಂಬ ಎಸ್.ಆರ್.ವಿಜಯಶಂಕರ ಅವರ ಲೇಖನ (ಪ್ರ.ವಾ., ಜುಲೈ 19) ಶಿಕ್ಷಣ ತಜ್ಞರಿಗೆ ಸೂಕ್ತ ಸಂದೇಶವನ್ನು ನೀಡಿದೆ. ಉದಾಹರಣೆಗೆ, ಶಾಲೆಯ ಪಠ್ಯಕ್ರಮದಲ್ಲಿ 'ಬೆಳಿಗ್ಗೆ ಎದ್ದ ಕೂಡಲೇ ಹಲ್ಲುಗಳನ್ನು ಬ್ರಷ್ ಮಾಡಬೇಕು' ಎಂಬ ಸಂದೇಶವಿದೆ. ಆದರೆ ಬಹುತೇಕ ಹಲ್ಲಿನ ವೈದ್ಯರ ಸಲಹೆಯೆಂದರೆ, ಬೆಳಿಗ್ಗೆ ಮತ್ತು ರಾತ್ರಿ ಊಟವಾದ ನಂತರ ಹಲ್ಲನ್ನು ಬ್ರಷ್ ಮಾಡಬೇಕು. ಇದರಿಂದ ಹಲ್ಲುಗಳು ಕೆಡದೆ, ದೀರ್ಘಕಾಲ ಆರೋಗ್ಯಕರವಾಗಿ ಇರುತ್ತವೆ. ಶಾಲೆಯ ಪಠ್ಯಕ್ರಮದಲ್ಲಿ ಸರಿಯಾದ ಸಂದೇಶ ನೀಡುವುದು ಮಕ್ಕಳ ಉತ್ತಮ ಬೆಳವಣಿಗೆಗೆ ಸಹಕಾರಿ.


ಡಾ. ಎಚ್.ಆರ್.ಪ್ರಕಾಶ್, ಕೆ.ಬಿ.ದೊಡ್ಡಿ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮಂಕಿಪಾಕ್ಸ್ ಭೀತಿ ಬೇಡ, ಎಚ್ಚರ ಬೇಕು



ಕೇರಳದಲ್ಲಿ ಮಂಕಿಪಾಕ್ಸ್ ಪ್ರಕರಣ ಪತ್ತೆಯಾದ ಕಾರಣ, ಮುಂಜಾಗ್ರತಾ ಕ್ರಮವಾಗಿ ಚೆನ್ನೈ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಪ್ರಯಾಣಿಕರನ್ನು ತಪಾಸಣೆಗೆ ಒಳಪಡಿಸಲಾಯಿತು–ಪಿಟಿಐ ಚಿತ್ರ



ಮಂಕಿಪಾಕ್ಸ್ ಎಂಬ ವೈರಾಣುವಿನಿಂದ ಬರುವ ಅತ್ಯಂತ ಅಪರೂಪದ ರೋಗವೇ ಮಂಕಿಪಾಕ್ಸ್. ಮಂಕಿಪಾಕ್ಸ್ ವೈರಾಣುವು ಸಿಡುಬಿಗೆ ಕಾರಣವಾಗುವ ವೈರಾಣುವಿನ ವರ್ಗಕ್ಕೆ ಸೇರಿದ್ದಾಗಿದೆ. ಮಂಕಿಪಾಕ್ಸ್ ರೋಗ ಬಾಧಿತರಿಗೆ ಸಿಡುಬು ಇರುವವರಲ್ಲಿ ಕಾಣಿಸುವಂತಹ ಲಕ್ಷಣಗಳೇ ಕಾಣಿಸಿಕೊಳ್ಳುತ್ತವೆ. ಆದರೆ, ಮಂಕಿಪಾಕ್ಸ್‌ನಿಂದಾಗಿ ಬರುವ ಲಕ್ಷಣಗಳು ಸಿಡುಬಿಗಿಂತ ಬಹಳ ಸೌಮ್ಯವಾಗಿರುತ್ತವೆ. ಮಂಕಿಪಾಕ್ಸ್ ಮಾರಣಾಂತಿಕ ಅಲ್ಲ. ಸೀತಾಳೆ ಸಿಡುಬು (ಚಿಕನ್‌ಪಾಕ್ಸ್) ಜತೆಗೆ ಮಂಕಿಪಾಕ್ಸ್‌ಗೆ ಯಾವುದೇ ಸಂಬಂಧ ಇಲ್ಲ.

ಮಂಕಿಪಾಕ್ಸ್ ಮೊದಲು ಪತ್ತೆಯಾದದ್ದು 1958ರಲ್ಲಿ. ಸಂಶೋಧನೆಗಾಗಿ ಮಂಗಗಳನ್ನು ಇರಿಸಿದ್ದ ಎರಡು ಕಾಲೊನಿಗಳಲ್ಲಿ ಸಿಡುಬಿನಂತಹ ರೋಗ ಕಾಣಿಸಿಕೊಂಡಿತ್ತು. ಈ ರೋಗಕ್ಕೆ ಮಂಕಿಪಾಕ್ಸ್ ಎಂಬ ಹೆಸರು ಇದ್ದರೂ ಇದರ ಮೂಲ ಮಂಗಗಳು ಅಲ್ಲ. ಈ ವೈರಾಣುವಿನ ಮೂಲ ಯಾವುದು ಎಂಬುದು ಈವರೆಗೆ ಪತ್ತೆ ಆಗಿಲ್ಲ. ಆಫ್ರಿಕಾದಲ್ಲಿರುವ ಬಾಚಿ ಹಲ್ಲು ಇರುವ ಪ್ರಾಣಿಗಳು (ಮೊಲ, ಇಲಿ, ಅಳಿಲು ಇತ್ಯಾದಿ) ಮತ್ತು ಮಂಗಗಳಲ್ಲಿ ಈ ವೈರಾಣು ಇರಬಹುದು ಮತ್ತು ಅವುಗಳಿಂದ ಮನುಷ್ಯರಿಗೆ ಸೋಂಕು ತಗಲಬಹುದು ಎಂದು ಅಂದಾಜಿಸಲಾಗಿದೆ. 1970ರಲ್ಲಿ ಮನುಷ್ಯರಲ್ಲಿ ಮೊದಲಿಗೆ ಮಂಕಿಪಾಕ್ಸ್ ಕಾಣಿಸಿಕೊಂಡಿತು. 2022ರಲ್ಲಿ ಮಂಕಿಪಾಕ್ಸ್ ಕಾಣಿಸಿಕೊಳ್ಳುವುದಕ್ಕೆ ಮೊದಲು, ಮಧ್ಯ ಮತ್ತು ಪಶ್ಚಿಮ ಆಫ್ರಿಕಾದ ಹಲವು ದೇಶಗಳಲ್ಲಿ ಈ ರೋಗ ಕಾಣಿಸಿಕೊಂಡಿತ್ತು. 2022ರವರೆಗೆ ಪತ್ತೆಯಾದ ಮಂಕಿಪಾಕ್ಸ್‌ನ ಎಲ್ಲ ಪ್ರಕರಣಗಳು ಆಫ್ರಿಕಾದಿಂದ ಬಂದವರಲ್ಲಿಯೇ ಕಾಣಿಸಿಕೊಂಡಿದ್ದವು.

1980ರಲ್ಲಿ ಸಿಡುಬು ನಿರ್ಮೂಲನೆಯಾಯಿತು. ಹಾಗಾಗಿ ಸಿಡುಬು ತಡೆ ಲಸಿಕೆ ಹಾಕಿಸುವುದನ್ನು ನಿಲ್ಲಿಸಲಾಯಿತು. ಇದರಿಂದಾಗಿ ಮಂಕಿಪಾಕ್ಸ್ ಸೋಂಕು ಹರಡುವಿಕೆ ಹೆಚ್ಚಳವಾಗಿದೆ ಎಂದು ಅಮೆರಿಕದ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್ ಹೇಳಿದೆ.

ಜಾಗತಿಕ ಆರೋಗ್ಯ ಸಮಸ್ಯೆ

ಆರಂಭದಲ್ಲಿ ಆಫ್ರಿಕಾದ ದೇಶಗಳಲ್ಲಿ ಮಾತ್ರ ಮಂಕಿಪಾಕ್ಸ್ ಇತ್ತು. ಆದರೆ, ಈಗ ಅದು ಜಗತ್ತಿನ ವಿವಿಧ ಭಾಗಗಳಿಗೆ ಹರಡಿದೆ. ಹಾಗಾಗಿ, ಇದನ್ನು ಈಗ ಜಾಗತಿಕ ಆರೋಗ್ಯ ಸಮಸ್ಯೆ ಎಂದೇ ಪರಿಗಣಿಸಲಾಗುತ್ತಿದೆ. ಆಫ್ರಿಕಾದ ಹೊರಗೆ ಮಂಕಿಪಾಕ್ಸ್ ಮೊದಲ ಬಾರಿಗೆ ಕಾಣಿಸಿಕೊಂಡಿದ್ದು 2003ರಲ್ಲಿ. ಇದು ಅಮೆರಿಕದಲ್ಲಿ ಪತ್ತೆಯಾದ ಪ್ರಕರಣ. ಘಾನಾದಿಂದ ತರಿಸಿಕೊಂಡ ನಾಯಿಯಲ್ಲಿ ಸೋಂಕು ಕಾಣಿಸಿಕೊಂಡಿತ್ತು. ಬಳಿಕ, ಅಮೆರಿಕದಲ್ಲಿ 70 ಪ್ರಕರಣಗಳು ವರದಿಯಾದವು. 2018ರಲ್ಲಿ ನೈಜೀರಿಯಾ ಮತ್ತು ಇಸ್ರೇಲ್‌ನಿಂದ ಬಂದ ಪ್ರಯಾಣಿಕರಲ್ಲಿ ಸೋಂಕು ಕಾಣಿಸಿಕೊಂಡಿತ್ತು. 2022ರ ಮೇಯಲ್ಲಿ ಆವರೆಗೆ ಸೋಂಕು ಇಲ್ಲದ ದೇಶಗಳಲ್ಲಿಯೂ ರೋಗ ಕಾಣಿಸಿಕೊಂಡಿತು.


ಲಕ್ಷಣಗಳು

ಸೋಂಕು ತಗಲಿದ ನಂತರದ 6ರಿಂದ 13 ದಿನಗಳಲ್ಲಿ ರೋಗ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಕೆಲವೊಂದು ಪ್ರಕರಣಗಳಲ್ಲಿ 5ರಿಂದ 21 ದಿನಗಳ ಅವಧಿಯಲ್ಲಿಯೂ ಕಾಣಿಸಿಕೊಳ್ಳಬಹುದು.

ಜ್ವರ, ತೀವ್ರವಾದ ತಲೆನೋವು, ದುಗ್ಧರಸ ಗ್ರಂಥಿಗಳಲ್ಲಿ ಊತ, ಬೆನ್ನು ನೋವು, ಸ್ನಾಯು ನೋವು ಮತ್ತು ತೀವ್ರವಾದ ನಿತ್ರಾಣ ಕಾಣಿಸಿಕೊಳ್ಳಬಹುದು. ಜ್ವರ ಕಾಣಿಸಿಕೊಂಡ 1–3 ದಿನಗಳಲ್ಲಿ ದದ್ದುಗಳು (ಮೊಡವೆಯ ರೀತಿ ಇರುತ್ತದೆ) ಕಾಣಿಸಿಕೊಳ್ಳಬಹುದು. ಮುಖ, ಕೈ, ಕಾಲುಗಳು, ಹಸ್ತ ಮತ್ತು ಪಾದಗಳಲ್ಲಿ ದದ್ದುಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತವೆ. ದೇಹದ ಇತರ ಭಾಗಗಳಲ್ಲಿ ದದ್ದುಗಳು ಅಷ್ಟಾಗಿ ಇರುವುದಿಲ್ಲ. ಶೇ 95ರಷ್ಟು ಪ್ರಕರಣಗಳಲ್ಲಿ ಮುಖದಲ್ಲಿಯೇ ಹೆಚ್ಚು ದದ್ದುಗಳು ಇರುತ್ತವೆ.

2ರಿಂದ 4 ವಾರಗಳವರೆಗೆ ಲಕ್ಷಣಗಳು ಇರಬಹುದು. ಮಕ್ಕಳಲ್ಲಿ ರೋಗವು ಹೆಚ್ಚು ತೀವ್ರವಾಗಿರುತ್ತದೆ. ದೇಹದಲ್ಲಿ ವೈರಾಣುವಿನ ಪ್ರಮಾಣ, ರೋಗಿಯ ಆರೋಗ್ಯ ಸ್ಥಿತಿ ಇತ್ಯಾದಿಗಳ ಮೇಲೆ ರೋಗದ ತೀವ್ರತೆಯು ಅವಲಂಬಿಸಿರುತ್ತದೆ. ರೋಗ ನಿರೋಧಕ ಶಕ್ತಿಯ ಕೊರತೆ ಇರುವವರಲ್ಲಿ ಲಕ್ಷಣಗಳು ಹೆಚ್ಚು ತೀವ್ರವಾಗಬಹುದು.





ಎರಡು ಲಸಿಕೆ



ಮಂಕಿಪಾಕ್ಸ್ ನಿಯಂತ್ರಿಸುವ ಲಸಿಕೆಗಳನ್ನು ಅಭಿವೃದ್ಧಿಪಡಿಸಲಾಗಿದೆ. ಅಮೆರಿಕದ ಆಹಾರ ಮತ್ತು ಔಷಧ ಆಡಳಿತವು (ಎಫ್‌ಡಿಎ) ಅನುಮೋದನೆ ನೀಡಿರುವ ಜೆವೈಎನ್‌ಎನ್‌ಇಒಎಸ್ (ಇಮ್ವಾನೆಕ್ಸ್) ಹಾಗೂ ಎಸಿಎಎಂ–2000 ಹೆಸರಿನ ಎರಡು ಲಸಿಕೆಗಳು ಲಭ್ಯವಿವೆ. ಅಮೆರಿಕದಲ್ಲಿ ಇಮ್ವಾನೆಕ್ಸ್ ಲಸಿಕೆಯ ಸೀಮಿತ ಪೂರೈಕೆಯಿದೆ. ಆದರೆ ಎಸಿಎಎಂ–2000 ಲಸಿಕೆ ಹೆಚ್ಚು ಲಭ್ಯವಿದೆ. ಗರ್ಭಿಣಿಯರು, ಆರೋಗ್ಯ ಸಮಸ್ಯೆ ಇರುವವರು ಹಾಗೂ ಚರ್ಮದ ಕಾಯಿಲೆಯಿರುವವರು ಈ ಲಸಿಕೆ ತೆಗೆದುಕೊಳ್ಳಬಾರದು. ಈಗ ವ್ಯಾಪಕವಾಗಿ ಹಬ್ಬುತ್ತಿರುವ ಮಂಕಿಪಾಕ್ಸ್ ನಿಯಂತ್ರಿಸುವಲ್ಲಿ ಈ ಎರಡೂ ಲಸಿಕೆಗಳು ಎಷ್ಟು ಪರಿಣಾಮಕಾರಿ ಎಂಬ ದತ್ತಾಂಶ ಲಭ್ಯವಾಗಿಲ್ಲ. ಈ ಬಗ್ಗೆ ಅಮೆರಿಕದ ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್ (ಸಿಡಿಸಿ) ಮಾಹಿತಿ ಕಲೆಹಾಕುತ್ತಿದೆ.

ಪ್ರಾಣಿಯಿಂದ–ಮನುಷ್ಯರಿಗೆ; ವ್ಯಕ್ತಿಯಿಂದ–ವ್ಯಕ್ತಿಗೆ ಸೋಂಕು

ಮಂಕಿಪಾಕ್ಸ್ ಸೋಂಕು ತಗಲಿರುವ ಪ್ರಾಣಿಗಳ ಜೊತೆ ನೇರ ಸಂಪರ್ಕ ಹೊಂದುವ ಮನುಷ್ಯರಿಗೆ ಈ ವೈರಾಣು ಹರಡುತ್ತದೆ. ಇಂತಹ ಪ್ರಾಣಿಗಳ ರಕ್ತ, ಚರ್ಮ ಅಥವಾ ಗಾಯದಿಂದ ಸೋಂಕು ಹರಡುವ ಸಾಧ್ಯತೆಯಿರುತ್ತದೆ. ಆಫ್ರಿಕಾದಲ್ಲಿ ವಿವಿಧ ಪ್ರಬೇಧದ ಅಳಿಲು, ಮಂಗ, ಕೆಲವು ಪ್ರಬೇಧದ ಇಲಿಗಳಲ್ಲಿ ಅಧಿಕವಾಗಿ ಪತ್ತೆಯಾಗಿದೆ. ರೋಗ ತಗುಲಿರುವ ಈ ಪ್ರಾಣಿಗಳ ಮಾಂಸ ಸೇವನೆಯು ಸಂಭಾವ್ಯ ಅಪಾಯಕ್ಕೆ ತಳ್ಳುತ್ತದೆ. ಈ ವೈರಾಣು ಮನುಷ್ಯನಿಂದ ಮನುಷ್ಯನಿಗೆ ಹರಡುವ ಸಾಧ್ಯತೆ ಇದೆ. ಸೋಂಕಿತ ವ್ಯಕ್ತಿಯ ಉಸಿರು ತಗಲುವ ಅಥವಾ ಚರ್ಮದ ಗಾಯದ ಜೊತೆ ಸಂಪರ್ಕ ಹೊಂದುವ ಮತ್ತೊಬ್ಬ ವ್ಯಕ್ತಿಗೆ ಇದು ತಗಲುವ ಸಂಭವ ಇರುತ್ತದೆ. ಸೋಂಕು ತಗಲಿರುವ ವಸ್ತುವನ್ನು ಬಳಸಿದ ವ್ಯಕ್ತಿಗೂ ವೈರಾಣುಗಳು ಹರಡಬಲ್ಲವು.

ಸೋಂಕಿತ ವ್ಯಕ್ತಿಯ ಉಸಿರಾಟದ ವೇಳೆ ಹೊರಬೀಳುವ ಕಣಗಳು ಸಹ ಸೋಂಕು ಹರಡಬಲ್ಲವು. ರೋಗಬಾಧಿತ ವ್ಯಕ್ತಿಗೆ ಚಿಕಿತ್ಸೆ ನೀಡುವ ಆರೋಗ್ಯ ಸಿಬ್ಬಂದಿ, ಆರೈಕೆ ಮಾಡುವ ಕುಟುಂಬ ಸದಸ್ಯರು ಹಾಗೂ ನಿಕಟ ಸಂಪರ್ಕ ಹೊಂದಿದವರಿಗೆ ಇದರ ಅಪಾಯ ಹೆಚ್ಚು. ರೋಗ ಬಾಧಿತ ವ್ಯಕ್ತಿಯೊಬ್ಬನಿಂದ 9 ವ್ಯಕ್ತಿಗಳಿಗೆ ಈ ಸೋಂಕು ಹರಡಿದ್ದು ದಾಖಲಾಗಿದೆ. ಸಮುದಾಯಗಳಲ್ಲಿ ರೋಗನಿರೋಧಕ ಶಕ್ತಿ ಕಡಿಮೆಯಾಗಿರುವುದನ್ನು ಇದು ಬಿಂಬಿಸುತ್ತದೆ. ಹೊಕ್ಕುಳಬಳ್ಳಿಯ ಮೂಲಕ ತಾಯಿಯಿಂದ ಭ್ರೂಣಕ್ಕೆ ಸೋಂಕು ಪ್ರಸರಣವಾಗಬಲ್ಲದು. ಪ್ರಸವದ ವೇಳೆ ಅಥವಾ ಪ್ರಸವಾನಂತರ ನಿಕಟ ಸಂಪರ್ಕದಿಂದಲೂ ಇದು ಹರಡುತ್ತದೆ. ಮುಖ್ಯವಾಗಿ, ಪರಸ್ಪರ ಸಂಪರ್ಕದಿಂದ ಇದು ಹರಡುವ ಸಾಧ್ಯತೆ ಹೆಚ್ಚಿದೆ. ಸೋಂಕು ಹರಡುವಿಕೆ ಅಪಾಯವನ್ನು ದೃಢಪಡಿಸುವ ಇನ್ನಷ್ಟು ಅಧ್ಯಯನಗಳು ನಡೆಯಬೇಕಿವೆ.

ಸೋಂಕಿತರ ಚಿಕಿತ್ಸೆ

ಸೋಂಕಿನ ಪ್ರಮಾಣವನ್ನು ತಗ್ಗಿಸಲು, ಅದರಿಂದ ಉಂಟಾಗುವ ಸಮಸ್ಯೆಗಳನ್ನು ನಿವಾರಿಸಲು ಹಾಗೂ ದೀರ್ಘಕಾಲದ ಪರಿಣಾಮಗಳನ್ನು ತಡೆಗಟ್ಟಲು ಚಿಕಿತ್ಸೆ ಅಗತ್ಯ. ಆದರೆ ಮಂಕಿಪಾಕ್ಸ್‌ಗೆಂದೇ ಪ್ರತ್ಯೇಕ ಚಿಕಿತ್ಸಾ ವಿಧಾನ ಇಲ್ಲ. ಮಂಕಿಪಾಕ್ಸ್ ಮತ್ತು ಸಿಡುಬು ಅನುವಂಶೀಯವಾಗಿ ಒಂದೇ ಎಂದು ಪರಿಗಣಿಸಲಾಗಿದೆ. ಹೀಗಾಗಿ ಸಿಡುಬು ನಿಯಂತ್ರಣಕ್ಕೆ ಬಳಸಲಾದ ವೈರಾಣು ನಿಯಂತ್ರಣ ಔಷಧಗಳನ್ನೇ ಇದಕ್ಕೂ ಬಳಸಬಹುದಾಗಿದೆ. ವೈರಾಣು ನಿಯಂತ್ರಿಸುತ್ತದೆ ಎಂದು ಪರಿಗಣಿಸಲಾಗಿರುವ ‘ಟೆಕೊವಿರಿಮಾಟ್’ (ಟಿಪಿಒಎಕ್ಸ್‌ಎಕ್ಸ್) ಔಷಧವನ್ನು ಬಳಸಬಹುದು ಎಂದು ಶಿಫಾರಸು ಮಾಡಲಾಗಿದೆ. ಸಿಡುಬು ತಡೆಗೆ ಅಭಿವೃದ್ಧಿಪಡಿಸಿದ್ದ ಈ ಔಷಧವನ್ನು ಮಂಕಿಪಾಕ್ಸ್‌ಗಾಗಿ ಬಳಕೆ ಮಾಡಲು ಯುರೋಪಿಯನ್ ಯೂನಿಯನ್ ಏಜೆನ್ಸಿಯು 2022ರಲ್ಲಿ ಪರವಾನಗಿ ಪಡೆದಿದೆ. ಮಂಕಿಪಾಕ್ಸ್‌ನಿಂದ ತೀವ್ರವಾಗಿ ಬಳಲುತ್ತಿರುವ ಹಾಗೂ ರೋಗನಿರೋಧಕ ಶಕ್ತಿ ಕುಂದಿರುವ ವ್ಯಕ್ತಿಗಳಿಗೆ ಇದನ್ನು ನೀಡಬಹುದು. ಆದರೆ, ವೈದ್ಯಕೀಯ ನಿಗಾದೊಂದಿಗೆ ಈ ಔಷಧವನ್ನು ಬಳಕೆ ಮಾಡಬೇಕು ಎಂದು ಶಿಫಾರಸು ಮಾಡಲಾಗಿದೆ. ಆದರೆ ಇದು ಎಲ್ಲ ಕಡೆ ಲಭ್ಯವಿಲ್ಲ. ರೋಗಿಗೆ ಪೋಷಕಾಂಶಗಳ ಕೊರತೆಯಾಗದಂತೆ ನೋಡಿಕೊಳ್ಳಲು ಆಹಾರವನ್ನು ನೀಡಬೇಕು. ದ್ರವರೂಪದ ಆಹಾರವನ್ನೂ ನೀಡಬಹುದು. ಮಂಕಿಪಾಕ್ಸ್ ರೋಗಲಕ್ಷಣಗಳು ಕಾಣಿಸಿಕೊಂಡರೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು.

ತಡೆ ಕ್ರಮಗಳು

- ಚರ್ಮದಲ್ಲಿ ದದ್ದುಗಳು ಕಾಣಿಸಿಕೊಂಡವರ ಜತೆ ಸಂಪರ್ಕ ತಪ್ಪಿಸಿ, ದದ್ದುಗಳನ್ನು ಮುಟ್ಟಬೇಡಿ
- ಮಂಕಿಪಾಕ್ಸ್ ಸೋಂಕಿತರಿಗೆ ಮುತ್ತು ಕೊಡಬೇಡಿ, ಅವರನ್ನು ಆಲಂಗಿಸಿಕೊಳ್ಳಬೇಡಿ, ಅವರ ಜತೆಗೆ ಲೈಂಗಿಕ ಸಂಪರ್ಕ ಮಾಡಬೇಡಿ
- ಸೋಂಕಿತರ ಜತೆಗೆ ಆಹಾರ ಸೇವನೆಯ ಬಟ್ಟಲು, ಲೋಟ ಇತ್ಯಾದಿಗಳನ್ನು ಹಂಚಿಕೊಳ್ಳಬೇಡಿ
- ಸೋಂಕಿತರು ಬಳಸಿದ ಬಟ್ಟೆ, ಟವಲು, ಹೊದಿಕೆ ಇತ್ಯಾದಿಗಳನ್ನು ಮುಟ್ಟಬೇಡಿ
- ಸಾಬೂನು ಬಳಸಿ ಆಗಾಗ ಕೈತೊಳೆಯಿರಿ, ಆಲ್ಕೋಹಾಲ್ ಇರುವ ಸ್ಯಾನಿಟೈಸರ್ ಬಳಸಿ
- ಮಧ್ಯ ಮತ್ತು ಪಶ್ಚಿಮ ಆಫ್ರಿಕಾದಲ್ಲಿ ಇರುವವರು ಪ್ರಾಣಿಗಳನ್ನು ಮುಟ್ಟಬಾರದು. ಅಲ್ಲಿನ ಪ್ರಾಣಿಗಳ ದೇಹದಲ್ಲಿ ವೈರಾಣು ಇರುವ ಸಾಧ್ಯತೆ ಇದೆ
- ಸೋಂಕು ತಗಲಿದವರು ಅಥವಾ ಲಕ್ಷಣಗಳು ಇರುವವರು ಪ್ರತ್ಯೇಕವಾಗಿ ಇರಬೇಕು. ಸಾಕುಪ್ರಾಣಿಗಳಿಂದಲೂ ದೂರ ಇರಬೇಕು

ಲೈಂಗಿಕ ಕ್ರಿಯೆಯಿಂದ ಪ್ರಸರಣ?


ಪರಸ್ಪರ ಸಂಪರ್ಕದಿಂದ ಮಂಕಿಪಾಕ್ಸ್ ವೈರಾಣು ಹರಡುತ್ತದೆ ಎಂಬುದರ ಜೊತೆಗೆ ಅದು, ಪುರುಷ ಹಾಗೂ ಪುರುಷರ ನಡುವೆ ಏರ್ಪಡುವ ಲೈಂಗಿಕ ಕ್ರಿಯೆಯಿಂದಲೂ ಹರಡುತ್ತದೆ ಎಂಬ ವಿಚಾರದ ಬಗ್ಗೆ ಆರೋಗ್ಯ ತಜ್ಞರು ಗಮನ ಕೇಂದ್ರೀಕರಿಸಿದ್ದಾರೆ. ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್ (ಸಿಡಿಸಿ), ಅಮೆರಿಕದಲ್ಲಿ ಪುರುಷ–ಪುರುಷ ಲೈಂಗಿಕಾಸಕ್ತ ಸಮುದಾಯದವರು ಸೇರಿದಂತೆ ಎಲ್ಲರಲ್ಲಿಯೂ ಜಾಗೃತಿ ಮೂಡಿಸುತ್ತಿದ್ದು, ಸೋಂಕಿತರ ಜೊತೆ ನಿಕಟ ಸಂಪರ್ಕ ಹೊಂದಿರುವವರು ಲಸಿಕೆ ಪಡೆಯಲು ಅರ್ಹರು ಎಂದು ತಿಳಿಸುತ್ತಿದೆ. ಪುರುಷ–ಪುರುಷ ಲೈಂಗಿಕಾಸಕ್ತರು ಹಾಗೂ ಪುರುಷ ಹಾಗೂ ಮಹಿಳೆಯರಿಬ್ಬರ ಜೊತೆಗೂ ಲೈಂಗಿಕ ಸಂಪರ್ಕ ಹೊಂದುವ ವ್ಯಕ್ತಿಗಳಿಗೆ ಲಸಿಕೆಯನ್ನು ಆದ್ಯತೆಯ ಮೇಲೆ ಒದಗಿಸಲು ಕೆಲವು ನಗರಗಳು ಮುಂದಾಗಿವೆ ಎಂದು ‘ಪಾಪ್ಯುಲರ್ ಸೈನ್ಸ್’ ನಿಯತಕಾಲಿಕ ವರದಿ ಮಾಡಿದೆ.

ಮಂಕಿಪಾಕ್ಸ್ ಎಂಬುದು ‘ಲೈಂಗಿಕ ಸಂಪರ್ಕದ ಸೋಂಕು’ (ಎಸ್‌ಟಿಐ) ಅಲ್ಲದಿದ್ದರೂ, ಆರೋಗ್ಯ ತಜ್ಞರು ಸೋಂಕನ್ನು ಆ ರೀತಿ ಬಿಂಬಿಸುತ್ತಿರುವುದೇಕೆ ಎಂದು ಹಲವರು ದನಿ ಎತ್ತಿದ್ದಾರೆ. ಈ ಮೂಲಕ ಪುರುಷ–ಪುರುಷ ಲೈಂಗಿಕ ಸಂಪರ್ಕಕ್ಕೆ ಕಳಂಕದ ಪಟ್ಟ ಕಟ್ಟಲಾಗುತ್ತಿದೆಯೇ ಎಂದು ಪ್ರಶ್ನಿಸಿದ್ದಾರೆ. ಮಂಕಿಪಾಕ್ಸ್ ಮತ್ತು ಲೈಂಗಿಕತೆ ನಡುವಿನ ನಂಟು ನಿಜಕ್ಕೂ ಗೊಂದಲಕಾರಿಯಾಗಿದೆ. ಅದು ಲೈಂಗಿಕ ಕ್ರಿಯೆಯೊಂದರಿಂದಲೇ ಹರಡುವ ಸೋಂಕು ಅಲ್ಲದಿದ್ದರೂ, ಪುರುಷ–ಪುರುಷರ ನಡುವಿನ ಲೈಂಗಿಕ ಕ್ರಿಯೆಯಿಂದ ಹರಡಿದಂತೆ ತೋರುತ್ತಿದೆ. ಇದರರ್ಥ, ಪುರುಷ–ಪುರುಷನ ಲೈಂಗಿಕ ಸಂಪರ್ಕವನ್ನು ನಿಯಂತ್ರಿಸುವುದರ ಮೂಲಕ ತಕ್ಷಣಕ್ಕೆ ವೈರಾಣು ಪ್ರಸರಣ ತಡೆಯುವುದು ಕಾರ್ಯತಂತ್ರದ ಒಂದು ಭಾಗ ಎನ್ನಲಾಗಿದೆ. ‘ಲೈಂಗಿಕ ಕ್ರಿಯೆಯು ವೈರಾಣು ಹೆಚ್ಚಿನ ಪ್ರಮಾಣದಲ್ಲಿ ಹರಡಲು ಸಹಾಯ ಮಾಡುತ್ತದೆ’ ಎಂದು ಕ್ಯಾಲಿಫೋರ್ನಿಯಾ ಲಾಸ್ ಏಂಜಲೀಸ್ ವಿಶ್ವವಿದ್ಯಾಲಯದ ವೈರಾಣುಶಾಸ್ತ್ರಜ್ಞೆ ಆ್ಯನ್ ರಿಮೊಯಿನ್ ಅಭಿಪ್ರಾಯಪಟ್ಟಿದ್ದಾರೆ.

ಆಧಾರ: ಡಬ್ಲ್ಯುಎಚ್‌ಒ, ಸಿಡಿಸಿ, ಅವರ್ ವರ್ಲ್ಡ್ ಇನ್ ಡಾಟಾ.ಒಆರ್‌ಜಿ

ಪ್ರಜಾವಾಣಿ ಪ್ರಜಾಧ್ವನಿ

ಜನರ ಮನದಾಳದ ಮಾತು



ಪಕ್ಕದ ಕೇರಳದಲ್ಲಿ ಮಂಕಿಪಾಕ್ಸ್ ದೃಢಪಟ್ಟಿರುವುದರಿಂದ ಕರ್ನಾಟಕದಲ್ಲೂ ಮುನ್ನೆಚ್ಚರಿಕೆ ವಹಿಸುವುದು ಸೂಕ್ತವೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ವೇದವ್ಯಾಸರ ಶಿವಪುರಾಣಸಾರ



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 177

ಯಜ್ಞನಾಶಕ್ಕೆ ಹುಟ್ಟಿದ ವೀರಭದ್ರ

‘ಎಲೈ ನಾರದ, ಆಕಾಶವಾಣಿಯನ್ನ ಕೇಳಿದ ದೇವತೆಗಳು, ಮುನಿಗಳು ತುಂಬಾ ಆಶ್ಚರ್ಯಗೊಳ್ಳುತ್ತಾರೆ. ಆದರೆ ಶಿವಮಾಯೆಯಿಂದ ಮೋಹಿತರಾಗಿ ಏನನ್ನೂ ಹೇಳದೇ ಯಜ್ಞದ ಬಳಿಯೇ ಉಳಿಯುತ್ತಾರೆ. ಅತ್ತ ಭೃಗುಮುನಿಯ ಮಂತ್ರಬಲದಿಂದ ಸೋತು ಓಡಿಹೋದ ಶಿವಗಣಗಳು ಕೈಲಾಸಕ್ಕೆ ಬಂದು ರುದ್ರನಿಗೆ ನಡೆದ ಸಮಾಚಾರವನ್ನೆಲ್ಲಾ ಹೀಗೆ ಹೇಳಿದವು: ಜಗದ್ರಕ್ಷಕನಾದ ಓ ಸ್ವಾಮಿ, ಗರ್ವಿಷ್ಠನೂ ದುರ್ಮತಿಯೂ ಆದ ದಕ್ಷಬ್ರಹ್ಮ ಅಪಮಾನವನ್ನು ಮಾಡಿದ್ದರಿಂದ ಸತೀದೇವಿ ಆತ್ಮಾಹುತಿ ಮಾಡಿಕೊಂಡಳು. ಇದನ್ನು ನೋಡಿ ದುಃಖಿತರಾದ ಹತ್ತುಸಾವಿರ ಗಣಗಳು ಶಸ್ತ್ರಗಳಿಂದ ತಮ್ಮ ಶರೀರಗಳನ್ನೇ ಪ್ರಹರಿಸಿಕೊಂಡು ಮೃತವಾದುವು. ಇನ್ನುಳಿದ ಗಣಗಳು ಕ್ರೋಧದಿಂದ ಯಜ್ಞ ನಾಶಕ್ಕೆ ಮುಂದಾದಾಗ ಭೃಗುಮುನಿ ಮಂತ್ರಶಕ್ತಿಯಿಂದ ಸಾಯಿಸಿದ. ಅಳಿದುಳಿ ನಾವು ಕೈಲಾಸಕ್ಕೆ ಬಂದೆವು. ಓ ಮಹಾಪ್ರಭು, ದುಷ್ಟರಾದ ಆ ದಕ್ಷಾದಿಗಳಿಗೆ ತಕ್ಕ ಪ್ರತೀಕಾರವನ್ನು ಮಾಡು.

‘ಗಣಗಳು ಹೇಳಿದ ಮಾತುಗಳನ್ನು ಕೇಳಿದ ಪರಮೇಶ್ವರನು ನಿನ್ನನ್ನು ಸ್ಮರಿಸಿದ. ನೀನು ನಡೆದ ಸಮಾಚಾರವೆಲ್ಲವನ್ನೂ ಹೇಳಿದೆ. ಇದನ್ನು ಕೇಳಿ ರುದ್ರದೇವ ತುಂಬಾ ಕೋಪಗೊಂಡು ತನ್ನ ಜಟೆಯನ್ನು ಪರ್ವತದ ಮೇಲೆ ಅಪ್ಪಳಿಸಿ ಹೊಡೆದ. ಹಾಗೆ ಹೊಡೆದಾಗ, ಜಟೆಯು ಎರಡು ಭಾಗವಾಗಿ ಒಡೆಯಿತು. ಜಟೆಯ ಮೊದಲ ಭಾಗದಿಂದ ಮಹಾಬಲಶಾಲಿಯಾದ ವೀರಭದ್ರ ಜನಿಸಿದ. ಆತ ಭೂಮಿಯೆಲ್ಲವನ್ನೂ ವ್ಯಾಪಿಸಿದ ಪ್ರಳಯಾಗ್ನಿಯಂತೆ ಭಯಂಕರನಾಗಿದ್ದ. ಅವನಿಗೆ ಸಾವಿರ ಕೈಗಳಿದ್ದವು. ನಂತರ ರುದ್ರನ ಕೋಪನಿಶ್ವಾಸದಿಂದ ನೂರಾರು ಜ್ವರಗಳು ಜನಿಸಿದವು. ಅದರಲ್ಲಿ ಹದಿಮೂರು ಭಯಂಕರ ಸನ್ನಿಪಾತಜ್ವರಗಳು ಜನಿಸಿದವು. ರುದ್ರನ ಎರಡನೆ ಜಟಾಭಾಗದಿಂದ ಮಹಾಭಯಂಕರಳಾದ ಮಹಾಕಾಳಿ ಜನಿಸಿದಳು. ಅವಳೊಡನೆ ಅನೇಕ ಭೂತಗಳೂ ಜನಿಸಿದುವು. ಜ್ವರಗಳೆಲ್ಲ ಭಯಂಕರವಾದ ಶರೀರಗಳನ್ನು ಧರಿಸಿ, ಲೋಕಕ್ಕೆ ತೊಂದರೆಯನ್ನ ಉಂಟುಮಾಡುವ ಸಾಮರ್ಥ್ಯದಿಂದ ಪ್ರಜ್ವಲಿಸುತ್ತಿದ್ದವು.

‘ರುದ್ರನ ಬಲಜಟೆಯಿಂದ ಹುಟ್ಟಿದ ವೀರಭದ್ರನು ಪರಮೇಶ್ವರನಿಗೆ ನಮಸ್ಕರಿಸಿ, ‘ಓ ಮಹಾರುದ್ರನೇ, ನಾನು ಈಗ ಏನನ್ನು ಮಾಡಬೇಕು? ಸಪ್ತಸಮುದ್ರ ಗಳನ್ನು ಬತ್ತಿಸಬೇಕೇ? ಕ್ಷಣಾರ್ಧದಲ್ಲಿಯೇ ಮಹಾಪರ್ವತಗಳನ್ನ ಚೂರೂಚೂರು ಮಾಡಲೇ? ಒಂದು ಕ್ಷಣದಲ್ಲಿಯೇ ಬ್ರಹ್ಮಾಂಡವನ್ನು ಭಸ್ಮಮಾಡಲೇ? ದೇವತೆಗಳ ನ್ನಾಗಲೀ ಮುನಿಗಳನ್ನಾಗಲೀ ಸುಟ್ಟುಹಾಕಲೇ? ಸಕಲ ಲೋಕಗಳಲ್ಲೂ ಪ್ರಳಯ ಸೃಷ್ಟಿಸಬೇಕೇ? ಓ ಸ್ವಾಮಿ, ಯಾವ ಕಾರ್ಯಕ್ಕಾಗಿ ನೀನು ಕಳುಹಿಸಿದರೂ ಸರಿಯೇ, ಆ ಕಾರ್ಯವನ್ನು ನಿನ್ನ ಅನುಗ್ರಹದಿಂದ ಸಾಧಿಸಿಕೊಂಡೇ ಬರುವೆ’ ಎನ್ನುತ್ತಾನೆ.

ಆಗ ರುದ್ರನು ‘ಎಲೈ ವೀರಭದ್ರ, ಬ್ರಹ್ಮಪುತ್ರ ದಕ್ಷ ಯಾಗ ಮಾಡುತ್ತಿದ್ದಾನೆ. ನನ್ನನ್ನು ದ್ವೇಷಿಸುತ್ತಿರುವ ಆ ದಕ್ಷನ ಯಾಗವನ್ನು ಧ್ವಂಸ ಮಾಡು. ಅಲ್ಲಿ ವಿಷ್ಣುವಾಗಲೀ ಬ್ರಹ್ಮನಾಗಲೀ ಇಂದ್ರನಾಗಲೀ ಯಮನಾಗಲೀ – ಯಾರೇ ಎದುರು ಬಂದವರನ್ನ ನಿಗ್ರಹಿಸು. ಶೈವನಾದ ದಧೀಚಿಮುನಿಯ ಶಪಥವನ್ನು ಕಡೆಗಣಿಸಿ, ಅಲ್ಲಿ ಸೇರಿರುವವರೆಲ್ಲರನ್ನೂ ಭಸ್ಮಮಾಡು. ನಿನ್ನ ಸಹಾಯಕ್ಕಾಗಿ ಪ್ರಮಥಗಣಗಳೂ ನಿನ್ನೊಡನೆ ಬರುತ್ತವೆ. ವಿಷ್ಣು ಮುಂತಾದವರು ಭ್ರಮೆಯಿಂದ ನಿನ್ನ ಮೇಲೇರಿಬಂದರೆ ಅವರನ್ನೂ ಆಕರ್ಷಣ ಮಂತ್ರದಿಂದ ಆಕರ್ಷಿಸಿ ನಾಶಗೊಳಿಸು. ಆ ಯಜ್ಞಶಾಲೆಯಲ್ಲಿ ಯಾರು ಗರ್ವದಿಂದಿರುವವರೋ ಅವರೆಲ್ಲ ದ್ರೋಹಿಗಳು. ಅವರನ್ನು ಸುಟ್ಟು ಭಸ್ಮಮಾಡು. ನೀನು ಯಜ್ಞಶಾಲೆಗೆ ಹೋದೊಡನೆಯೇ, ವಿಶ್ವೇದೇವರು ಮೊದಲಾದವರು ಭಯದಿಂದ ನಿನ್ನನ್ನು ಸ್ತುತಿಸುವರು. ಅದಕ್ಕೆ ಮರುಳಾಗಬೇಡ. ಅದನ್ನು ಗಮನಿಸದೆ ನೀನು ಅವರೆಲ್ಲರನ್ನೂ ಅಗ್ನಿಜ್ವಾಲೆಯಿಂದ ಸುಡು. ದಕ್ಷನ ಮೂರ್ಖಪರಿವಾರವನ್ನು ಭಸ್ಮಮಾಡಿ ಯಜ್ಞಸೋಮವನ್ನು ಪಾನ ಮಾಡು’ ಎಂದು ಅಪ್ಪಣೆ ಮಾಡಿದ ಎಂದು ಬ್ರಹ್ಮ ಹೇಳುವಲ್ಲಿಗೆ ಮೂವತ್ತೆರಡನೆಯ ಅಧ್ಯಾಯ ಮುಗಿಯುತ್ತದೆ. •

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಗೋದಾವರಿ ನದಿಯಿಂದ ಉಂಟಾದ ಪ್ರವಾಹದಲ್ಲಿ ಸಿಲುಕಿದ್ದ ಜನರನ್ನು ರಕ್ಷಿಸಲಾಯಿತು ಎಂಬುದನ್ನು ಬಿಂಬಿಸುವ ವಿಡಿಯೊವೊಂದು ಇತ್ತೀಚೆಗೆ ಕೆಲವು ಸುದ್ದಿವಾಹಿನಿಗಳಲ್ಲಿ ಪ್ರಸಾರವಾಯಿತು. ಪ್ರವಾಹದಲ್ಲಿ ಸಿಲುಕಿದ್ದ ಅರ್ತ್‌ಮೂವರ್ ಯಂತ್ರದ ಮೇಲೆ ಕೆಲ ಜನರು ರಕ್ಷಣೆ ಪಡೆದಿದ್ದರು. ಸಂತ್ರಸ್ತರ ನೆರವಿಗೆ ಧಾವಿಸಿದ ವಾಯುಪಡೆಯ ಎರಡು ವಿಶೇಷ ಹೆಲಿ-ಕಾಪ್ಟರ್‌ಗಳು ಹಗ್ಗದ ಮೂಲಕ ಜನರನ್ನು ರಕ್ಷಿಸಿದ ರೋಚಕ ವಿಡಿಯೊ ಸಾಕಷ್ಟು ವೈರಲ್ ಆಗಿತ್ತು. ಇದು ತೆಲಂಗಾಣದಲ್ಲಿ ಉಂಟಾದ ಪ್ರವಾಹದ ವಿಡಿಯೊ ಎಂಬುದಾಗಿ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಯಿತು.



ಸುದ್ದಿವಾಹಿನಿಗಳು ಪ್ರಸಾರ ಮಾಡಿದ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾದ ವಿಡಿಯೊ ತೆಲಂಗಾಣದಲ್ಲಿ ಈ ಬಾರಿ ಉಂಟಾದ ಪ್ರವಾಹಕ್ಕೆ ಸಂಬಂಧಿಸಿದ್ದಲ್ಲ ಎಂದು ಲಾಜಿಕಲ್ ಇಂಡಿಯನ್ ಫ್ಯಾಕ್ಟ್ ಚೆಕ್ ವೇದಿಕೆ ತಿಳಿಸಿದೆ. 2021ರ ನವೆಂಬರ್ 20ರಂದು ಯೂಟ್ಯೂಬ್‌ನಲ್ಲಿ ಈ ವಿಡಿಯೊ ಅಪ್‌ಲೋಡ್ ಆಗಿದೆ. ಆಂಧ್ರ ಪ್ರದೇಶದ ಚಿತ್ರಾವತಿ ನದಿಯ ಪ್ರವಾಹದಲ್ಲಿ ಸಿಲುಕಿದ ಜನರನ್ನು ರಕ್ಷಿಸಲಾದ ವಿಡಿಯೊ ಇದಾಗಿದೆ. ಕಳೆದ ವರ್ಷ ಉಂಟಾಗಿದ್ದ ಪ್ರವಾಹದ ಕುರಿತು ಎನ್‌ಡಿಟಿವಿ ಸೇರಿದಂತೆ ಹಲವು ಸುದ್ದಿವಾಹಿನಿಗಳು ವರದಿ ಮಾಡಿದ್ದವು.

ಗುಂಡಣ್ಣ



ಬೆರಗಿನ ಬೆಳಕು



ಗುರುರಾಜ ಕರಜಗಿ

ವಿಪರೀತದ ಆಸೆ

ಅಪರಿಮಿತವೇನಲ್ಲ ಜೀವನಕೆ ಲಭ್ಯ ಸುಖ
ಚಪಲದಿಂ ಕಣ್ಣನತ್ತಿತ್ತಲಲಸುತಿರೆ ||
ಸ್ವಪರಿಸ್ಥಿತಿಯ ಧರ್ಮ ನಷ್ಟವಹುದೊಂದೆ ಫಲ |
ವಿಫಲ ವಿಪರೀತಾಸೆ – ಮಂಕುತಿಮ್ಮ || 675 |

ಪದ-ಅರ್ಥ: ಅಪರಿಮಿತವೇನಲ್ಲ = ಅಪರಿಮಿತವು(-ಮಿತಿಇಲ್ಲದ್ದು) + ಏನಲ್ಲ, ಲಭ್ಯ = ದೊರೆತ, ಕಣ್ಣನತ್ತಿತ್ತಲಲಸುತಿರೆ = ಕಣ್ಣನು + ಅತ್ತಿ ತ್ತಲು + ಅ-ಲಸುತಿರೆ, ನಷ್ಟವಹುದೊಂದೆ = ನಷ್ಟವಹುದು- + ಒಂದೆ, ವಿಪರೀತಾಸೆ = ವಿಪರೀತದ ಆಸೆ.

ವಾಚ್ಯಾರ್ಥ: ಬದುಕಿಗೆ ದೊರೆತ ಸುಖ ಮಿತಿ ಇಲ್ಲದ್ದೇನಲ್ಲ. ಆದರೆ ಚಪಲತೆಯಿಂದ, ಆಸೆಯಿಂದ ಕಣ್ಣನ್ನು ಆ ಕಡೆಗೆ ಈ ಕಡೆಗೆ ಚಲಿಸುತ್ತಿದ್ದರೆ ದೊರೆಯುವುದು ಒಂದೇ ಫಲ. ಅದು ಇರುವ ಪರಿಸ್ಥಿತಿಯ ನಷ್ಟ. ವಿಪರೀತದ ಆಸೆ ಎಂದಿಗೂ ವಿಫಲವೇ.

ವಿವರಣೆ: ಪುರಾಣ, ಇತಿಹಾಸ ಮತ್ತು ವರ್ತಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಹಾ ಮಹಾ ಶಕ್ತಿಶಾಲಿಗಳು, ಎತ್ತರಕ್ಕೆ ಏರಬಹುದಾಗಿದ್ದವರು ದೊಪ್ಪನೆ ಕೆಳಗೆ ಬಿದ್ದು ತಮ್ಮ ಜೀವಿತದಲ್ಲಿ ಶಕ್ತಿಹೀನವಾಗಿ, ಅವಮಾನಿತರಾಗಿದ್ದನ್ನು ಕಾಣಬಹುದು. ಮಹಾ ಶಕ್ತಿಶಾಲಿಯಾಗಿದ್ದ ಯಯಾತಿಗೆ ಭೋಗದ ಅಪೇಕ್ಷೆ. ತನ್ನ ಕಾಮಾಪೇಕ್ಷೆಯನ್ನು ತೀರಿಸಿಕೊಳ್ಳಲು ಮಗನಿಂದಲೇ ಯೌವನವನ್ನು ಪಡೆಯುತ್ತಾನೆ. ಭೋಗದಿಂದ ಭೋಗವನ್ನು ಗೆಲ್ಲುವುದು ಅಸಾಧ್ಯವೆಂದು ತಿಳಿದು ಮಗನಿಗೆ ಯೌವನವನ್ನು ಮರಳಿಸುತ್ತಾನೆ. ಅತಿ ಕಾಮದ ಅಪೇಕ್ಷೆ ಯಯಾತಿಯನ್ನು ಹಣ್ಣು ಮಾಡಿತು. ಗ್ರೀಕ್ ಪುರಾಣಗಳಲ್ಲಿ ಬರುವ ರಾಜ ಮಿಡಾಸ್‌ನ ಕಥೆ ರೋಚಕವಾದದ್ದು. ದೇವಕರುಣೆಯಿಂದ ವರ ಪಡೆದವ ಮಿಡಾಸ್. ತಾನು ಅಪರಿಮಿತ ಶ್ರೀಮಂತನಾಗಬೇಕೆಂದುಕೊಂಡು, ಮುಟ್ಟಿದ್ದೆಲ್ಲ ಬಂಗಾರವಾಗಲಿ ಎಂಬ ವರ ಕೇಳಿದ. ಈ ಅತಿಯಾಸೆ ಒಳ್ಳೆಯದನ್ನು ಮಾಡಿತೆ? ಆತ ಕುಡಿಯಬೇಕೆಂದಿದ್ದ ನೀರು, ತಿನ್ನಬೇಕೆಂದಿದ್ದ ಹಣ್ಣು, ಆಹಾರಗಳು ಚಿನ್ನವಾದವು. ಅವನನ್ನು ಪ್ರೀತಿಯಿಂದ ಓಡಿಬಂದು ತಬ್ಬಿದ ಮಗಳು ಕೂಡ ಚಿನ್ನದ ವಿಗ್ರಹವಾದಳು. ಅವನ ಜೀವನದಲ್ಲಿ ಸಂತೋಷ ಕರಗಿ ಹೋಯಿತು. ಇಡೀ ಜಗತ್ತಿನ ಮೇಲೆ ತನ್ನ ಅಧಿಕಾರವನ್ನು ಚಲಾಯಿಸಬೇಕೆಂಬ ಮಹಾತ್ವಾಕಾಂಕ್ಷೆಯಿಂದ ಹೊರಟ ಹಿರಣ್ಯಕಶಿಪುವಿಗೆ ಏನಾಯಿತೆಂಬುದು ಎಲ್ಲರಿಗೂ ತಿಳಿದದ್ದೇ. ಪ್ರಪಂಚದಲ್ಲಿ ಶಾಶ್ವತವಾದ ಮನ್ನಣೆಯನ್ನು ಪಡೆಯಲೆಂದು ಗುರುಗಳ ವೇಷ ಧರಿಸಿ, ಕೆಲಕಾಲ ಜನರನ್ನು ತಮ್ಮ ಮಾತಿನಿಂದ, ಆಕರ್ಷಣೆಗಳಿಂದ ಮರುಳು ಮಾಡಿ, ನಂತರ, ಅವರ ಕಣ್ಣಿನಲ್ಲಿ ಚಿಕ್ಕವರಾಗಿ, ಜೈಲು ಸೇರಿಯೋ, ಕೊಲೆಯಾಗಿಯೋ ಮರೆಯಾದವರ ಕಥೆಗಳು ಅನೇಕವಿವೆ.

ನಮ್ಮ ಅಪೇಕ್ಷೆಗಳಿಗೆ ಮಿತಿ ಇಲ್ಲ. ಅದು ದೇಹಕಾಮವಾಗಬಹುದು, ಅಧಿಕಾರವಾಗಬಹುದು, ಖ್ಯಾತಿಯಾಗಬಹುದು, ಚಿರಂಜೀವಿತ್ವವಾಗಬಹುದು, ಹಣವಾಗಬಹುದು. ಮನುಷ್ಯ ಜೀವನದಲ್ಲಿ ಎಲ್ಲವನ್ನೂ ಒಂದು ಹದದಲ್ಲಿ ಬಳಸಲು ಸಾಧ್ಯವಿದೆ. ಆದರೆ ಅದು ಮಿತವಾದದ್ದು ಎಂಬ ಅರಿವು ಇರುವವರೆಗೆ ಎಲ್ಲವೂ ಚೆನ್ನ. ಕಗ್ಗ ಅದನ್ನು ಒತ್ತಿ ಹೇಳುತ್ತದೆ.

ಜೀವನಕ್ಕೆ ದೊರೆಯುವ ಸುಖ ಅಮಿತವಾದದ್ದಲ್ಲ. ಆದರೆ ಅತಿಯಾಸೆಯಿಂದ ದೃಷ್ಟಿ ಯನ್ನು ಆಚೀಚೆ ತಿರುಗಿಸುತ್ತ, ಅಸಾಧ್ಯವಾದುದಕ್ಕೆ ಕೈಚಾಚಿದರೆ ಆಗುವುದು ಏನು? ಅಮಿತವಾದದ್ದು ದೊರೆಯುವುದಿಲ್ಲ ಮತ್ತು ಇರುವಷ್ಟು ಸುಖವೂ ಕಳೆದುಹೋಗುತ್ತದೆ. ವಿಪರೀತದ ಆಸೆ ಎಂದಿಗೂ ಸಫಲವಾಗದು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಜುಲೈ 20, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ಸಪ್ತಮಿ ಗಂ. 07-37 ನಕ್ಷತ್ರ: ರೇವತಿ ಗಂ. 12-51 ಯೋಗ: ಸುಕರ್ಮ ಗಂ. 12-42, ಕರಣ: ಬವ ಗಂ. 07-37, ಕರ್ಕಾಟಕ ಮಾಸದ 03 ನೇ ದಿನ.
ರಾಹುಕಾಲ : ಮಧ್ಯಾಹ್ನ 12:00–01:30
ಸೂರ್ಯೋದಯ : 06-16 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 20 ಜುಲ್ ಹಿಜಾನ್
ಅದೃಷ್ಟ ಸಂಖ್ಯೆ : 4, 6

ಮೇಷ : ನರರೋಗ ತಜ್ಞರಿಗೆ ಅಥವಾ ವಿದ್ಯಾರ್ಥಿಗಳಿಗೆ ಹೊಸ ಅನುಭವಗಳೊಂದಿಗೆ ವಿದೇಶ ಪ್ರಯಾಣದ ಸಾಧ್ಯತೆ, ವೃತ್ತಿ ನಡೆಸಲು ಅವಕಾಶ ಸಿಗಲಿದೆ. ಇಂದಿನ ನಿಮ್ಮ ದಿನಚರಿಯಲ್ಲಿ ಅಡೆತಡೆ ಇಲ್ಲದೆ ಕೆಲಸ ಸಾಗುತ್ತದೆ.

ವೃಷಭ : ಪ್ರಾಮಾಣಿಕವಾಗಿ ನಡೆಯುವ ನಿಮಗೆ ವ್ಯವಹಾರದಲ್ಲಿ ಲಾಭಾಂಶ ಕಡಿಮೆ ಇದ್ದರೂ ನೆಮ್ಮದಿ ಇರುವುದು. ಅನ್ಯರಿಂದ ಆರ್ಥಿಕ ಸಹಾಯ ನಿರೀಕ್ಷಿಸುವುದು ಸರಿಯಲ್ಲ, ಸಾಧ್ಯವಾಗುವುದೂ ಇಲ್ಲ. ಗೃಹದಲ್ಲಿ ಶಾಂತಿ ಕಾಪಾಡಿ.

ಮಿಥುನ: ನ್ಯಾಯವಾದಿಗಳಿಗೆ ತಮ್ಮ ವೃತ್ತಿಯಿಂದ ಹೆಚ್ಚಿನ ಆದಾಯ ಗಳಿಕೆಯಾದರೂ ಆತ್ಮಸಾಕ್ಷಿ ಒಪ್ಪಿಕೊಳ್ಳಲಾಗದ ಘಟನೆ ನಡೆಯಬಹುದು. ರಾಜಕೀಯ ರಂಗದಲ್ಲಿ ಜನಪ್ರಿಯತೆ. ತಾಳ್ಮೆ ಪರೀಕ್ಷಿಸುವ ಕೆಲಸಕ್ಕೆ ಕೈ ಹಾಕದಿರಿ

ಕರ್ಕಾಟಕ : ಮುಂದಿನ ಯೋಜನೆಗಳ ಕುರಿತು ಪರಿಣಿತರ ಜೊತೆ ಚರ್ಚೆಯನ್ನು ನಡೆಸಿ. ನೂತನ ದ್ವಿ ಚಕ್ರ ವಾಹನ ಖರೀದಿಯ ಯೋಗವಿದೆ. ಶ್ರೀ ವಿಷ್ಣು ಸಹಸ್ರನಾಮ ಪಠಣೆಯಿಂದ ಹೆಚ್ಚಿನ ಅಭಿವೃದ್ಧಿ ಸಾಧ್ಯ.

ಸಿಂಹ : ಕಟ್ಟಡ ಕಾರ್ಮಿಕರಿಗೆ ಮತ್ತು ದಿನಕೂಲಿಗಾರರಿಗೆ ಅಭಿವೃದ್ಧಿಯ ಬದುಕಿಗೆ ಬೇಕಾದ ಸಾಕಷ್ಟು ಅವಕಾಶಗಳು ಸಿಗುವುದು. ಗೃಹಾಲಂಕಾರ ವಸ್ತುಗಳ ಅಥವಾ ಪಿಠೋಪಕರಣಗಳ ವ್ಯಾಪಾರದಿಂದ ಅಧಿಕ ಲಾಭವನ್ನು ಹೊಂದುವಿರಿ.

ಕನ್ಯಾ : ದಿನಸಿ ವರ್ತಕರು ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಬಂಡವಾಳವನ್ನು ಹಾಕುವ ಬಗ್ಗೆ ಸಂಶಯ ಬೇಡ. ಸಹೋದರ ಸಮಾನರಿಂದಲೂ, ತಂದೆ-ತಾಯಿಯಿಂದಲೂ ಹಿತವಚನಗಳನ್ನು ಕೇಳ ಬೇಕಾಗುವುದು.

ತುಲಾ: ಈ ದಿನದ ಸುಖಕ್ಕಿಂತ ಹೆಚ್ಚಾಗಿ ಭವಿಷ್ಯದ ಕುರಿತು ಗಂಭೀರ ಆಲೋಚನೆ ಮಾಡುವುದು ಸೂಕ್ತ. ಸೋಲೊಪ್ಪಿಕೊಳ್ಳದ ನಿಮ್ಮ ಗುಣವು ಸಹಚರರಲ್ಲಿ ಭಿನ್ನಾಭಿಪ್ರಾಯ ಮೂಡಿಸುವುದು. ಗುಡಿ ಕೈಗಾರಿಕೆ ವೃತ್ತಿಯವರಿಗೆ ಬೇಡಿಕೆ.

ವೃಶ್ಚಿಕ: ಸ್ವತ್ತು ವಿಚಾರದಲ್ಲಿ ಇದ್ದಂತಹ ವಿವಾದಗಳು ಮುಕ್ತಾಯವಾಗಿ ನಿಮಗೆ ಜಯ ಸಿಗಲಿದೆ. ಸಿನಿಮಾ ಕಲಾವಿದರಿಗೆ ಅಪೇಕ್ಷೆ ಪಟ್ಟಂತೆಯೇ ಅವಕಾಶಗಳು ಸಿಗುವುವು. ವೈಯಕ್ತಿಕ ಬದುಕಿನ ವಿಚಾರಗಳತ್ತ ಹೆಚ್ಚಿನ ಗಮನವಿರಲಿ.

ಧನು : ಮನೆ ನಿರ್ಮಾಣದ ಕಾರ್ಯ ಅಡ್ಡಿ-ಆತಂಕಗಳಿಲ್ಲದೆ ಸರಾಗವಾಗಿ ನಡೆಯುವುದು ಹಾಗೂ ಯೋಚನೆಗಿಂತ ಅಧಿಕ ಮಟ್ಟದಲ್ಲಿ ಹಣ ವ್ಯಯವಾಗುತ್ತದೆ. ಪೋಲೀಸ್ ಇಲಾಖೆಗೆ ಹೆಚ್ಚಿನ ಕಾರ್ಯಭಾರ ಇರಲಿದೆ.

ಮಕರ: ನಿಮ್ಮ ಸ್ನೇಹಿತರೊಂದಿಗೆ ಜಂಟಿಯಾಗಿ ವ್ಯವಹರಿಸಿದಲ್ಲಿ ಆದಾಯವನ್ನು ದ್ವಿಗುಣಗೊಳಿಸಿಕೊಳ್ಳುವುದಕ್ಕೆ ಸಹಾಯವಾಗುವುದು. ಸರಕುಸಾಗಾಣಿಕೆ ಮತ್ತು ಸಾರಿಗೆ ವ್ಯವಸ್ಥೆಯವರಿಗೆ ಬಹು ಆದಾಯ ಇರುತ್ತದೆ.

ಕುಂಭ : ವ್ಯವಹಾರದಲ್ಲಿ ಲಾಭ ನಷ್ಟ ಸುಧಾರಿಸಿಕೊಂಡು ಹೋಗುವ ಸಾಮರ್ಥ್ಯ ಬೆಳೆಸಿಕೊಳ್ಳುವುದು ಅನಿವಾರ್ಯ. ಹತ್ತಾರು ಕೆಲಸದ ಸ್ವಲ್ಪ-ಸ್ವಲ್ಪ ಜವಾಬ್ದಾರಿ ಹೊರುವುದಕ್ಕಿಂತ ನಿರ್ದಿಷ್ಟ ಕೆಲಸಕ್ಕೆ ಸಂಪೂರ್ಣ ಗಮನ ಕೊಡಿ.

ಮೀನ : ಪರಿಚಿತರ ಸಹಾಯದಿಂದ ಬರಬೇಕಾಗಿದ್ದ ಹಣ ಕೈಸೇರುವುದು. ರಾಜಕೀಯ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಿರಿ. ಕೆಲಸವನ್ನು ಹುಡುಕುತ್ತಿರುವವರಿಗೆ ಈ ದಿನ ಉದ್ಯೋಗ ದೊರೆಯುವ ಸಾಧ್ಯತೆ.

ಪದಬಂಧ 5024


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಉಚಿತ ಎಂದರೂ ಇದುಯೋಗ್ಯವಾದುದು!(4)
3.ಈತ ಸುದ್ದಿಸಂಗ್ರಹಕಾರ(4)
5.ಮಸೂರವಿಟ್ಟು ನೋಡಿದರೂ ಇದು ಅಸ್ಪಷ್ಟ(3)
7.ವಿತರಕ ನೋಡುತ್ತಿರುವ ಸೂರ್ಯ(2)
9.ಮಜ್ಜನ ನೋಡಲು ನೆರೆದ ಮಂದಿ(2)
10.ಆಮೇಲೂ ಇಳಿಯದಿರುವ ಮತ್ತು!(3)
11.ಸಂತಸವನ್ನು ಹಂಚುತ್ತಿರುವ ಸಾಧು!(2)
12.ಪುರಿಯಲ್ಲಿ ಅಡಗಿರುವ ಶತ್ರು ಕಾಣಿಸಿದನೇ?(2)
14.ಯೌವ್ವನದಲ್ಲಿ ಬರೆದಿರುವ ಪದ್ಯ(3)
16.ಈತ ಅತ್ಯಂತ ಬುದ್ಧಿವಂತ(4)
17.ಆಪ್ತ ತೋರಿಸಿರುವ ರಹಸ್ಯ ಮಾರ್ಗ!(4)

ಮೇಲಿಂದ ಕೆಳಕ್ಕೆ

1.ಪೂರಾ ಸಣಗಿರುವುದು!(3)
2.ತರತಮ ತೋರುವಾಗಲೇ ಕವಿದ ಕತ್ತಲು(2)
3.ತಂಬಾಕು ಕತ್ತರಿಸಲು ಬಳಸಿರುವ ಕಿರುಗತ್ತಿ(2)
4.ರಸ ಒಸರುವ ಜಿಹ್ವೆ(3)
6.ವ್ಯಕ್ತಿ ಅಥವಾ ಸಂಸ್ಥೆಗೆ ಐವತ್ತು ವರ್ಷವಾದಾಗ ನಡೆಸುವ ಉತ್ಸವ(7)
8.ಶ್ವಾಸವಿದ್ದಾಗಲೇ ಮಾಡಿರುವ ನಂಬಿಕೆ ದ್ರೋಹ(5)
9.ದಾರಿಯಲ್ಲಿ ವಹಿಸಿಕೊಟ್ಟ ಹೊಣೆಗಾರಿಕೆ(5)
11.ಕಬ್ಬಿಣದ ಭಾರೀ ಪೆಟ್ಟಿಗೆ(3)
13.ಪುರದಲ್ಲಿ ಆನೆ ಸೊಂಡಲಿನ ತುದಿ ಕಾಣುತ್ತಿದೆಯೇ?(3)
14.ಅತ್ಯಂತ ಚಿಕ್ಕ ಚೂರು(2)
15.ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ(2)



5023ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಕ್ಷರ3.ಸಂತಸ5.ಸರ6.ಸವಾರ7.ರಸ9.ಕಾಷಾಯ 10.ದರಿದ್ರ11.ನಗ13.ಹೂದಾನಿ15.ಜನ16.ತರುಣ17.ನಯನ

ಮೇಲಿಂದ ಕೆಳಕ್ಕೆ: 1.ಅಧರ2.ರಕ್ಕಸ3.ಸಂಸಾರ4.ಸದರ5.ಸಮಕಾಲೀನ 8.ಸಮುದ್ರಯಾನ12.ಗಣಿತ13.ಹೂಬಾಣ14.ನಿಧನ15.ಜವಾನ

ಸುಡೊಕು 5410

		6		7		3		8
			2		4			
7		1		5		4		9
	9		5				7	
1				4	7			3
	6				8		5	
9		5			6			1
				3			8	
6		8	4			9		5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5409 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ಷೇರುಪೇಟೆ ವಹಿವಾಟು 246

ಹಿಂದಿನ ಅಂತ್ಯ 54,521 — ಇಂದಿನ ಅಂತ್ಯ 54,767 (10:00 – 16:00)

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,278
ಇಂದಿನ ಅಂತ್ಯ	16,340
▲	62
ದಿನದ ಕನಿಷ್ಠ	16,359

ವಿನಿಮಯ ದರ

$ ಡಾಲರ್	79.92
£ ಪೌಂಡ್	95.96
€ ಯುರೊ	81.72
¥ ಯೆನ್ (100ಕ್ಕೆ)	58.06

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹440
12 ಮೊಟ್ಟೆಗೆ ₹67
ಮೈಸೂರು
100 ಮೊಟ್ಟೆಗೆ ₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈಂಡ್)	₹1640 (1635)
ಸೋಯಾ (ರಿಫೈಂಡ್)	₹1250 (1240)
ಸೂರ್ಯಕಾಂತಿ (ರಿಫೈಂಡ್)	₹1600 (1580)
ಪಾಮೋಲಿನ್	₹1195 (1185)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹300-492
ದ್ವಿತಳಿ (ಬಿ.ವಿ) ₹255-752

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹171.50
ಆರ್‌ಎಸ್‌ಎಸ್-5 ₹162.50
ಗುಡ್ ಲಾಟ್ ₹156.50

ಕೊಬ್ಬರಿ ಧಾರಣೆ

ಅರಸೀಕೆರೆ ₹13000-14480
ತುರುವೇಕೆರೆ ₹14300-14400
ಪುತ್ತೂರು (ಇತರ) ₹4000-8500

ಅಡುಗೆ ಎಣ್ಣೆ ಬೆಲೆ ತಗ್ಗಿಸಲಿರುವ ಪತಂಜಲಿ



ನವದೆಹಲಿ (ಪಿಟಿಐ): ಪತಂಜಲಿ ಫುಡ್ಸ್ ಲಿಮಿಟೆಡ್ ಕಂಪನಿಯು ಸೋಯಾ ಎಣ್ಣೆ, ಸೂರ್ಯಕಾಂತಿ ಎಣ್ಣೆ ಮತ್ತು ತಾಳೆ ಎಣ್ಣೆ ಬೆಲೆಯನ್ನು ಲೀಟರಿಗೆ ₹ 10ರಿಂದ ₹ 15ರವರೆಗೆ ಒಂದೆರಡು ದಿನಗಳಲ್ಲಿ ಕಡಿತ ಮಾಡಲಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಆಗಿರುವ ಬೆಲೆ ಇಳಿಕೆಯ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾವಣೆ ಮಾಡಬೇಕು ಎಂದು ಕೇಂದ್ರ ಆಹಾರ ಸಚಿವಾಲಯವು ಕಂಪನಿಗಳಿಗೆ ಈಚೆಗೆ ಸೂಚಿಸಿತ್ತು.

ಇದಾದ ನಂತರದಲ್ಲಿ ಮದರ್ ಡೈರಿ ಕಂಪನಿ, ಅದಾನಿ ವಿಲ್ಮರ್ ಕಂಪನಿ ಅಡುಗೆ ಎಣ್ಣೆಗಳ ಬೆಲೆಯನ್ನು ಕಡಿಮೆ ಮಾಡಿವೆ. 'ನಾವು ಅಡುಗೆ ಎಣ್ಣೆಗಳ ಬೆಲೆಯನ್ನು ಒಂದೆರಡು ದಿನಗಳಲ್ಲಿ ಕಡಿಮೆ ಮಾಡಲಿದ್ದೇವೆ. ಕಳೆದ ಒಂದೂವರೆ ತಿಂಗಳ ಅವಧಿಯನ್ನು ಪರಿಗಣಿಸಿದರೆ ಒಟ್ಟು ಕಡಿತವು ಗರಿಷ್ಠ ₹ 35ರವರೆಗೆ ಆಗಲಿದೆ' ಎಂದು ಪತಂಜಲಿ ಫುಡ್ಸ್ ಕಂಪನಿಯ ಸಿಇಒ ಸಂಜೀವ್ ಅಸ್ಥಾನಾ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆಯು ಶೇ 15ರಿಂದ ಶೇ 20ರವರೆಗೆ ಇಳಿಕೆಯಾಗಿದೆ. ಆದರೆ, ಬೆಲೆ ತೀರಾ ಅಸ್ಥಿರವಾಗಿದೆ ಎಂದು ಅಸ್ಥಾನಾ ಹೇಳಿದ್ದಾರೆ.

ಪತಂಜಲಿ ಫುಡ್ಸ್ ಕಂಪನಿಯು ರುಚಿ ಗೋಲ್ಡ್, ಮಹಾ ಕೋಶ್, ಸನ್‌ರಿಚ್, ನ್ಯೂಟ್ರೆಲಾ, ರುಚಿ ಸ್ಟಾರ್ ಮತ್ತು ರುಚಿ ಸನ್‌ಲೈಟ್ ಬ್ರ್ಯಾಂಡ್ ಅಡಿಯಲ್ಲಿ ಆಹಾರ ವಸ್ತುಗಳನ್ನು ಮಾರಾಟ ಮಾಡುತ್ತದೆ.

ಅಡುಗೆ ಎಣ್ಣೆಗಳ ಬೆಲೆ ತಗ್ಗಿಸಿರುವುದಾಗಿ ಮಾರಿಕೊ ಲಿಮಿಟೆಡ್ ಹೇಳಿದೆ. ಆದರೆ, ಹೆಚ್ಚಿನ ವಿವರ ನೀಡಿಲ್ಲ. ಈ ಕಂಪನಿಯು ಸಫೋಲಾ ಬ್ರ್ಯಾಂಡ್ ಅಡಿಯಲ್ಲಿ ಅಡುಗೆ ಎಣ್ಣೆಗಳನ್ನು ಮಾರಾಟ ಮಾಡುತ್ತಿದೆ.

₹ 80.05ಕ್ಕೆ ಕುಸಿದು, ಚೇತರಿಸಿಕೊಂಡ ರೂಪಾಯಿ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ಒಂದು ಹಂತದಲ್ಲಿ ಸಾರ್ವಕಾಲಿಕ ಕನಿಷ್ಠ ಮಟ್ಟವಾದ ₹ 80.05ಕ್ಕೆ ಕುಸಿದಿದ್ದ ರೂಪಾಯಿ ನಂತರ ತುಸು ಚೇತರಿಸಿಕೊಂಡಿತು. ದಿನದ ಅಂತ್ಯಕ್ಕೆ ₹ 79.92ರಂತೆ ವಿನಿಮಯಗೊಂಡಿತು.

ರೂಪಾಯಿ ಕುಸಿತ ತಡೆಯಲು ಆರ್‌ಬಿಐ ಮಧ್ಯಪ್ರವೇಶಿಸಿತ್ತು ಎನ್ನಲಾಗಿದೆ. ಷೇರು ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿರುವುದು, ವಿದೇಶಿ ಹೂಡಿಕೆದಾರರು ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿ ಷೇರು ಖರೀದಿಗೆ ಗಮನಹರಿಸಿದ್ದು ಕೂಡ ರೂಪಾಯಿ ಮೌಲ್ಯ ವೃದ್ಧಿಗೆ ನೆರವಾದವು.

ಮಸ್ಕಿಯ ಮಲ್ಲಿಕಾರ್ಜುನ ಸಹಕಾರ ಬ್ಯಾಂಕ್‌ಗೆ ನಿರ್ಬಂಧ

ಮುಂಬೈ (ಪಿಟಿಐ): ಮಸ್ಕಿಯ 'ಶ್ರೀ ಮಲ್ಲಿಕಾರ್ಜುನ ಪಟ್ಟಣ ಸಹಕಾರಿ ಬ್ಯಾಂಕ್' ಮೇಲೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧ ಹೇರಿದೆ.

ಬ್ಯಾಂಕ್‌ನ ಹಣಕಾಸು ಸ್ಥಿತಿ ಹದಗೆಡುತ್ತಿರುವ ಕಾರಣ ಆರ್‌ಬಿಐ ಈ ತೀರ್ಮಾನ ಕೈಗೊಂಡಿದೆ. ಬ್ಯಾಂಕ್‌ನ ಶೇಕಡ 99.53ರಷ್ಟು ಗ್ರಾಹಕರು ಡಿಐಸಿಜಿಸಿ ನೀಡುವ ವಿಮಾ ಸೌಲಭ್ಯಕ್ಕೆ ಅರ್ಹರಾಗುತ್ತಾರೆ ಎಂದು ಆರ್‌ಬಿಐ ಹೇಳಿದೆ. ಅಂದರೆ, ಇಷ್ಟು ಪ್ರಮಾಣದ ಗ್ರಾಹಕರಿಗೆ ₹ 5 ಲಕ್ಷದವರೆಗಿನ ಠೇವಣಿಗೆ ವಿಮೆಯ ರಕ್ಷೆ ಇರಲಿದೆ.

'ಬ್ಯಾಂಕ್‌ನಲ್ಲಿ ಇರುವ ಉಳಿತಾಯ ಖಾತೆ, ಚಾಲ್ತಿ ಖಾತೆ ಅಥವಾ ಇತರ ಯಾವುದೇ ಖಾತೆಯಿಂದ ಹಣ ಹಿಂದಕ್ಕೆ ಪಡೆಯಲು ಅವಕಾಶ ಇಲ್ಲ. ಆದರೆ, ಠೇವಣಿಯ ಮೊತ್ತವನ್ನು ಸಾಲದ ಜೊತೆ ಸರಿದೂಗಿಸಿಕೊಳ್ಳಲು ಅವಕಾಶ ಇದೆ' ಎಂದು ಆರ್‌ಬಿಐ ತಿಳಿಸಿದೆ.

ಆರ್‌ಬಿಐ ಅನುಮತಿ ಇಲ್ಲದೆ ಈ ಬ್ಯಾಂಕ್ ಹೊಸದಾಗಿ ಸಾಲ ಕೊಡುವಂತಿಲ್ಲ, ಹೊಸದಾಗಿ ಹೂಡಿಕೆ ಮಾಡುವಂತಿಲ್ಲ, ಹೊಸದಾಗಿ ಠೇವಣಿ ಸ್ವೀಕರಿಸುವಂತೆಯೂ ಇಲ್ಲ.

ಪ್ರಕರಣ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳನ್ನು ವಂಚಿಸಿದ ಪ್ರಕರಣಗಳ ಸಂಖ್ಯೆಯು 2021–22ನೆಯ ಆರ್ಥಿಕ ವರ್ಷದಲ್ಲಿ, ಹಿಂದಿನ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇಕಡ 50ರಷ್ಟು ಕಡಿಮೆಯಾಗಿದೆ ಎಂದು ಕೇಂದ್ರ ಸರ್ಕಾರ ರಾಜ್ಯಸಭೆಗೆ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

19-7-2022

ಜಾವಾ 70/80(ಹೊಸ)	11300-11350
ಜಾವಾ 80/90(ಹೊಸ)	10700-10750
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10700-10750

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1650 (1645)
ಒಂದು ವಾರದ ಡೆಲಿವರಿ	1645 (1640)
ಸೋಯಾ ಕಚ್ಚಾ	1195 (1170)
ಪಾಮ್ ವಾರದ ಡೆಲಿವರಿ	1193(1183)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1510)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,550 (50,550)
ಬೆಳ್ಳಿ ಕೆ.ಜಿ 55,550 (55,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಾಸು, ತ್ಯಾಗರಾಜನಗರ, ಬೆಂಗಳೂರು

- **ಪ್ರಶ್ನೆ:** ನಾನು ನಿವೃತ್ತ ಸರ್ಕಾರಿ ನೌಕರ. ಈಗ ನನಗೆ ಸುಮಾರು 65 ವರ್ಷ ವಯಸ್ಸು. ನನ್ನ ನಿವೃತ್ತಿಯ ಸಮಯದಲ್ಲಿ ಬಂದ ಹಣ ₹ 3 ಲಕ್ಷ ಇದೆ. ಈ ಹಣವನ್ನು ಬ್ಯಾಂಕ್ ನಿಶ್ಚಿತ ಠೇವಣಿಯಲ್ಲಿ ಇಡಬೇಕೆಂದಿದ್ದೇನೆ. ಆದರೆ ಬ್ಯಾಂಕ್ ಅಥವಾ ಯಾವುದೇ ಸಂಸ್ಥೆಗಳಲ್ಲಿ ಹೂಡಿಕೆ ಮಾಡಲು ನನಗೆ ಅಗತ್ಯ ಸಲಹೆಯನ್ನು ಯಾರೂ ನೀಡುತ್ತಿಲ್ಲ. ಈ ಇಳಿ ವಯಸ್ಸಿನಲ್ಲಿ ಇಷ್ಟೊಂದು ಮೊತ್ತವನ್ನು ಎಲ್ಲಿ ಹೂಡಿಕೆ ಮಾಡಿದರೆ ನಾನು ನೆಮ್ಮದಿಯಿಂದ ಇರಬಹುದು?

ಉತ್ತರ: ಯಾವುದೇ ವ್ಯಕ್ತಿ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ತನ್ನ ಜೀವಿತದ ಅವಧಿಯಲ್ಲಿ ತನ್ನ ಸುಪರ್ದಿಯಲ್ಲಿ ಸುರಕ್ಷಿತವಾಗಿ ಇರಿಸಿಕೊಳ್ಳಬೇಕೆಂದು ಆಶಿಸುವುದು ಸಹಜ. ಇಂದು ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಅಥವಾ ಉತ್ತಮ ಖಾಸಗಿ ಬ್ಯಾಂಕ್‌ಗಳಲ್ಲಿ ನಿಮ್ಮ ಹಣವನ್ನು ನಿಮ್ಮ ಅಗತ್ಯಕ್ಕೆ ತಕ್ಕಂತೆ ವಿವಿಧ ಕಂತುಗಳಲ್ಲಿ ಬೇರೆ ಬೇರೆ ಕಾಲಾವಧಿಗೆ ಅನುಗುಣವಾಗಿ ಠೇವಣಿಯಾಗಿ ಇರಿಸಬಹುದು. ಇದು ನಿಮ್ಮ ವ್ಯವಹಾರದ ಅಗತ್ಯ, ಅನುಕೂಲಗಳಿಗೆ ತಕ್ಕಂತೆ ಇರಲಿ. ಅದಕ್ಕಾಗಿ ನಿಮಗೆ ಸಮೀಪದಲ್ಲಿರುವ ಬ್ಯಾಂಕ್ ಆಯ್ಕೆ ಮಾಡಿ. ಇದರಿಂದ ನಿಮಗೆ ವಾರ್ಷಿಕವಾಗಿ ಶೇಕಡ 5ರಿಂದ ಶೇ 6.50ರವರೆಗೆ ಬಡ್ಡಿ ಲಭಿಸೀತು.

ಬ್ಯಾಂಕ್‌ಗಳಲ್ಲಿ ಹೂಡಿಕೆ ಮಾಡಲು ಆಗದಿದ್ದರೆ, ಸಮೀಪದ ಯಾವುದೇ ಅಂಚೆ ಕಚೇರಿಯಲ್ಲಿ ಈ ಮೊತ್ತ ಹೂಡಿಕೆ ಮಾಡಬಹುದು. ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಅದೆಷ್ಟೋ ವರ್ಷಗಳ ವಿಶ್ವಾಸಾರ್ಹತೆ ಇರುವ, ಕೇಂದ್ರ ಸರ್ಕಾರದ ಸಂಸ್ಥೆಯಾಗಿರುವ ಅಂಚೆ ಕಚೇರಿಯಲ್ಲಿ ಹಣ ಹೂಡಿಕೆ ಮಾಡಲು ಭದ್ರತೆಯ ದೃಷ್ಟಿಯಿಂದ ಯಾವ ಸಂದೇಹವೂ ಬೇಡ. ಎಲ್ಲ ವಯೋಮಾನಗಳ ವ್ಯಕ್ತಿಗಳಿಗೆ ವಿವಿಧ ಬಗೆಯ ಹೂಡಿಕೆಗಳಿಗೆ ಇಲ್ಲಿ ಅವಕಾಶವಿದೆ. ನೀವು ಹಿರಿಯ ನಾಗರಿಕರಾಗಿರುವುದರಿಂದ ಈ ವರ್ಗದ ವ್ಯಕ್ತಿಗಳಿಗಾಗಿರುವ ಪ್ರತ್ಯೇಕ ಹೂಡಿಕೆಗೂ ಇಲ್ಲಿ ಅವಕಾಶವಿದೆ. ಇಲ್ಲಿ ನಿಮಗೆ ವಾರ್ಷಿಕವಾಗಿ ಶೇಕಡ 5.50ರಿಂದ ಶೇ 7.40ರತನಕ ಹೂಡಿಕೆಯ ಕಾಲಾವಧಿ ಹಾಗೂ ಯೋಜನೆಗೆ ಅನುಗುಣವಾಗಿ ಬಡ್ಡಿ ಲಭಿಸೀತು. ಇದಕ್ಕಾಗಿ ನಿಮ್ಮ ಸಮೀಪದ ಅಂಚೆ ಕಚೇರಿ ಸಂಪರ್ಕಿಸಿ.

ರಮೇಶ ಸಣ್ಣದೇವರು, ಮಲ್ಲೇಶ್ವರ, ಬೆಂಗಳೂರು

- **ಪ್ರಶ್ನೆ:** ತಾವು ಹಿಂದಿನ ಅಂಕಣಗಳಲ್ಲಿ ಉತ್ತಮ ಕಂಪನಿಯ ಷೇರುಗಳಲ್ಲಿ ಹೂಡಿಕೆ ಮಾಡಬೇಕೆಂದು ಹೇಳಿದ್ದೀರಿ. 'ಉತ್ತಮ ಕಂಪನಿ' ಷೇರುಗಳನ್ನು ಆಯ್ಕೆ ಮಾಡುವ ಬಗೆ ತಿಳಿಸಿ.

ಉತ್ತರ: ಹೂಡಿಕೆದಾರ ಲಾಭ ಮಾಡುವ ಉದ್ದೇಶದಿಂದ ಷೇರುಗಳನ್ನು ಆಯ್ಕೆ ಮಾಡುವ ಮೊದಲು ಕೆಲವು ಮೂಲ ಅಂಶಗಳನ್ನು ಪರಿಗಣಿಸಿ ನಿರ್ಧಾರ ಕೈಗೊಂಡರೆ ಸಂಭಾವ್ಯ ಆರ್ಥಿಕ ಅಪಾಯದ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬಹುದು. ಅಥವಾ ಉತ್ತಮ ಲಾಭ ಗಳಿಸಬಹುದು. ಇದಕ್ಕಾಗಿ ನೀವು ಹೂಡಿಕೆ ಮಾಡುವ ಮೊದಲು ಉದ್ದೇಶಿತ ಕಂಪನಿಯ ಬಗ್ಗೆ ಒಂದಿಷ್ಟು ಪರಾಮರ್ಶೆಯನ್ನು ಈ ಕೆಳಗಿನ ಅಂಶವನ್ನು ಪರಿಗಣಿಸಿ ಮಾಡಬಹುದು.

1. ಉದ್ದೇಶಿತ ಕಂಪನಿ ಯಾವ ಕ್ಷೇತ್ರದಲ್ಲಿದೆಯೋ ಆ ಕ್ಷೇತ್ರ ಹಾಗೂ ಕಂಪನಿ ಉತ್ತಮ ಬೆಳವಣಿಗೆ ತೋರುತ್ತಿರಬೇಕು. ಉದಾಹರಣೆಗೆ, ಐ.ಟಿ. ಕ್ಷೇತ್ರ ಉತ್ತಮ ಅಭಿವೃದ್ಧಿಯ ಲಕ್ಷಣ ಹೊಂದಿದ್ದರೆ ಮಾತ್ರ ನೀವು ಆ ವಲಯದ ಷೇರುಗಳನ್ನು ಕೊಳ್ಳುವುದು ಸೂಕ್ತ. ಕೆಲವೊಮ್ಮೆ ಆಯಾ ಕ್ಷೇತ್ರಕ್ಕೆ ಮಾತ್ರ ಸಂಬಂಧಿಸಿದ ಸಮಸ್ಯೆಗಳಿಂದಾಗಿ ಒಟ್ಟು ವ್ಯವಹಾರ ಸೊರಗಬಹುದು. ಅಂತಹ ಸಂದರ್ಭದಲ್ಲಿ ಕಂಪನಿ ಹಿಂದೆ ಎಷ್ಟೇ ಚೆನ್ನಾಗಿ ಲಾಭ ನೀಡಿದ್ದರೂ, ಕ್ಷೇತ್ರಕ್ಕೆ ಸಂಬಂಧಿತ ತಾತ್ಕಾಲಿಕ, ಮಧ್ಯಂತರ ಅಡಚಣೆಗಳು ಷೇರು ಮೌಲ್ಯವನ್ನು ಬಾಧಿಸದೆ ಇರದು. ಅಂತಹ ಸಂದರ್ಭದಲ್ಲಿ ನಿರ್ಧಾರವನ್ನು ತುಸು ಮುಂದೂಡಬೇಕು.

2. ಆಯ್ಕೆ ಮಾಡುವ ಕಂಪನಿ ಯಾವುದೇ ಕಾನೂನು ಹಾಗೂ ಆಡಳಿತಾತ್ಮಕ ವಿಚಾರಗಳಲ್ಲಿ ತೊಂದರೆ ಎದುರಿಸುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ. ಆಯಾ ಕ್ಷೇತ್ರದಲ್ಲಿ ಉತ್ತಮ ಅನುಭವವಿರುವ ಹಾಗೂ ವಿಶ್ವಾಸಾರ್ಹತೆ ಇರುವ ಆಡಳಿತ ಮಂಡಳಿ ಸದಸ್ಯರಿದ್ದಾಗಲಷ್ಟೇ ಯಾವುದೇ ಸಂಸ್ಥೆ ಸಮರ್ಥವಾಗಿ ಮುನ್ನಡೆಯಬಲ್ಲದು. ಕಂಪನಿಯ ಭವಿಷ್ಯದ ಯೋಜನೆಗಳ ಬಗೆಗಿನ ಸಮಗ್ರ ಮಾಹಿತಿಯನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ ಹೂಡಿಕೆದಾರರ ವಿಭಾಗದಲ್ಲಿ ಪ್ರಕಟಿಸಲಾಗುತ್ತದೆ. ಇದನ್ನು ಪ್ರತಿ ತ್ರೈಮಾಸಿಕ ಅವಧಿಗೊಮ್ಮೆ ಗಮನಿಸುತ್ತಿರಿ. ಹಿಂದಿನ ಭರವಸೆಗಳು ನಿಜವಾಗಿವೆಯೇ ಎಂಬುದೂ ಇಲ್ಲಿ ಮುಖ್ಯ. ಇವೆಲ್ಲದರ ಪ್ರತಿಫಲನ ತ್ರೈಮಾಸಿಕ ಫಲಿತಾಂಶ ಪ್ರಕಟವಾದಂತೆ ಷೇರುಗಳ ಬೆಲೆಯಲ್ಲಿ ಗೊತ್ತಾಗುತ್ತದೆ. ಮಾರುಕಟ್ಟೆ ಯಾವತ್ತೂ ಇಂತಹ ವಿಚಾರಗಳನ್ನು ಪೂರ್ವಭಾವಿಯಾಗಿ ಗ್ರಹಿಸಿಕೊಳ್ಳುತ್ತದೆ.

3. ಕಂಪನಿ ಅತಿಯಾಗಿ ಸಾಲ ಮಾಡಿರದೆ, ವ್ಯಾವಹಾರಿಕವಾಗಿ ಆ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರಬೇಕು. ಮುಂದಿನ ನಾಲ್ಕೈದು ಸಾಲುಗಳಲ್ಲಿ ಉತ್ತಮ ಆರ್ಥಿಕ ಪ್ರಗತಿಯ ನಿರೀಕ್ಷೆ ಇರುವ, ತಂತ್ರಜ್ಞಾನ ಬಳಕೆಯೊಡನೆ ಆರ್ಥಿಕ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಳ್ಳುವ ಕಂಪನಿಗಳನ್ನು ಆಯ್ಕೆ ಮಾಡಿ. ಇದಕ್ಕಾಗಿ ಕಂಪನಿ ಅಥವಾ ವಿಶ್ಲೇಷಣಾ ಸಂಸ್ಥೆಗಳು ಪ್ರಕಟಿಸುವ ಆರ್ಥಿಕ ವರದಿ ಹಾಗೂ ದತ್ತಾಂಶ, ಆರ್ಥಿಕ ಅನುಪಾತದ ಅಂಕಿ–ಅಂಶಗಳನ್ನು ಸಮರ್ಥವಾಗಿ ಬಳಸಿಕೊಳ್ಳಿ. ಇದನ್ನು ಅರ್ಥಮಾಡಿಕೊಳ್ಳುವ ಕಲೆ ಕರಗತ ಮಾಡಿಕೊಳ್ಳಿ.

ನಾವು ದಿನನಿತ್ಯ ಉಪಯೋಗಿಸುವ ಮೊಬೈಲ್, ವಾಹನ, ಟಿ.ವಿ ಇತ್ಯಾದಿ ಸವಕಳಿಯಾಗುವ ಉಪಕರಣಗಳನ್ನು ಖರೀದಿಸುವ ಮೊದಲು ಆ ವಸ್ತುವಿನ ತಾಂತ್ರಿಕ ವಿಚಾರ ಅಷ್ಟಾಗಿ ಗೊತ್ತಿಲ್ಲದಿದ್ದರೂ ಹಲವು ಅಂಗಡಿಗಳಿಗೆ ಭೇಟಿ ನೀಡಿ ಆಮೂಲಾಗ್ರವಾಗಿ, ಅದರ ಬಣ್ಣದಿಂದ ತೊಡಗಿ ಬೆಲೆಯ ತನಕ ವಿಮರ್ಶಿಸುವ ನಾವು, ಅದೇ ಸೂತ್ರವನ್ನು ಹೂಡಿಕೆಯ ವಿಚಾರ ಬಂದಾಗ ಅಳವಡಿಸಿಕೊಳ್ಳಲು ಹಿಂಜರಿಯುತ್ತೇವೆ. ಯಾವುದೇ ವ್ಯವಹಾರವನ್ನು ಒಂದಷ್ಟು ಸರಳ ರೀತಿಯಲ್ಲಿ, ಅಂಕಿ–ಅಂಶಗಳ ಆಧಾರದಲ್ಲಿ ತಿಳಿಯುವ, ಆ ಮೂಲಕ ನಮ್ಮ ನಿರ್ಧಾರಗಳಿಗೆ ಗಟ್ಟಿ ನೆಲೆಯನ್ನು ರೂಪಿಸಿಕೊಳ್ಳುವ ಪರಿಣತಿ ಪಡೆದುಕೊಳ್ಳಬೇಕು. ನಮ್ಮಲ್ಲಿ ಆ ಪ್ರವೃತ್ತಿ ಎಲ್ಲಿಯತನಕ ಬೆಳೆಯುವುದಿಲ್ಲವೋ ಅಲ್ಲಿಯತನಕ, ಸರಿಯಾದ ಕಂಪನಿಗಳನ್ನು ಹೂಡಿಕೆಗೆ ಆಯ್ಕೆ ಮಾಡಿಕೊಳ್ಳುವಲ್ಲಿ, ಸಕಾಲದಲ್ಲಿ ನಿರ್ಧಾರ ಕೈಗೊಳ್ಳುವಲ್ಲಿ ಹಾಗೂ ಅವುಗಳನ್ನು ನಮ್ಮ ಒಳಗಣ್ಣಿನಿಂದ ಗ್ರಹಿಸುವಲ್ಲಿ ಸಮರ್ಥರಾಗಲಾರೆವು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001
ಇ–ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500- 520
ರಾಶಿ ಉತ್ತಮ	550-600
ಜರಡಿ	600 - 650
ಹೆರಕಿದ್ದು	1,000-1,100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1,000
ಹಸಿರು ಅತಿಉತ್ತಮ	1,150-1,250
ಕಾಳು ಮೆಣಸು	490

ಅಡಿಕೆ

ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-55500
ಭದ್ರಾವತಿ	
ರಾಶಿ	46599-49399
ಚನ್ನಗಿರಿ	
ರಾಶಿ	48299-49699
ಚಿತ್ರದುರ್ಗ	
ಆಪಿ	49319-49729
ಬೆಟ್ಟೆ	39259-39689
ಕೆಂಪುಗೋಟು	29309-29710
ರಾಶಿ	48839-49269
ಕಾರ್ಕಳ	
ಹೊಸತು	40000-45000
ಪುತ್ತೂರು	
ಕೋಕ	11000-26000
ಹೊಸತು	31000-44000
ಸಾಗರ	
ಬಿಳಿಗೋಟು	26989-28599
ಚಾಲಿ	33099-36869
ಕೋಕ	25029-32219
ಕೆಂಪುಗೋಟು	31989-37609
ಸಾಗರ	45209-49399
ಸಿಪ್ಪೆಗೋಟು	16259-21029
ಶಿವಮೊಗ್ಗ	
ಗೊರಬಲು	17109-38069
ರಾಶಿ	44669-49469
ಸಿದ್ದಾಪುರ	
ಬಿಳಿಗೋಟು	25099-32899
ಚಾಲಿ	35299-39039
ಕೋಕ	23699-32789
ಕೆಂಪುಗೋಟು	30112-32698
ರಾಶಿ	46699-48299
ತಟ್ಟಿಬೆಟ್ಟೆ	41099-46299
ಶಿರಸಿ	
ಬೆಟ್ಟೆ	36518-47989
ಬಿಳಿಗೋಟು	26019-32628
ಚಾಲಿ	34899-39399
ರಾಶಿ	41601-48999
ಯಲ್ಲಾಪುರ	
ಆಪಿ	54799-54799
ಬಿಳಿಗೋಟು	27699-33126
ಚಾಲಿ	34969-38899
ಕೋಕ	18122-30899
ಕೆಂಪುಗೋಟು	28312-34899
ರಾಶಿ	46312-53689
ತಟ್ಟಿಬೆಟ್ಟೆ	41770-45719

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15500	15700	215.20 ಸೆಂಟ್ಸ್
ಎಸಿ	8680	8300	8550	
ಆರ್‌ಪಿ	9500	9500	9500	ಲಂಡನ್
ಆರ್‌ಸಿ	4800	4500	4550	1992 ಡಾಲರ್ಸ್

ಶಫೀಕ್ ಶತಕ; ಪಾಕ್ ಹೋರಾಟ

ಗಾಲ್ (ಎಎಫ್‌ಪಿ): ಆರಂಭಿಕ ಆಟಗಾರ ಅಬ್ದುಲ್ಲಾ ಶಫೀಕ್ (ಬ್ಯಾಟಿಂಗ್ 112, 289 ಎ) ಅವರ ಅಜೇಯ ಶತಕದ ನೆರವಿನಿಂದ ಪಾಕಿಸ್ತಾನ ತಂಡ, ಶ್ರೀಲಂಕಾ ಎದುರಿನ ಮೊದಲ ಕ್ರಿಕೆಟ್ ಟೆಸ್ಟ್‌ನಲ್ಲಿ ಗೆಲುವಿನತ್ತ ಹೆಜ್ಜೆಯಿಟ್ಟಿದೆ.

ಗಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಗೆಲುವಿಗೆ 342 ರನ್ ಗುರಿ ಪಡೆದಿರುವ ಪಾಕಿಸ್ತಾನ, ನಾಲ್ಕನೇ ದಿನವಾದ ಮಂಗಳವಾರದ ಆಟದ ಅಂತ್ಯಕ್ಕೆ 85 ಓವರ್‌ಗಳಲ್ಲಿ 3 ವಿಕೆಟ್‌ಗೆ 222 ರನ್ ಗಳಿಸಿದೆ.

ಪಾಕ್ ತಂಡ ಗೆಲುವಿಗೆ ಇನ್ನೂ 120 ರನ್ ಗಳಿಸಬೇಕಿದ್ದು, ಕೊನೆಯ ದಿನದಾಟ ಕುತೂಹಲ ಮೂಡಿಸಿದೆ. ಶಫೀಕ್ ಜತೆ ಮಹಮ್ಮದ್ ರಿಜ್ವಾನ್ ಕ್ರೀಸ್‌ನಲ್ಲಿದ್ದರು. ಸವಾಲಿನ ಗುರಿ ಬೆನ್ನಟ್ಟಿದ ಪಾಕ್ ತಂಡಕ್ಕೆ ಶಫೀಕ್ ಮತ್ತು ಇಮಾಮ್ ಉಲ್ ಹಕ್ (35) ಮೊದಲ ವಿಕೆಟ್‌ಗೆ 35 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ಇಮಾಮ್ ಮತ್ತು ಅಜರ್ ಅಲಿ (6) ಅಲ್ಪ ಅಂತರದಲ್ಲಿ ಔಟಾದರು. ಆದರೆ ನಾಯಕ ಬಾಬರ್ ಅಜಂ (55, 104 ಎ) ಮತ್ತು ಶಫೀಕ್ ಮೂರನೇ ವಿಕೆಟ್‌ಗೆ 101 ರನ್ ಸೇರಿಸಿ ತಂಡದ ಜಯದ ಕನಸು ಜೀವಂತವಾಗಿರಿಸಿಕೊಂಡರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್ ಶ್ರೀಲಂಕಾ 222, ಪಾಕಿಸ್ತಾನ 218. ಎರಡನೇ ಇನಿಂಗ್ಸ್ ಶ್ರೀಲಂಕಾ 337, ಪಾಕಿಸ್ತಾನ 3ಕ್ಕೆ 222 (85 ಓವರ್) ಅಬ್ದುಲ್ಲಾ ಶಫೀಕ್ ಬ್ಯಾಟಿಂಗ್ 112, ಬಾಬರ್ ಅಜಮ್ 55, ಮಹಮ್ಮದ್ ರಿಜ್ವಾನ್ ಬ್ಯಾಟಿಂಗ್ 7, ಪ್ರಭಾತ್ ಜಯಸೂರ್ಯ 89ಕ್ಕೆ 2)

ಅನೀಶ್–ರಿಧಮ್‌ಗೆ ಕಂಚು

ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್ ಟೂರ್ನಿ



ಪದಕದೊಂದಿಗೆ ಸಂಭ್ರಮಿಸಿದ ರಿಧಮ್ ಸಂಗ್ವಾನ್ ಮತ್ತು ಅನೀಶ್ ಭಾನ್ವಾಲ

ಚಾಂಗ್ವಾನ್, ದಕ್ಷಿಣ ಕೊರಿಯಾ (ಪಿಟಿಐ): ಐಎಸ್‌ಎಸ್‌ಎಫ್ ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಶೂಟರ್‌ಗಳ ಪದಕ ಬೇಟೆ ಮುಂದುವರಿದಿದೆ. ಇಲ್ಲಿ ನಡೆಯುತ್ತಿರುವ ಟೂರ್ನಿಯ 25 ಮೀಟರ್ಸ್ ಫೈರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಮಂಗಳವಾರ ಅನೀಶ್ ಭಾನ್ವಾಲ ಮತ್ತು ರಿಧಮ್ ಸಂಗ್ವಾನ್ ಕಂಚಿನ ಪದಕಕ್ಕೆ ಕೊರಳೊಡ್ಡಿದರು.

ಕಂಚಿನ ಪದಕಕ್ಕಾಗಿ ನಡೆದ ಹಣಾಹಣಿಯಲ್ಲಿ ಭಾರತದ ಜೋಡಿಯು 16–12ರಿಂದ ಜೆಕ್ ಗಣರಾಜ್ಯದ ಅನ್ನಾ ದೆದೋವಾ ಮತ್ತು ಮಾರ್ಟಿನ್ ಪೊದಾರಸ್ಕಿ ಅವರನ್ನು ಮಣಿಸಿದರು.

ಅನೀಶ್ ಮತ್ತು ರಿಧಮ್ ಜೋಡಿಗೆ ವಿಶ್ವಕಪ್ ಹಂತದಲ್ಲಿ ಇದು ಎರಡನೇ ಪದಕವಾಗಿದೆ. ಈ ವರ್ಷ ಮಾರ್ಚ್‌ನಲ್ಲಿ ಈಜಿಪ್ಟ್‌ನ ಕೈರೊದಲ್ಲಿ ನಡೆದ ಟೂರ್ನಿಯಲ್ಲಿ ಈ ಶೂಟರ್‌ಗಳು ಚಿನ್ನದ ಪದಕ ಗೆದ್ದುಕೊಂಡಿದ್ದರು.

50 ಮೀಟರ್ಸ್ ರೈಫಲ್ ತ್ರಿ ಪೊಸಿಷನ್ಸ್ ಮಿಶ್ರ ತಂಡ ವಿಭಾಗದಲ್ಲಿ ಸ್ಪರ್ಧಿಸಿದ್ದ ಎರಡು ಜೋಡಿಗಳಾದ ಸಂಜೀವ್ ರಜಪೂತ್– ಅಂಜುಮ್ ಮೌದ್ಗಿಲ್ ಮತ್ತು ಐಶ್ವರ್ಯ ಪ್ರತಾಪ್ ಸಿಂಗ್ ತೋಮರ್ ಮತ್ತು ಆಶಿ ಚೌಕ್ಸಿ ಕೂದಲೆಳೆ ಅಂತರದಲ್ಲಿ ಪದಕವಂಚಿತರಾದರು.

ಸಂಜೀವ್– ಅಂಜುಮ್ ಐದನೇ ಮತ್ತು ತೋಮರ್– ಆಶಿ ಆರನೇ ಸ್ಥಾನ ಗಳಿಸಿದರು. 25 ಮೀಟರ್ಸ್ ರೈಫಲ್ ಮಿಶ್ರ ತಂಡ ವಿಭಾಗದಲ್ಲಿ ವಿಜಯವೀರ್ ಸಿಧು– ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಕೂಡ ಆರನೇ ಸ್ಥಾನ ಗಳಿಸಿದರು.

ಭಾರತ ಸದ್ಯ 14 ಪದಕಗಳನ್ನು (ತಲಾ ಐದು ಚಿನ್ನ, ಬೆಳ್ಳಿ ಮತ್ತು 4 ಕಂಚು) ಜಯಿಸಿದ್ದು ಪದಕಪಟ್ಟಿಯಲ್ಲಿ ಅಗ್ರಸ್ಥಾನ ಕಾಪಾಡಿಕೊಂಡಿದೆ.

ಕಾಮನ್‌ವೆಲ್ತ್ ಕೂಟ: 12 ಲಕ್ಷ ಟಿಕೆಟ್ ಮಾರಾಟ

ನವದೆಹಲಿ (ಪಿಟಿಐ): ಬರ್ಮಿಂಗ್‌ಹ್ಯಾಂನಲ್ಲಿ ಜುಲೈ 28 ರಂದು ಆರಂಭವಾಗುವ ಕಾಮನ್‌ವೆಲ್ತ್ ಕ್ರೀಡಾಕೂಟದ 12 ಲಕ್ಷ ಟಿಕೆಟ್‌ಗಳು ಮಾರಾಟವಾಗಿವೆ.

ಎಜ್‌ಬಾಸ್ಟನ್‌ನಲ್ಲಿ ಜುಲೈ 31 ರಂದು ನಡೆಯಲಿರುವ ಭಾರತ–ಪಾಕಿಸ್ತಾನ ಮಹಿಳಾ ಕ್ರಿಕೆಟ್ ಪಂದ್ಯದ ಟಿಕೆಟ್‌ಗೆ ಹೆಚ್ಚಿನ ಬೇಡಿಕೆ ಬಂದಿದೆ. ಕಾಮನ್‌ವೆಲ್ತ್ ಕೂಟದಲ್ಲಿ ಇದೇ ಮೊದಲ ಬಾರಿ ಮಹಿಳಾ ಕ್ರಿಕೆಟ್ ಸೇರಿಸಲಾಗಿದೆ.

'ಕಾಮನ್‌ವೆಲ್ತ್ ಕೂಟದ ವಿವಿಧ ಸ್ಪರ್ಧೆಗಳ 12 ಲಕ್ಷ ಟಿಕೆಟ್‌ಗಳನ್ನು ಈಗಾಗಲೇ ಮಾರಾಟ ಮಾಡಲಾಗಿದೆ. ಕೂಟ ಸಮೀಪಿಸುತ್ತಿರುವಂತೆಯೇ ಇನ್ನಷ್ಟು ಟಿಕೆಟ್‌ಗಳು ಮಾರಾಟವಾಗುವ ವಿಶ್ವಾಸವಿದೆ. 2012ರ ಲಂಡನ್ ಒಲಿಂಪಿಕ್ಸ್ ಬಳಿಕ ಬ್ರಿಟನ್‌ನಲ್ಲಿ ನಡೆಯುತ್ತಿರುವ ಅತಿದೊಡ್ಡ ಕ್ರೀಡಾಕೂಟ ಇದಾಗಲಿದೆ' ಎಂದು ಕ್ರೀಡಾಕೂಟದ ಸಿಇಒ ಇಯಾನ್ ರೀಡ್ ಹೇಳಿದ್ದಾರೆ.

'ಮಹಿಳಾ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಮತ್ತು ಫೈನಲ್ ಪಂದ್ಯದ ಟಿಕೆಟ್‌ಗಳು ಸೋಲ್ಡ್‌ಔಟ್ ಆಗಿವೆ. ಭಾರತ ಮತ್ತು ಇಂಗ್ಲೆಂಡ್ ಫೈನಲ್‌ನಲ್ಲಿ ಆಡಬಹುದು ಎಂಬ ಅಭಿಮಾನಿಗಳ ನಿರೀಕ್ಷೆ ಇದಕ್ಕೆ ಕಾರಣ. ಭಾರತ–ಪಾಕ್ ಪಂದ್ಯದ ಟಿಕೆಟ್ ಕೂಡಾ ಸೋಲ್ಡ್‌ಔಟ್ ಆಗುವ ಸಾಧ್ಯತೆಯಿದೆ' ಎಂದಿದ್ದಾರೆ.


ಕಾಮನ್‌ವೆಲ್ತ್ ಕೂಟದಲ್ಲಿ 72 ದೇಶಗಳ ಐದು ಸಾವಿರಕ್ಕೂ ಅಧಿಕ ಅಥ್ಲೀಟ್‌ಗಳು ಪಾಲ್ಗೊಳ್ಳಲಿದ್ದಾರೆ.

ಕ್ರಿಕೆಟ್ ದಿಗ್ಗಜ ಸುನಿಲ್ ಗಾವಸ್ಕರ್ ಹೇಳಿಕೆ

ವೆಸ್ಟ್ ಇಂಡೀಸ್ ವಿರುದ್ಧದ ಏಕದಿನ ಮತ್ತು ಟಿ20 ಸರಣಿಗೆ ಕೊಹ್ಲಿ ಅವರಿಗೆ 'ವಿಶ್ರಾಂತಿ' ನೀಡಲಾಗಿದೆ.

ಕೊಹ್ಲಿಗೆ ಸಲಹೆ ನೀಡಬಲ್ಲೆ

ನವದೆಹಲಿ (ಪಿಟಿಐ): ವಿರಾಟ್ ಕೊಹ್ಲಿ ಅವರು ಹಳೆಯ ಲಯಕ್ಕೆ ಮರಳಲು ಬೇಕಾದ ಸಲಹೆಗಳನ್ನು ನೀಡಲು ಸಿದ್ಧ ಎಂದು ಕ್ರಿಕೆಟ್ ದಿಗ್ಗಜ ಸುನಿಲ್ ಗಾವಸ್ಕರ್ ಹೇಳಿದ್ದಾರೆ.



ಸುನಿಲ್ ಗಾವಸ್ಕರ್

'ಕೊಹ್ಲಿ ಅವರು ನನ್ನೊಂದಿಗೆ 20 ನಿಮಿಷ ಇದ್ದರೆ ಸಾಕು. ಬ್ಯಾಟಿಂಗ್‌ನಲ್ಲಿನ ಲೋಪಗಳನ್ನು ಸರಿಪಡಿಸಲು ಏನು ಮಾಡಬೇಕು ಎಂಬುದನ್ನು ಹೇಳಿಕೊಡುತ್ತಿದ್ದೆ. ನನ್ನ ಸಲಹೆಗಳು ಅವರಿಗೆ ಖಂಡಿತವಾಗಿಯೂ ನೆರವಾಗುತ್ತದೆ ಎಂದು ಹೇಳುವುದಿಲ್ಲ. ಆದರೆ ಅವರಿಗೆ ನೆರವಾಗಲೂಬಹುದು' ಎಂದಿದ್ದಾರೆ.

'ವಿಶೇಷವಾಗಿ ಆಫ್‌ಸ್ಟಂಪ್ ಲೈನ್‌ಗೆ ಸಂಬಂಧಿಸಿದಂತೆ ಕೆಲವು ಸಲಹೆಗಳನ್ನು ನೀಡಬಲ್ಲೆ. ಆಫ್‌ಸ್ಟಂಪ್ ಲೈನ್‌ನಲ್ಲಿ ಬರುವ ಎಸೆತಗಳನ್ನು ಎದುರಿಸುವಲ್ಲಿ ಅವರು ಎಡವುತ್ತಿದ್ದಾರೆ' ಎಂದು ನುಡಿದಿದ್ದಾರೆ.

ಕೊಹ್ಲಿ, 2019 ರ ನವೆಂಬರ್ ಬಳಿಕ ಒಂದೂ ಶತಕ ಗಳಿಸಿಲ್ಲ.

ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್: ಸೊಫಿಯಾನ್‌ಗೆ ಸ್ಟೀಪಲ್‌ಚೇಸ್ ಚಿನ್ನ

ಅವಿನಾಶ್‌ಗೆ 11ನೇ ಸ್ಥಾನ

ಯೂಜೀನ್, ಅಮೆರಿಕ (ಪಿಟಿಐ): ಭಾರತದ ಸ್ಟೀಪಲ್ ಚೇಸ್ ಸ್ಪರ್ಧಿ ಅವಿನಾಶ್ ಸಬ್ಲೆ ಅವರು ವಿಶ್ವ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ನಿರಾಸೆ ಅನುಭವಿಸಿದರು. 15 ಅಥ್ಲೀಟ್‌ಗಳು ಪಾಲ್ಗೊಂಡಿದ್ದ ಫೈನಲ್‌ನಲ್ಲಿ ಅವರಿಗೆ 11ನೇ ಸ್ಥಾನ ಲಭಿಸಿತು.

ಸೋಮವಾರ ನಡೆದ 3,000 ಮೀ. ಸ್ಪರ್ಧೆಯನ್ನು ಪೂರೈಸಲು ಸಬ್ಲೆ 8 ನಿ.31.75 ಸೆ.ಗಳನ್ನು ತೆಗೆದುಕೊಂಡರು. ಮಹಾರಾಷ್ಟ್ರದ 27 ವರ್ಷದ ಅಥ್ಲೀಟ್‌ಗೆ ವೈಯಕ್ತಿಕ ಶ್ರೇಷ್ಠ ಸಮಯ (8:12.48) ಕಂಡುಕೊಳ್ಳಲೂ ಆಗಲಿಲ್ಲ.

ಸಬ್ಲೆ ಅವರು ಅರ್ಹತಾ ಸುತ್ತಿನಲ್ಲಿ 8 ನಿ.18.75 ಸೆ.ಗಳಲ್ಲಿ ಗುರಿ ತಲುಪಿ ಒಟ್ಟಾರೆ ಏಳನೇ ಸ್ಥಾನ ಪಡೆದು ಫೈನಲ್‌ಗೆ ಲಗ್ಗೆಯಿಟ್ಟಿದ್ದರು. 2019 ರಲ್ಲಿ ದೋಹಾದಲ್ಲಿ ನಡೆದಿದ್ದ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಅವರಿಗೆ 13ನೇ ಸ್ಥಾನ ಲಭಿಸಿತ್ತು.

ಭಾರತದ ಅಥ್ಲೀಟ್ 2,000 ಮೀ. ದೂರದವರೆಗೂ 14ನೇ ಸ್ಥಾನದಲ್ಲಿದ್ದರು. ಕೊನೆಯ ಲ್ಯಾಪ್‌ನಲ್ಲಿ ವೇಗ ಹೆಚ್ಚಿಸಿ 12ನೇ ಸ್ಥಾನಕ್ಕೆ ಬಂದರೆ, ಗುರಿ ತಲುಪಲು 100 ಮೀ. ಇರುವಾಗ ಇನ್ನೊಬ್ಬ ಸ್ಪರ್ಧಿಯನ್ನು ಹಿಂದಿಕ್ಕಿ 11ನೆಯವರಾದರು.

ನಿಧಾನಗತಿ ಓಟ: ಈ ಬಾರಿಯ ಸ್ಟೀಪಲ್ ಚೇಸ್ ಸ್ಪರ್ಧೆ ವಿಶ್ವ ಅಥ್ಲೆಟಿಕ್ಸ್‌ನ ಇತಿಹಾಸದಲ್ಲೇ ಅತ್ಯಂತ ‘ನಿಧಾನಗತಿ’ಯ ಸ್ಪರ್ಧೆ ಎನಿಸಿ ಕೊಂಡಿತು. ಪದಕ ಜಯಿಸಿದ ಮೂವರು ಅಥ್ಲೀಟ್‌ಗಳು ಕೂಡಾ ತಮ್ಮ ವೈಯಕ್ತಿಕ ಶ್ರೇಷ್ಠ ಸಮಯಕ್ಕಿಂತ ತುಂಬಾ ಹಿಂದೆ ಬಿದ್ದರು.

ಒಲಿಂಪಿಕ್ ಚಾಂಪಿಯನ್ ಆಗಿರುವ ಮೊರೊಕ್ಕೊದ ಸೊಫಿಯಾನ್ ಎಲ್ ಬಕಲಿ 8 ನಿ. 25.13 ಸೆ.ಗಳಲ್ಲಿ ಗುರಿ ತಲುಪಿ ಚಿನ್ನ ಗೆದ್ದರು. ಅವರ ವೈಯಕ್ತಿಕ ಶ್ರೇಷ್ಠ ಸಮಯ 7 ನಿ.58.28 ಸೆ. ಆಗಿದೆ. ಇಥಿಯೋಪಿಯದ ಲಮೇಚಾ ಗಿರ್ಮಾ (8:26.01) ಬೆಳ್ಳಿ ಗೆದ್ದರೆ, ಕೆನ್ಯಾದ ಕಾನ್ಸಸ್ಲಸ್ ಕಿಪ್ರುಟೊ (8:27.92) ಕಂಚು ಪಡೆದರು.

ಅಡ್ಡಬಂದ ಕ್ಯಾಮರಾಮನ್: ಪುರುಷರ ಸ್ಟೀಪಲ್‌ಚೇಸ್ ಸ್ಪರ್ಧೆಯ ವೇಳೆ ಕ್ಯಾಮರಾಮನ್ ಒಬ್ಬ ಟ್ರ್ಯಾಕ್‌ನಲ್ಲಿ ಅಚಾನಕ್ ಆಗಿ ಸ್ಪರ್ಧಿಗಳಿಗೆ ಅಡ್ಡಬಂದ ಘಟನೆ ನಡೆಯಿತು. ಸಮೀಪದಲ್ಲಿ ನಡೆಯುತ್ತಿದ್ದ ಮಹಿಳೆಯರ ಟ್ರಿಪಲ್ ಜಂಪ್ ಸ್ಪರ್ಧೆಯ ವಿಡಿಯೊ ಚಿತ್ರೀಕರಣ ಮಾಡುತ್ತಿದ್ದ ಕ್ಯಾಮರಾಮನ್ ಅರಿವಿಲ್ಲದೆಯೇ ಓಟದ ಟ್ರ್ಯಾಕ್‌ಗೆ ಕಾಲಿಟ್ಟಿದ್ದ.

ಕಿಪ್ಯೆಗನ್ ಮಿಂಚು: ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್ ಆಗಿರುವ ಕೆನ್ಯಾದ ಫೈತ್ ಕಿಪ್ಯೆಗನ್, ಮಹಿಳೆಯರ 1,500 ಮೀ. ಓಟದ ಚಿನ್ನ ಗೆದ್ದರು. ಆರಂಭದಿಂದಲೇ ಮುನ್ನಡೆ ಕಾಯ್ದುಕೊಂಡ ಅವರು 3 ನಿ. 52.96 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇಥಿಯೋಪಿಯದ ಗಡಾಫ್ ತ್ಸೆಗಾಯ್ (3 ನಿ. 54.52 ಸೆ.) ಬೆಳ್ಳಿ ಗೆದ್ದರೆ, ಬ್ರಿಟನ್‌ನ ಲಾರಾ ಮುಯಿರ್ (3 ನಿ. 55.28 ಸೆ.) ಕಂಚು ಜಯಿಸಿದರು. 2017ರ ವಿಶ್ವ ಅಥ್ಲೆಟಿಕ್ಸ್‌ನಲ್ಲೂ ಕಿಪ್ಯೆಗನ್ ಚಿನ್ನ ಜಯಿಸಿದ್ದರು.




3,000 ಮೀ. ಸ್ಟೀಪಲ್‌ಚೇಸ್‌ನಲ್ಲಿ ಸೊಫಿಯಾನ್ ಮೊದಲಿಗರಾಗಿ ಗುರಿ ತಲುಪಿದರು –ಎಎಫ್‌ಪಿ ಚಿತ್ರ

ಯೂಲಿಮರ್ ರೋಜಸ್‌ಗೆ ಸತತ 3ನೇ ಚಿನ್ನ

‘ಟ್ರಿಪಲ್ ಜಂಪ್ ಕ್ವೀನ್’ ಎಂದೇ ಖ್ಯಾತಿ ಹೊಂದಿರುವ ವೆನಿಜುವೆಲದ ಯೂಲಿಮರ್ ರೋಜಸ್ ಮಹಿಳೆಯರ ಟ್ರಿಪಲ್ ಜಂಪ್‌ನಲ್ಲಿ ಚಿನ್ನ ಗೆದ್ದರು. ಅವರು 15.47 ಮೀ. ಸಾಧನೆ ಮಾಡಿದರು. ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಅವರಿಗೆ ದೊರೆತ ಸತತ ಮೂರನೇ ಚಿನ್ನ ಇದಾಗಿದೆ. ಜಮೈಕಾದ ಶನೀಕಾ ರಿಕೆಟ್ಸ್ (14.89 ಮೀ.) ಬೆಳ್ಳಿ ಹಾಗೂ ಅಮೆರಿಕದ ಟೋರಿ ಫ್ರಾಂಕ್ಲಿನ್ ಕಂಚು ಪಡೆದುಕೊಂಡರು. ಹೈಜಂಪ್‌ನಲ್ಲಿ ಕತಾರ್‌ನ ಮುತಜ್ ಬಾರ್ಶಿಮ್ 2.37 ಮೀ. ಸಾಧನೆಯೊಂದಿಗೆ ಚಿನ್ನ ಗೆದ್ದರು. ವಿಶ್ವ ಅಥ್ಲೆಟಿಕ್ಸ್‌ನಲ್ಲಿ ಸತತ ಮೂರನೇ ಚಿನ್ನ ಗೆದ್ದ ಸಾಧನೆ ಅವರದ್ದು.

ಕೌಂಟಿ ಕ್ರಿಕೆಟ್: ವಾಷಿಂಗ್ಟನ್‌ಗೆ ನಾಲ್ಕು ವಿಕೆಟ್



ನಾರ್ತಂಪ್ಟನ್ (ಪಿಟಿಐ): ಭಾರತ ತಂಡದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಅವರು ಕೌಂಟಿ ಕ್ರಿಕೆಟ್‌ನ ಪದಾರ್ಪಣೆ ಪಂದ್ಯದಲ್ಲೇ ನಾಲ್ಕು ವಿಕೆಟ್ ಗಳಿಸಿದ್ದಾರೆ.

ಲ್ಯಾಂಕಾಶೈರ್ ಪರ ಆಡುತ್ತಿರುವ ಅವರು ನಾರ್ತಂಪ್ಟನ್‌ಶೈರ್ ಎದುರಿನ ಪಂದ್ಯದಲ್ಲಿ, 20 ಓವರ್ ಬೌಲ್ ಮಾಡಿದರು. 69 ರನ್ ನೀಡಿ ನಾಲ್ವರು ಬ್ಯಾಟರ್‌ಗಳನ್ನು ಪೆವಿಲಿಯನ್‌ಗೆ ಅಟ್ಟಿದರು.

ದಿನದಾಟದ ಅಂತ್ಯಕ್ಕೆ ನಾರ್ತಂಪ್ಟನ್ ಶೈರ್ 72 ಓವರ್‌ಗಳಲ್ಲಿ 7 ವಿಕೆಟ್‌ಗೆ 218 ರನ್ ಗಳಿಸಿತ್ತು.

2023ರ ಸೆಪ್ಟೆಂಬರ್ 23ರಿಂದ ಏಷ್ಯನ್ ಕ್ರೀಡಾಕೂಟ

ಕುವೈತ್/ಬೀಜಿಂಗ್ (ಪಿಟಿಐ): ಕೋವಿಡ್ ಕಾರಣದಿಂದ ಮುಂದೂಡಿಕೆಯಾಗಿದ್ದ ಏಷ್ಯನ್ ಗೇಮ್ಸ್‌ಅನ್ನು ಮುಂದಿನ ವರ್ಷದ ಸೆಪ್ಟೆಂಬರ್ 23ರಿಂದ ಅಕ್ಟೋಬರ್ 8ರವರೆಗೆ ಚೀನಾದ ಹಾಂಗ್‌ಜೊನಲ್ಲಿ ನಡೆಯಲಿದೆ. ಏಷ್ಯಾ ಒಲಿಂಪಿಕ್ ಕೌನ್ಸಿಲ್ (ಒಸಿಎ) ಮಂಗಳವಾರ ಈ ವಿಷಯ ತಿಳಿಸಿದೆ.

19ನೇ ಆವೃತ್ತಿಯ ಕ್ರೀಡಾಕೂಟವನ್ನು ಈ ಮೊದಲು ಈ ವರ್ಷದ ಸೆಪ್ಟೆಂಬರ್ 10ರಿಂದ 25ರವರೆಗೆ ಆಯೋಜಿಸಲು ತೀರ್ಮಾನಿಸಲಾಗಿತ್ತು. ಆದರೆ ಚೀನಾದಲ್ಲಿ ಕೊರೊನಾ ಪ್ರಕರಣಗಳ ಹೆಚ್ಚಳದ ಹಿನ್ನೆಲೆಯಲ್ಲಿ ಮೇ 6ರಂದು ಮುಂದೂಡಲಾಗಿತ್ತು.

‘ಚೀನಾ ಒಲಿಂಪಿಕ್ ಸಮಿತಿ, ಹಾಂಗ್‌ಜೊ ಏಷ್ಯನ್ ಗೇಮ್ಸ್ ಆಯೋಜನಾ ಸಮಿತಿ (ಎಚ್‌ಎಜಿಒಸಿ) ಮತ್ತು ಇನ್ನುಳಿದ ಭಾಗೀದಾರರೊಡನೆ ಎರಡು ತಿಂಗಳ ಕಾಲ ಚರ್ಚೆ ನಡೆಸಿ ವೇಳಾಪಟ್ಟಿಯನ್ನು ನಿಗದಿ ಮಾಡಲಾಗಿದೆ’ ಎಂದು ಒಸಿಎ ತಿಳಿಸಿದೆ.

ಒಲಿಂಪಿಕ್ಸ್ ಅರ್ಹತಾ ಕೂಟವಾಗಿರುವ 2023ರ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್ ಸೆ.16ರಿಂದ 24ರವರೆಗೆ ರಷ್ಯಾದ ಕ್ರಾಸ್ನೊಯಾರ್ಸ್ಕ್‌ನಲ್ಲಿ ನಡೆಯಲಿದೆ. ಹೀಗಾಗಿ ಕುಸ್ತಿಪಟುಗಳು ಕಡಿಮೆ ಅವಧಿಯಲ್ಲಿ ಮತ್ತೊಂದು ಕೂಟಕ್ಕೆ ಸಜ್ಜುಗೊಳ್ಳುವುದು ಕಷ್ಟ ಎನಿಸಿದೆ.

ಉದ್ಯೋಗ ವಾಣಿ

ರಾಷ್ಟ್ರೀಯ ಜೂನಿಯರ್ ಈಜು ಚಾಂಪಿಯನ್‌ಷಿಪ್: ಕರ್ನಾಟಕದ ಪ್ರಾಬಲ್ಯ

ನೀನಾ, ಮಾನವಿ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ನೀನಾ ವೆಂಕಟೇಶ್, ಮಾನವಿ ವರ್ಮಾ ಮತ್ತು ಧೀನಿಧಿ ದೇಸಿಂಗು ಅವರು ಒಡಿಶಾದ ಭುವನೇಶ್ವರದಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರು.

ಮಂಗಳವಾರ ನಡೆದ ಬಾಲಕಿಯರ 15 ರಿಂದ 17 ವರ್ಷದೊಳಗಿನವರ ವಿಭಾಗದ 50 ಮೀ. ಬಟರ್‌ಫ್ಲೈ ಸ್ಪರ್ಧೆಯಲ್ಲಿ ನೀನಾ 28.27 ಸೆ.ಗಳಲ್ಲಿ ಗುರಿ ತಲುಪಿದರು. ಕಳೆದ ವರ್ಷ ತಾವೇ ಸ್ಥಾಪಿಸಿದ್ದ ಕೂಟದಾಖಲೆ (28.51 ಸೆ.) ಉತ್ತಮಪಡಿಸಿಕೊಂಡರು.

ಬಾಲಕಿಯರ 12–14 ವರ್ಷದೊಳಗಿನವರ 200 ಮೀ. ಮೆಡ್ಲೆಯಲ್ಲಿ ಮಾನವಿ ವರ್ಮಾ 2 ನಿ.26.99 ಸೆ.ಗಳೊಂದಿಗೆ ಹೊಸ ಕೂಟ ದಾಖಲೆ ನಿರ್ಮಿಸಿದರು. ಅಪೇಕ್ಷಾ ಫರ್ನಾಂಡಿಸ್ 2019 ರಲ್ಲಿ ಸ್ಥಾಪಿಸಿದ್ದ ದಾಖಲೆಯನ್ನು (2 ನಿ. 27.09 ಸೆ.) ಮುರಿದರು. ಈ ಸ್ಪರ್ಧೆಯಲ್ಲಿ ಕರ್ನಾಟಕದ ವಿಹಿತಾ



ನೀನಾ ವೆಂಕಟೇಶ್

ನಯನಾ ಬೆಳ್ಳಿ ಪಡೆದರು.

ಉತ್ತಮ ಪ್ರದರ್ಶನ ಮುಂದುವರಿಸಿದ ಧೀನಿಧಿ ದೇಸಿಂಗು ಇದೇ ವಯೋವರ್ಗದಲ್ಲಿ ಬಾಲಕಿಯರ 50 ಮೀ. ಬಟರ್‌ಫ್ಲೈನಲ್ಲಿ 28.93 ಸೆ.ಗಳೊಂದಿಗೆ ಅಗ್ರಸ್ಥಾನ ಗಳಿಸಿದರು. ತನಿಷಿ ಗುಪ್ತಾ (29.30 ಸೆ.) ಎರಡನೇ ಸ್ಥಾನ ಪಡೆದರು. ಧೀನಿಧಿ ಅವರು ತನಿಷಿ ಹೆಸರಿನಲ್ಲಿದ್ದ ಕೂಟ ದಾಖಲೆ (29.45 ಸೆ.) ಮುರಿದರು.

ನಯನ್‌ಗೆ ಚಿನ್ನ: ನಯನ್ ವಿಘ್ನೇಶ್ ಬಾಲಕರ 15–17 ವರ್ಷದೊಳಗಿನವರ ವಿಭಾಗದ 200 ಮೀ. ಮೆಡ್ಲೆಯಲ್ಲಿ ಚಿನ್ನ ಗೆದ್ದರು. ಅವರು 2 ನಿ. 10.02 ಸೆ.ಗಳಲ್ಲಿ ಗುರಿ ತಲುಪಿದರು.

200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಉತ್ಕರ್ಷ್ ಸಂತೋಷ್ ಪಾಟೀಲ್ 2 ನಿ. 6.77 ಸೆ.ಗಳೊಂದಿಗೆ ಮೊದಲ ಸ್ಥಾನ ಗಳಿಸಿದರು.

ಇದೇ ವಯೋವರ್ಗದ ಬಾಲಕಿಯರ 200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ರಿಧಿಮಾ ವೀರೇಂದ್ರಕುಮಾರ್ 2 ನಿ.24.25 ಸೆ.ಗಳಲ್ಲಿ ಮೊದಲಿಗರಾಗಿ ಗುರಿ ತಲುಪಿದರು. 200 ಮೀ. ಮೆಡ್ಲೆಯಲ್ಲಿ ಎ.ಜೆದೀದಾ ಎರಡನೇ ಸ್ಥಾನ ತಮ್ಮದಾಗಿಸಿಕೊಂಡರು.

ಮೀನಾಕ್ಷಿಗೆ ಅಗ್ರಸ್ಥಾನ: ಬಾಲಕಿಯರ 12–14 ವರ್ಷದೊಳಗಿನವರ 1,500 ಮೀ. ಫ್ರೀಸ್ಟೈಲ್‌ನಲ್ಲಿ ಮೀನಾಕ್ಷಿ ಮೆನನ್ 18 ನಿ. 40.94 ಸೆ.ಗಳೊಂದಿಗೆ ಮೊದಲ ಸ್ಥಾನ ಪಡೆದರು. ಇದೇ ವಯೋವರ್ಗದ ಬಾಲಕರ 200 ಮೀ. ಮೆಡ್ಲೆಯಲ್ಲಿ ಆರ್.ನವನೀತ್ ಗೌಡ 2 ನಿ.17.57 ಸೆ. ಸಾಧನೆಯೊಂದಿಗೆ ಚಿನ್ನ ಜಯಿಸಿದರು.

12–14 ವರ್ಷದೊಳಗಿನವರ ಬಾಲಕರ 50 ಮೀ. ಬಟರ್‌ಫ್ಲೈನಲ್ಲಿ ಇಶಾನ್ ಮೆಹ್ರಾ, 200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ಕೆ.ಕುಶಾಲ್ ಕಂಚು ಪಡೆದುಕೊಂಡರು.

ಬಿಸಿಸಿಐ: ವಿನೀತ್ ಸರನ್ ನೇಮಕ

ನವದೆಹಲಿ (ಪಿಟಿಐ): ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿನೀತ್ ಸರನ್ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಒಂಬುಡ್ಸ್‌ಮನ್ ಮತ್ತು ನೀತಿ ಸಂಹಿತೆ ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ನ್ಯಾಯಮೂರ್ತಿ ಡಿ.ಕೆ.ಜೈನ್ ಅವರಿಂದ ತೆರವಾದ ಸ್ಥಾನವನ್ನು ಸರನ್ ತುಂಬಿದ್ದಾರೆ. ಜೈನ್ ಅವರ ಅಧಿಕಾರದ ಅವಧಿ ಕಳೆದ ವರ್ಷ ಜೂನ್‌ನಲ್ಲಿ ಕೊನೆಗೊಂಡಿತ್ತು. ಒಂದು ವರ್ಷದ ಅವಧಿಯಿಂದ ಈ ಎರಡು ಹುದ್ದೆಗಳು ಖಾಲಿಯಿದ್ದವು.

ಬಿಸಿಸಿಐ ಸಭೆ ನಾಳೆ: 2022–23ರ ಋತುವಿಗೆ ದೇಸಿ ಕ್ರಿಕೆಟ್ ಟೂರ್ನಿಗಳ ವೇಳಾಪಟ್ಟಿ ಸಿದ್ಧಪಡಿಸುವುದು ಮತ್ತು ಭಾರತದಲ್ಲಿ ನಡೆಯಲಿರುವ ಅಂತರರಾಷ್ಟ್ರೀಯ ಪಂದ್ಯಗಳ ಮಾಧ್ಯಮ ಪ್ರಸಾರ ಹಕ್ಕು ಹರಾಜಿಗೆ ಸಂಬಂಧಿಸಿದಂತೆ ಚರ್ಚಿಸಲು ಗುರುವಾರ ಬಿಸಿಸಿಐ ಆಡಳಿತ ಮಂಡಳಿ ಸಭೆ ನಡೆಯಲಿದೆ.

ಗಾಲ್ಫ್: 5ನೇ ಪ್ರಶಸ್ತಿ ಮೇಲೆ ಪ್ರಣವಿ ಕಣ್ಣು

ಬೆಂಗಳೂರು: ಈ ವರ್ಷ ಐದನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಮೈಸೂರಿನ ಪ್ರಣವಿ ಅರಸ್ ಅವರು ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್‌ನ (ಡಬ್ಲ್ಯುಪಿಜಿಟಿ) 10ನೇ ಲೆಗ್‌ನಲ್ಲಿ ಕಣಕ್ಕಿಳಿಯಲಿದ್ದಾರೆ.

ಇಲ್ಲಿನ ಪ್ರೆಸ್ಟೀಜ್ ಗಾಲ್ಫ್‌ಶೈರ್ ಕೋರ್ಸ್‌ನಲ್ಲಿ ಬುಧವಾರದಿಂದ ಟೂರ್ನಿ ನಡೆಯಲಿದೆ. ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ವಾರದ ಹಿಂದೆ ನಡೆದ ಡಬ್ಲ್ಯುಪಿಜಿಟಿ 9ನೇ ಲೆಗ್‌ನಲ್ಲಿ ಪ್ರಣವಿಗೆ ಪ್ರಶಸ್ತಿ ಒಲಿದಿತ್ತು. ಹತ್ತು ಲೆಗ್‌ನಲ್ಲಿ 2 ಬಾರಿ ರನ್ನರ್‌ಅಪ್ ಕೂಡ ಆಗಿದ್ದಾರೆ. ಒಂಬತ್ತನೇ ಲೆಗ್‌ನಲ್ಲಿ ಎರಡನೇ ಸ್ಥಾನ ಗಳಿಸಿದ್ದ ಸೆಹೆರ್ ಅತ್ವಾಲ್ ಅವರೂ ಪ್ರಶಸ್ತಿ ನಿರೀಕ್ಷೆಯಲ್ಲಿದ್ದಾರೆ.

ವೇಟ್‌ಲಿಫ್ಟಿಂಗ್: ಹರ್ಷದಾಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಯುವ ವೇಟ್‌ಲಿಫ್ಟರ್ ಹರ್ಷದಾ ಗರುಡ್ ಅವರು ತಾಷ್ಕೆಂಟ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದರು.

ಮಂಗಳವಾರ ನಡೆದ ಮಹಿಳೆಯರ 45 ಕೆ.ಜಿ. ವಿಭಾಗದಲ್ಲಿ ಅವರು ಒಟ್ಟು 157 ಕೆ.ಜಿ (69 ಕೆ.ಜಿ + 88 ಕೆ.ಜಿ) ಭಾರ ಎತ್ತುವ ಮೂಲಕ ಅಗ್ರಸ್ಥಾನ ಪಡೆದರು. 18 ವರ್ಷದ ಹರ್ಷದಾ, ಮೇ ತಿಂಗಳಲ್ಲಿ ನಡೆದಿದ್ದ ಜೂನಿಯರ್ ವಿಶ್ವಚಾಂಪಿಯನ್‌ಷಿಪ್‌ನಲ್ಲೂ ಚಿನ್ನ ಜಯಿಸಿದ್ದರು. ಅಲ್ಲಿ ನೀಡಿದ್ದ ಪ್ರದರ್ಶನಕ್ಕಿಂತ (ಒಟ್ಟು 153 ಕೆ.ಜಿ) ನಾಲ್ಕು ಕೆ.ಜಿ ಯಷ್ಟು ಅಧಿಕ ಭಾರ ಎತ್ತುವಲ್ಲಿ ಯಶಸ್ವಿಯಾದರು.

ಭಾರತದ ಸೌಮ್ಯಾ ದಳವಿ ಅವರು 45 ಕೆ.ಜಿ. ಯೂತ್ ವಿಭಾಗದಲ್ಲಿ ಕಂಚು ಜಯಿಸಿದರು. ವಿಶ್ವ ಯೂತ್ ಚಾಂಪಿಯನ್‌ಷಿಪ್‌ನಲ್ಲೂ ಕಂಚು ಗೆದ್ದಿದ್ದ



ಹರ್ಷದಾ ಗರುಡ್ –ಟ್ವಿಟರ್ ಚಿತ್ರ

ಅವರು ಒಟ್ಟು 145 ಕೆ.ಜಿ. ಸಾಧನೆ ಮಾಡಿದರು.

ಪುರುಷರ 49 ಕೆ.ಜಿ. ಯೂತ್ ವಿಭಾಗದ ಸ್ನ್ಯಾಚ್‌ನಲ್ಲಿ ಎಲ್.ಧನುಷ್ 85 ಕೆ.ಜಿ ಸಾಧನೆಯೊಂದಿಗೆ ಕಂಚು ಜಯಿಸಿದರು. ಆದರೆ ಒಟ್ಟಾರೆಯಾಗಿ ಅವರು 185 ಕೆ.ಜಿ. ಸಾಧನೆಯೊಂದಿಗೆ ನಾಲ್ಕನೇ ಸ್ಥಾನ ಪಡೆದುಕೊಂಡರು.

ಸೋನಿಗೆ ಕಾಮನ್‌ವೆಲ್ತ್ ಗೇಮ್ಸ್ ಪ್ರಸಾರ ಹಕ್ಕು

ಬೆಂಗಳೂರು: ಇಂಗ್ಲೆಂಡ್‌ನ ಬರ್ಮಿಂಗ್‌ಹ್ಯಾಮ್‌ನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಗೇಮ್ಸ್‌ನ ಟಿವಿ ಮತ್ತು ಡಿಜಿಟಲ್ ಪ್ರಸಾರದ ಹಕ್ಕುಗಳನ್ನು ಸೋನಿ ಪಿಕ್ಚರ್ಸ್ ನೆಟ್‌ವರ್ಕ್ ಇಂಡಿಯಾ (ಎಸ್‌ಪಿಎನ್) ತನ್ನದಾಗಿಸಿಕೊಂಡಿದೆ.

ಇದೇ 28ರಿಂದ ಆಗಸ್ಟ್ 8ರವರೆಗೆ ನಡೆಯಲಿರುವ ಕ್ರೀಡಾಕೂಟವನ್ನು ಭಾರತ ಮಾತ್ರವಲ್ಲದೆ ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇಶ, ನೇಪಾಳ, ಅಫ್ಗಾನಿಸ್ತಾನ, ಭೂತಾನ್ ಮತ್ತು ಮಾಲ್ಡೀವ್ಸ್‌ಗಳಲ್ಲೂ ಸೋನಿ ಪ್ರಸಾರ ಮಾಡಲಿದೆ. ನೇರ ಪ್ರಸಾರವು ಕಂಪನಿಯ ಒಟಿಟಿ ಪ್ಲಾಟ್‌ಫಾರ್ಮ್ ಸೋನಿ ಲಿವ್‌ನಲ್ಲೂ ಇರಲಿದೆ ಎಂದು ಕಂಪನಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.